ಕರ್ನಾಟಕ ಸರ್ಕಾರ


ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭಾಷಾಭಿವೃದ್ಧಿ ಯೋಜನೆ

ಕರಿಬಸವ ಪುರಾಣ

ಸಂಪಾದಕರು:

ಡಾ. ಕೆ. ರವೀಂದ್ರನಾಥ



ಕನ್ನಡ ಅಧ್ಯಯನ ಸಂಸ್ಥೆ

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೫೮೫೧೦೬

ಕರಿಬಸವ ಪುರಾಣ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ
ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟಣಾ ಯೋಜನೆ – ೨

ಕರಿಬಸವ ಪುರಾಣ

ಪ್ರಧಾನ ಸಂಪಾದಕರು
ಡಾ. ಬಸವರಾಜ ಪೋಲಿಸ ಪಾಟೀಲ
ಸಂಪಾದಕರು
ಡಾ. ಕೆ. ರವೀಂದ್ರನಾಥ

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ – ೫೮೫ ೧೦೬

KARIBASAVA PURANA

Chief Editor : Dr. Basavaraj Police Patil Professor Institute of Kannada studies Gulbarga University,Gulbarga

Editor : Dr. K. Ravindranatha HOD, Dept. of Manscriptlogy Kannada University, Hampi, Vidyaranya 583 276

Published by : Institute of Kannada Studies
Gulbarga University, Gulbarga

Funding Agency : Government of Karnataka
Institute of Kannada Studies

First Impression : 2012

Total Pages : XLVi +294

Paper Used : 80 G. S.M.Maplitho

Price : Rs. 300.00

ಕರಿಬಸವ ಪುರಾಣ

ಪ್ರಧಾನ ಸಂಪಾದಕರು: **ಡಾ.ಬಸವರಾಜ ಪೋಲಿಸ ಪಾಟೀಲ** ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಸಂಪಾದಕರು: **ಡಾ. ಕೆ. ರವೀಂದ್ರನಾಥ** ಮುಖ್ಯಸ್ಥರು ಹಸ್ತಪ್ರತಿಶಾಸ್ತ್ರ ವಿಭಾಗ,
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ

ಪ್ರಕಾಶಕರು : ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ

ಪ್ರಥಮ ಮುದ್ರಣ : ೨೦೧೨

ಪುಟಗಳು: XLVi + ೨೯೪

ಬಳಸಿದ ಕಾಗದ : ೮೦ ಜಿ.ಎಸ್. ಎಮ್. ಮ್ಯಾಪಲಿಥೊ

ಬೆಲೆ : ರೂ. ೩೦೦.೦೦

ಕೃತಿ ದೊರೆಯುವ ಸ್ಥಳ : ಕನ್ನಡ ಅಧ್ಯಯನ ಸಂಸ್ಥೆ

ಮುದ್ರಕರು :

ಪ್ರಿಂಟ್ ಪಾರ್ಕ್

ಕ್ವಾಲಿಟಿ ಆಫ಼ ಸೆಟ್ ಪ್ರಿಂಟರ್ಸ್

೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ

ಶ್ರೀರಾಂಪುರಂ ಅಂಚೆ,

ಬೆಂಗಳೂರು – ೫೬೦ ೦೨೧.

ದೂ : ೦೮೦–೨೩೪೨೨೮೩೮

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಕನ್ನಡ ಭಾಷಾಭಿವೃದ್ಧಿ ಯೋಜನೆ ಸಮಿತಿ

ಅಧ್ಯಕ್ಷರು

ಪ್ರೊ. ಈ.ಟಿ. ಪುಟ್ಟಯ್ಯ

ಕುಲಪತಿಗಳು

ಉಪಾಧ್ಯಕ್ಷರು

ಪ್ರೊ. ಎಸ್.ಎಲ್. ಹಿರೇಮಠ

ಕುಲಸಚಿವರು

ಸಂಚಾಲಕರು

ಪ್ರೊ. ನಾಗಾಬಾಯಿ ಬಿ. ಬುಳ್ಳಾ

ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ

ಸದಸ್ಯರು

ಡಾ. ಪಿ.ಕೆ.ಖಂಡೋಬಾ

ಡಾ. ವ್ಹಿ.ಜಿ.ಪೂಜಾರ

ಡಾ. ವೀರಣ್ಣ ದಂಡೆ

ಡಾ. ಎಚ್.ಟಿ.ಪೋತೆ

ಡಾ. ಡಿ.ಬಿ.ನಾಯಕ

ಡಾ. ಬಸವರಾಜ ಸಬರದ

ಡಾ. ಬಿ.ಎಸ್. ಪೋಲಿಸ ಪಾಟೀಲ

ಡಾ. ಎಸ್.ಎಂ. ಹಿರೇಮಠ

ಡಾ. ಜಯಶ್ರೀ ದಂಡೆ

ಡಿ.ವಿ.ಸದಾನಂದಗೌಡ
ಮುಖ್ಯಮಂತ್ರಿ
ಸಿಎಂ/ಪಿಎಸ್/57/11

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು–560 001
ದಿ: 02.11.2011

ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ ತತ್ವಪದ ಸಾಹಿತ್ಯ, ದಲಿತ–ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನ, ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ, ಪ್ರಬುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ, ಲೇಖಕರೂ, ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠ ಮಟ್ಟದ

ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳಲ್ಲಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟಣಾ ಯೋಜನೆಯು ಒಂದಾಗಿದೆ. ಹಲವಾರು ಅಪ್ರಕಟಿತ ಹಸ್ತ ಪ್ರತಿಗಳನ್ನು ಪ್ರಕಟಿಸಿದ ಪ್ರಧಾನ ಸಂಪಾದಕರಿಗೂ, ಸಂಪಾದಕರಿಗೂ ಅಭಿನಂದಿಸಿ, ಈ ಕೃತಿಗಳು ನಾಡಿನ ಸಹೃದಯರ ಮನ ಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಡಿ.ವಿ. ಸದಾನಂದಗೌಡ
ಮುಖ್ಯಮಂತ್ರಿಗಳು

ಗೋವಿಂದ. ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. 330, 3ನೇ ಮಹಡಿ
ವಿಧಾನಸೌಧ
ಬೆಂಗಳೂರು– 560 001
ದಿ: 16.11.2011

ಶುಭಹಾರೈಕೆ

ಕನ್ನಡ ನಾಡು–ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು–ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡು ಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ 450 ರ ಹಲ್ಮಿಡಿಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತ ರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ಧವಾಗುತ್ತಿವೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆ ಹಾಗೂ ಪ್ರಕಟಣಾ ಯೋಜನೆಯಡಿಯಲ್ಲಿ ಹಲವಾರು

ಅಪ್ರಕಟಿತ್ತಿದೆ ಹಸ್ತಪ್ರತಿಗಳನ್ನು ಪ್ರಕಟಿಸಿದ ಪ್ರಧಾನ ಸಂಪಾದಕರಿಗೂ, ಸಂಪಾದಕರಿಗೂ ಇಲ್ಲಿ ಅಭಿನಂದಿಸುವೆನು.

ಕನ್ನಡ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು-ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನ ಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಿದ್ದಾರೆ. ನಾಡು-ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಗೋವಿಂದ. ಎಂ. ಕಾರಜೋಳ
ಸಚಿವರು

ಬಿ. ಬಸವರಾಜು ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರ್ಕಾರ

2, ನೆಲಮಹಡಿ, ವಿಕಾಸ ಸೌಧ,
ಬೆಂಗಳೂರು– 560 001
☏ 22205781ಮ 2203400
ಫ್ಯಾಕ್ಸ್: 22353105
ಇ–ಮೇಲ್: secy-kc@karnataka.Gov.in

ದಿ: 24.10.2011

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದುಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿದೆ. ಕ್ರಿ.ಶ.450ರ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡ, ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು, ಕದಂಬರು ಇಲ್ಲಿನ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರವಣಿಗೆಯಲ್ಲಿಯೇ ಕನ್ನಡ ನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪ ಇರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ದಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿರುವ ಶಾಸನದಿಂದಲೇ ಅಶೋಕನಿಗೆ 'ದೇವನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟಕದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ 5ನೇ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಆದ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ

ಹಾಗೂ ಸೂಕ್ತ ಎಂಬುವುದಕ್ಕಾಗಿ. ೨೦೦೮ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು ಹಮ್ಮಿಕೊಂಡು ಅದರಡಿಯಲ್ಲಿ **ಹಸ್ತ ಪ್ರತಿಗಳ ಸಂಗ್ರಹ ಸಂರಕ್ಷಣೆ ಹಾಗೂ ಪ್ರಕಟಣಾ ಯೋಜನೆಯಲ್ಲಿ ಹಲವಾರು ಅಪ್ರಕಟಿತ ಹಸ್ತ ಪ್ರತಿಗಳನ್ನು ಪ್ರಕಟಿಸಿದೆ.** ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತುಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಈ.ಟಿ.ಪುಟ್ಟಯ್ಯ ಅವರನ್ನು ಮತ್ತು ಕುಲಸಚಿವ ಪ್ರೊ.ಎಸ್.ಎಲ್.ಹಿರೇಮಠ ಅವರನ್ನು ಈ ಸಂಪುಟದ ಪ್ರಧಾನ ಸಂಪಾದರಾದ ಬಸವರಾಜ ಪೋಲಿಸ ಪಾಟೀಲ ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರನ್ನು ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಬಿ. ಬಸವರಾಜು

ಕಾರ್ಯದರ್ಶಿ

ಮನು ಬಳಿಗಾರ್ ಕ.ಆ.ಸೇ
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರ್ಕಾರ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು– 560 001
ದಿ: 15.10.2011

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು 'ವೀರಯುಗ' ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು ವಿಕ್ರಮಾರ್ಜುನ ವಿಜಯವಾದರೆ ರನ್ನ ಬರೆದದ್ದು ಸಾಹಸಭೀಮ ವಿಜಯ. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜ ಮಾರ್ಗಕಾರನು ಕನ್ನಡ ಜನರು ಕವಿಗಳೂ, ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡ ನಾಡಿನ ಹತ್ತನೆಯ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯ ಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ವಚನಕಾರರು ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ. ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಆಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ

ಕುಮಾರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾನೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ ೨೦೦೯ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಸಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಲವು ಸಂಪುಟಗಳ ಪ್ರಕಟಣಾ ಯೋಜನೆಯನ್ನು ಕೈಗೆತ್ತಿಕೊಂಡು ಅದರ ಅಡಿಯಲ್ಲಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆಯಲ್ಲಿ ಹಲವಾರು ಹಸ್ತಪ್ರತಿಗಳನ್ನು ಪ್ರಕಟಿಸಿದೆ. ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ ಈ.ಟಿ.ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ ಎಸ್.ಎಲ್. ಹಿರೇಮಠ ಅವರಿಗೆ, ಈ ಸಂಪುಟದ ಪ್ರಧಾನ ಸಂಪಾದಕರಾದ ಡಾ. ಬಸವರಾಜ ಪೋಲಿಸ ಪಾಟೀಲ ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪರವಾಗಿ ನಾನು ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮನು ಬಳಿಗಾರ್

ಆಯುಕ್ತರು

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ: 25.10.2011

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. ೧೯೭೦-೭೧ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ ೧೯೮೦ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ

ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ ಹಸ್ತ ಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆಯೂ ಒಂದಾಗಿದೆ. ಈ ಯೋಜನೆಯಲ್ಲಿ ಹಲವಾರು ಮಹತ್ವದ ಅಪ್ರಕಟಿತ ಹಸ್ತ ಪ್ರತಿಗಳನ್ನು ಪ್ರಕಟಿಸಿದ್ದಾರೆ. ಹಸ್ತಪ್ರತಿಗಳನ್ನು ಸಂಪಾದನೆ ಮಾಡಿ ಕೊಟ್ಟಿರುವ ಸಂಪಾದಕರಿಗೂ ಈ ಸಂಪುಟದ ಪ್ರಧಾನ ಸಂಪಾದಕರೂ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ. ಬಿ.ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಪ್ರಧಾನ ಸಂಪಾದಕರ ನುಡಿ

ಹಸ್ತಪ್ರತಿಗಳು ನಮ್ಮ ನಾಡಿನ ಅಮೂಲ್ಯ ಜ್ಞಾನ ಸಂಪತ್ತು. ಇವು ಇಂದಿನ ಜನಾಂಗಕ್ಕೆ ಮಾತ್ರವಲ್ಲದೆ ಮುಂದಿನ ಪೀಳಿಗೆಗೂ ಸಾಗಿಸಬಲ್ಲ ಸಾಧನ ಸಾಮಗ್ರಿಗಳು. ಪುರಾತನ ಜ್ಞಾನ ಸಂಪತ್ತನ್ನು ಆಧುನಿಕ ಜನಾಂಗಕ್ಕೆ ನೀಡುವ ಅವಶ್ಯಕತೆ ಇಂದಿನದು. ಕನ್ನಡ ನಾಡು ತನ್ನ ಕವಿ, ಲಿಪಿಕಾರ, ಓದುಗ, ಪೋಷಕ ಹಾಗೂ ಕಲಾವಿದರಿಂದ ಆಯಾ ಸಂದರ್ಭದಲ್ಲಿ ರಚಿಸಿಕೊಂಡ ಚರಿತ್ರೆಗಳೇ ಹಸ್ತಪ್ರತಿಗಳು. ಹಲವು ವೈವಿಧ್ಯಮಯ ಹಿನ್ನೆಲೆಯಲ್ಲಿ ರಚಿತವಾದವುಗಳು. ದಾನಕ್ಕಾಗಿ, ರೋಗ ನಿವಾರಣೆಗಾಗಿ, ವಿದ್ಯಾರ್ಜನೆಗಾಗಿ, ಮೋಕ್ಷ ಸಂಪಾದನೆಗಾಗಿ, ಕಷ್ಟ ಪರಿಹಾರಕ್ಕಾಗಿ, ಪುತ್ರ ಸಂತಾನಕ್ಕಾಗಿ – ಹೀಗೆ ಹಲವು ರೀತಿಯ ಫಲಾಪೇಕ್ಷೆಗಳು ಹಾಗೂ ಜೀವನ ದೃಷ್ಟಿಗಳಿಗಾಗಿ ಬರೆಯಲ್ಪಟ್ಟವು ಹಸ್ತಪ್ರತಿಗಳು.

ಕನ್ನಡದ ಹಲವು ಅಮೂಲ್ಯ ಹಸ್ತಪ್ರತಿಗಳು ಜನತೆಯ ಅಜ್ಞಾನದಿಂದ ಮಣ್ಣು ಪಾಲಾಗಿರುವುದು ದುರದೃಷ್ಟಕರ. ಹುಳಗಳಿಂದ, ನೀರಿನಿಂದ, ತೇವಾಂಶದಿಂದ – ಹೀಗೆ ಹಲವು ಕಾರಣಗಳಿಂದ ಹಸ್ತಪ್ರತಿಗಳು ಹಾಳಾಗುತ್ತಿವೆ. ಈಗಲೂ ಹಲವು ಮನೆಗಳಲ್ಲಿ, ಮಠ–ಮಂದಿರಗಳಲ್ಲಿ, ಪೂಜಾಗೃಹಗಳಲ್ಲಿ ಓಲೆಕಟ್ಟುಗಳು ಇಟ್ಟಲ್ಲಿಯೇ ಹಾಳಾಗುತ್ತಿರುವುದನ್ನು ನೋಡುತ್ತಿದ್ದೇವೆ. ಇವು ನಮ್ಮ ಪೂರ್ವಜರಿಂದ ಬಂದ ಪವಿತ್ರ ಆಸ್ತಿ ಹೊರಗೆ ಕೊಡಬಾರದೆಂಬ ಅಂಧಶ್ರದ್ಧೆಯ ಪರಿಣಾಮವಾಗಿ ಯಾವ ರಕ್ಷಣೆಯನ್ನು ಕಾಣದೆ ಕಾಲಕ್ರಮೇಣ ಹಸ್ತಪ್ರತಿಗಳು ಗೊಬ್ಬರವಾಗಿ ಪರಿಣಮಿಸುತ್ತಿವೆ. ರಚಿಸಿದ ಒಂದು ಅಪಾರ ಜ್ಞಾನಸಂಪತ್ತು ನಮಗರಿವಿಲ್ಲದ ಹಾಗೆ ನಾವೇ ಇನ್ನೊಂದೆಡೆ ನಮ್ಮ ಅಜ್ಞಾನದ ಫಲವಾಗಿ ಅವುಗಳ ವಿನಾಶಕ್ಕೆ ಕಾರಣರಾಗುತ್ತಿದ್ದೇವೆ. ಇಲ್ಲಿ ಅಜ್ಞಾನ ಎಷ್ಟು ಮುಖ್ಯವಾಗಿದೆಯೋ ಅಷ್ಟೇ ಮುಖ್ಯವಾಗಿ, ಹಸ್ತಪ್ರತಿಗಳ ಪರಮ ವೈರಿಯಾಗಿರುವವು ಜಿರಲೆ ಮತ್ತು ಗೆದ್ದಲು ಹುಳುಗಳು, ಗೆದ್ದಲು ಮೊದಲಾಗಿ ಕ್ರಿಮಿ– ಕೀಟಗಳಿಂದ ಹಲವಾರು ಮಠ– ಮಂದಿರಗಳಲ್ಲಿನ ಹಸ್ತಪ್ರತಿಗಳು ಹಾಳಾಗುತ್ತಿರುವುದುಂಟು. ಹಲವು ಕಟ್ಟುಗಳನ್ನು ಒಂದೆಡೆ ಕಟ್ಟಿ, ದಶಕಗಳಿಂದ ಬಿಚ್ಚದೆ ಯಾವ ರಕ್ಷಣೆಯೂ ಇಲ್ಲದೆ ಕೆಟ್ಟ ಪರಿಸ್ಥಿತಿಯಲ್ಲಿ ಹಸ್ತಪ್ರತಿಗಳು ನಶಿಸುತ್ತಿವೆ.

ಹಸ್ತಪ್ರತಿಯಲ್ಲಿನ ಜ್ಞಾನ ಸಂಪತ್ತನ್ನು ಉಳಿಸಿಕೊಳ್ಳಬೇಕು, ಮತ್ತೊಮ್ಮೆ ಓದುಗರಿಗೆ ಪರಿಚಯಿಸಬೇಕು, ಅದು ಹಾಗೆಯೇ ಅಳಿದು ಹೋಗಬಾರದೆನ್ನುವ ಉದ್ದೇಶದಿಂದ ಕರ್ನಾಟಕ ಸರಕಾರ ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಮ್ಮಿಕೊಂಡ ಹಲವು ಸಂಶೋಧನ ಯೋಜನೆಗಳಲ್ಲಿ, ಹಸ್ತಪ್ರತಿ ಸಂಗ್ರಹ – ಸಂಪಾದನೆ ಹಾಗೂ ಪ್ರಕಟಣಾ ಯೋಜನೆ ಭಾಗ – ೨ ಕೂಡ ಒಂದಾಗಿದೆ.

೧೫ ಸಂಧಿ ೯೫೫ ವಾರ್ಧಕ ಷಟ್ಪದಿಯಲ್ಲಿ ಬರೆದ ಈ ಕೃತಿಯ ಕಾಲ ಕ್ರಿ.ಶ. ೧೯೨೮ ಪ್ರಾಯಶಃ ಈ ಪುರಾಣದ ನಾಯಕ ಕರಿಬಸವ ಕುಷ್ಟಗಿ ವಚನ ಕಾರ ಕರಿಬಸವನಿರಬೇಕು. ಕುಷ್ಟಗಿಯ ೨೧ನೇ ಪೀಠಾಧಿಪತಿಯಾಗಿದ್ದ ೧೭೦೦ರಲ್ಲಿ ಜೀವಿಸಿದ್ದ ಕರಿಬಸವ ಸ್ವಾಮಿಯ ಮಹತ್ವವನ್ನು ಈ ಕೃತಿ ನಿರೂಪಿಸುತ್ತದೆ. ಇದು ಪುರಾಣಕಾವ್ಯವಾದರೂ ಗುರುಭಕ್ತಿಗೆ ಅಮರಗುಂಡನ ಕಥೆಯನ್ನು, ಲಿಂಗಸಂಗಕ್ಕೆ ಮಲುಹಣ– ಮಲುಹಣಿಯರ ಕಥೆಯನ್ನು, ಜಂಗಮ ಮಹಿಮೆಗೆ ಬಸವಣ್ಣನವರ ಜೀವನ ಘಟನೆಗಳನ್ನು, ಸಿದ್ಧರಾಮನ ಲಿಂಗದೀಕ್ಷೆ, ಅಕ್ಕನ ಕದಳಿ ನಿರ್ಗಮನ, ಹರಳಯ್ಯ– ಮಧುವಯ್ಯಗಳ ಎಳೆಹೂಟಿ ಪ್ರಸಂಗಗಳಿಂದ ಈ ಕೃತಿ ಚಾರಿತ್ರಿಕ ಮಹತ್ವವನ್ನು ಪಡೆದುಕೊಳ್ಳುತ್ತದೆ.

ಈ ಕೃತಿಯನ್ನು ಸಂಪಾದಿಸಿಕೊಟ್ಟ ಡಾ. ಕೆ. ರವೀಂದ್ರನಾಥ ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಕೆಲಸಮಾಡುತ್ತಿದ್ದಾರೆ. ಗ್ರಂಥ ಸಂಪಾದನೆ, ಹಸ್ತಪ್ರತಿ, ಶಾಸನ, ಹಳಗನ್ನಡ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಹೊಂದಿರುವ ಡಾ.ಕೆ. ರವೀಂದ್ರನಾಥ ಅವರು ಈ ಕೃತಿಯನ್ನು ನಮ್ಮ ಕನ್ನಡ ಭಾಷಾಭಿವೃದ್ಧಿ ಯೋಜನೆಗೆ ಸಂಪಾದಿಸಿಕೊಟ್ಟಿರುವುದು ನಮಗೆ ಸಂತೋಷ ತಂದಿದೆ. ಅವರ ಶ್ರಮವನ್ನು ಪ್ರೀತಿಯಿಂದ ಸ್ಮರಿಸುತ್ತೇವೆ. ಯೋಜನೆಯ ಸಂಚಾಲಕರು, ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರಿಗೆ ಧನ್ಯವಾದಗಳು, ಯೋಜನಾ ಸಮಿತಿಯ ಅಧ್ಯಕ್ಷರು ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಈ.ಟಿ. ಪುಟ್ಟಯ್ಯ ಅವರಿಗೂ ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರಿಗೂ ಹಾಗೂ ಇನ್ನಿತರ ಅಧಿಕಾರಿ ವರ್ಗಕ್ಕೂ ಕೃತಜ್ಞತೆಗಳು, ಸುಂದರ ಮುದ್ರಣ ಕಾರ್ಯ ಮಾಡಿಕೊಟ್ಟ ಬೆಂಗಳೂರಿನ ಮೆ॥ ಪ್ರಿಂಟ್ ಪಾರ್ಕ್ ಒಡೆಯರಾದ ಶ್ರೀ ಜಿ.ಬಿ.ಪಾಟೀಲ ಹಾಗೂ ಸಿಬ್ಬಂದಿವರ್ಗದವರಿಗೆ ನೆನಕೆಗಳು.

– ಡಾ. ಬಸವರಾಜ ಪೋಲಿಸ ಪಾಟೀಲ

ಪ್ರಧಾನ ಸಂಪಾದಕರು

ಪ್ರಸ್ತಾವನೆ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪುರಾಣ ಸಾಹಿತ್ಯಕ್ಕೆ ವಿಶೇಷ ಸ್ಥಾನವಿದೆ. ಜೈನಕವಿಗಳಿಂದ ಆರಂಭಗೊಂಡ ಪುರಾಣಸಾಹಿತ್ಯ ವೀರಶೈವ, ವೈದಿಕ ಕವಿಗಳಿಂದ ವಿಸ್ತಾರಗೊಳ್ಳುತ್ತಾ ಬಂದಿದೆ. ಚಾರಿತ್ರಿಕ ಅಂಶಗಳು ಗೌಣವಾಗಿ ಸ್ತುತಿ, ಪವಾಡ, ವದಂತಿ, ಐತಿಹ್ಯ, ದಂತ ಕಥೆಗಳಿಂದ ಪುರಾಣಗಳು ಪರಿಪೂರ್ಣಗೊಂಡಿರುತ್ತವೆ. ವಿಶೇಷವೆಂದರೆ ಸುಂದರವಾದ ವರ್ಣನಾ ಪ್ರಧಾನವಾಗಿರುವುದರಿಂದ ಪುರಾಣಗಳಲ್ಲಿ ಕಾವ್ಯಾಂಶ ಹೇರಳವಾಗಿ, ಕಥಾಂಶ ವಿರಳವಾಗಿ ಕಂಡುಬರುತ್ತದೆ. ಇಲ್ಲಿಯ ಕಥಾ ಮೊಳಕೆ ಬಿದಿರಿನ ಕಳಿಲೆಯಂತೆ, ಇದರ ಸುತ್ತ ಬಣ್ಣಬಣ್ಣದ ವರ್ಣನೆಗಳಿಂದ ಕೂಡಿದ ಕಮನೀಯ ಹೂಪೊದೆಗಳೇ ಹಬ್ಬಿನಿಂತಿರು ತ್ತವೆ. ಅಂದರೆ ಪುರಾಣದ ವಸ್ತುವನ್ನು ಬೇಕಾದ ಆಕಾರಕ್ಕೆ ತಿರಿಗಿಸಿಕೊಂಡು ಬಳಸಿಕೊಳ್ಳಬಹುದು. ಇಲ್ಲಿ ಸಂಭಾವ್ಯಕಲೆ ಎದ್ದು ತೋರುತ್ತದೆ. ಈ ಕಾರಣವಾಗಿ ಪುರಾಣಗಳನ್ನು ಚರಿತ್ರೆಗಳಿಂದ ಭಿನ್ನವಾಗಿ ನೋಡುವ ಪರಿಪಾಠವಿದೆ. ಇತಿಹಾಸ ಪ್ರಮುಖವಾಗಿ ಚಾರಿತ್ರಿಕ ವ್ಯಕ್ತಿಗಳ, ವೀರರ ಚರಿತ್ರೆಗಳಾಗಿದ್ದಂತೆ; ಪುರಾಣಗಳೂ ಕೂಡ ವೈವಿಧ್ಯತೆಯಿಂದ ಕೂಡಿದ ಕಲ್ಪನಾಕಥೆಗಳ ಸಂಪ್ರದಾಯಗಳನ್ನೊಳಗೊಂಡ ಪುರಾಣ ಪ್ರಸಿದ್ಧ ಸ್ಥಳ, ವ್ಯಕ್ತಿ ಹಾಗೂ ತತ್ತ್ವ-ಸಿದ್ಧಾಂತಗಳ ಸರಿಯಾದ ಚರಿತ್ರೆಗಳೇ ಆಗಿವೆ. ಸ್ಥೂಲವಾಗಿ ಪುರಾಣಗಳನ್ನು ವ್ಯಕ್ತಿಕೇಂದ್ರಿತ, ತತ್ತ್ವಕೇಂದ್ರಿತ ಹಾಗೂ ಸ್ಥಳಕೇಂದ್ರಿತ ಪುರಾಣಗಳೆಂದು ವರ್ಗೀಕರಿಸಬಹುದು.

ಸಮಾಜದಲ್ಲಿ ವ್ಯಕ್ತಿಯಾಗಿ ಬದುಕಿ ತಮ್ಮ ಆಚಾರ ವಿಚಾರಗಳಿಂದ ಗೌರವಕ್ಕೆ ಪಾತ್ರವಾಗಿ ಆ ಮೂಲಕ ಜನರ ಮನಸ್ಸಿನಲ್ಲಿ ಪೂಜ್ಯರಾಗಿ ಉಳಿದುಕೊಂಡ ಅನೇಕ ವ್ಯಕ್ತಿಗಳ ಸುತ್ತ ಪುರಾಣಗಳ ಸೃಷ್ಟಿಯಾಗುವುದು ವ್ಯಕ್ತಿಕೇಂದ್ರಿತ ಪುರಾಣಗಳು. ಹಾಗೆಯೇ, ಪ್ರತಿಯೊಂದು ಧರ್ಮದ ಉದ್ದೇಶ ತನ್ನ ತತ್ತ್ವವನ್ನು ಪ್ರಸಾರ ಮಾಡುವುದಾಗಿರುತ್ತದೆ ಹೀಗಾಗಿ ಧಾರ್ಮಿಕ ಮಹಾ ಪುರುಷರಷ್ಟೇ ಅವರು ಸಾರಿದ ತತ್ತ್ವಗಳು ಜನರ ಮನಸ್ಸಿನಲ್ಲಿ ಪ್ರಮಾಣವಾಗಿರುತ್ತವೆ. ಅವುಗಳಲ್ಲಿ ವೀರಶೈವರ ಅಷ್ಟಾವರಣ, ವೈದಿಕರ ಉಪಾಸನೆ, ಜೈನರ ಪಂಚವ್ರತ ಮುಂತಾದವುಗಳನ್ನು ಕೀರ್ತಿಸುವ ಸಲುವಾಗಿ ರಚನೆಯಾದವುಗಳು ತತ್ತ್ವಕೇಂದ್ರಿತ ಪುರಾಣಗಳು. ನದಿ, ವನ, ಸ್ಥಳ ಮುಂತಾದವು ಜನಮನದಲ್ಲಿ ಪುಣ್ಯಕ್ಷೇತ್ರಗಳಾಗಿ ಪ್ರಾಧಾನ್ಯತೆ ಪಡೆದಿರುತ್ತವೆ.

ಇವುಗಳ ಉಗಮ, ಮಹಿಮೆ ಕುರಿತು ಪುರಾಣಗಳನ್ನು ಕಟ್ಟಿ ಕೀರ್ತಿಸುವುದು ಸ್ಥಳಕೇಂದ್ರಿತ ಪುರಾಣಗಳಾಗಿರುತ್ತವೆ. ಪ್ರಸ್ತುತ ಕರಿಬಸವ ಪುರಾಣ ಎಂಬುದು ಕರಿಬಸವನೆಂಬ ವ್ಯಕ್ತಿಯ ಸುತ್ತ ವೀರಶೈವ ತತ್ತ್ವಾಚರಣೆಗಳನ್ನು ಪ್ರತಿಪಾದಿಸುವ ಅಪ್ರಕಟಿತ ಪುರಾಣಕಾವ್ಯವಾಗಿದೆ.

೧. ಹಸ್ತಪ್ರತಿಯ ವಿವರ

ಕರಿಬಸವ ಪುರಾಣದ ಹಸ್ತಪ್ರತಿ ಗದಗ ಜಿಲ್ಲೆ, ಅಣ್ಣಿಗೇರಿಯ ಎ.ಎಸ್ .ದೇಶಮುಖ ಅವರ ಮನೆಯಲ್ಲಿ ದೊರೆತಿದೆ. ೧೧" ಉದ್ದ ೫" ಅಗಲ ಅಳತೆಯುಳ್ಳ ಕೋರಿಕಾಗದದಲ್ಲಿ ಬರೆಯಲಾಗಿದೆ. ೧೫ ಸಂಧಿ ೬೫೫ ವಾರ್ಧಕ ಷಟ್ಪದಿಗಳಲ್ಲಿ ರಚನೆಯಾಗಿದೆ. ಲಿಪಿ, ಭಾಷೆ ಹಾಗೂ ಹಸ್ತಪ್ರತಿಯ ಸ್ಥಿತಿ ಉತ್ತಮದರ್ಜೆಯಲ್ಲಿದ್ದು ಪ್ರಾಯಶಃ ಇದು ಕವಿಯ ಸ್ವಹಸ್ತಾಕ್ಷರ ಪ್ರತಿಯಾಗಿರಬಹುದೆಂದು ತೋರುತ್ತದೆ ಯಾಕೆಂದರೆ ಇದರ ರಚನಾ ಕಾಲ ಕ್ರಿ.ಶ.೧೯೨೮ ಆಗಿರುತ್ತದೆ. ಮೇಲಾಗಿ ಲಿಪಿಕಾರರ ಉಲ್ಲೇಖ ಕಂಡುಬರುವುದಿಲ್ಲ.

೨. ಕವಿಯ ಇತಿವೃತ್ತ

ಕೃತಿಯ ಪ್ರತಿ ಸಂಧಿಯ ಮುಕ್ತಾಯದಲ್ಲಿ ಕವಿ ತನ್ನ ಗುರುಪರಂಪರೆ ಹಾಗೂ ತನ್ನ ವಿಚಾರವನ್ನೊಳಗೊಂಡ ಒಂದು ಪದ್ಯವನ್ನು ಹೀಗೆ ಸಂಯೋಜನೆಗೊಳಿಸಿದ್ದಾನೆ.

ಮರುಳಸಿದ್ಧಾಚಾರ್ಯ ರಾಮದೇವಾಚಾರ್ಯ
ವರಪಂಡಿತಾಚಾರ್ಯ ಗುರುವು ವಿಶ್ವಾಚಾರ್ಯ
ರುರೆ ಮಧ್ಯವದನ ಸಂಜಾತ ರೇಣುಕದೇವನುಧರಭವ ಘನಲಿಂಗನೂ ||
ಹರರೂಪ ರುದ್ರಮುನಿ ಕರಜಾತ ಮಹಾಂತಮುನಿ
ಚರಣಸಂಭವ ಗುರುಪರಂಪರೆಯೊಳುದ್ಭವಿಸಿ
ಧರರೆ ವಲದಿಪುರದ ಹಿರೇಮಠಾಧಿಪ ಪಟ್ಟಚರವರ್ಯ ಮಹಂತನುಸಿರ್ದ ||

ಕವಿಮಹಂತನು ಗುರುವರ್ಗ ಪರಂಪರೆಗೆ ಸೇರಿದವನಾಗಿದ್ದು; ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯ ಹಾಗೂ ರೇವಣಸಿದ್ಧರೆಂಬ ಪಂಚಪೀಠಾಚಾರ್ಯರಲ್ಲಿ ರೇವಣಸಿದ್ಧರ ಮಗನೆಂದು ಹೇಳುವ ಘನಲಿಂಗಿರುದ್ರಮುನಿಯ ಮಗ ಇಲ್ಲವೇ ಶಿಷ್ಯನಾದ ಮಹಾಂತಮುನಿಗಳ ಗುರುಪರಂಪರೆಯಲ್ಲಿ ಬೆಳೆದ ವಲದಿಪುರದ ಹಿರೇಮಠದ ಚರಪಟ್ಟಾಧಿಕಾರಿಯಾಗಿದ್ದಾನೆ. ಈ ವಲದಿಪುರ ಯಾವುದು? ಎಲ್ಲಿದೆ ಎಂಬುದು ತಿಳಿದು ಬರುವುದಿಲ್ಲವಾದರೂ ಕಾವ್ಯದಲ್ಲಿ

ಜಗದೊಳಗೆ ಮಿಗಿಲೆನಿಸಿ ತೋರುವ ಸುಕಲ್ಯಾಣದೊಳು
ಮಿಗೆಯ ಪ್ರಾಂತದೊಳೆಸೆವ ವಲದಿಪುರದ
ಸೊಗಯಿಸುವ ಹಿರೇಮಠದ ಗಣಾಚಾರ್ಯ ಪಟ್ಟಾಚರ್ಯವರ್ಯ
ಮೆರೆವ ಅರವತ್ತಾರು ದೇಶದೊಳಧಿಕವಹ
ತುರುಷ್ಕ ವಿಷಯ ಪ್ರವೀರರ ಫಣೆಯ ತಿಲಕವನೆ
ವರವಲದಿ ತಾಲೂಖ ತತ್ತಾರ ಸಲಗರವೆನಿಪ್ಪ ಕಿರೆವಳ್ಳಿಯದರೊಳ್

ಎಂದಿರುವುದರಿಂದ ಕಲ್ಯಾಣ ಕರ್ನಾಟಕ ಭಾಗವಾಗಿರುವ ಬೀದರ ಗುಲಬರ್ಗಾ ಪ್ರಾಂತ್ಯದಲ್ಲಿಯ ಇಂದಿನ ಆಳಂದ ತಾಲೂಕು ಸಲಗರದ ಸುತ್ತಮುತ್ತ ವಲದಿಪುರ ಇದ್ದಿರಬಹುದೆಂದು ಊಹಿಸಬಹುದಾಗಿದೆ.

೩. ಕೃತಿಯ ಕಾಲ

ಕೃತಿಯ ೧೫ನೇ ಸಂಧಿ ೪೦ನೇ ಪದ್ಯದಲ್ಲಿ ಕಾವ್ಯದ ಮುಕ್ತಾಯದ ದಿನವನ್ನು ಕವಿ ಹೀಗೆ ತಿಳಿಸುತ್ತಾನೆ.

> ಶ್ರೀಮನ್ನೃಪ ಶಾಲಿವಾಹನ ಶಕದೊಳಷ್ಟದಶ
> ನೇಮದಿಂ ಪಂಚದಶವರ್ಷದೋಳಿದರ
> ನಾಮ ವಿಜಯ ಸಂಪತ್ಸರಂ ಶುದ್ಧಶ್ರಾವಣ ತೃತೀಯ ಸೋಮವಾರವೂ ||
> ರಮಣೀಯಕ ಪೂರ್ವನಕ್ಷತ್ರ ಶಿವಯೋಗ
> ರಾಮ ವಹತ್ಯೆತುಲ ಕರಣದೊಳಗೆ ಕೃತಿರಚನೆ
> ಸೋಮಧರನಾಜ್ಞೆಯಿಂ ಮುಗಿದಿರುವದೆಂದು ತಿಳಿವುದು ಸಕಲಸದ್ಭಕ್ತರೂ ||

ನಾಮವಿಜಯ ಸಂವತ್ಸರ ಶ್ರಾವಣಶುದ್ಧ ಮೂರನೇ ಸೋಮಾವಾರ, ಪೂರ್ವ ನಕ್ಷತ್ರ ಶಿವಯೋಗ ಕರಣದಲ್ಲಿ ಶಾ.ಶ.೧೮೫೦ರಲ್ಲಿ ಎಂದಿರುವುದರಿಂದ ಕ್ರಿ.ಶ.೧೯೨೮ರಲ್ಲಿ ಕೃತಿಯನ್ನು ಮುಗಿಸಿರುವುದು ತಿಳಿದುಬರುತ್ತದೆ.

೪. ಕಥಾವಸ್ತು

ಕರಿಬಸವ ಪುರಾಣ ಎಂಬುದು ಕೃತಿಯ ಹೆಸರಿದ್ದರೂ ಆ ವ್ಯಕ್ತಿಯು ಹಲವು ಜನರನ್ನು ಸಂದರ್ಶಿಸಿ, ನೀಡಿದ ಬೋಧೆ, ಮಾಡಿದ ಪವಾಡಗಳ ಕಥೆಯಾಗಿದೆ. ಕನ್ನಡ ಸಾಹಿತ್ಯದಲ್ಲಿ ಕುಷ್ಟಗಿ ಕರಿಬಸವೇಶ್ವರ (ವಚನಕಾರ), ಐನೂಲಿ ಕರಿಬಸವಾರ್ಯ (ಸ್ವರವಚನಕಾರ) ಹಾಗೂ ಚೋರಬಸವ ಚಾರಿತ್ರ್ಯ ಬರೆದ ಕೋಳೂರು ಶಂಕರಕವಿ ಸ್ತುತಿಸುವ ಕೊಂಡಕುಂದೆಯ ಕರಿಬಸವ ಯೋಗಿ ರಾಜೇಂದ್ರರಲ್ಲದೆ, ಚಿತ್ರದುರ್ಗ ಮುರುಘಾಮಠದ ಪೀಠಪರಂಪರೆಯಲ್ಲಿ ಬರುವ ೧ನೇ ಮುರಿಗೆಯ ಶ್ರೀಗಳನ್ನು ಕರಿವೃಷಭದೇವರೆಂದು ಸಂಬೋಧಿಸಲಾಗಿದೆ. ಹಾಗೂ ಉಕ್ಕಡಗಾತ್ರಿ ಕರಿಬಸವೇಶ್ವರರು ಹೀಗೆ ೫ ಜನ ಕರಿಬಸವರು ಕಂಡುಬರುತ್ತಾರೆ. ಪ್ರಸ್ತುತ ಪುರಾಣದ ಕಥಾನಾಯಕ ಯಾರಿರಬಹುದೆಂಬುದು ಇಲ್ಲಿಯ ಪ್ರಶ್ನೆ. ಪ್ರಸ್ತುತ ಕೃತಿಯ ಕರಿಬಸವರು ಕುಷ್ಟಗಿ ಕರಿಬಸವೇಶ್ವರ ವಚನಕಾರನಿಗೆ ಅನ್ವಯವೆಂಬುದು ನನ್ನ ಅಭಿಪ್ರಾಯ. ಇದಕ್ಕೆ ಕಾರಣವೇನೆಂದರೆ ಕೃತಿಯ ೩ನೇ ಸಂಧಿಯಲ್ಲಿ ಶ್ರೀ ಕನಕಗಿರಿಯ ಕೆಂಪಿನ ಸಮಯದ ಚರಮೂರ್ತಿ ಕೆಂಗಣ್ಣಿನ(ಕಿಡಿಗಣ್ಣೊಡೆಯ) ಸ್ವಾಮಿಗಳು ಸಮೀಪದ ಬಸವನಗರದ ಮಠಾಧ್ಯಕ್ಷ ಬಸವೇಶ್ವರ- ಬಸವಮ್ಮನವರ ಉದರದಲ್ಲಿ ಜನಿಸಿದ ಕರಿಬಸವರನ್ನು ತಮ್ಮ ಮಠಕ್ಕೆ ಕಳಿಸಿಕೊಡಲು ಊರಿನ ಸಮಸ್ತರನ್ನು ಕೇಳಿಕೊಳ್ಳುತ್ತಾರೆ. ಹೀಗಾಗಿ ಕನಕಗಿರಿ, ಕುಷ್ಟಗಿ, ಬಸವನಗರಗಳು ಸದ್ಯ ಕೊಪ್ಪಳ ಜಿಲ್ಲೆಯಲ್ಲಿವೆ.

ನಿಡುಮಾಮಿಡಿ ಪೀಠಪರಂಪರೆಗೆ ಸೇರಿದುದೆಂದು ಹೇಳಲಾದ ಕುಷ್ಟಗಿಮಠದ ಶಾಖಾಮಠಗಳು ಕುಷ್ಟಗಿ ತಾಲೂಕು ನಿಡಸೇಸೆ, ದೇವದುರ್ಗಾ ತಾಲೂಕು ಗೆಜ್ಜೆಬಾವಿಗಳಲ್ಲಿವೆ. ೨೧ ಪೀಠಾಧಿಪತಿಗಳು ಇಲ್ಲಿ ಆಗಿಹೋಗಿದ್ದು ಪ್ರಾಯಶಃ ೧೭೦೦ರಲ್ಲಿ ಜೀವಿಸಿದ್ದ ಕರಿಬಸವ ಸ್ವಾಮಿಗಳನ್ನು ಕಥಾನಾಯಕನನ್ನಾಗಿರಿಸಿಕೊಂಡು ಈ ಪುರಾಣ ರಚನೆಯಾಗಿರಬೇಕು; ೧೫ ಸಂಧಿಗಳಲ್ಲಿ ವ್ಯಾಪಿಸಿರುವ ಇಲ್ಲಿಯ ಕಥಾಹಂದರ ಇತಿಹಾಸ ಹಾಗೂ ಪುರಾಣಗಳ ಸಂಗಮವಾಗಿದೆ.

ಬಸವನಗರದ ಮಠಾಧ್ಯಕ್ಷ ಬಸವೇಶ್ವರನಿಗೆ ಹಾಗೂ ಬಸವಮ್ಮನವರಿಗೆ ಸಿದ್ಧಿಯ ಮಗನಾಗಿ ಜನಿಸಿದ ಕರಿಬಸವರು ವ್ಯಾಕರಣ, ಜ್ಯೋತಿಷ್ಯ, ಇತಿಹಾಸ, ಪುರಾಣ ಇತ್ಯಾದಿ ಸಕಲ ವಿದ್ಯಾಪಾರಂಗತರಾಗಿ ಶ್ರೀಕನಕಗಿರಿಯ ಕಿಡಿಗಣ್ಣೊಡೆಯ ಸ್ವಾಮಿಗಳ ಮಠಕ್ಕೆ ಆಗಮಿಸುತ್ತಾರೆ. ಒಳ್ಳೆಯ ಮುಹೂರ್ತದಲ್ಲಿ ಅಯ್ಯಾಚಾರ ಮಾಡಿಸಿ ವೀರಶೈವ ಜ್ಞಾನಪೀಳಿಗೆಗಳೆನಿಸಿದ ಮಂತ್ರಗೋಪ್ಯ, ಏಕೋತ್ತರ ಶತಸ್ಥಲ ಮುಂತಾದವುಗಳನ್ನು ಪಠಣಮಾಡಿ ಪಾರಮಾರ್ಥಿಕ ಜ್ಞಾನವನ್ನು ಪಡೆದುಕೊಳ್ಳುತ್ತಾರೆ.

ಗುರುಭಕ್ತಿಗೆ ಅಮರಗುಂಡ ಮಲ್ಲೇಶ್ವರನ ಕಥೆಯನ್ನು, ಲಿಂಗಸಂಗಕ್ಕೆ ಮಲುಹಣ ಮಲುಹಣಿಯರ ಕತೆಯನ್ನು, ಜಂಗಮ ಮಹಿಮೆಗೆ ಬಸವಣ್ಣನವರ ಸಮಗ್ರ ಜೀವಿತದ ಘಟನೆಗಳನ್ನು, ಕಲ್ಯಾಣಕ್ಕೆ ಪ್ರಭುದೇವರ ಆಗಮನ, ಸಿದ್ಧರಾಮನಿಗೆ ಲಿಂಗದೀಕ್ಷೆ, ಅಕ್ಕಮಹಾದೇವಿ ಕದಳಿಗೆ ನಿರ್ಗಮನ, ಹರಳಯ್ಯ-ಮಧುವರಸಯ್ಯಗಳ ಎಳೆಹೂಟೆ ಪ್ರಸಂಗ, ಜಗದೇವ-ಮಲ್ಲಬೊಮ್ಮರಿಂದ ಬಿಜ್ಜಳನ ಕೊಲೆ ಮುಂತಾದ ಶಿವಶರಣರ ಪ್ರಸಂಗಗಳನ್ನು ಪುರಾಣದಲ್ಲಿ ಬಿಚ್ಚಿಡಲಾಗಿದೆ.

ಭಸಿತ-ರುದ್ರಾಕ್ಷಿ ಮಹಿಮೆಯನ್ನು ಸಾರುವ ಪಾಂಚಾಲ ದೇಶದರಸ ಸಿಂಹಕೇತು ದಂಪತಿಗಳ ಹಾಗೂ ಕಾಶ್ಮೀರ ದೇಶದರಸ ಭದ್ರಸೇನರ ಕಥೆಯನ್ನು ತಿಳಿಸುತ್ತದೆ. ಪರಮ ಪಂಚಾಕ್ಷರಿ ಮಂತ್ರದ ಮಹಾತ್ಮೆಯನ್ನು ಸಾರಲು ಸತ್ಯೇಂದ್ರ ಭೂಪಾಲನ ಕಥೆಯನ್ನು ಕರಿಬಸವನಿಗೆ ಕೆಂಗಣ್ಣಸ್ವಾಮಿಗಳು ವಿವರಿಸುತ್ತಾರೆ. ಹಾಗೆಯೇ ಪಾದೋದಕ ಮಹತ್ವ ವನ್ನಲ್ಲದೆ; ಗಬ್ಬೂರ ಬಿಬ್ಬಿಬಾಚಯ್ಯ ಶರಣನ ಪ್ರಸಾದ ಮಹಿಮೆಯನ್ನು ವಿವರಿಸುತ್ತಾರೆ. ಷಟ್‌ಸ್ಥಲ, ಯೋಗ ಮುಂತಾದ ತತ್ತ್ವಗಳನ್ನರಿತು ಕರಿಬಸವರು ದೇಶಸಂಚಾರ ಕೈಗೊಂಡು ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಹಲವು ಜನರಿಗೆ ಧರ್ಮದ ನಿಜದ ನೆಲೆಯನ್ನು ಅರುಹಿ ಸಲಗರದ ಹಿರೇಮಠದ ಶಿವಲಿಂಗದೇವರನ್ನು ಅರಸುತ್ತಾ ಬರುತ್ತಾರೆ.

ಕರಿಬಸವರು ಶಾಲಿವಾಹನ ಶಕೆ ೧೬೦೩ (ಕ್ರಿ.ಶ.೧೬೮೧) ಬುಧವಾರ ಹಿರೇಹಳ್ಳಿ ಹೊಸ ಶರಣರ ಮಠದಲ್ಲಿ ಐಕ್ಯವನ್ನು ಹೊಂದಿದರೆಂದು ಪುರಾಣ ಸಮಾಪ್ತಿಯಾಗುತ್ತದೆ. ಸ್ಥಳನಾಮ, ಶರಣರ ಸಂಗತಿಗಳನ್ನು ತುಂಬಾ ಉತ್ಸಾಹದಿಂದ ಪ್ರತಿಪಾದಿಸುವ ಪ್ರಸ್ತುತ ಕರಿಬಸವ ಪುರಾಣವು ೧೯ನೇ ಶತಮಾನದ ಕನ್ನಡ ವೀರಶೈವ ಪುರಾಣ ಕಾವ್ಯ ಸಾಹಿತ್ಯದ ಹೊಸ ಸೇರ್ಪಡೆಯೆಂಬುದನ್ನು ಸಾಹಿತ್ಯ ಚರಿತ್ರೆಕಾರರು ಹಾಗೂ ಇತಿಹಾಸ ಪ್ರಿಯರು ತಿಳಿಯುವುದು.

ಸಂಪಾದಕರ ನುಡಿ

೨೦ನೇ ಶತಮಾನದ ಮಧ್ಯಭಾಗ ಮತ್ತು ೨೧ನೇ ಶತಮಾನದ ಆದಿಭಾಗ ಕನ್ನಡಿಗರ ಭಾಷಿಕ ಜವಾಬ್ದಾರಿಯನ್ನು ಎಚ್ಚರಿಸಿದ ಕಾಲ. ಕರ್ನಾಟಕ ಏಕೀಕರಣದ ಹೆಸರಿನಲ್ಲಿ ಕನ್ನಡಿಗರ ಭೌಗೋಳಿಕ ಬದುಕನ್ನು ಸ್ಥಾಪಿಸಿಕೊಂಡಿದ್ದು ಒಂದಾದರೆ; ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನದ ಮೂಲಕ ಕನ್ನಡಿಗರ ಸಾಂಸ್ಕೃತಿಕ ಬದುಕನ್ನು ಅನಾವರಣಗೊಳಿಸಿಕೊಂಡಿದ್ದು ಇನ್ನೊಂದು. ಈ ಎರಡೂ ಜವಾಬ್ದಾರಿಗಳು ಮೇಲ್ನೋಟಕ್ಕೆ ಸಂಭ್ರಮಿಸುವ ಸಂಗತಿಗಳಾಗಿ ಕಂಡರೂ, ಕನ್ನಡಿಗರು ತಾವು ನಡೆದುಬಂದ ಹಾದಿ, ಬದುಕುತ್ತಿರುವ ಸ್ಥಿತಿ, ಬದುಕಬೇಕಾದ ಮಾರ್ಗೋಪಾಯಗಳನ್ನು ಕಂಡುಕೊಳ್ಳುವ ಸಂದರ್ಭಗಳಾಗಿವೆ. ಹೀಗಾಗಿ ಕನ್ನಡ ಪರವಾದ ಎಲ್ಲ ಕ್ಷೇತ್ರಗಳಲ್ಲಿ 'ಕನ್ನಡ ಕ್ರಿಯಾ ಯೋಜನೆ' ಜಾರಿಗೆ ಬರಬೇಕಾಗಿದೆ.

ಇಂಥ ಕನ್ನಡ ಭಾಷಾ ಕ್ರಿಯಾಯೋಜನೆಯ ಭಾಗವಾಗಿ ಪ್ರಾಚೀನ ಅಪ್ರಕಟಿತ ಕನ್ನಡ ಕಾವ್ಯಗಳ ಸಂಪಾದನೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಮುಂದಾಗಿರುವುದು ಸಂತಸದ ಸಂಗತಿ. ತಮ್ಮ ಯೋಜನೆಗೆ ನನ್ನನ್ನು ಸೇರಿಸಿಕೊಂಡು ಪ್ರಸ್ತುತ 'ಕರಿಬಸವಪುರಾಣ' ಕಾವ್ಯವನ್ನು ಸಂಪಾದಿಸಲು ಅನುವು ಮಾಡಿಕೊಟ್ಟಿದ್ದಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಉಪಕೃತನಾಗಿದ್ದೇನೆ. ವಿಶೇಷವಾಗಿ ಈ ಯೋಜನೆಯ ನಿರ್ವಾಹಕರೂ, ಪೂಜ್ಯಗುರುಗಳೂ ಆದ ಡಾ.ಬಸವರಾಜ ಪೊಲೀಸ್ ಪಾಟೀಲ ಅವರಿಗೆ ವಂದನೆಗಳು. ಗ್ರಂಥ ಸಂಪಾದನಾಶಾಸ್ತ್ರದ ವೈಧ್ಯಾನಿಕತೆಯನ್ನು ತಮ್ಮ ಸಂಪಾದಿತ ಕೃತಿಗಳ ಮೂಲಕ ವಿಸ್ತರಿಸಿದ ನಾಡಿನ ಹಿರಿಯ ಪ್ರಾಧ್ಯಾಪಕರೂ, ಮಾರ್ಗದರ್ಶಿಗಳೂ ಆದ ಡಾ.ವೀರಣ್ಣ ರಾಜೂರ ಅವರನ್ನು ನೆನೆಯುವುದು ನನ್ನ ಕರ್ತವ್ಯದ ಭಾಗವಾಗಿದೆ. ಹಸ್ತಪ್ರತಿಯನ್ನು ಒದಗಿಸಿಕೊಟ್ಟು ಸಂಪಾದನೆಗೆ ಸಹಕರಿಸಿದ ಶ್ರೀ ಎ.ಎಸ್.ಅಣ್ಣಿಗೇರಿ ಅವರಿಗೂ ಕಾವ್ಯ ಸಂಪಾದನೆಯಲ್ಲಿ ಮತ್ತು ಕರಡು ಪ್ರತಿ ತಿದ್ದುವಲ್ಲಿ ನೆರವಾದ ಡಾ.ಎ.ಬಿ.ಬಾಳಪ್ಪ ಅವರಿಗೂ ಮತ್ತು ಅಕ್ಷರ ಸಂಯೋಜಿಸಿದ ಶ್ರೀಮತಿ ಬಿ.ರಶ್ಮಿ ಅವರ ವ್ಯವಧಾನವನ್ನು ಪ್ರೀತಿಯಿಂದ ಸ್ಮರಿಸುತ್ತೇನೆ. ಇತಿಹಾಸ ಗೌಣ, ಪುರಾಣ ಪ್ರಧಾನವಾಗಿರುವ ಈ ಕೃತಿಯನ್ನು ಕನ್ನಡ ಸಾಹಿತ್ಯ ಸಕ್ತರು ಪ್ರೀತಿಯಿಂದ ಬರಮಾಡಿಕೊಳ್ಳುತ್ತಾರೆಂಬ ಭಾವನೆ ನನ್ನದಾಗಿದೆ.

೧೨.೦೪.೨೦೧೨ — ಡಾ.ಕೆ.ರವೀಂದ್ರನಾಥ

ಪರಿವಿಡಿ

ಒಂದು

ಸಂಧಿ

ಪಲ್ಲವಿ : ಶ್ರೀ ಮದವಿರಳವಲ್ಲಮನು ತಾನೆ ಧಳೆಗಿಳಿವು
ತಾ ಮಹಿಮ ಗುರುಕರಿಯ ಬಸವ ನಾಮವನಾಂತು
ಭೂಮಿಯೊಳಗಿರುವ ಗಣಮುಖ್ಯರಿಗೆ ನಿಜತತ್ವವನು ತಿಳಿಯೆ ಬೋಧಿಸಿದರು ||

ಶ್ರೀ ಗುರು ಮಹಾಯೋಗಿಜನ ಹೃನ್ನಿಳಯವಾಸ
ಶ್ರೀಗುರುವೆ ನಾದಬಿಂದ್ವಾದಿಗಳಿಗತಿದೂರ
ಶ್ರೀಗುರು ನಿಜಬ್ರಹ್ಮ ಮೂರ್ತಿ ದಿಗ್ಗಜಕೀರ್ತಿ ಗುರುಕುಲಕೆ ಚಕ್ರವರ್ತಿ ||
ಭೂ ಗಗನ ದಿಗ್ಭರಿತವಜ್ಞಾನತ ಮಸೂರ
ರಾಗಕರಣೇಂದ್ರಿಯ ವಿಜಯ ಶೂರ ಸುಖಸಾರ
ವೀಗೆಮಗೆ ಗುರುಬೋಧೆ ವೃತ್ತಾಂತಮಂ ಪೇಳ್ವ ಮತಿಯ ಸುಜ್ಞಾನಗತಿ ||೧||

ಶ್ರೀವಿಮಲಜಾಹ್ನವಿ ಜಟಾಪಟಲ ಶೋಭಿತಂ
ಪಾವನಸುಧಾ ಸೂತಿ ಮಂಡಿತಂ ಶಿರೋಧರಂ
ಸೇವಕ ಮನೋಭಿಷ್ಟದಾಯಕ ಸುಧಾಹಾರ ನಾಯಕನಮಿತ ಚರಣನೆ ||
ದಾವೀ ಭವಗಹನಜ ಶಿರೋಶ ಕಲಹಸ್ತವರ
ಭಾವಜ ಮದ್ರಾದಿಪ ವಿಕಾಶ ಕಾಲದಯಾಲ
ವೋವದೆಯಗೀಗಭಿಷ್ಟವನಿತ್ತು ಕರುಣದಿಂ ಕವಿತಾ ಸುಚರಿತೆಯನು ||೨||

ಅಂಕವಿಷ್ಟರ ಮಂಡಿತಂಬಿಕಾ ಕಾಂತೆ ಶ್ರೀ
ಶಂಕರ ಸುರಾಧಿಪತಿ ಸೃಷ್ಟಿ ಶ್ರೀ ಹರಿವಿನುತ
ಪಂಕಜ ಸುಮಿತ್ರ ವಿಧುವ ಸುನೇತ್ರ ಸಿತಗಾತ್ರ ಯತಿಪ ಗಣನುತಿಪಾತ್ರನೆ ||

ವೆಂಕಟುದ್ವಾಹ ತನುಕಕ್ಷ ಹುತ ಬಂದಹನ
ಸಂಕಟ ಸುಭಕ್ತ ಪರಿಹಾರ ಸ್ಕಂದ ವಿಲೋಲ
ಕಿಂಕರನ ಮನದಿಷ್ಟವಿತ್ತು ಪಾಲಿಪುದು ದಯಾಮೂರ್ತಿ ಸುಜ್ಞಾನ ಕೀರ್ತಿ ||೩||

ಹಿಮವನ್ಮಹಿ ಧರಾತ್ಮಜೆ ವೀರಗಣ ಮಾತೆ
ಹೇಮಗಿರಿ ಮಂಡಿತ ಬ್ರಾಹ್ಮಿ ಶ್ರೀ ಶಚಿ ನಮಿತೆ
ಸಾಮ ನಿಗಮ ಸ್ತೋತ್ರ ಪಾತ್ರೆ ಪಾವನಗಾತ್ರೆ ವಿಪಿನ ವೀಚಿ ಹೋತ್ರೆ ||
ಕಾಮಸತಿ ನಮಿತೆಪ್ಪದಾತೆ ಸದ್ಗುಣ ಪ್ರೀತೆ
ಯಮಿ ಹೃದಯ ಮಂದಿರ ಸುದೀಪೆ ಸಜ್ಜನಪಾತ್ರೆ
ಸೋಮಧರನಂಕವಿಷ್ಟರವಾಸೆ ಮಚ್ಚೇತ ದೀಪ್ಸಿತ ವಸುಪ್ರದಾತೆ ||೪||

ಗಣನಾಥ ವಿಘ್ನವಾರಣ ಕೃಪಾರಸಪೂರ್ಣ
ಗುಣಮಣಿ ಸುಧಾಸಿಂಧು ಚಂದ್ರಸತಿ ವಿಸ್ತಂದ್ರ
ಅಣಿಮಾದಿ ಭೂತಿದಾಯಕ ದಾನಿ ಚತುಪಾಣಿ ಸುರನಿಕರ ಸನ್ಮಾನಿಯೊ ||
ಫಣಿಪ ವೇಷ್ಟನ ಜಠರ ತವಭಜಕ ಜಿತಜನಸುಕರ
ಮಣಿಮಕುಟ ನವದೀಪ್ತಿ ಖಚಿತ ಮಂಗಲ ರಚಿತ
ಮಾಣದೆನ್ನಯ ಭಕ್ತಿರಸವೀಂಟಿ ಪಾಲಿಪುದು ಮತಿಗೆ ಕೃತಿ ಚತುರತೆಯನು ||೫||

ತಾರಕ ಶಿರಚ್ಛೇದ ಶೂರ ಶಿವಸುಖಸಾರ
ಮಾರ ಮರ್ದನ ವೀರಪೂರ ಮಹಿಮಾಗಾರ
ಸಾರಸತ್ಕ್ರಿಯ ಸದಾಚಾರ ಗುರುಪಥಪೂರ ಭವವಿಪಿನ ವೈಶ್ವಾನರ ||
ಪರಮಶಿವಭಕ್ತ ಜನತಾರ ಕರುಣಾಕಾರ
ಪಾರಮಾರ್ಥ ವಿಚಾರಸಾರ ಗುಣ ಮಣಿಹಾರ
ವರದ ಕರಮದ್ಹೃದಯ ಸದನ ಘುಸ ಷಡ್ವದನ ಮತಿಗೆ ಮಂಗಲವೀವುದು ||೬||

ವೀರಭೀಕರ ಕರಸುಧೀರನತ ಮ ದಾರ
ಕ್ರೂರದುರಿತ ವಿದೂರ ಶೂರ ಮಹಿಮಾಗಾರ
ಸಾರ ಸಚ್ಚಿತ್ಸುಖಾಕಾರ ದುರ್ಗುಣದೂರ ಸಜ್ಜನ ಸುಮನ ವಿಹಾರ ||
ಕಾರಣೀಕ ಸುದಕ್ಷ ಯಜ್ಞಾಗಮ ಪ್ರಹರ
ಧೀರ ದ್ವಾದಶ ಮಹಾವತಾರ ಶಿವಸುಖ ಸಾರ
ನೀರಜೇಕ್ಷಣ ನಮಿತ ಕರುಣಸಾಗರ ಮೂರ್ತಿ ದಯದಿ ಪಾಲಿಪುದೆಮ್ಮನು ||೭||

ಪರಮ ಶ್ರೀಧರ್ಮ ಸ್ವರೂಪ ನಿರ್ಜಿತ ಪಾಪ
ಪರಷಟ್ಸ್ಥಲಾಚಾರ ಶೂರ ಕರುಣಾಕಾರ

ವೀರಶೈವ ಪ್ರಮಥನಾಥ ಸದ್ಗುಣಯೂಥ ಭಕ್ತಜನ ಪಾರಿಜಾತ ||
ಮೇರುಮಂದಿರ ವಾಸವಹವಿದ್ಯಾ ವಿಮೋಹ
ಪಾರಮಾರ್ಥ ಸುಶಾಸ್ತ್ರಬೋಧ ಬ್ರಹ್ಮ ವಿನೋದ
ಚಾರುಗೌರವ ಶಿತ ಶರೀರ ಕಲಿಯುಗದುಭಯ ಮಾರ ಮರ್ದನನೆ ಜಯತು ||೮||

ದಾರುಕಂ ಶಂಕುಕರ್ಣ ರೇಣುಕ ಪ್ರಮುಖ
ವರಧೇನುಕರ್ಣ ವಿಶ್ವಾಚಾರ್ಯ ಭೃಂಗಿರಿಷಿ
ಚಾರುಮಾಕಾಳನಂ ಅಂಗುಷ್ಟ ಗಣನಾಥ ನಿರ್ಮಾಯ ದೇವಾಂಗನು ||
ಹರಭಕ್ತ ನೀಲಲೋಹಿತ ನೀಲಕಂದರಂ
ಕರುಣಸಾಗರ ಬಿಂದು ಸಹನೇಶ ಗಗನೇಶ
ತಿರುಸಲರಾದ್ಯಖಿಲ ಗಣವರರು ಮನ್ಮತಿಯವಜ್ಞಾನ ಪರಿಹರಿಪುದು ||೯||

ಕಾಳಿದಾಸಂ ಹರಿಹರಾಚಾರ್ಯ ರಾಘವಂ
ಮಲುಹಣ ಮಯೂರ ಭೀಮಂ ಜಕ್ಕಣಾಮಾತ್ಯ
ಲಾಲಿತ ಶ್ರೀಭೋಜರಾಜ ನಂಜಾಚಾರ್ಯ ಸಿಂಗಿ ದೇವಾಚಾರ್ಯರು ||
ಪಾಲುಕುರಿಕೆಯ ಸೋಮ ಚಾಮರಸ ಭೀಮರಸ
ಕಲಿತ ಬಾಣ ಸುದಂಡಿ ಮಳೆಯ ರಾಜಾದ್ಯಖಿಲ
ಲಲಿತ ಶಿವಕವಿ ನಿಕರ ಮತವಿಡಿದು ನಡೆಸುವೆಂ ಗುರುಕೃಪೆಯೊಳೀಕೃತಿಯನು ||೧೦||

ವಿರತ ಹೃತ್ಕಮಲ ವಿಕಸಿತ ಬಾನು ನಿಸ್ಪೃಹ
ವಿರತ ಸಂತಸ ಶರಧಿ ವರ್ಧನ ಸುಧಾಸೂತಿ
ವಿರತ ಮಾನಸವನ ವಸಂತ ಘನವೇದಾಂತ ವೇದ್ಯ ಸುಜ್ಞಾನ ವಿದ್ಯ ||
ವಿರತ ಶಿರಮಣಿ ವಿರತ ಚರತ ಕುಲಾಭರಣವರ
ವಿರತ ಗುರು ಕರಿಬಸವರಾಜ ಜ್ಞಾನ ಸುತೇಜ
ವಿರತ ಹೇಮಾದ್ರಿ ಪಟ್ಟಣ ಮಠಾಧಿಪನನಾಂ ಪೊಗಳಿಯನುಭವಪಡೆವೆನು ||೧೧||

ಕರಿಬಸವರಾಜ ವಿರತನ ನುತಿಪೊಡಂ ಫಣಿಪ
ಗರಿದೆನಲು ನರರ ಪವಣೋ ಗುರುಕೃಪೆಯ ಬಲಿದ
ವರಿದೆನಿಪ ಸುಜ್ಞಾನ ಸಿದ್ಧಿಯಾದ ನಿಮಿತ್ಯ ಗುರುಚರಣ ನುತಿಪೆನೊಲಿದು ||
ದೊರೆರಾಯ ನಿಜಲಿಂಗಶೆಟ್ಟಿ ಮುಂತಹ ಶಿಷ್ಯ
ರರಿದೆನಿಪ ಗುರುಮಹಿಮೆ ಕೇಳ್ವೆವೆಂಬಪೇಕ್ಷ
ಪಿರಿದಾಗಿ ಬಿನ್ನವಿಸಲೊರದೆ ಮುದದಿಂದೆ ಗುರುಕಥನ ಮಾಯಾ ಮಥನವು ||೧೨||

ಕ್ಷೀರವದು ರಾಜಹಂಸನು ಕುಡಿವ ಮಾಳ್ಕೆಯಿಂ
ಹೀರುವವೆ ಕಾಕ ಮಧುಮಾಸ ಪೌರ್ಣಮಿ ಜೋತ್ಸ್ನೆ
ಸಾರಸು ಚಕೋರ ಸ್ವೀಕರಿಪಂದದಿಂ ಬಕಂಗಳು ಸವಿವವೇ ಮುದದೊಳು ||
ವರ ಮೃತ್ತಿಕೆಯನು ಭಕ್ಷಿಪವೇಡಿ ಶರ್ಕರೆಯ
ನರಿಯಬಲ್ಲುದೆ ಪರಮ ಸುಜ್ಞಾನಿಗಳ ತೆರದಿ
ಮರವೆಯೊಳ್ಮುಳುಗಿರುವ ಜ್ಞಾನ ಶೂನ್ಯ ಕವೀಂದ್ರರರಿವರೆ ನಿಜವಿದರೊಳು ||೧೩||

ಪರಮೇಶನುರುತರದ ವೀರಕತೆಯದು ತಾನೆ
ಧರೆಯೊಳಾ ಕೊಲ್ಲಿಪಾಕಿಯ ಸೋಮನಲ್ಲುದಿಸಿ
ವೀರಸಿಂಹಾಸನಾಧಿಪ ರೇವಣಾರ್ಯಸುತ ರುದ್ರಮುನಿ ಕರಕಂಜದೀ ||
ವರಮಹಂತನು ಜನಿಸಿ ಸದ್ಗುರು ಪರಂಪರೆಯೊ
ಳುರುತರದ ಗುರುಮಹಂತನು ರಚಿತವಹ ಕೃತಿಯು
ಸರಸ ಪ್ರಾಕೃತ ತತ್ವಮಸಿ ವಾಕ್ಯದರ್ಥ ಸುಜ್ಞಾನಿಗಳ ನಿಜವಾರ್ತೆಯು ||೧೪||

ಹಿರಿಯ ಭವಸಂಸಾಸರದೊಳಗೆ ಬಿದ್ದುರುಳುತಿಹ
ನರಮಾತ್ರದವರ ಕತೆಯಲ್ಲವು ಸುಜ್ಞಾನವನು
ಗುರುಕರುಣದಿಂ ಪಡೆದು ಭವಸಾಗರವ ದಾಟಿ ನಿಜವರಿದ ಶಿವಯೋಗಿಯು ||
ಪರಮ ವಿಶ್ವಾಸದಿಂ ಚರಣಕೆರಗಿದ ಜನರ
ಮರವೆದೋಷವ ಕಳೆದು ನಿಜವೇನೆಂದರುಹಿ
ಪರಬ್ರಹ್ಮದಿರವ ಸ್ಥಿರಗೊಳಿಸಿ ನಿಜಮೋಕ್ಷವನು ಪಾಲಿಸಿದ ಗುರುಕಥನವು ||೧೫||

ತೊದಲಿಂದ ಶಿಶುಗಳಮು ನುಡಿದೊಡಂ ಪ್ರಾಜ್ಞರತಿ
ಮುದದಿಂದೆ ಕೇಳಿ ಸಂತಸ ಬಡುವ ಪರಿಯಂತೆ
ಸದಮಳಿನ ಗುರುಪಾದವನು ತುತಿಪ ಭರದಿಂದೆ ಪೇಳ್ದೆನಿದರೊಳೂ ತಪ್ಪವಂ ||
ಪದವಿರ್ದತಂ ದೂಷಿಸದೆ ತಿದ್ದಿ ತಿಳುಹುವುದು
ಸದಯ ವಾರಿಧಿ ಶಾಂಭವ ಜ್ಞಾನ ಸಂಪನ್ನ
ರಿದರಲ್ಲಿ ನಿಜವರಿದಜ್ಞಾನಿಗಳ ಪದಕೆರಗಿ ವಿಜ್ಞಾಪನಂಗೈವೆನು ||೧೬||

ಈ ಕಥೆಯ ಪೀಠಿಕವದೆಂತೆನಲು ಸೈಕತಮ
ನಾಕದತ್ತರ್ವ ಕಲ್ಲೋಲ ಬುದ್ಬುಧ ಫೇನ
ಬೇಕ ಮತ್ಸ್ಯಂ ತರಣಿ ತಿಮಿತಿಮಿಂಗಿಲಮಬ್ರಿಕೆ ನಿಪಾತಂಗಳಿಂದ ||
ನೌಕದಂಡಂ ಕೂಪಕೆಂಪವಳ ಮೌಕ್ತಿಕಾ

ನೇಕ ವಸ್ತು ಪ್ರಕರದಿಂದೆಸೆವ ಶರಧಿಯದು
ವಾಕಮಂ ಕೇಳ್ಗುಡದ ಬೋರೆಂಬ ಧ್ವನಿಯಿಂದೆ ಒಪ್ಪಿತತಿಸಂಭ್ರಮದೊಳು ||೧೭||

ಆ ಶರಧಿಮಧ್ಯದಿ ವಿರಾಜಿಪುದು ಜಂಬುಗಜ
ಆ ಸರೋಜದ ಕರ್ಣಿಕೆಯ ತೆರದೊಳದರೊಳಗೆ
ಹಾಸಿ ಕೋಟಿ ಪ್ರಕಾಶದೊಳೊಪ್ಪುತಿಹುದಮಲವಷ್ಟ ಪದನವದರೊಳು ||
ವಾಸವಸುರ ಜ್ಯೇಷ್ಠ ಹರಿಸುರ ಗಣವ್ರಾತ
ವಾಸಮಂದಿರಮೇಲು ಮೇಲಾಗಿರಚ್ಚೆಸೆವ
ಈಶನರಮನೆವದರೊಳಂ ಮೇಲು ಕಲಶದಿಂದೊಪ್ಪುತಿಹುದೇಂ ಹೊಗಳ್ವೆನು ||೧೮||

ತೇರು ಸಿಂಗರಿಸಿದಂತೊಪ್ಪುತಿಹ ಕನಕಗಿರಿ
ವರದೊಳಿರುತಿಹ ಪರಮನೊಡ್ಡೋಲಗವ ರತ್ನ
ಪುರಕವಿಸಿ ಕೇಲಿಸಿದವರ ಕುಟ್ಟಿಮ ನೀಲಮಣಿಕಾಸ ಕಾಸಾರವು ||
ಕುರಚಿಕೋನ್ನತವಷ್ಟಭೂತಿಯಿಂ ರಚಿತವಹ
ಪರಮ ಹರಿವಿಷ್ಟರವೆ ಪದ್ಮರಂತೆ ಸಮತಿರೆ
ಹರನದರಕರ್ಣಿಕಾಗ್ರದಿ ಮೂರ್ತಿಗೊಂಡಿರಲ್ಪಂಚ ವದನದೊಳೊಪ್ಪುತೆ ||೧೯||

ಚತುರ್ಮುಖದ ಚೌದಿಶದ ವೀಥಿಯೊಳ್ಸಾ ಸಭೆಯೊ
ಳೋತು ಕುಳಿತಿರುವಜಾಚ್ಯುತರಿಂದ್ರ ಸುರ ನಿಕರ
ನೀತಿಯುತ ಮನು ಮುನಿವ್ರಾತ ಗಣನಿಕರವಂ ಪ್ರೀತಿಯಿಂ ಸಭೆಯೊಳಿರಲು ||
ಕೌತುಕದೊಳಂ ಸಿಂಹ ಶರಭ ಭೇರುಂಡ ಗಜ
ಸಾತಿಶಯದಿಂ ದುಷ್ಟ ವ್ಯಾಘ್ರ ವೃಕವಜಮುಖದ
ಆ ತತಗಣವ್ರಾತವಗಣಿತರು ಕುಳಿತಿರಲು ಮಾ ಕಲಶವಿಡಿದು ಬಂದು ||೨೦||

ಪ್ರೀತಿಯಿಂ ಪರಮಾತ್ಮನಂ ಬೆಳಗಿ ನಮಿಸುತಲಿ
ವಾತಭು ನ್ಭೂಷಣನ ಅಂಕದೊಳ್ಕುಳಿತಿರಲು
ಸಾತಿಶಯದಿಂದೆ ದೌವ್ವಾರಿ ಕರುಪಾರಿಷದರಿಂಗೆ ವೆಚ್ಚರವೀವ್ರತೆ ||
ಪಾತಕಾತೀತ ಪಾರ್ವತಿನಾಥ ಭಲಭಲರೆ
ಪೂತುರೆ ಮಹಾಮಹಿಮ ದಕ್ಷರಾಕ್ಷಸೇಕ್ಷ
ಜಾತವೇದಾಕ್ಷಯಮ ಕಾಮಸಂಹರ ತ್ರಿಪುರ ಚೈತ್ರ ಭಲಭಲರೆಯೆಂದು ||೨೧||

ಕೂಗುತಿಹ ಭುಜಬಲರ ನಿಲಿಸಿ ತುಂಬುರರಾಗ
ರಾಗರಸ ಮೇಳನದೊಳಂ ವೀಣೆಯಿಂಚರದಿ

ಸಾಗಿಸುವನೀತ ಪ್ರಬಂಧಗಳಂ ಧೃಪದ ಸಪ್ತಸ್ವರದಿಂದ ಪಾಡಲು ||
ಭೂ ಗಗನ ಪಾತಾಳ ಲೋಕದೊಳಗಿವರಂತೆ
ಯೀಗ ಪಾಡುವರಿಲ್ಲವೆಂದು ಸರ್ವರು ನುತಿಸ
ಲಾಗ ಸಭೆಯೊಳ್ತುಂಬಿ ಸೂಸುತಿಹ ರಾಗ ರಸದಿಂ ಜೊಮ್ಮುವೆತ್ತಿರಲ್ಕೆ ||೨೨||

ಐಸರೊಳ್ಮಿಕ್ಕಾಲ ಭೃಂಗಿ ಸಜ್ಜನ ಸಂಗಿ
ಪಾಶರಹಿತ ಮಾಯಾದೂರ ಶಿವಸುಖಸಾರ
ಈಶ ಸನ್ನಿಧಿಗವಂ ಬಂದು ಸಾಷ್ಟಾಂಗದಿಂ ನಮಿಸಿ ನರ್ತಿಸಿದನಾಗ ||
ಸೂಸುತಿಹ ಸಂತೋಷದಿಂದ ಮುಖ ಮುರುಗಿಸುತೆ
ಸಾಸಿಗನು ಕೈಕಾಲ್ಗಳಂ ಡೊಂಕಿಸುತ ಟೊಂಕ
ನಾಶರಹಿತಂ ಬಾಗುತುರವಣಿಸಿ ನಡೆವುತ್ತೆ ಅವರವರಿಗವರ ಗುರುತಂ ||೨೩||

ತೋರುತತಿ ಚಿತ್ರದಿಂ ನಗಿಸಲಾನಂದದಿಂ
ದಿರುವನಿತರೊಳ್ನಾರದಂ ತ್ರಿಪುಂಡ್ರವಧರಿಸಿ
ಪರಮ ರುದ್ರಾಕ್ಷ ಮಾಲಾಂಕ ವಕ್ಷದಿನೇಕ ಜಡೆವೀಣೆ ಕರಪಿಡಿದು ||
ಹರುಷದೊಳಗೋಲಾಡುತತಿ ಭಕ್ತಿಯಿಂದೆರಗಿ
ಕರಗಳಂ ಮುಗಿದು ನಿಲಲೆಂ ಕಾರಣಂ ಬಂದೆ
ವರಯತಿಪಯೆನೆ ದೇವಮರ್ತ್ಯಲೋಕದಿ ಬಂದೆನಲ್ಲಿವ ಜ್ಞಾನ ತಿಮಿರ ||೨೪||

ಮುಸುಕಿಹ ದುರಾಚಾರ ದುರ್ಗುಣಂ ದುರ್ಜಡತಿ
ವಶವಲ್ಲದಿಹ ಪಾಪವರ್ತನ ಭವಾಂಬುಧಿಯೊ
ಳುಸುರಲಿಕ್ಕಳವಲ್ಲವೆನಿಪ ದುಃಖದಿ ಮುಳುಗುತಿಹರು ಗುರುವೆಂದರಿಯರು ||
ನಾಶರಹಿತನೆ ಊರ್ಧ್ವಮುಖ ರಚನೆ ರಚಿಸುವಡೆ
ಪಾಶರಹಿತಂ ಪರಬ್ರಹ್ಮ ಸ್ವರೂಪನಹ
ಮೀಸಲಾಗಿಹ ಶ್ರೀಮದಲ್ಲಮ ಪ್ರಭುವಲ್ಲದಿತರರಿಂದಾಗದೆನಲು ||೨:

ಅಂತಾಗಲೆಂದಭವನದ ನೊಡಂಬಡಲಿತ್ತ
ಕಂತುಮರ್ದನನ ನೆಚ್ಚಿನ ದೇಶವೆನಿಸುತಿಹ
ಸಂತತಂ ಸಕಲ ಸೌಭಾಗ್ಯ ಸಂಪತ್ತಿನಿಂ ಶೋಭಿಪುದು ಮಹಿಯೊಳಮ ||
ಪಂಥ ಪಂಥಗಳೊಳಂ ಸದ್ಧರ್ಮಶೀಲರತಿ
ನಿಂತು ಪಾನೀಯ ಶಾಲೆಗಳಲ್ಲಿ ನೀರೆರೆವ
ರಂತ ವಶದಿಂ ಫಲಪದಾರ್ಥಗಳ ಕೊಟ್ಟನ್ನ ಛತ್ರಗಳ ಪಾಲಿಸುವರು ||೨೬||

ಅಲ್ಲಿಪ್ಪರೆಲ್ಲ ಸದ್ಭಾವಿಗಳು ಮಾನಿಗಳು
ಪುಲ್ಲಶರಹರನ ಪದಪೂಜಿಪರು ರಾಜಿಪರು
ಬಲ್ಲ ಸದ್ಗುರು ಬೋಧೆ ಆಲಿಪರು ಲಾಲಿಪರು ಸಜ್ಜನ ಸಮೂಹಗಳನು ||
ಖುಲ್ಲ ದುರ್ಜನಮತವ ಖಂಡಿಪರು ದಂಡಿಪರು
ಸಲ್ಲಲಿತ ಸದ್ಗುಣ ಸದ್ಗುಣಗಳ ಮೋಹಿಗಳು
ನಿಲ್ಲದಾಗಲೆ ಭವವ ಭೇದಿಪರು ವೇದಿಪರೆಯೆಲ್ಲದಿಲ್ಲಾ ನಾಡೊಳು ||೨೭||

ಸಲ್ಲಲಿತ ಸೂನೃತ ಧರ್ಮವಾಣಿಗಳು ಪಾಣಿಗಳು
ಬಲ್ಲದಿಹ ವಿಷಯೇಂದ್ರಿ ಶ್ರೇಣಿಗಳು ಮೌನಿಗಳು
ಬಲ್ಲವರು ಸಕಲ ಶಾಸ್ತ್ರಾಚಾರ ನೀತಿವರ್ತನದಿಂದ ಸಂಪನ್ನರು ||
ನಿಲ್ಲದಾ ಶಿವಕಥಾಮೃತರಸವ ಸೇವಿಪರು
ತಲ್ಲಣಿಸದವಿರಳ ಸುಖ್ಯಾತಿಗಳು ಭಾತಿಗಳ
ಇಲ್ಲದಿಹ ದುರ್ಗುಣ ಸಮೂಹಿಗಳು ನಿರ್ಮೋಹರಲ್ಲದಿಲ್ಲಾ ನಾಡೊಳು ||೨೮||

ಎಲ್ಲೆಡೆಯೊಳುಂ ಶಾಸ್ತ್ರಮೋದುವರು ಕೇಳುವರು
ಬಲ್ಲ ಸುಜ್ಞಾನಿಗಳ ಕೂಡುವರು ಪಾಡುವರು
ಸುಳ್ಳುವಾಕ್ಯವ ಪ್ರಾಣಪೋದಡುಂ ಆಡದಿಹ ಕಲ್ಲೆರ್ದೆಯ ಸತ್ಪುರುಷರು ||
ಪಲ್ಲವಿಪ ಅರಿವರ್ಗದೂರಿಗಳು ಸೂರಿಗಳು
ನಿಲ್ಲದತಿ ನಿಂದಿಪರ ಭೇದಿಪರು ಬಾಧಿಪರು
ಲಲ್ಲೆಗರೆವರ ಬಳಿಯ ಸಾರುವರುಸಿರುವರೆಯಲ್ಲದಿಲ್ಲಾ ನಾಡೊಳು ||೨೯||

ಅರೆಯೆಂಬುದುಂಟು ಪಾಷಾಣಂಗಳೊಳ್ಮತ್ತೆ
ಮರೆಯೆಂಬುದುಂಟು ವಜ್ಞಾನದೊಳ್ದುರ್ಗುಣಕೆ
ಸರಿಯೆಂಬುದುಂಟು ಸತ್ಪಥದ ಸಜ್ಜನರುಗಳ ಕರೆಯೆಂಬುದುಂಟು ಸತತಂ ||
ಹರಿಯೆಂಬುದುಂಟು ವಸ್ತ್ರಂಗಳೊಳ್ನಿಂದಕರ
ಜರಿಯೆಂಬುದುಂಟು ಶಿವಶಾಸ್ತ್ರ ಸದ್ಗೋಷ್ಠಿಗಳ
ಅರಿಯೆಂಬುದುಂಟಲ್ಲದಿಲ್ಲವಾ ಮತ್ತಾವ ಪರಿಯಲ್ಲದೀ ರಾಷ್ಟ್ರದೊಳು ||೩೦||

ಕಡಿಯೆಂಬುದುಂಟು ದುಷ್ಫಲ ವೃಕ್ಷ ಚಯಂಗಳೊಳ್
ಮಡಿಯೆಂಬುದುಂಟು ಧೌತಾಂಬರಂಗಳ ನಿಕರ
ಜಡಿಯೆಂಬುದುಂಟು ಶುಷ್ಕ ವೃಷ್ಟಿ ದುರ್ಜನರ ಬಡಿಯೆಂಬುದುಂಟು ಸತತಂ ||
ನಡಿಯೆಂಬುದುಂಟು ಗಮಸಂಗಳೊಳ್ಸೋಪಾನ

ಸಿಡಿಯೆಂಬುದುಂಟು ದುರ್ಗುಣ ಸಮೂಹಂಗಳಂ
ಬಿಡುಯೆಂಬುದುಂಟೆಲ್ಲದಿಲ್ಲವಾ ನಾಡೊಳಗೆ ದುಷ್ಟ ನುಡಿಗಳನುಬೇಗ ||೩೧||

ಇಂತು ಶೋಭಿಪ ಮಲೆಯ ರಾಷ್ಟ್ರದ ಶಿರೋರತ್ನ
ದಂತೆಸೆವ ಮೈಸೂರು ನಗರವಂತಿಂತೆಂದ
ನಂತಪತಿ ಗೂರ್ಣಿಸುವಡಾಗದೆನೆ ನರರೆನಿತು ವರ್ಣಿಸುವೊಡನ್ಯರಹರು ||
ಸಂತತಾನಂತ ಗರ್ಭೋದಕ ಸಮುದ್ರದಂ
ತಂತಸೆವಘಾತ ಪರಿಚಯನೊಪ್ಪಲಂತರದಿ
ಮುಂತೆಯಾವರ್ಣಮಾಗಿಹ ಚಕ್ರವಾಳದಂತೊಪ್ಪುತಿಹ ಪ್ರಾಕಾರವು ||೩೨||

ಪನ್ನಗ ವಿತತಿ ತಮ್ಮ ಪೆಡೆದೆಗದು ಸ್ವರ್ಗಕ್ಕೆ
ನನ್ನಿಯಿಂ ನೆಗದಪವೋ ಪಾತಾಳಲೋಕದಿಂ
ದೆನ್ನಲೊಪ್ಪಿದವು ತೆನೆಗಳ್ಸುತ್ತುವರೆ ಸಲೆರತ್ನದಿಂದೊಪ್ಪುವೆತ್ತು ||
ಸನ್ನುತಾಮಳ ಗೋಪುರಂಗಳಂವಷ್ಟದಿಶ
ಕನ್ನುರಾಜಿಸಲವರವಂತರಂ ತೆರದೊಳಿಹ
ಪನ್ನತಿಕೆಯಿಂದೇಳು ಆ ವರ್ಣ ಪರಿಧಿಯವೆ ಸಪ್ತಶರಧಿಗಳಪ್ಪವು ||೩೩||

ಕೋಟಿ ಮಧ್ಯದೊಳಿರುವ ಸದನಗಳೆ ದ್ವೀಪವವು
ಮೀಟಿದ ಸೂರ್ಯಚಂದ್ರರ ವೀಥಿಗಳ್ಪೊಳೆಯೆ
ನಾಟಿಸಿದ ಚಿತ್ರದಂತೊಪ್ಪುತಿಹ ಮಣಿಖಚಿತ ಕನಕ ಕೂಡ್ಯದಿ ಶೋಭಿಪ ||
ನೇಟಿನರಮನೆ ಮೇರುಗಿರಿಯನೆ ವಿರಾಜಿಪುದು
ಸಾಟಿಯೆನಿಸುವ ಬಂಧುಗಳ ಸದನ ಸುರರಮನೆ
ಘಾಟಿನಿಂದೊಪ್ಪುತಿಹ ರಾಜಧಾನಿಯೊಳಿರುವ ಮೆಲುಮಂದಿರ ಸಭೆಯದು ||೩೪||

ಈಶನೊಡ್ಡೋಲಗವೆನಲ್ಕೊಪ್ಪಿತ ಹಳಸಡು
ವೆಸೆವ ಹರಿವಿಷ್ಟರದಿ ಮೂರ್ತಿಗೊಂಡಿರುವವರ
ಶಶಿಸೆನವ ಮಣಿಖಚಿತ ಮಕುಟದಿಂದೊಪ್ಪುತಿಹ ಕೃಷ್ಣರಾಜನೆ ಶಂಕರಂ ||
ವಶದೊಳಿರುತಿಹ ವಜೀರರು ಮಕುಟವರ್ಧನರು
ಹಸನವಾಗಿಹ ಮನದ ಮಂಡಲೀಕರು ಮಾನ್ಯ
ರಸವಶದವುಮ್ರಾವರಜಹರಿಸುರೇಂದ್ರಾದಿ ದಿಕ್ಪಾಲರಂತೆಸೆದರು ||೩೫||

ವರಕವಿ ಗಮಕಿವಾದಿ ವಾಗ್ಮಿಗಳೆ ಗುರುಮನುಗ
ಳಿರವಾನೆ ಪಂಡಿತರು ಪಾಧ್ಯಾದಿ ಮುನಿನಿಕರ

ಕರಿತುರಗ ರಥ ಪದಾತ್ಯಾಳಿಗಳ್ವೆರಸೀಶ ಕೈಲಾಸದಂತೆಸೆದುದು ||
ನರಪತಿ ಮಹಾರಾಜವಾಸ ಮೈಸೂರವಿಂ
ತರರೆಯೊಪ್ಪಿದರ ಪ್ರಾಂತ ಬಸವನ ಪೇಶಾಟಿ
ಹಿರೆಮಠಾಧಿಪ ಬಸವದೇವನತ್ಯುರು ಸುಗುಣತರ ಪರಮಶಿವಭಾವನು ||೩೬||

ಈತ ಸದ್ಗುಣವ್ರಾತ ಪ್ರೀತಸಜ್ಜನ ಪಾರಿ
ಜಾತ ದುರಿತೌಘ ಘನದೂತ ಜಂಝಾವಾತ
ಸತ್ಕ್ರಿಯಾಚಾರಯೂಥ ಪರಿಗತವಿ ಪದಸೂತಕಾತೀತ ಪೂತ ||
ಈತಿಷ್ಟಲಿಂಗಪೂಜಾಲೋಲ ಸುಖಜಾಲ
ಸಾತಿಶಯ ಶಾಸ್ತ್ರಾತಿ ಪೂರಗುಣ ಮಣಿಹಾರ
ಪತಿತ ಪಾವನ ಪಾಶದೂರ ಶಿವಸಂಸ್ಕಾರವೆನಿಸಿ ರಂಜಿಸುತಿರ್ದನು ||೩೭||

ಈತನರ್ಧಾಂಗಿ ಸಜ್ಜನಸಂಗಿ ಲಿಂಗಾಂಗಿ
ನೀತಿವರ್ತನ ನಿಜಾಲಿಂಗಿ ದುರ್ಗುಣ ಭಂಗಿ
ಪಾತಕಾತೀತ ಪಾವನ ತಂಗಿ ನಿಸ್ಸಂಗಿ ಜಾಡ್ಯ ಪ್ರಪಂಚನಿಕರ ||
ಸಾತಿಶಯ ವೀರಶೈವಾಚಾರ ಮಾರ್ಗಯುತೆ
ನಾಥ ಶೈವಾಭಕ್ತಿ ಪ್ರೀತೆ ಸದ್ಗುಣ ವ್ರಾತೆ
ಸೀತಕರನಮಲ ಭಕ್ತೆ ನಿಜವಿಖ್ಯಾತೆ ಬಸವಮ್ಮನ್ನಿಂತೆಸೆದಳು ||೩೮||

ಈವರು ಸುಖಸಂತೋಷದಿಂದಿರಲ್ಕೊಂದು ದಿನ
ರವದಿಂದ ಲಿಂಗಪೂಜೆಯಮುಭಯರುಂ ರಚಿಸಿ
ಶಿವಮೂರ್ತಿ ಧ್ಯಾನವನು ಬಲಿದು ವಿದ್ಯವನರಿದು ಜಂಗಮಾರ್ಚನೆಯನೆಸಗಿ ||
ತವೆ ಪದಾಂಬುವ ಸಲಿಸಿ ಚರಕೆ ತೃಪ್ತಿಯವಡಿಸಿ
ನವಭಕ್ತಿಯಿಂದೆ ಶೇಷವಕೊಂಡು ತಾವುಂಡು
ಜವದಿ ವೀಳ್ಯವ ಚರಕೆಯಿತ್ತು ತಾವ್ಮದವೆತ್ತು ಧರ್ಮಶಾಸ್ತ್ರವನೋದುತೆ ||೩೯||

ಕುಳಿತಿರುವ ಸಮಯದೊಳ್ಪುತ್ರರಿಲ್ಲದರಿಂಗೆ
ಸಲಲೀಯದಾವಾಗಲುಂ ಸದ್ಗತಿಯನೆಂದು
ಒಲಿದು ಶಾಸ್ತ್ರವನೋದುತದರರ್ಥವನು ಪೇಳಲಾಕ್ಷಣದಿ ನೇತ್ರದಿಂದ ||
ಸಲಿಲವನುದುರಲಾಗ ವಲ್ಲಭನಿದೇನೆ
ನಲ್ಸತಿವೆಮಗೀಗ ಪುತ್ರರಿಲ್ಲದ ಸದ್ಗತಿಯ
ನೆಲೆಯದೆಂತಹುದು ನಾವೆಂತಿರ್ದಡುಂ ವ್ಯರ್ಥವಾಯ್ತು ನಮ್ಮಯ ಬಾಳುವೆ ||೪೦||

ಎಂದು ಬಸವಮ್ಮಗಳು ವಲ್ಲಭಗೆ ನಮಿಸಲ್ಕೆ
ಸುಂದರದ ಬಸವೇಶ ತಾನು ತನ್ನೊಳಗರಿದು
ಇಂದುಮುಖಿ ಸುರತರುವಿರಲ್ಕಾಡಮರಕೆ ಕೈಯ್ಯಾನುವರೆ ಧೀಯುಕ್ತರು ||
ಬಂಧುರದ ಕಾಮದುಘ ಮಂದಿರದೊಳಗೆ ಮತ್ತೆ
ಸಂದುದೊಡ್ಡಾಮುಗಳ ರಕ್ಷಿಸುವ ತೆರನಂತೆ
ಚಂದವಾಗಿಹ ಚಿಂತಾರತ್ನಕರದೊಳಗಿರಲು ಗಾಜಮಣಿ ಪಿಡಿದಂದದಿ ||೪೧||

ಸರ್ವದೇವರ ದೇವ ಮಹದೇವ ಕರದೊಳಿರೆ
ಉರ್ವಿಯೊಳ್ಭಜಿಸಲವ ಕೊಡದ ವರ ಒಂದುಂಟೆ
ಪೂರ್ವದ ಪುರಾತನರು ಪಡೆಯಲಿಲ್ಲವೆ ಪರಮಾತ್ಮನಂ ಭಜಿಸಿ ಪುತ್ರರಂ ||
ಗರ್ವದಿಂ ಭಜಿಸಲೊಲ್ಲದ ಮಹಾಜನವ್ಯೆದೆ
ನಿರ್ವಹಿಸಿಕೊಳ್ಳಲಿಲ್ಲವೇ ಪರಮನಿಂದವರು
ಶರ್ವನೇ ಸರ್ವಲೋಕಾರಾಧ್ಯನಿರಲವನ ಜರಿದು ಕರ ಕಳಕೊಳ್ಳನೆ ||೪೨||

ಎಂದ ನುಡಿಗಳ ಕೇಳೀ ಚಂದಿರಾನನೆ ಮುದದೊ
ಳೆಂದಳೆಲೆದೇವ ಪೂರ್ವದೊಳು ಶಿವನಂ ಭಜಿಸಿ
ಬಂಧುರದ ಪುತ್ರಕಾಂಕ್ಷೆಯ ಪಡೆದರಿತಿಹಾಸವೆಂತೆನಲು ಪೇಳ್ದರೊಲವಿಂ ||
ಹಿಂದೆಯಲೆ ಪತಿ ಶಿಲಾದಂ ಕೋಟಿ ವತ್ಸರವು
ಸುಂದರದ ಸೂಜಿಗಲ್ಲೂರ್ಣಧಕ್ಷಣೆಯಿಂ
ಇಂದುಧರನಂ ಭಜಿಸಿಯೊಲಿಸಿ ನಂದೀಶ್ವರನ ಪಡೆಯಲಿಲ್ಲವೆ ಮೃಕಂಡು ||೪೩||

ಸುತನಾಕಾಂಕ್ಷೆಯೊಳು ಶಿವನಂ ಭಜಿಸಿಯೊಲಿಸಲವ
ಪತಿತಪಾವನ ಮೂರ್ತಿ ನಿಜದೋರಿ ನಿನ್ನಿಷ್ಟ
ಸತತವೇನಿರುವುದದು ಪೇಳೆನಲ್ಸತ್ಪುತ್ರವಿತ್ತು ರಕ್ಷಿಪುದೆಂದೆನಲು ||
ಶತವತ್ಸರಂ ಬಾಳ್ವ ಮೂರ್ಖನಾಗಲು ಬೇಕೊ
ವಿತತ ಸದ್ವಿದ್ಯಗಳನರಿವಾಶ್ವಶಿತಮುಳ್ಳ
ಚತುರ ಷೋಡಶ ಹಾಯನಾಯುಷ್ಯವಂತನಹ ಸತ್ಪುತ್ರನೋಯೆಂದನೆ ||೪೪||

ಚಿರಕಾಲಮಿರ್ದುಡುಂ ಮೂಢನ್ಯಾತಕೆ ಬುದ್ಧಿ
ವರನಾದಡೊಳ್ಳಿತವೆನಲ್ಕೊಟ್ಟೇ ಪೋಗೆಂದು
ಪರಮನಂತರ್ಧಾತವಾಗಲಾಗವಗೆ ಸತ್ಪುತ್ರ ಸಂಭವಿಸಲೊಡನೆ ||
ವರವಿದ್ಯ ಬುದ್ಧಿಗಳನರಿದು ಪದಿನೈದುವ

ತ್ಸರದವನು ಮಾಗೆ ಮಾತಾಪಿತರು ದುಃಖಿಸಲು
ಪರಿಯದಾವುದು ನಿಮ್ಮ ಕ್ಲೇಶವೆನೆಂದವರ ಪುತ್ರ ಕೇಳಿದ ತೀವ್ರದಿ ||೪೫||

ಎಲೆ ಮಗನೆ ನಿನಗ್ಯಾಕಿದರ ಚಿಂತೆ ಹೋಗೆನಲು
ಪೇಳದಲೆ ನಾನುಣ್ಣೆನೆಂದೆನಲ್ಕದ ಕಳುಹಿ
ಬಾಳ ಕೇಳ್ನಿನ್ನ ಪಡೆವಾಗಲೀಶ್ವರನೆ ಷೋಡಶಾಬ್ದ ಚತುರನಂ
ಸಲೆಯಿಂ ಬೇಡಿದೆವುಮದರೊಳಗೆ ಪಂಚದಶ
ಕಲಿತಾಬ್ದ ಸಂದಿಹವು ಒಂದೊತ್ಸರವದಿಹುದು
ಕಾಲವದು ಮಭ್ಯರ್ಣವಾಯ್ತದಕೆ ಯೋಚನೆಯದೆನೆನಸುತೆ ದುಃಖಿಸುವೆವು ||೪೬||

ತಂದೆ ನಿನಗಿದರ ಯೋಚನೆ ಪೂರ್ವಕಾಲದವೆ
ಸಂದಿಸದೆಯೀಗಲಾಳೋಚಿಸಿ ಫಲವೇನು
ಎಂದೆನಲ್ಕಂದ ರಾಜಭವಿಷ್ಯಯೆನಿಪ ನೀತಿಯದುಂಟುವದು ಕಾರಣಂ ||
ಮುಂದೆ ನೋಡಲ್ಬೇಹುದೊಂದದ ಕೊಡಂಬಿಷ್ಟ
ವಿಂದು ದುಃಖಾಬ್ಧಿಯೊಳು ಮುಳುಗಿದೆವೆನಲು ಕೇಳಿ
ದಂದುಗವದ್ಯಾಕಾಗ ಕೊಟ್ಟ ಶಿವನಿಂದುಂಟೆಯೆನಲುಂಟೆಯೆಂದೆನಲ್ಕೆ ||೪೭||

ಅಂದೊಡಂ ಸುಮ್ಮನಿಹಃದಂದೆನಗೆ ಪೇಳಿದೆನೆ
ಕುಂದದೆಲೆ ಮೌನದಿಂದಿರಲಾಗಲೊಂದು ದಿನ
ಮುಂದುಳಿದ ಮಾರ್ಕಂಡೇಯಗೊರೆಯಲದು ಕೇಳಿ ಸ್ನಾನವ ಮಾಡುತೆ ||
ತಂದೆ ಚರಣಕ್ಕೆರಗಿ ಮಂತ್ರೋಪದೇಶವನು
ಹಿಂದೆನಗೆ ನ್ಯಾಸ ಪೂರ್ವಕಮಾಗಿ ಬೋಧಿಸೆನ
ಲಂದು ಪಂಚಾಕ್ಷರಿ ಋಷಿ ಛಂದದೈವನ್ಯಾಸಗಳಿಂದ ಸಹಿತವಾಗಿ ||೪೮||

ಬೋಧಿಸಲವಂ ನಮಿಸಿ ಹೈಮಾಚಲ ತಟದಿ
ಶೋಧಿಶಾಸನವಿಕ್ಕಿ ನ್ಯಾಸ ದಿಗ್ಬಂಧಗಳ
ಸಾಧಿಸುತೆ ಭಸ್ಮರುದ್ರಾಕ್ಷಗಳ ಧರಿಸಿ ಶಿವಮೂರ್ತಿಯಂ ಧ್ಯಾನಿಸುತೆ ||
ಸಾದರದಿಯುಗ್ರತಪಗೈಯ್ಯಲಾಕ್ಷಣದಿ ಶಿವ
ಮೋದದಿಂ ನಿಜರೂಪದೋರಿ ಬೇಡೆನಲಾಗ
ಪಾದದೊಳು ಫಣೆಯಿಟ್ಟು ಸಾಷ್ಟಾಂಗದಿಂದೆರಗಿ ನೀವೊಲಿದ ಬಳಿಕಾಗದ ||೪೯||

ವರವದೊಂದುಂಟೆ ಶಂಕರ ಎನ್ನ ಪಿತಮಾತೆ
ಯರು ದುಃಖಿಮಂ ಬಡುತಿಹರುವಿದರಿಂದ ವರ

ಕರಣ ಸಂತಸಗೈವ ಕಾರಣಂ ತವಚರಣ ಸ್ಮರಣೆಗೈದೆನು ಪಾಲಿಸು ||
ಕರವ ಶಿರದೊಳಗಿಟ್ಟು ಭಯಮದೋಳೊಟ್ಟುಡುಕಿ
ಪರಿಣಮಿಸಿ ಯಾಚಿಸುವೆನೆನಲಭವ ನಿನ್ನಚ್ಛೆ
ದಿರವನಿತ್ತಪೆ ಬೇಡು ಬೇಡೆನೆ ಮಹಾಮಹಿಮ ನೀವಿರುವ ಪರಿಯಂತರ ||೫೦||

ನಾನು ತಮ್ಮಯ ಚರಣ ಸೇವೆಗೈವುದ ಕರುಣಿ
ಸೆನಲಾಗಲದ್ಭುತವ ಯಾಚಿಸೆದೆ ಮನು ಮುನಿಗ
ಳನುನಯದೊಳಂ ನಿನ್ನ ತೆರದಿ ಬೇಡಿದರುಂಟೆ ಮಗನೆ ವಾಚಾದತ್ತಮಂ ||
ನಿನಗಿತ್ತ ಬಳಿಕ ನಾ ಪೆರತ ವಾಚಿಸಲುಂಟೆ
ವಿನಯದಿಂದಕ್ಷಯ ಪದತ್ವವನು ಕೊಟ್ಟಿರ್ಪೆ
ನೆನುತಲನುಮತಿಸಿ ಪೋದಂ ಪರಮನಿತ್ತ ಮಾರ್ಕಂಡೇಯಂ ಪಿತಮಾತರಂ ||೫೧||

ಸಂತಸದ ಶರಧಿಯೊಳಗೆ ಮಗ್ನ ಮಾಡಿದನಾಗಿ
ಕಾಂತೆ ಕೇಳೊಂದೊರೆಯೆ ಸಮ್ಮುದದೊಳಂ ನಮಿಸಿ
ಅಂತಕಾಂತಕನೊಡನಹಂಕರಿಸಿ ಕೆಟ್ಟರಾರೆಂದು ಬಿನ್ನಹಗೈಯಲು ||
ಮುಂತೆ ದಶಶಿರನಹಂಕಾರದಿಂ ರಜತಗಿರಿ
ತಾಂ ತಲೆಯೊಳಾಂತ ಕಾರಣ ಭೂತಳಕ್ಕಿಳಿದ
ನಂತಲ್ಲದಾ ಬಾದರಾಯಣನು ಕಾಸಿಯೊಳ್ಕೇಶವನೆ ಘನವೆನ್ನುತೆ ||೫೨||

ಕರವೆತ್ತಿ ಕೂಗಿದ ನಿಮಿತ್ಯಕರ ಖಂಡಿಸಿದ
ನಿರದೆ ನಂದೀಶ ಮತ್ತವನು ವಿಶ್ವೇಶ್ವರನ
ಚರಣ ಸನ್ನಿಧಿಗೈದಿ ಹರನೆ ಘನವೆಂದನುನುತಿಸಿ ಕರಗಳನು ಪಡೆದ ||
ವರಸತಿಯ ಕೇಳೆಂದು ವಲ್ಲಭನು ಪೇಳಲ್ಕೆ
ಹರುಷದೊಳ್ನಾವು ಶಂಕರ ಪೂಜಿಸಿ ಪಡೆವೆ
ವರೆವುದುಪದೇಶವೆಂದೆರಗಿದಳು ಮನಕೆಯಭಯವನಿತ್ತು ಶುಭಲಗ್ನದೆ ||೫೩||

ಈಶನೋಂಪಿಯನೊಂದು ಬಸವಮ್ಮಗಳಿಗೆ ತಾ
ಲೇಸಿನಿಂ ಪೇಳುತ್ತಲದರ ಜಪತಪ ಕ್ರಿಯವು
ನ್ಯಾಸಪೂರ್ವಕಮಾಗಿ ಬೋಧಿಸುತ್ತವೆ ತಾನುಮದರಂತೆ ತಪಿಸುತಿರಲು ||
ಸೂಸುತಿಹ ಸಂತೋಷದಿಂದುಗ್ರ ತಪಗೈಯೆ
ನಾಶರಹಿತಂ ಶಂಕರಂ ತನ್ನೊಳಿದನರಿದು
ಖಾಸಕೈಲಾಸ ವಾಸದೊಳಲ್ಲಮನ ಕರೆದು ಬಸವೇಶ ತತ್ಪನ್ನಿಯು ||೫೪||

ಸುತತಕಾಂಕ್ಷೆಯೊಳವರು ತಪವ ಮಾಡುತ್ತಿರುವ
ರತಿಶಯದೋಳವರ ಮನದೀಪ್ಸಿತವ ಸಲಿಸುವುದು
ರತಿಯಿಂದೆ ನಾರದನು ಪೇಳಿರುವ ಕಾರ್ಯವದು ತಾವಲ್ಲದಿತರರಿಂದ ||
ಸಾತಿಶಯದೊಳಗಾಗದದು ಕಾರಣದಿ ತಾವು
ನೀತಿ ಕ್ರಿಯಾಜ್ಞಾನ ನಿರ್ಗುಣ ಸುಮಾರ್ಗವನು
ಪ್ರೀತಿಯಿಂ ಚರಣಕೆರಗಿದರಿನೀತತ್ವವನು ಬೋಧಿಸಿ ಭವವ ಭೇದಿಸಿ ||೫೫||

ಜಗವನುದ್ಧರಿಸಿ ಬಹುದೆಂದಪ್ಪಣೆಯನೀಯ
ಲಘು ಹರನು ಅಂತಾಗಲೆನುತ ತನ್ನಯ ದಿವ್ಯ
ಸೊಗಯಿಸುವ ಸುಜ್ಞಾನ ವೈರಾಗ್ಯ ಕಲೆಗಳಿಗೆ ಪೋಗೆನ್ನುತಾಜ್ಞೆಯವನು ||
ಬೇಗದಿಂ ಕೊಡಲಾಗ ತಪಿಸುತಿಹ ಬಸವಮ್ಮ
ನಾ ಗರ್ಭಗೃಹದಿ ದೀವಿಗೆ ಹಚ್ಚುವಂದದೊಲು
ಝುಗಝುಗಿಸುತಿರಲು ಗರ್ಭವ ಚಿನ್ನದೋರಿತದು ವರ್ಣಿಸುವ ಕವಿಯಾವನು ||೫೬||

ಇಂತು ಸರ್ವೋತ್ಸುಖ ಸಮುದ್ರದೊಳ್ಮುಳುಗಿಸಲೆ
ಕಂತು ಮರ್ದನನಂತರಂಗದೊಳ್ಧ್ಯಾನಿಸುತೆ
ಸಂತತಂ ಸಂತಾನ ರೂಪ ಶಿವನೆಮ್ಮಂತರಂಗದೀಪ್ಸಿತ ಫಲವನು ||
ಗಂತುಕದೊಳಿತ್ತನಿದ ಭಕ್ತ ವತ್ಸಲನೆನಿಪ
ಪಂಥದ ಬಿರುದು ಸಾರುತಿದೆ ವೇದಶಾಸ್ತ್ರದೊಳ
ನಂತಪರಿಯಲಿಯೆಂದು ನುತಿಸುತತಿ ಸುಖಸಂಕಥಾ ವಿನೋದದೊಳಿರ್ದರು ||೫೭||

ಮರುಳಸಿದ್ಧಾಚಾರ್ಯ ರಾಮಿದೇವಚಾರ್ಯ
ವರಪಂಡಿತಾಚಾರ್ಯಗುರುವು ವಿಶ್ವಾಚಾರ್ಯ
ರುರೆ ಮಧ್ಯವದನ ಸಂಜಾತ ರೇಣುಕಾ ದೇವನುದರ ಭವಘನಲಿಂಗನು ||
ಹರರೂಪ ರುದ್ರಮುನಿ ಕರಜಾ ಮಹಂತಮುನಿ
ಚರಣ ಗುರುಪರಂಪರೆಯೊಳುದ್ಭವಿಸಿ
ದರರೆ ವಲದಿಯಪುರದ ಹಿರೆಮಠಾಧಿಪ ಪಟ್ಟಚರವರ್ಯ ಮಹಂತನುಸುರ್ದ ||೫೮||

ಅಂತು ಸಂಧಿ ||೧|| ಕ್ಕಂ ಪದ ||೫೮|| ಕ್ಕಂ ಮಂಗಲ ಮಹಾ

ಎರಡು

ಸಂಧಿ

ಪಲ್ಲವಿ : ಬಸವನಗರದ ಮಠಾಧ್ಯಕ್ಷ ಬಸವೇಶ್ವರನ
ಶಶಿವದನೆ ಬಸವಮ್ಮಗಳ ಗರ್ಭದೊಳಗುದಿಸಿ
ಶಿಶುವಿನ ವಿನೋದವನು ತೀರ್ಚಿಸಿ ಸಕಲ ವಿದ್ಯೆ ನೆನವು ಮಾತ್ರದೊಳರಿದು ||
ಸಾರ ಶಶಿಮೌಳಿ ಮಂಡಿತ ಜಟಾಪಟಲ ವರ
ವೀರಗಣ ಗುಹಜನಕ ಗಿರೀಶ ಗೌರೀನಾಥ
ಮಾರಮರ್ದನ ವೀರಧೀರ ಕರುಣಾದಾರ ಭವವಿಪಿನ ವೈಶ್ವಾನರ ||
ಕ್ಷೀರ ಜಲಧಿಜ ಪ್ರೀಯ ಕ್ಷೇಮ ಜಠರೇಂಧ್ರಸುರ
ವಾರ ಮನುಮುನಿ ವಿನುತಪಾರ ಮಹಿಮಾಗಾರ
ಕ್ರೂರದಕ್ಷ ವಿಪಕ್ಷ ರಾಕ್ಷಸ ಶಿರೋಮಾಲ ಮಕ್ಷವಾಹನ ಜಯಜಯ ||೧||

ಶುಭ್ರಕಾಯ ಗರ್ಭದೊಳಗಂಕುರಿಸಿದರಿಂ
ಶುಭ್ರವಾಕೆಯ ಮೊಗಕೆ ಸಮನಿಸಿತೊಯೆಂಬಂತೆ
ಶುಭ್ರವಾಯ್ತಾಕೆ ವದನವ ರೋಮದಗ್ರ ಕವಲಿರಿದುದೊಂದೆ ಬ್ರಹ್ಮವು ||
ಈ ಬ್ರಾದ ರಾಜೀವ ಶಿವರೆಂದು ಸೂಚಿಪೊಲು
ಮಭ್ರಕಟಿದಿಪ್ಪಾಡುದತಿಸೂಕ್ಷ್ಮದೆ ಸ್ಥೂಲ
ನಿಜವಾಯ್ತೆಂಬ ತೆರದೊಲು ಶ್ವಾಸಮಂ ಶೀಘ್ರವಾಯಿತುಮದೆಂತೆಂದಿದನೆ ||೨||

ಸಾವಧಾನದೊಳಿರುವ ಮೂರ್ತಿ ತಾನೀಗವನ
ಜೀವ ಭಾವವನು ಧರಿಸಿದನೆಂಬ ಸಾಜ್ಞೆಯನು
ಆವಗಂ ಸೂಚಿಸುವ ತೆರನಂತೆ ಹಂಸ ಹಂಸಿಂದು ತೀವ್ರದಿ ಚರಿಪುದು ||

ಶಿವರೂಪ ತಾನೆ ಜಠರದೊಳಿರುವ ಕಾರಣದಿ
ಜವದಿಂದ ಗಮನಿಪುದು ಮತವಲ್ಲವೆಂದಿಂತು
ತವಕನುಳಿದಳೊಯೆಂಬ ತೆರದಿ ನಡೆಮುಂದಾಯ್ತು ನೀಲಕಂಠನುಮುದರದಿ ||೩||

ತಾನಿರುವ ಕಾರಣದಿ ಕುಚ ಚೂಚಕಂಗಳವು
ಮಾನಿತದೊಳಂ ಕೃಷ್ಣವಾದವೆನೆ ಕಪ್ಪಾದ
ವಾನಿಯಮದಿಂ ಕಕ್ಷ್ಮಯುಗ್ಮವಾಪರಿಯಾದವೆನಂಚಿನದ್ಭುತದನು ||
ಸಾನುರಾಗದೊಳುತೆಳ್ಪಸುರು ಪಿರಿದಾಗಲಾ
ತಾನನುಭವಿಪನಲ್ಲವಸನವೆಂಬುದನು ಜಗ
ಜನಕ್ಕೆದೆ ತೋರ್ಪಪೆನೊಯೆಂಬಂತೆ ಮಾತೆಯುಂಡನ್ನಯುದ್ಗರಿಸುತಿರಲು ||೪||

ನಾರಿಗರ್ಭದೊಳು ಭಸ್ಮಚ್ಛನ್ನನಿರುತಿಹುದ
ನಾರರಿಯರದ ತೋರ್ಪ ಮಾಳ್ಕೆಯೊಳು ಭಸ್ಮವನು
ಮೀರಿ ಸ್ವೀಕರಿಸುವಳಿದರ ಲಕ್ಷಣವನೆನಿತು ವರ್ಣಿಸಲು ಕಿರಿದೆನಿಪುದು ||
ಇರುತಿರಲು ನವಮಾಸ ಪೂರ್ಣವಾಗಲು ಶುಭದ
ವಾರ ತಿಥಿ ನಕ್ಷತ್ರ ಯೋಗ ಕರಣಗಳು ತಾ
ವರರೆ ತಾಮುಂಚು ನಾಮುಂಚೆನ್ನುತಿರಲೊಂದು ದಿನ ಲಿಂಗಪೂಜೆ ವೆಸಗಿ ||೫||

ಶಿವಸ್ಮರಣೆಯಿಂದೆ ಪವಡಿಸಲರ್ಧರಾತ್ರಿಯೊಳು
ತವೆ ಬೇನೆಬೇಸರ ಭೀಭತ್ಸ ಕಷ್ಟಗಳಿಲ್ಲ
ದವನು ಶಿಶುರೂಪದಿಂ ಮಾತೆ ಮಗ್ಗುಲೊಳಿರಲ್ಕೆಚ್ಚತ್ತು ಬಸವಮ್ಮನು ||
ಶಿವಶಿವಾಯೆನುತ ತನ್ನುದರದು ಪರಿಯೊಳುಕರ
ರವದಿಂದೆ ಸಮ್ಮಾರ್ಜನೆಯ ಮಾಡೆ ಜಠರದೊಳು
ಲವದನಿತುವೇನಿಲ್ಲದತಿ ತೆಳ್ಪಸುರಮಾಗಲಾಶ್ಚರ್ಯ ವಾಗೆ ತನ್ನ ||೬||

ಮಗ್ಗುಲೊಳಗಿರುತಿರ್ಪ ಸೂರ್ಯ ಪ್ರಭಾಮಯದ
ವಗ್ಗಿನೊಳ್ಕಲ್ಪದ್ರುಮದ ಸನ್ನಿಧಿಯೊಳಿರುವ
ಅಗ್ಗವಂಕುರವೋ ಮತ್ತಾ ಕಾಮಧೇನುವಿನ ವತ್ಸವದೊಯನಿಪಂದದಿ ||
ಅಗ್ಗಿಗಣ್ಣನ ರೂಪ ಶಿಶುವದಂ ನೋಡುತಿರೆ
ಹಿಗ್ಗಿ ತನ್ನಯ ಬಳಿಯಲಿರುವ ಸ್ತ್ರೀಯರನಾಗ
ಕುಗ್ಗು ಧ್ವನಿಯಿಂದೆಬ್ಬಿಸಲ್ಕವರು ಎದ್ದು ನೋಡಲ್ಕಿದಾಶ್ಚರ್ಯವೆಂದು ||೭||

ಮಾಸಿಲ್ಲ ಮಲವಿಲ್ಲ ದುಷ್ಟಗಂಧವದಿಲ್ಲ
ಹೇಸಿಕೆಯು ತಾನಿಲ್ಲ ನೋವು ದುಃಖವದಿಲ್ಲ

ಪಾಶರಹಿತಾತ್ಮ ಸ್ವರೂಪನೆ ತಾನಿವನು ಎಂದು ನುತಿಸಿದರು ಮುದದಿ ||
ಸೂಸುತಿಹ ಸಂತೋಷದಿಂದೆ ಬಸವಯ್ಯಗಳಿ
ಗಾಸಮಯದೊಳಗೆಬ್ಬಿಸುತ ಪೇಳಲಾಕ್ಷಣದಿ
ತೋಷದಿಂದವರೋಡಿ ಬಂದು ನೋಡಲ್ಕಿದಾಶ್ಚರ್ಯವೆಂದು ನುಡಿಸಿ ||೮||

ತಮ್ಮ ಗುರುಗಳ ಕರೆಸಿ ದಾನಧರ್ಮವ ಮಾಡಿ
ನೆಮ್ಮಿ ತಚ್ಚರಣಾರವಿಂದದಡೆಗಾ ಶಿಶುವ
ಸುಮ್ಮನಾಗಲೆಂದು ತಂದು ಚರಣೋದಕದಿ ಸ್ನಾನಗೈಸಿ ತನ್ಮಾತೆ ಸಹಿತಂ ||
ಗಮ್ಮನಾ ಲಿಂಗ ಪಂಚಾಮೃತದೊಳಭೀಷೇಕ
ಒಮ್ಮನದೊಳಂ ಮಾಡುತಷ್ಟವಿಧದರ್ಚನೆಯು
ಕಮ್ಮಗಂ ರಚಿಸಿ ಶಿಶುವಿನ ಕಂಠದಲ್ಲಿ ಗುರುಲಿಂಗವಮಂ ಧರಿಸಿ ನಲವಿಂ ||೯||

ಚರಣೋದಕವನು ತದ್ಬಾಲ ಮಾತೆಯರಿಗೆತಿ
ಗುರುಗಳಿಗರ್ಪಿಸಿದಾ ಬಳಿಕ ಸ್ತನ್ಯ ಪಾನವನು
ವರಶಿಶುವಿಗಂ ಮಾಡಿಸುತಮಿರುತಿರಲ್ಕಾಲಗಾಗ ತ್ರಿದಶಾಹಂಗಳು ||
ಸರಸದಿಂದಾಗಲತಿ ಸಂಭ್ರಮದೊಳಂ ತೊಟ್ಟಿ
ಲುರೆಯಿಕ್ಕಬೇಕೆಂದು ನಿಯಮಿಸಿ ಚರಾರ್ಚನೆಯ
ಪರಮೋತ್ಸಾಹದಿ ರಚಿಸಿ ಆರಾಧನೆಯನೆಸಗಿ ದಾನ ಧರ್ಮಗಳನಿತ್ತು ||೧೦||

ತೊಟ್ಟಿಲಿಕ್ಕುವದಕ್ಕೆ ಮುತ್ತೈದೆಯರ ಕರಸ
ವಿಷ್ಟದಿಂ ಸಕಲ ಶಿವಭಕ್ತ ಮಾನಿನಿಯರತಿ
ನಿಷ್ಠೆಯಿಂ ಮುಖದೊಳದು ಭಸ್ಮ ಕುಂಕುಮ ಕಸ್ತೂರಿಯು ಗಂಧಮಂ ಧರಿಸುತೆ ||
ಷಟ್ಪಪೆಟ್ಲಿಯು ಪಂಚರಂಗಿ ಗುಲ್ಜರಿ ಮಡಿಗ
ಳುಟ್ಟು ರವಿಕೆಯ ತೊಟ್ಟು ಚೌರಿ ಕ್ಯಾದಗಿ ಮಣಿಗ
ಳಿಟ್ಟು ಪಟ್ಟಿಗೆಬುಗಡಿ ಘಂಟಿಸರಪಳಿ ಜುಮುಕಿ ಬಾವುಲಿ ಕರ್ಣಪುಷ್ಪಮ ||೧೧||

ಪವಳಸರ ಮೌಕ್ತಿಕಾಹಾರ ಪುತ್ತಳಿಯ ಸರ
ನವಹರ ಪಡೆದತೀವಡಿಯು ಕಟಾಣಿಯು ಪದಕ
ತವೆ ಬಾಹು ಪನ್ನಗಂ ಬಾಜು ಬಂದವು ಕಂಕಣ ಪಾಟ್ಲಿ ಕಾಂಚನ ಬಳಿ ||
ರವದಿ ಮುದ್ರಿಕೆ ಕಾಂಚಿಧಾಮ ಪಾಯ್ಬಟ್ಟುರುಳಿ
ಲವದನಿತು ಕುಂದಿಲ್ಲದಿಹ ಲುಲ್ಲು ಮಿಂಚು ಪಿ
ಲ್ಯವನಿಟ್ಟು ಸಂಭ್ರಮದಿ ಬಂದರಂಗಜನ ಸೇನೆಯು ಬಂದುದೆಂಬಂದದಿ ||೧೨||

ತಿಲ ಕುಸುಮ ನಾಸಿಕದವರ್ಧೇದುನಿಭ ಫಣೆಯು
ರಲಘು ಶ್ರೀಕಾರವಮಂ ಪೋಲ್ವ ಕರ್ಣದ್ವಯದ
ಶುಲಭಲಿ ಕುಂಚಾರ್ಧಮಂ ಸಮನಿಪ ಸುನೇತ್ರಯುಗ ಕನ್ನಡಿಯ ತೆಳುಗಲ್ಲದ ||
ಸಲೆ ಕಂಬು ಕಂಠೆಯರು ಬಿಂಬೋಷ್ಟಿಯರು ಕುಂದ
ಲಲಿತನೆನೆ ನಿಭದಂತ ಪಂಕ್ತಿಯರು ಪಂಕಜದ
ಮೂಲವನು ಪೋಲ್ವದೋರ್ದ್ವಂದ್ವ ತನ್ನಾಳ ಸಮನಿಪ ತೋಳ್ಗಳಿಂದೆಸೆವರು ||೧೩||

ಕಮಲಪುಷ್ಪವ ಪೋಲ್ವ ಪಾಣಿಯರು ವೇಣಿಯರು
ಅಮಲ ಪನ್ನಗ ಸದೃಶ ಕುತ್ಕಿಲ ಶ್ರೋಣಿಯರು
ವಿಮಲ ರಂಭೋರು ಜಂಘಾ ಶರಧಿ ಕೂರ್ಮ ಪದಕಾಂಚನ ಶಲಾಕಾಂಗುಲಿ ||
ಸುಮನ ಭಾಮಿನಿಯರೊಲಿದೀ ಬಾಲನುತ್ಸವಕೆ
ತಮತಮಗೆ ಬಂದರೆಂಬುವ ತೆರದಿ ಸೊಗಸಿನಿಂ
ಅಮಮಯನೆ ಸರ್ವಜನ ಶಿಲೆಯ ಸೇನೆಯನೊಪ್ಪುವೆತ್ತು ಬಂದರು ಅರ್ತಿಲಿ ||೧೪||
ಇಂದು ಪುಷ್ಕರಮು ಕರಮಂ ನಿರಾಕರಿಪಮುಲ
ಕುಂದದಾಡಿಮ ಬೀಜವಣಕಿಪ ಸುರದನಗಳ
ಸಿಂಧುರ ಮರಾಳಗತಿ ನೀಕರಿಪಗಮನೆಯರು ತಂಡತಂಡದಿ ಬಂದರು ||
ಬಂಧುರ ತಿಲಕ ಕುಸುಮ ಸಂಪಿಗೆ ತಿರಸ್ಕರಿಪ
ಅಂದವಾಗಿಹ ಘ್ರಾಣಬಿಂಬ ಪವಳ ಸುರತ್ನ
ಚಂದಮಂ ನಿಂದಿಪೊಟ್ಟಿಯದೊಲಿದು ಬಂದರತಿ ಬಾಲನೋತ್ಸವಕೆ ಭರದಿ ||೧೫||

ಶುಕ ಮಂಜುವಾಣಿಯರು ಸದ್ಗುಣ ಶ್ರೇಣಿಯರು
ಪಿಕ ವಿಮಲಕಂಠಿಯರು ಮುಡಿ ನೀಲಕಂಠಿಯರು
ಚಕಚಕಿತ ಸುಮನೆಯರು ನವ ಮನೋನ್ಮಣಿಯರತಿ ಸಂಭ್ರಮದೊಳೊಡಗೂಡುತೆ ||
ಪಕಪಕನೆ ನಗುವುತ್ತೆ ಚಕಚಕನಡಿಗಳಿಟ್ಟ
ಸಕಲೇಂದ್ರಿಯಂಗಳಂ ಲಿಂಗದೊಳಡಗಿಸುತೆ
ಸಕಲ ಸ್ತ್ರೀಯರು ತೊಟ್ಟಿಲೋತ್ಸವಕೆ ನಡೆತಂದರೇನೆಂಬೆನದ್ಭುತವನು ||೧೬||

ಬಂದು ತೊಟ್ಟಿಲ ಪಿಡಿದು ಸುಸ್ವರದಿ ಪಾಡಿದರು
ಕಂದರ್ಪ ದರ್ಪಹರ ಭಕ್ತಜನ ಬಂದು ಜೋ
ಬಂದು ಶೇಖರಪರವತಾರ ಸದ್ಗುಣಪೂರ ಭವ ವಿಪಿನದಾವ ಜೋಜೊ ||
ಬಂಧುರ ಶಿವಾನಂದ ಲೀಲಾಸ್ವರೂಪ ಜೋ
ಕುಂದಿಲ್ಲದಪ್ರತಿಮ ಮಹಿಮಾವಲಂಬ ಜೋ
ಇಂದು ಈ ಧರೆಗಿಳಿದು ಹೇರಿದಿದರ ಪಾವನಮಾಳ್ಪ ಸುಜ್ಞಾನಿ ಜೋ ಜೋ ||೧೭||

ಶರಣಾಗತ ದುರಿತ ತಮದೂತಸೂರ ಜೋ
ಕರುಣಾಸಾಗರ ಮೂರ್ತಿ ದಿವ್ಯ ತೇಜಸ್ವಿ ಜೋ
ಪರಮ ಪಾವನ ನಿತ್ಯ ನಿರಘು ನಿರೂಪಮ ನಿರಾವರಣ ನಿರ್ದ್ವಂದ್ವ ಜೋ ಜೋ ||
ಅರುವಿ ಮರವಿಗೆ ನಿಲುಕದಪ್ರತಿಮ ಯೋಗಿ ಜೋ
ವರಶಿಷ್ಯರ ಜ್ಞಾನಗಿರಿ ವಜ್ರದಂಢ ಜೋ
ಹರರೂಪ ಭವತಾಪ ಗಹನ ಕಾನನ ವೀತಿಹೋತ್ರ ಸ್ವರೂಪ ಜೋ ಜೋ ||೧೮||

ಎಂದು ಸಂಭ್ರಮದಿಂದ ಜೋಗುಳವ ಪಾಡಿ ಸಲೆ
ಬಂದು ಕುಳಿತಿಹ ಗುರುಗಳಿಗೆ ನಾಮವನೆಂದು
ಸುಂದರಾಂಗಿಯರು ಕೇಳಲ್ಕೊರೆದ ಕರಿಬಸವನೆಂದರು ಕೇಳಿ ಮುದದಿ ||
ಬಂಧುರದಿ ಸೋದರಿಯರಿಂದಿಡಿಸೆ ಮೂವೇಳೆ
ಚಂದದಿಂದಡಲವರ ಚಿನ್ನಿನೊಳು ಚಪ್ಪಳಿಸಿ
ಕುಂದದಾಗಲೆಯವರ್ಗೆ ಬಾಗಿನವ ಕೊಡಿಸಿ ಬಂದುಡುಗೊರೆಯ ಕೊಂಡು ಕಳುಹೆ ||೧೯||

ಅವರು ತಮ್ಮಯ ಮನೆಗೆ ಸಂತೋಷದಿಂ ಪೋಗ
ಲಿವರು ಬಾಲನ ನೋಡಿಯುತ್ಸವದಿ ಮನೆಯೊಳಿರ
ಲಾವಗಂ ಸೋಗಿಲೊಳಗಿಟ್ಟು ಮೊಲೆವಾಲೂಡಿ ಮೂರ್ಧ್ನಮಂ ಘ್ರಾಣಿಸುತ್ತೆ ||
ತಾವು ತಮ್ಮಯ ಶಿಶುವಿಗಾಬಾಲದೊಡುಗೆಗಳ
ಮಾವು ಫಲಮುರುವವರಳೆಲೆ ತಾಯ್ತಯುಡಿದಾರ
ಸಾವಧಾನದೊಳಾಗ ನಡುಗೆಜ್ಜೆ ಪಾಲ್ಗಡಗ ಚರಣ ಕಿಂಕಿಣಿ ವುಂಟೆಸೆ ||೨೦||

ಪುಲಿಯುಗುರ ಹತ್ತು ಬೆರಳಿಗೆ ಮುದ್ರಿಕೆಗಳಿಟ್ಟು
ಪಲವಾಭರಣವಂಗಿ ಕುಂಚಿಗೆ ಕುಲಾಯವನು
ನಲವಿನಿಂ ಜರದ ಪೆಟ್ಟಿಗೆಗಳನಲಂಕರಿಸಿ ತೊಟ್ಟಿಲೊಳ್ಪಟ್ಟಿರಿಸಲು ||
ಮೂಲ ಬ್ರಹ್ಮವನಿದೆ ನೋಡೆಂಬ ಮಾಳ್ಕೆಯಿಂ
ಲೀಲೆಯೋಳ್ಗಗನವನು ನಿಟ್ಟಿಸುತತಿವೆ ಹಳಚ
ದೊಲು ಮರವೆಯೊಡ್ಡ ಕೈಯೊಳ್ಪಿಡಿದು ನೂಂಕಿಸುವ ತೆರ ಮುಷ್ಟಿಕರವತ್ತುವಂ ||೨೧||

ಇದಕೆ ಇನ್ನೊಂದರ್ಥವನು ಪೇಳ್ವೆನೆಂತೆನಲು
ಪರವಿಟ್ಟು ಮುಂದಕ್ಕೆ ವಜ್ಞಾನ ತಮ ಮುಸುಕು
ತಿದೆಯದನು ನೂಂಕುವನೋಯೆಂಬ ತೆರದಿ ಕರದ ಮುಷ್ಟಿಯಿಂ ನೂಕುತಿಹನು ||
ಒದವಿ ಭವವನು ಮುಂದುವರಿದು ಬರುತಿಹುದದನು

ಒದೆವ ಸಾಂಜ್ಞೆಯೊಯೆಂಬ ಮಾಳ್ಕೆಯಿಂ ಶಿಶು ತನ್ನ
ಪದಗಳನು ಒಡೆದಾಡುವಂ ಮೂರ್ಖಜನರ್ಯೆದೆ ತಮ್ಮ ನಿಜವನು ತಿಳಿಯದೆ ||೨೨||

ಸುಮ್ಮನೀ ಭವದಲ್ಲಿ ಕಷ್ಟಪಡುತಿಹರೆಂದು
ಗಮ್ಮನೇ ನಗುವ ಬಗೆಯಿಂ ನಗುವ ಖದಖದನೆ
ಒಮ್ಮೆ ಗುರು ಪದಕಮಲ ದರ್ಶನಾರ್ಥವದಾಗಿ ನಡೆಗಲಿವನೆಂಬ ತೆರದಿಂ ||
ಹಮ್ಮಿಲ್ಲದಂಬೆಗಾಲವನಿಕ್ಕಿ ನಡೆವನತಿ
ನೆಮ್ಮಿ ಶ್ರೀ ವೀರಶೈವಾಚಾರ ಮಾರ್ಗಕತಿ
ಒಮ್ಮನದೊಳಂಯಿಡುವ ಮಾಳ್ಕೆಯಿಂ ಭಿತ್ತಿಯಂ ನೆಮ್ಮಿ ತಪ್ಪಡಿಯಿಡುವನು ||೨೩||

ಶಿಶುವಂ ತಾಯ್ತಂದೆಗಳು ಎತ್ತಿಕೊಳುತಂ ಮುದ್ದು
ಖುಷಿಯಿಂದೆ ಬೇಡುತ್ತೆ ಕಂಠದೊಳು ಕೈಯಿಕ್ಕಿ
ಸಸಿನೆ ಚಕ್ಕುಲಸಿ ನಗಿಸುತೆ ಚೆಂಡಿನಂದದೊಳು ಒಗೆದು ಬುತ್ತಿಯ ಪಿಡಿವರು ||
ಶಶಿಧರಂ ನಮ್ಮ ಮನದೀಪ್ಸಿತವನಿತ್ತು ಸಲೆ
ಪಾಶಬಂಧನವಳಿದು ಕೈಲಾಸ ವಾಸಮಂ
ಮೋಸವಿಲ್ಲದೆ ಕೊಡುವನಿದು ದಿಟಂ ಎಂದೆನುತೆ ದಂಪತಿಗಳಾಡಿಸುವರು ||೨೪||

ಗುರು ಲಿಂಗ ಜಂಗಮಕೆ ಸಾಷ್ಟಾಂಗವೆರಗುವೊಲು
ಭರಮಲೋಡ್ಯಾಡಿ ಹೋಗುತೆ ಬೀಳ್ವ ಮತ್ತೇಳ್ವ
ಪರಮೇಷ್ಟಲಿಂಗಕ್ಕೆಯರ್ಪಿಸದೆ ಪಾಲ್ಬೆಣ್ಣೆ ಕೊಳನದಂ ನೋಡನವನು ||
ಚರರು ಬರಲವರಡಿಗಳೊಳ್ಬೀಳ್ವಿನವರ ನುಡಿ
ಸರಸದಿಂ ಕಿವಿಗೊಟ್ಟು ಕೇಳ್ವನವರಂ ನೋಳ್ಪ
ಕರಿವದನ ಪಿತನ ಧ್ಯಾನದೊಳೊಮ್ಮೆ ಮೈಮರೆದು ಕಣ್ಮುಚ್ಚಿ ಕುಳ್ಳಿರುವನು ||೨೫||

ಇಂತು ಬಾಲವಿನೋದವಂ ತೋರಿಸುತ್ತೆ ಸಲೆ
ಕಂತು ಮರ್ದನನ ದಯದಿಂದೊಂದುವತ್ಸರವೆ
ಸಂತತಾಗತಿಯೆರಡು ಮೂರು ಸಂವತ್ಸರವದಾದ ಪರಿಯಲಿ ವರ್ಧಿಸೆ ||
ಮುಂತೆಯ್ಯೆದೋತ್ಸರವದಾದ ಕೂಡಲೆನಂದ
ನಂ ತೆಗೆದುಕೊಂಡು ಪಠಣಾಮಂದಿರಕೆ ಪೋಗಿ
ಪಂಥವರಿದೀ ಶಿಷ್ಯನಂ ಶಿಕ್ಷಿಸುವದೆಂಧು ಗುರುವಿನಡಿಗೆರಗಿಸಿ ಕುಡಲ್ ||೨೬||

ಈವರು ಈತನ ಕ್ಯೆಯವಿಡಿದು ಕುಳ್ಳಿರಿಸಿ ಕೊಳುತೆ
ತವಕದಿಂದ್ಯೆಕ್ಷರವನು ಲಿಖಿಸಿ ಕೊಡುತ್ತೆ

ಸಾವಧಾನದೊಳಿದನೆ ಸರ್ವವಿದ್ಯಾಮೂಲವೆಂದು ಗುರುಗಳು ತಿಳಿಸಲು ||
ಈವರಿದನು ಕೇಳಿ ವಿಶ್ವಾಸಪೂರ್ವಕಮಾಗಿ
ತವೆ ಗುರುಗಳಿಗೆ ಪ್ರಶ್ನೆಮಾಡಿದರದೆಂತೆನಲು
ಭಾವಜಾಂತಕ ಮಂತ್ರಮಹಿಮೆಯಂತಿಹುದದನೆ ಪೇಳಿ ರಕ್ಷಿಪುದೆನ್ನಲು ||೨೭||

ಉಪಮನ್ಯುವಿನ ತೆರದಿಯ್ಯೆದೋತ್ಸರದ ಬಾಲ
ನುಪಮಿಸುವಡರಿದೆನಿಪ ಪ್ರಶ್ನೆಮಾಡಿದನೆಂದು
ಅಪರಿಮಿತ ಸಂತೋಷದಿಂದ ಗುರುಗಳು ಪೇಳ್ದರಲೆ ಮಂತ್ರಮಹಿಮೆ ಕೇಳು ||
ಮಾಪಚೇಂದ್ರಾದಿ ಸುರನಿಕರ ಯತಿಗಳ ಪ್ರಕರ
ತಪವ ಮಾಡೀ ಮಂತ್ರ ಸಿದ್ಧಿಯಂ ತಂತಮ್ಮ
ವಿಪದಾದಿಗಳನಳಿದುವಗಣಿತ ಪದತ್ವಗಳ ಪಡೆದು ಸುಖದಿಂದಿರುವರು ||೨೮||

ಮೂವರ ಸಪ್ತಕೋಟಿ ಮಹಮಂತ್ರಗಳಿಗೆ ತಾಯಿ
ಪರಮ ಮಂದಿರವೆನಿಪ ಪಂಚಾಕ್ಷರೀ ಮಂತ್ರ
ದಿರವಿನಿಂ ಸಕಲವೇದಾದಿ ಚತುರ್ದಶ ವಿದ್ಯಗಳು ಜನಿಸಿ ತೋರಿದವಲ ||
ನರರಾದೊಡಂ ಜಪಿಸಿ ತಮ್ಮಿಷ್ಟ ಫಲಗಳನು
ವುರೆ ಪಡೆದು ರಾಜರಾಜಾಧಿ ಪದತ್ವಗಳ
ನೆರೆಸುಖವನುಣತಿಹರು ಕಾಮ್ಯತಪದಿಂದವರು ನಿಕಾಮ್ಯ ತಪದಿಮೋಕ್ಷ ||೨೯||

ವೇದಗಳ ಮಾತೆ ಗಾಯಿತ್ರಿ ಮಂತ್ರಂಗಳಿಗೆ
ಸದಮಲ ಷಡಾಕ್ಷರಿ ಮಂತ್ರ ದೇವತೆಗಳಿಗೆ
ಒದವಿದೀಶ್ವರನೆ ತಾಂತಂಭರ್ಗೋದೇವಯೆಂದೊಂದುತಿಹ ಶೃತಿನಿಕರದ ||
ಪದವರಿದುಕೊ ವಿದ್ಯದೊಳ್ಕ್ರುಷ್ಟ ಶೃತಿಗಳವು
ವದರೊಳಗೆ ಶ್ರೀರುದ್ರ ಪಂಚಾಕ್ಷರಿ ಮಂತ್ರ
ವಿದರೊಳಧಿಕವದಾಗೆವದರೊಳಗೆ ಶಿವವರ್ಣವಧಿಕವೆಂದು ಸುರುತಿಹುದು ||೩೦||

ವೇದಮಾತಾಚ ಗಾಯಿತ್ರಿ
ಮಂತ್ರ ಮಾತಾ ಷಡಕ್ಷರಿ
ಸರ್ವದೇವ ಪಿತಾಶಂಭು
ಭರ್ಗೋದೇವಸ್ಯಧೀಮಹಿ ||೧||

ವಿದ್ಯಾಸುಶ್ಯತಿರುತ್ಕ್ರುಷ್ಟಾ
ತತ್ರೈಕಾ ದಶ ನಿಶ್ರುತಿಃ

ತತ್ರ ಪಂಚಾಕ್ಷರಿ ತಸ್ಯಾಂ
ಶಿವ ಮಿತ್ಯಕ್ಷರ ದ್ವಯಂ ||೨||

ಎಂಧು ಪೇಳಲ್ಕಾಗ ಕರಿಬಸವದೇವರುರೆ
ಕುಂದದಾ ಪದಿನಾಲ್ಕು ವಿದ್ಯಗಳವಾವಿರುವ
ಒಂದುಳಿಯದೊಳ್ಬೇಳ್ಪುದುಚಿತವೆಂಬುದರೆ ಗುರುಗಳಡಿಗೆರಗಿ ಬಿನ್ನವಿಸಲು ||
ಕಂದ ಕೇಳೊಂದೊರೆದರಂದಾವುಮಾಕ್ಷರವೆ
ಮುಂದೆ ಜನಿಸವು ಮೂರು ಕೂಡಲೋಂಕಾರವದು
ಚಂದದಿಂದರೊಳಗೆ ಶಿವವರ್ಣಪದಕೆ ಅಯನಮವೆನಲು ವಂದನವದು ||೩೧||

ಪಂಚಾಕ್ಷರದ ಗರ್ಭದೊಳಗೆ ನಾಲ್ವತ್ತೆರಡು
ಸಂಚಿತ ಪ್ರಣವವದರೊಳು ಪಂಚ ಸಾದಾಖ್ಯ
ಮುಂಚೆನಿಸುತಿವರೊಳಗೆ ತ್ರಿಗುಣ ವಾತ್ರಿಗುಣದವಹಂಕಾರದೊಳ್ಪೂತವು ||
ವಂಚನೆಯಿಲ್ಲದೀ ಭೂತ ಪಂಚೀಕರಣ
ಪಂಚವಿಂಶತಿ ತತ್ವವವೆ ಗಾತ್ರವಾಗಿಹವು
ಹಂಚಿಕೆಯ ತಿಳಿಯುತ ಪಂಚ ಪ್ರಣವಗಳಿಂದೆ ಸಕಲ ವಿದ್ಯಗಳುದಯವು ||೩೨||

ಈವುತಾವೆ ಶಿವನ ಪಂಚಾನನದಿ ಜನಿಸಿದವು
ತವೆ ನಕಾರದೊಳುರುಗ್ವೇದಂ ಮಕಾರದೊಳು
ಭವಿಸಿತು ಯಜುರ್ವೇದ ಸಾಮವೇದವೆ ಶಿಕಾರದೊಳು ವಾಕಾರದೊಳಗೆ ||
ರವದೊಳುದ್ಭವಿಸಿತಥರ್ವಣಾ ವಾಮ್ನಾಯ
ಭುವಿಯೊಳ್ಯಕಾರದೊಳು ಅಜಪೆ ಝೋಂಕಾರದೊಳು
ಸವನಿಸಿತು ಗಾಯಿತ್ರಿ ವಿವರಂಗವಾರಿರುವವು ನಿನಗೆ ಪೇಳ್ವೆ ಕೇಳು ||೩೩||

ಪಾದಹಸ್ತಂ ಮುಖಘ್ರಾಣ ನೇತ್ರ ಶ್ರೋತ್ರ
ಶೋಧಿಸಲ್ಛಂದಸ್ಸು ಕಲ್ಪ ವ್ಯಾಕರಣಮಿವು
ಸಾಧಿಸಲ್ಶೀಕ್ಷೆ ಜೋತಿಷ ನಿರುಕ್ತಿಗಳಿವಾರಂಗವೆನಿಸುತ್ತಮಿಹುವು ||
ವೇದಗಳಿಗಿವೆ ನಿಜಾಂಗಗಳು ಉಪಾಂಗಗಳು
ಮೋದದಿಂದೆ ಪೇಳ್ವೆ ಮೀಮಾಂಸೆ ನ್ಯಾಯ ಪುರಾಣ
ವಿಧಿಸಿರುವ ಸ್ಮೃತಿಗಳೆಂಬಿವೆನಾಲ್ಕು ಉಪವೇದ ವಾಯುವರ್ಥ ಧನಗಳು ||೩೪||

ಗಂಧರ್ವ ವೇದವೆನಿಪವೆ ಮತ್ತುಪನಿಷತ್ತು
ಚಂದದಿಂ ಪೇಳ್ವೆ ಶ್ರೀ ರುದ್ರಾದಿ ಮುಂಡಕವೆ

ಬಂಧುರದಿ ಕಡೆಯಾದ ದ್ವಾತ್ರಿಂಶಮಿವು ಮತ್ತೆ ಮನುವಾದಿ ವಾಸಿಷ್ಟವೆ ||
ಸುಂದರದೊಳಂತ್ಯನಹ ತೊಂಬತ್ತು ಸ್ಮೃತಿಗಳಿವು
ಹೊಂದಿ ತೋರುವ ಕಾಮಿಕಾದಿ ವಾತುಲವಂತ್ಯ
ಸಂದಷ್ಟವಿಂಶತಿ ಶಿವೋಕ್ತಾಗಮಂಗಳಿವು ಮತ್ತೆ ಕೇಳ್ನೀ ಪೇಳ್ವೆನು ||೩೫||

ವ್ಯಾಸೋಕ್ತಮಿವು ಬ್ರಹ್ಮವಾದಿ ಬ್ರಹ್ಮಾಂಡಾಂತ್ಯ
ಸಾಸಿಗನೆ ಪದಿನೆಂಟು ಪೌರಾಣಮಿವು ಮುಖ್ಯ
ತೋಷದಿಂದವರೊಳಗೆ ಹತ್ತು ಶಿವಪೌರಾಣ ನಾಲ್ಕು ಹರಿವ ಜನವೆರಡು ||
ಪೋಷನೊಂದುಂ ಅಗ್ನಿದೊಂದುಮಿಂತು ವಿಭಾಗ
ಪಾಶರಹಿತನೆ ಕೇಳು ಉಪಪುರಾಣವು ಮತ್ತೆ
ಮೀಸಲಹವಾಸನತ್ಕುಮಾರ ವಾದಿಯದಂತ್ಯ ಭಾರ್ಗವಪುರಾಣ ಕ್ರಮದಿಂ ||೩೬||

ಇರುತಿಹವು ಹದಿನೆಂಟು ಪೌರಾಣಗಳು ಮತ್ತೆ
ವರತರ್ಕ ವ್ಯಾಕರ್ಣ ನ್ಯಾಯ ಮೀಮಾಂಸಮಿವು
ಪರಮ ಛಂದಸ್ಸು ಜೋತಿಷವಾರು ಶಾಸ್ತ್ರಮಿವು ಮುಖ್ಯಗ್ರಂಥಗಳುಸುರ್ದೆನು ||
ಉರುತರಿವರುದರೊಳಗನಂತ ಗ್ರಂಥಗಳಿರುವ
ವರಸಿ ಪೇಳುವಡೆ ಬಾಹುಳ್ಯವಾಗುವುದೆಂದು
ಪರಿಮಿತದೊಳಂ ಪೇಳ್ವೆನಿವೆ ಮೊದಲು ಮುಖ್ಯವಹ ಚತುರ್ದಶ ಸುವಿದ್ಯೆಗಳಿವು ||೩೭||

ಅವು ಮತ್ತೆ ಯೋಗಿಸೀಗತಿ ಪೇಳ್ವೆ ಶೃತಿ ನಾಲ್ಕು
ಇವುಗಳಂಗವಿವಾರು ನ್ಯಾಯ ಮೀಮಾಂಸಂಗ
ಳಿವು ಶ್ರುತಿ ಪುರಾಣಂಗಳಿವೆ ಚತುರ್ದಶವಿದ್ಯೆವಿವಕೆ ಮಾತೆಯದೆನಿಸುವ ||
ಭವಹರ ಸುಮಂತ್ರವಿದರಧಿಕಾರ ಪೇಳುವಡೆ
ಪವನ ಭಕ್ಷಾಧಿಪತಿಗಾಗದೆನೆ ನರರೆನಿತು
ಶಿವಮಂತ್ರ ಮಹಿಮೆಯಂ ಪೇಳುವಡಸಾಧ್ಯವಿದು ಸೂಕ್ಷ್ಮದೊಳ್ತೀವುದೊವಿದು ||೩೯||

ಧರೆಯದು ನಕಾರದೊಳು ಪಂಚಭೂತಗಳಿವ
ಸರಿಯಾಗಿ ಹಂಚಲವ ಒಂದರೊಳಗೆರಡಾಗಿ
ಭರದೊಳದರೊಳಗೊಂದು ಭಾಗವದೆವ್ಯೆದಾಗಿಯೆರಡನೆಯ ಭಾಗ ನಾಲ್ಕು ||
ಮಿರಳಿಸಿದ ಭಾಗವದು ನಾಲ್ವತ್ತರೈದಾಗಿ
ಇರವಿದರ ಮೈಗಣ್ಯೆದ್ಯೆದಿರುವ ಭಾಗದೊಳ್
ಮರೆಯದಗ್ರದ ಭಾಗವದು ನಿಜಾಂಶಂವುಳಿದ ಭಾಗದೊಳುವೊಂದೊಂದರೊಳ್ ||೪೦||

ಬೆರಕೆಯಾಗಲ್ಕೆ ವಿಂಶತಿ ಪಂಚಭೂತಗಳು
ಇರದಾದವೆಂದು ಪೇಳಲ್ಕೇಳಿ ಕರಿವೃಷಭ
ಗುರುವೆಯೆನಗರಿವಂತೆ ಯಾವುದಾದರೊಳಾವ ಭಾಗಗಳು ಕೂಡಿದ ಕ್ರಮವನು ||
ಭರದೊಳೆನಗಂ ಪೇಳಿಯುದ್ಧರಿಪುದೆಂದೆನಲು
ಗುರುಗಳಿದ ಕೇಳಿ ಸಂತಸವಾಗಿ ಶಿಷ್ಯನಿಗೆ
ವರಭೂತಪಂಚ ವಿಂಶತಿಯಾದ ತೆರನಿದನು ಪೇಳ್ವೆ ಕೇಳೆಲೆ ಪುತ್ರನೆ ||೪೧||

ಗಗನದ ನಿಜಾಂಶ ಜ್ಞಾತೃವದಾಯ್ತು ಧರೆಯಂಶ
ಬಗೆಯವಿದರೊಳು ಬೆರಸಲದುವಹಂಕೃತಿಯಾಯ್ತು
ಮಿಗೆ ಸಲಿಲ ಬೆರೆಯೆಲದು ಚಿತ್ತುದಯವಾಯ್ತು ಜ್ವಲನಂ ಗಗನದೊಳ್ಬೆರೆಸಲು ||
ಹೋಗುಮಿಗೆಯೊಳದು ಬುದ್ಧಿಯಾಯ್ತು ಮರುತಂ ಬೆರಸ
ಲಘುಹರನೆ ಮನವಾಯ್ತುದಾಕಾಶ ಪಂಚವಿಧ
ಸೊಗಸಿರುವ ತತ್ವಗಗನಾಂಶವೆಂದೊರೆವುತಿಹುದಾ ಪಾರಮಾರ್ಥ ನೀತಿ ||೪೨||

ಮರುತನ ನಿಜಾಂಶವೇಸಂ ಧರೆಯ ಬೆರಸಲದು
ವರಪ್ರಾಣವಾಯ್ತು ಸಲಿಲಂ ಕೂಡಿಯೆ ಪಾನವಿದು
ನಿರುತವಗ್ನಿಯ ಕೂಡಲದುವುದಾನವದಾಯ್ತುವಾಕಾಶದಿಂ ಸಮಾನ ||
ಇರದೆ ಇಂತುದಿಸಿದವು ವಾಯು ಪಂಚಕ ತತ್ವ
ಪರಮ ಗೋಪ್ಯದ ವಿವರವೆಂದು ತಿಳಿ ಬಹುಚಂದ
ಒರೆವೆನಗ್ನಿಯ ನಿಜಾಂಶವನೇ ತ್ರಭೂಗೂಡಲದುವೆ ಘ್ರಾಣೇಂದ್ರಿಯಾಯ್ತು ||೪೩||

ವಾರಿಚಿರಸಲ್ರಸನೆಯಾಯ್ತು ಮರುತಂ ಬೆರಸೆ
ತ್ವರಿತದಿಂ ತ್ವಕ್ಕಾಯ್ತು ಗಗನಗೂಡಿದಡದುವೆ
ಪರಮಶ್ರೋತ್ರವದಾಯ್ತು ವನ್ಹಿ ಪಂಚಕ ತತ್ವವಿವೆ ತಿಳಿಯಬೇಹುದೊಲಿದು ||
ನೀರಿನ ನಿಜಾಂಶವದು ರಸ ವಿಷಯವಾಯ್ತು ಧರೆ
ನೀರೆನೊಡಗೂಡಲದು ಗಂಧವಿಷಯವದಾಯ್ತು
ಸರಿಯಾಗಿ ಶಿಖಿಚಿರಸಲದು ರೂಪವಾಯ್ತುವನಿಲವ ಕೂಡೆ ಸ್ಪರ್ಶವಾಯ್ತು ||೪೪||

ನಭವೆರಸಲದು ಶಬ್ದವಾಯ್ತಿವೆ ಸಲಿಲಲ ಭೂತ
ರಭಸದಿಂ ಧರೆ ನಿಜಾಂಶವೆಗುದೆಂದ್ರಿಯ ಪಾಯ್ತು
ವಿಭವದಿಂ ಜಲವನೊಂದಲು ಗುಹ್ಯವಾಯ್ತು ಶಿಖಿಯಂ ಬೆರಸಿ ಚರಣವಾಯ್ತು ||
ಶುಭದೊಳಾವಾಯುವೆರಸಲ್ಪಾಣಿಯುದಯಿಸಿದ

ವಭವನ ನಿರೂಪದಿಂ ಗಗನಗೂಡಲು ವಾಕು
ಪ್ರಭವಿಸಿತಿದೀ ಪರಿಯ ಪೃಥ್ವಿ ಪಂಚೀಕೃತಿಯದಾಯ್ತು ಕೇಳೆಲೆ ವತ್ಸನೆ ||೪೫||

ಇಂತು ಪಂಚೀಕೃತಿಯದಾಯ್ತು ಪಂಚ
ನಂತದೇಹಂ ಜಗವನುರ್ಭವಿಸಿ ತೋರುತಿದೆ
ಅಂತವರಿಯಲು ಪಂಚಪ್ರಾಣವದಂಶವೆ ತಿಳಿಯೆ ಪಂಚಾಕ್ಷರಿ ಘನತೆಯು ||
ಎಂತು ಪೇಳಲ್ಪಹುದನಂತ ಪತಿಗರಿದೆನಲು
ಸಂತ ಕರಿಬಸವ ಕೇಳೆಂದೊರೆಯ ಲಾಲಿಸುತೆ
ಸಂತೋಷದಿಂ ಚರಣಕೆರಗಿ ನುತಿಸುತಿರಲ್ಮೆಚ್ಚಿ ಗುರುಶಿಶುವ ತೆಗೆದು ||೪೬||

ಬಿಗಿದಪ್ಪಿ ಮುಂಡಾಡಿ ಮೂರ್ಧ್ನಘ್ರಾಣಂಗೈದು
ಸೊಗಸಿನಿಂ ಚುಂಬನವನಿತ್ತೆಲೆ ಕುಮಾರ ನೀ
ಮಿಗೆ ಮಹಾಜ್ಞಾನಿಯಾದಪೆ ನಿನ್ನ ಸೇವೆಯ ರಾಜರಾಜರು ಮಾಳ್ಪರು ||
ಜಗವನುದ್ಧರಿಸ ಬಂದೆಲೆಯೆ ನೀನಹುದೆಂದು
ಬಗೆಬಗೆಯೊಳವರ ವರ್ಣಿಸಿ ಸರ್ವವಿದ್ಯಗಳ
ಹೋಗುಮಿಗೆಯ ಸಂತಸದಿ ಪೇಳಲಾಕ್ಷಣ ಬೇಗ ತಿಳಿದರತ್ಯದ್ಭುತದೊಳು ||೪೭||

ಓದಿಶಾಸ್ತ್ರವ ಕಷ್ಟಪಡುವೆ ಮಹಜ್ಞಾನಿ
ಸಾಧಿಸಿದ ಗುರುಕೃಪೆಯ ಸಾಲದೆ ತದಂಶನಿಗೆ
ಮೋದದಿಂ ಮರುಗ ಜನಿಸಿದ ಮೊದಲು ಗಂಧವದುವಿರುವ ತೆರದಿಂ ಶಿಶುವಿಗೆ ||
ನಿಧಿಯ ತೆಗೆದಂದಿಂದುದಿಸಿ ಬರುತಿಹ ಜ್ಞಾನ
ದೊದವ ನೋಡುತ್ತ ತಾಯ್ತಂದೆ ಮೊದಲಹ ಜನರು
ಅದುಭುತಮಿದೆಂದು ನುತಿಸುತ್ತಿರಲು ಕರಿವೃಷಭಗೊದಗಿದವು ದ್ವಾದಶಾಬ್ದ! ||೪೮||

ಬುದ್ಧಿಯಂ ವಿದ್ಯದಿಂ ಜ್ಞಾನವಾಚಾರದಿಂ
ಸಿದ್ಧಿಯಿಂ ಸದ್ಗುಣ ಸಮೂಹದಿಂ ಸಜ್ಜನರ
ವೃದ್ಧಿಯಿಂದನ್ಯೋಪಕಾರ ಕರುಣಂ ವಿನಯ ಶಾಂತಿ ದಮೆ ದಾಂತಿ ಧರ್ಮ ||
ಮುದ್ದು ಮೊಗ ಮೃದಳಾಂಗ ಮುಗುಳ್ನಗೆ ಮಿತಾಹಾರ
ಶುದ್ಧ ಸೂನೃತವಾಣಿ ದಾನಗುಣಯುತವಾಣಿ
ಬದ್ಧ ದುರ್ಗುಣದೂರನಾಗಿದ್ದನಾ ಯೋಗಿ ಮಾಯಾಗುಣಗಳನು ತ್ಯಾಗಿ ||೪೯||

ಇಂತು ಸಕಲೈಶ್ವರ್ಯ ಸಂಪತ್ತಿನಿಂ ಪರಮ
ಅಂತಕಾಂತಕನಂತರಂಗದೊಳ್ನಿಧಿಯಾಗಿ

ಶಾಂತಿ ಶಿವಸುಖ ಶರಧಿಯೋಳ್ಮುಳುಗಿ ತೇಲುತಲೆ ಏಕಾಂತದೊಳ್ಮುಳಿತಿರೆ ||
ಅಂತರಂಗದ ಗವಿಯ ಹೊಕ್ಕು ಲಿಂಗದ ಕಳೆಯ
ನಿಂತು ನೋಡುತ್ತದರೆ ಪ್ರಾಂತದ ಪ್ರಕಾಶವನು
ಸ್ವಾಂತದೊಳಗರಿದು ಆನಂದಿಸುತೆ ಶಿವಸಂಕಥಾ ವಿನೋದದೊಳಿರ್ದರು ||೫೦||

ಮರುಳಾಸಿದ್ಧಾಚಾರ್ಯ ರಾಮಿದೇವಾಚಾರ್ಯ
ವರಪಂಡಿತಾಚಾರ್ಯ ಗುರು ವಿಶ್ವಾಚಾರ್ಯ
ರುರೆ ಮಧ್ಯೆ ವದನ ಸಂಜಾತ ರೇಣುಕದೇವನುದರ ಭವ ಘನಲಿಂಗನು ||
ಹರರೂಪ ರುದ್ರಮುನಿ ಕರಜಾಮಹಂತ ಮುನಿ
ಚರಣ ಸಂಭವ ಗುರು ಪರಂಪರೆಯೊಳುದ್ಭವಿಸಿ
ದರರೆ ವಲದಿಯಪುರದ ಹಿರೆಮಠಾಧಿಪ ಪಟ್ಟಚರವರ್ಯ ಮಹಂತನುಸುರ್ದ ||೫೧||

ಅಂತು ಸಂಧಿ - ೨ಕ್ಕಂ, ಪದ-೧೨೦ಕ್ಕಂ ಮಂಗಳ ಮಹಾ

ಮೂರು

ಸಂಧಿ

ಪಲ್ಲವಿ : ಶ್ರೀ ಕನಕಗಿರಿಯ ಸ್ವಾಮಿಗಳು ಬಸವನಪುರಕ
ನೇಕ ಜನರೊಡಗೊಂಡು ಬಂದು ಕರಿಬಸವನಸು
ಪಾಕ ಗುಣಗಳ ನೋಡಿ ಬೇಡಿ ಕರೆದೊಯ್ದುವರ್ಗೆ ಷಟ್ಸ್ಥಲವಯೋಗಿಸಿದರು ||

ಶ್ರೀ ಗುರು ನಿಜಾನಂದ ಯೋಗಿಜನ ಗಣನಮಿತ
ನಾಗಪತಿ ಯಜ್ಞೋಪವೀತ ಷಣ್ಮುಖ ತಾತ
ರಾಗ ಜಟಿಲಾಂಚಿತ ವಿಜಾನ್ಹವ್ಯಜ ಶಿರಪಾತ್ರ ಭಕ್ತಭವ ಶಿರಧಿ ಚೈತ್ರ ||
ಭೂ ಗಗನ ದಿಗ್ಭರಿತ ಕೀರ್ತಿ ಜ್ಞಾನ ಸ್ಫೂರ್ತಿ
ತ್ಯಾಗಭವ ಸಂಸಾರವರ್ತಿ ಸದ್ಗುಣ ಪೂರ್ತಿ
ಯೀಗೆಮಗೆ ಮನದೀಪ್ಸಿತವ ಸತ್ಕರುಣ ಮೂರ್ತಿ ದೇವ ಕುಲಚಕ್ರವರ್ತಿ ||೧||

ಕೆಂಡಗಣ್ಣಿನ ಸ್ವಾಮಿಗಳು ಕನಕಗಿರಿವೊಳಗೆ
ಪುಂಡ ಕೆಂಪಿನ ಸಮಯ ಮಠದ ಚರಮೂರ್ತಿಗಳು
ಭಂಡ ದುರ್ಗುಣ ಜನರ ಶಿಕ್ಷಿಸಿ ಮತಿಯನವರ್ಗೆ ಬೋಧಿಸಿ ಕರುಣೆಗೆಯ್ವುತೆ ||
ತಂಡ ತಂಡದಿ ಭಕ್ತಜನರು ಬಂದಡಿಗೆರಗಿ
ಮಂಡಲದಿ ಕುಳ್ಳಿರಿಸಿ ಕೊಂಡವರ್ಗೆ ತತ್ವವನು
ಖಂಡೀತೋತ್ಸವದಿಂದನುಗ್ರಹಿಸಿವಜ್ಞಾನ ದೃಷ್ಟಿ ಶೂನ್ಯಗೆಯ್ವುತೆ ||೨||

ಪರಮಸತ್ಕ್ರಿಯ ಸದಾಚಾರ ಸದ್ಗುಣ ನೀತಿ
ವರ ಭಕ್ತಿ ಯುಕ್ತಿಯಿಂದ್ರಿಯ ನಿಗ್ರಹಂದಾನ
ಸುರುಚಿರೋನ್ನತ ಶಾಂತಿದಾಂತಿ ಶಮದಮದಯ ತಿತಿಕ್ಷೆ ವೈರಾಗ್ಯ ಮೊದಲು ||

ಪರಿಪರಿಯ ಸದ್ಗುಣಗಳಿಂದೆ ತತ್ಸ್ವಾಮಿಗಳು
ಎರಕರೆಂದೆನಿಸಿ ತಮ್ಮಿಷ್ಟ ಲಿಂಗದ ನೈಷ್ಟಿ
ಪೂರವಾಗಿಯೆ ಒಲಿದು ಪಾರಮಾರ್ಥ ವಿಚಾರ ಯೋಚನೆಯಗೈವುತಿಹರು ||೩||

ಒಂದು ದಿನ ಬಸವ ಪಟ್ಟಣ ಶೆಟ್ಟಿ ಮಹಾಜನ
ಸಂದ ಸತ್ಪ್ರಭು ಶಾನಭೋವಿ ದೈವವಗೂಡಿ
ಬಂದು ತತ್ಸ್ವಾಮಿಗಳ ಚರಣ ಸನ್ನಿಧಿಗಾಗ ತಂದು ಫಲಕರ್ಪೂರವು ||
ಮುಂದಿಡುತ ಸಾಷ್ಟಾಂಗದಿಂ ನಮಿಸಿ ನಮ್ಮಪುರ
ಕಿಂದು ವಿಜಯಂಗೈಸಿ ಬಡಭಕ್ತಿಯನು ಕೊಳುತೆ
ಕಂದು ಕಂದರ ಮೂರ್ತಿ ನಮ್ಮನೆಲ್ಲರ ತಾವು ಪಾವನರ ಮಾಳ್ಪುದೆಂದು ||೪||

ಬಿನ್ನವಿಸಲಾಗ ಚರಮೂರ್ತಿಗಳು ಎಂದರೆಲೆ
ಮನ್ನಣೆಯ ಮಹದೇವನೇ ಕೇಳಿ ನಮ್ಮ ಬರ
ವಂ ಮನದಿ ವಹಿಸಿಕೊಳುವಡೆ ಬರ್ಪೆವೆಂದೆನಲು ವಾಜ್ಞಾನಿ ರೂಪವನು ||
ಸನ್ನುತದೊಳಾದ ಪರಿಯೊಳು ವರ್ತಿಸುವೆವೆಂದು
ನನ್ನಿಯಿಂ ನಮಿಸಲಾಕ್ಷಣ ಚರವ ಸಂವರಿಸಿ
ಮನ್ನಿಸಂದೊಳಗೆ ಸ್ವಾಮಿಗಳು ಕುಳ್ಳಿರಿಸಿ ಕರ್ಣಿಕಾಳಿಗಳೊದರಲು ||೫||

ಅತಿಶಯದ ಸಂಭ್ರಮದೊಳಂ ಬಸವಪಟ್ಟಣಕೆ
ಪದವಿಡಿದು ಹೋಗಲಾಪುರದ ಬಾಲವೃದ್ಧ
ಮತಿವಂತ ಸ್ತ್ರೀಪುರುಷರತಿ ಭಕ್ತಿಯಿಂದಲಿದಿರ್ಗೊಂಡು ಕರದೊಯ್ದು ಪರಮ ||
ಸಿತಿಕಂಠರೂಪ ಬಸವಯ್ಯ ದೇವರ ಮಠದಿ
ಪತಿಕರಿಸಲಿಳಿಸಿ ನಿತ್ಯದಲಿ ಬಿನ್ನಹಗಳನು
ರತಿಯಿಂದೆ ರಚಿಸುತಿರೆ ಕರಿವೃಷಭನಂ ನೋಡಿ ಅತಿಪ್ರೀತಿಯಿಂ ಕರೆವುತೆ ||೬||

ಕರಚರಣ ಶರೀರವಾದ್ಯಂತ ಲಕ್ಷಣಗಳನು
ವರವಿದ್ಯ ಬುದ್ಧಿ ಸತ್ಕ್ರಿಯಸತ್ಯ ಶೌಚಗಳ
ಗುರುಸ್ವಾಮಿಗಳು ನೋಡಿ ಮಹಾಜ್ಞಾನ ಸಂಪನ್ನ ನಿಸ್ಪೃಹನಪ್ಪನು ||
ಪರಮ ವಿರತನುಮಾಗುವನು ಎನ್ನುತೊಳಗರಿದು
ಹಿರಿಯ ಬಸವಯ್ಯನವರಂ ಕರೆದು ಪೇಳಿದರು
ಕರಿಬಸವನಿವ ನಿಮ್ಮ ಪುತ್ರ ಮಹಮಹಿಮಾಢ್ಯ ವಿರತನಾದಪನು ನಮಗೆ ||೭||

ಸಲ್ಲಿಸುವದೆಂದು ಕೇಳಲ್ಕವರು ಒಳಗರೆದು
ಪುಲ್ಲ ಶರಹರನಿತ್ತವರ ಸುಪುತ್ರ ನೀತನಹ

ಎಲ್ಲರೊಲ್ಲರ ಮಾತ್ರದವನಲ್ಲ ತಾವು ಕೇಳಿದ ಬಳಿಕವಿಲ್ಲೆಂಬುದು ||
ಸಲ್ಲದಿದು ಸ್ವಾಮಿಯೆನೆ ನಿಮ್ಮ ವಂಶಕೆ ಮತ್ತೆ
ನಲ್ಲ ನಂದನರುವುದ್ಭವಿಸಿರುವರೀತಸಂ
ನಿಲ್ಲದೀಗಲೆ ನೀವು ಕೊಡದ ಕಾಲಕ್ಕಿವನು ನಿಮ್ಮಗ್ಳೊಂದದೆ ಪೋದಪಂ ||೮||

ವ್ಯರ್ಥವೇಕೀತನನರಣ್ಯ ಪಾಲವ ಮಾಳ್ಪಿ
ರರ್ತು ನೋಡಿರಿಯಿತ್ತಡೀತ ಕರ್ತುವನಹನು
ಗುರ್ತು ವಾಕ್ಯವಿದೆಂದು ಪೇಳಲಾ ಶೆಟ್ಟಿ ಸಹದೈವ ಮಹನಾಡ ಜನರು ||
ಸುರ್ತಿನಿಂತಿಳಿದಿವರ ವ್ಯರ್ಥ ಮಾಡುವುದೇಕೆ
ಕರ್ತುವೆ ತಾನಹನು ಬಿಟ್ಟು ಮಾಡುವುದೇನು
ತುರ್ತು ಕೊಡಬಹುದೆಂದೊಡರ್ತು ಬಸವಮ್ಮಗಳ ಸಹದಿ ಸಾಷ್ಟಾಂಗವೆರಸಿ ||೯||

ಸ್ವಾಮಿ ನಮ್ಮಯ ಚಿತ್ತವೆಂತಿರ್ಪುದಂತೆ ಸರಿ
ನೇಮಿಸೀಗಲೆ ಮರಿಯ ಮಾಳ್ಪುದೆಂದೆನೆ ಕೇಳಿ
ಆ ಮಹಾಶೆಟ್ಟಿ ಮಹಜಾನದೈವವ ಸಾಕ್ಷಿಯಾಗಿ ಶರ್ಕರೆಯ ಹಂಚಿ ||
ನಾಮಕರಣವ ಮಾಡಿ ಕಂಥಿ ಟೊಪ್ಪಿಗೆ ಹಾಕಿ
ಸೋಮಧರ ರೂಪ ಗುರುದಾನಧರ್ಮ ಮಾಡಿ
ರಾಮವಹ ವಾದ್ಯ ವೈಭವದಿಂದಸಿ ಬಕದೊಳ್ಕುಳ್ಳಿರಿಸಿ ಮೆರೆಸಿ ತಂದು ||೧೦||

ಬಸವಯ್ಯ ಬಸವಮ್ಮಗಳಿಗೆ ಉಡುಗೊರೆಯಿತ್ತು
ಮಾಸಪರಿಯಂತಲಾ ಊರೊಳಗೆಯಿದ್ದು ಸಲೆ
ಲೇಸಿನಿಂದಲ್ಲಿಂದ ಸರ್ವರಪ್ಪನೆಗೊಂಡು ಕನಕಗಿರಿ ಪುರಕೆ ಬಂದು ||
ಸೂಸುತಿಹ ಸಂತೋಷದಿಂದಲೈಯ್ಯಾಚಾರ
ತಾ ಸಮಯವರಿದು ಮಾಡಲು ಬೇಹುದೆಂದೊಲಿದು
ಮೀಸಲಾದ ಪದಾರ್ಥಗಳನು ಮಾಡಿಸಿದರತಿ ಮಡಿಯ ಮುತ್ತೈದೆಯರಿಂದ ||೧೧||

ಸರಳಶಾವಿಗೆ ಗುಳಿಗೆವುಂಗುರದ ಫಾಲಿಗಳು
ಪರಡಿ ಪಾಯಸ ಎಳ್ಳ ಶಂಡಿಗೆ ಕಡಲಿ ಮಂಡಿ
ಸುರುಚಿಯೊಂದು ದಿನ್ನಪ್ಪಳ ಕುರುಡಿಗೆಯು ಮತ್ತೆ ಮಂಡಿಗೆ ಮುಂತಾಸಫೇಣಿ ||
ವರಶಾವಿಗೆಯ ಫೇಣಿ ಕರದನಾ ರಸಲಡ್ಡು
ಪರಮ ಪೆಡೆಯು ಬರ್ಪೆ ಬೂಂದೆಗುಳ ಪಾಪಡಿಯು
ಹರಭಕ್ತರೊಲಿದು ಸಂಭ್ರಮದಿಂದ ಮಾಡಿದರು ಪರಿಪರಿ ಪದಾರ್ಥಗಳನು ||೧೨||

ಸೃಷ್ಟಿ ಗೋಧೂಮ ತಂಡುಲ ಬೇಳೆಗುಡ ಘೃತವು
ಸಿಷ್ಟಿ ಸಕ್ಕರೆ ಕಡತಿ ತೈಲ ಮೊದಲಹ ವಸ್ತು
ಕುಟ್ಟಿ ಬೀಸಿ ಥಳಿಸಿ ಹಸನ ಮಾಡಿಸಿ ಧೌತ ಚೀಲದೊಳ್ತುಂಬಿಸಿವನು ||
ಒಟ್ಟಿಸಿ ಮಠದೊಳಾಗ ಚೂರ್ಣಸುರಮವ ತುಂಬಿ
ಕಟ್ಟಿದರು ಮೇಲ್ಕಟ್ಟು ಮೊದಲೆ ಭೂಶೋಧಿಸಿದ
ಮೆಟ್ಟಿನೊಳು ತಳಿರ ತೋರಣ ಗುಡಾರವ ಛತ್ತು ಝಾಲರವ ಬಂಧಿಸಿದರು ||೧೩||

ಪಳುಕು ಕುಂಭವ ಪಾತ್ರೆ ರಂಗ ತುಂಬಿಸಿ ದೀಪ
ಝಳಪಿಸುವ ತೆರದೊಳ್ಪಚ್ಚಿಸಿ ರಂಭಯಿಷು ನಗ
ನಿಲವಿಟ್ಟಾಮಾರ್ಜನೆಯನೆಸಗಿ ರಂಗವನು ತುಂಬ ವೃತ್ತಿಕೆಯ ತರಿಸಿ ||
ನಲವಿನಿಂ ಕುಂಭದಡಿಯೊಳು ಕಮಲವನು ರಚಿಸಿ
ಸ್ಥಲದೊಳಾ ವೃತ್ತಿಕೆಯನಿಟ್ಟು ಕುಂಭವನಿರಿಸಿ
ಮೇಲೆ ವಸ್ತ್ರವ ಮುಚ್ಚಿ ಮಠಪತಿಯ ಹಸ್ತದಿಂದಷ್ಟವಿಧದಿಂಧರ್ಚಿಸಿ ||೧೪||

ಮುಂದುಮನೆ ರುದ್ರಗಂಟಿನ ಕಮಲಗುರುಸ್ಥಾನ
ತಂದು ರಚಿಸುತೆ ಲಿಂಗಸ್ವಸ್ತಿ ಶಾಸನ ನಾಲ್ಕು
ಮಂದಿರದ ರುದ್ರಗಂಟಿನ ರಂಗವನು ತುಂಬಿ ಕಲಶಕಮಲವನು ರಚಿಸಿ ||
ಒಂದು ಬಿಳಿ ಕಂಬಳಿಯ ಗದ್ದುಗೆಯ ಮೇಲದೊಂ
ದೊಂದೇಳು ಮೊಳದ ಸಣ್ಣರುವೆ ಲಿಂಗಕೆ ಹಾಸಿ
ಸುಂದರದಕಲಶಕಾಸನವಂದು ವಸ್ತ್ರವನು ಹಾಕಿ ಅಕ್ಕಿಯನು ಹಾಕಿ ||೧೫||

ಪಂಚಲೋಹದ ಕಲಶ ಪಂಚಕವನಲ್ಲಿರಿಸಿ
ಪಂಚಕಲಶಕೆ ಪಂಚಗುಣವನಿಕ್ಕುತೆಯಿದರ
ಸಂಚಿತದ ಗುರುಸೂತ್ರ ದರ್ಭೆಯುಂಗುರ ಕಟ್ಟಿ ಶಿಷ್ಟ ಸೂತ್ರದ ಬಂಧಿಸಿ ||
ಪಂಚದಂಡಂಗಳವರವರ ಕ್ರಮವರಿದಿಟ್ಟು
ಪಂಚದಶಕಂಚಿಗುಳೆಯುಂಡಿಗಳನವಕಿಟ್ಟು
ಪಂಚ ಖರ್ಜೂರ ಕ್ರಮುಕ ಕೊಬ್ಬರಿ ಸುವರ್ಣದಕ್ಷಿಣದಂಶಕವಿಟ್ಟು ಕ್ರಮದಿಂ ||೧೬||

ಪಂಚಕಲಶಕೆ ನಾಗವಲ್ಲಿ ದಳಗಳಲನಿಟ್ಟು
ಪಂಚವರ್ಣದ ಪಟ್ಟು ವಸ್ತ್ರಗಳನಾವರಿಸಿ
ಪಂಚಸೂತ್ರದ ಮರಿಗಳೈವರಂ ಮುಡಿಯಿಂದ ಪಂಚಕಲಶಕ್ಕೆ ಕುಳಿತು ||
ಪಂಚಮಠ ಸ್ಥಲ ವಿಧಿಯ ತಿಳಿವುತ್ತಲಷ್ಟವಿಧ

ದ್ವಂಚಿಕೆಯ ತಿಳಿದರ್ಚಿಸುತ ನ್ಯಾಸ ಪೂರ್ವಕದಿ
ವಂಚನಿಲ್ಲದೆ ಪಂಚಕಲಶಕೆ ಅಷ್ಟ ಶತದಿಂ ಜಪಿಸಿ ಧ್ಯಾನರಚಿಸಿ ||೧೭||

ವರಪಾದ್ಯವರ್ಘ್ಯವಾಚಮನೀಯ ಪಂಚಸುಧೆ
ನಿರತದೊಳ್ಮಧು ಪರ್ಕ ಸಪ್ತೋದಕವ ರಚಿಸಿ
ಕ್ಷೀರಪತ್ರ ಸುಪುಷ್ಪ ಫಲಧಾನ್ಯ ಪಂಚವಿಧ ಪಂಚಾಮೃತವನು ತುಂಬಿ ||
ಹೊರಿಸಿದ ಕುಂಭದಗ್ರದೊಳು ಹಸ್ತವನಿಟ್ಟು
ಸಾರಗಂಗಾ ಪುಷ್ಪ ರೀತಿ ಮಂತ್ರವ ನುಡಿದು
ಮೀರಿದ ಮಕಾರವನು ಬಿಂದು ಸಹಿತಂ ಲಿಖಿಸಿ ಮಂತ್ರೋದಕವನುಸರ್ದ ||೧೮||

ಪರಿಕರದ ಮೇಲೆ ಪ್ರೋಕ್ಷಿಸಿ ತಜ್ಜಲವ ಮತ್ತೆ
ಪರಪಾತ್ರೆಯೊಳ್ತುಂಬಿದ ವಸ್ತ್ರವನು ಮುಚ್ಚಿಸುತೆ
ನಿರುತದಿಂದಷ್ಟವಿಧದಿಂದಲರ್ಚಿಸಿ ದುರ್ವೆಯವನಿಟ್ಟು ಸಂತಸದೊಳು ||
ಊರೊಳಿರುತಿರುವಖಿಲ ಭಕ್ತ ಮಾಹೇಶ್ವರರ
ಚರರನಟ್ಟುತೆ ಕರೆಸಿ ಕುಳ್ಳಿರಿಸಿ ಕೊಂಡವರ
ಪರಮ ಮಂಟಪ ಸಭಾಪೂಜೆಯನೆಸಗಿಯಕ್ಕಿ ಬಿಳಿಯ ಸಾಸಿವೆಯ ಮತ್ತೆ ||೧೯||

ವರಜಪಾಮಾಸಿಯೀ ಮೂರು ದ್ರವ್ಯ ವಧೂಮ್ನ
ಪರಮ ಮಂಟಪದೊಳಗೆ ಹಾಕಿಸುತೆ ಪುಣ್ಯಾಹ
ಮಿರದೆ ವಚನವ ನುಡಿಸಿ ಚರಮೂರ್ತಿ ದೇಶಿಕರ ಸ್ನಾನವನು ಮಾಡಿಸುತಲಿ ||
ನಿರುತದಿಂ ಗದ್ದುಗೆಯನೇರಿಸುತೆ ಚರವರನ
ಕರಿವೃಷಭನನ್ನಾಗಮೀಯಿಸುತೆ ಮುಂದೆಸೆಗೆ
ಸಾರಿಸಿಗಿಳಿಲದೊಳಗೆ ಹೊನ್ನದಕ್ಷಿಣನಿಟ್ಟು ವಸ್ತ್ರವನು ಮುಚ್ಚಿಕರಕೆ ||೨೦||

ಕೊಟ್ಟು ಗುರುಸೂತ್ರದಿಂದುಭಯರುಂ ಸಾಷ್ಟಾಂಗ
ಗುಟ್ಟಾಗಿಯೆರಗಲುಪರಾಮರಸಿ ಸರ್ವರನು
ಶಿಷ್ಯರುಂ ಕೇಳಿಯಪ್ಪಣೆಗೊಂಡು ಹೆಚ್ಚಿಸಲು ಸೂತ್ರದಿಂ ಗದ್ದುಗೆಯೊಳು ||
ಶ್ರೇಷ್ಠಗುರುಗಳು ಕುಳಿತು ವತ್ತಿಯ ಮಣೆಯ ಮೇಲೆ
ಸೃಷ್ಟಿದೊಶ್ಮಿಷ್ಯನಂ ಕುಳ್ಳಿರಿಸಿ ಸೂತ್ರವನು
ನಿಷ್ಠೆಯಿಂ ಬಂಧಿಸುವೆ ನಾದಪೂಜೆಯವೆಸಗಿ ಲಿಂಗಕರ ಮಸ್ತಕವನು ||೨೧||

ಚಂದವಾಗಿಯೆ ತ್ರಿವಿಧ ಸಪ್ತರ್ಚನೆಯನೆಸಗಿ
ಅಂದವಾಗಿಹ ಲಿಂಗ ಸ್ವಸ್ತಿವಾಸನದಲ್ಲಿ

ಕಂದು ಕಂದಕಮೂರ್ತಿ ಲಿಂಗವನು ಸ್ಥಾಪಿಸುತೆ ಮಾಂಜಿಷ್ಟವಸ್ತ್ರವನ್ನು ||
ಕಂದನ ಮುಖದ ಮೇಲೆ ಮುಚ್ಚಿದ ಕ್ಷಣ ಕರ್ಣ
ವೊಂದರೊಳ್ಳಿವ ಷಡಾಕ್ಷರ ಮಂತ್ರ ತ್ರಿವಿಧಗತಿ
ಯಿಂದ ಬೋಧಿಸಿ ಮುಖದ ಮೇಲೆ ಮೂವೇಳೆದಲಿವುಪದೇಶವಂಗೈಯ್ಯುತೆ ||೨೨||

ವರಪದೋದಕ ಶೇಷವರ್ಪಿಸುತೆ ಮಂತ್ರದಿಂ
ಕೊರಳೊಳಗೆ ಲಿಂಗವನು ಮಂತ್ರ ಪೂರ್ವಕಮಾಗಿ
ಗುರುಗಳಂ ಭಕ್ತಿ ಮಾಹೇಶ್ವರರ ಕರಸ್ಪರ್ಶದಿಂದೆ ಧಾರಣೆಗೆಯ್ಯುತೆ ||
ಪರಮಶ್ರೀ ಮಂಗಳಾಷ್ಟಕ ಪಠಣದಿಂದೆ ಗುರು
ವರನು ಮಂತ್ರಾಕ್ಷತೆಯ ಹಾಕಿ ಸರ್ವರ ಕರದಿ
ಸ್ಮರಿಸುತಾಚಾರ್ಯರಿಂ ಪ್ರೋಕ್ಷಿಸಿಸಿ ಗುರುಕಂಕಣವನು ಬಂಧಿಸಿ ಕರದೊಳು ||೨೩||

ನಾಮಕರಣ ಕ್ರಮವ ಮಾಡುತಾಶೀರ್ವಾದ
ಪ್ರೇಮದಿಂದೆಸಗಲ್ಕೆ ಕರಿವೃಷಭದೇಸಿಕನು
ಆ ಮಹಾಗುರುಗಳಿಗೆ ದಕ್ಷಿಣೆಯನಿತ್ತು ಸಾಷ್ಟಾಂಗದಿಂದಂ ನಮಿಸಲು ||
ಸ್ವಾಮಿಗಳು ಕರದೊಳಗೆ ಭಿಕ್ಷ ಪಾತ್ರೆಯನಿತ್ತು
ರಾಮವಹ ದಂಡಾಗ್ರ ದಕ್ಷಿಣ ಕರದೊಳಿತ್ತು
ರಾಮಣೀಯಕ ಸಕಲ ಭಕ್ತ ಮಾಹೇಶ್ವರರ ಹಸ್ತ ಭಿಕ್ಷವಗೊಂಬುತೆ ||೨೪||

ಕಾಸವನು ಹಂಚುತ್ತೆ ಭಕ್ತ ಮಾಹೇಶ್ವರರಿ
ಗಾಸಮಯದೊಳಸಿಮಾರಾಧನೆಯನೆಸಗುತ್ತ
ಸೂಸುತಿಹ ಸಂತೋಷದಿಂದ ಚರವರ್ಯರಿಗೆ ಉಡುಗೊರೆಯನಿತ್ತು ಮುದದಿ ||
ತೋಷದಿ ಭೂರಿಗಣಕ್ಕೆಯ್ದೆ ದಕ್ಷಿಣವನಿತ್ತು
ಸಾಸಿಗರು ಪಲ್ಲಕ್ಕಿಯೊಳ್ಕರಿಯ ಕುಳ್ಳಿರಿಸಿ
ನಾಶ ರಹಿತನನಾಗ ಸಕಲ ಸಂಭ್ರಮದಿಂದ ಮೆರವಣಿಗೆಯನು ಮಾಡಿಸಿ ||೨೫||

ಬಂದ ಚರಮೂರ್ತಿಗಳನಂದು ಕಳಿಸುತ್ತೆ ಮುದ
ದಿಂದಲಾ ಮರಿಗಳಿಗೆ ಮಂತ್ರೋಪದೇಶವನು
ಚಂದದಿಂ ಮಾಡಲುಚಿತವದೆಂದು ತಿಳಿವುತ್ತೆ ಮಂತ್ರೋಪದೇಶವಿತ್ತು ||
ಬಂಧುರದವಂಗುಷ್ಟ ಮೊದಲು ಶಿರಕಡೆಯಾಗಿ
ಸುಂದರದ ಮಂತ್ರಮಯವೆಂದು ತತ್ತಸ್ಥಾನ
ದಂದವನು ತಿಳಿವುತ್ತೆ ಚಕ್ರಲಿಂಗಾಂಗಾತ್ಮ ಶಕ್ತಿ ಭಕ್ತಿ ಪ್ರಣಾಮವು ||೨೬||

ಇನ್ನೂರ ಹದಿನಾರ್ಸಕೀಲಗಳು ತಿಳಿಪುತ್ತೆ
ಮನ್ನಣೆಯ ಘಟಸ್ಥಲ ವಿಚಾರವನು ಬೋಧಿಸುತೆ
ಸನ್ನುತಃ ಷಟ್ತ್ರಿಂಶ ತತ್ವವಿವರವ ತಿಳುಹಿ ಏಕಶತಸ್ಥಲದ ಪರಿಯ ||
ನನ್ನಿಯಿಂದುರುಪುತ್ತೆ ಲಿಂಗಾಂಗ ಸಮರಸವ
ಚೆನ್ನಾಗಿಯರುಪುತ್ತೆ ಜೀವಶಿವರೈಕ್ಯವನು
ಪನ್ನತಿಕೆಯಿಂದಲಷ್ಟಾವರ್ಣ ಮಹಿಮೆಯನು ಚಂದವಾಗಿಯೆ ಬೋಧಿಸಿ ||೨೭||

ಕರಿಬಸವ ದೇಶಿಕ ಗುರುಸನ್ನಿಧಾನದೊಳು
ಕರಚರಣಗಳನು ಜೋಡಿಸುತೆ ವಿಜ್ಞಾಪನವ
ನೆರೆನ್ಯೆದದೆಲೆ ದೇವ ನೂರೊಂದು ಸ್ಥಾನಗಳ ವಿವರವಷ್ಟವರ್ಣದ ||
ವರಮಹತ್ವದ ವಿರಳಿ ಕರೀಶನಿಗೆ ಪೇಳ್ವುದೆನೆ
ಪರಮ ಸಂತೋಷದಿಂ ಗುರುಕೆಂಡದಾರ್ಯರುರೆ
ವರಶಿಷ್ಯನಂ ಕರದು ಕುಳ್ಳಿರಿಸಿ ಕೊಳ್ಳುತತೇಕೋತ್ತರ ಶತಸ್ಥಲವನು ||೨೮||

ಪೇಳಿದರರದೆಂತೆನಲು ಪೂರ್ವದೊಳ್ ಬ್ರಹ್ಮಪದವಿ
ಲೀಲೆಯ ಚಿದಾದಂಗ ಚಿಲ್ಲಿಂಗವೆನಿಸಿಹುದದನೆ
ಲಾಲಿತದಿ ಭಾವಿಸಲಾಗ ಭಾವಮಿದೆಂಬ ಅಂಗಲಿಂಗಗಳಾಗಲು ||
ಲಲಿತವಾಯೋಗದಿಂ ಭೋಗವೆನಿಸುತ್ತುಮಾ
ತ್ತಾಲಸಿತ ಭಾವವೆ ಪ್ರಾಣವಾದ ನಿಮಿತ್ಯ
ವಿಲಸಿತದೊಳರು ಪ್ರಾಣಲಿಂಗವಾಯಿತ್ತು ಭೋಗತ್ಯಾಗವಾಗಲೊಡನೆ ||೨೯||

ಪರಮ ತ್ಯಾಗಾಂಗವಾಯಿತ್ತು ಪ್ರಾಣದಿ ಮತ್ತೆ
ವರವಪೇಕ್ಷವದಾಗಲದುವೆಯಿಷ್ಟವದಾಯ್ತು
ಮೂರರರೊಳೆರಡೆರಡು ಅಂಗಲಿಂಗಗಳಾಗಲವರ ನಾಮವನು ಪೇಳ್ವೆ ||
ನಿರುತವೈಕಾಶದಿ ಭಕ್ತಾಂತ್ಯವಂಗಗಳಿವನು
ಭರದೊಳಾ ಮಹದಾ ದಿವಾಚಾರ್ಯರ ಕಡೆಯಾಗಿ
ಸುರುಚಿರೋನ್ನತವಾರು ವಾರಂಗಲಿಂಗವೆಂದೆನಿಸಿ ಸುಖದಿಂದಿರಲ್ಕೆ ||೩೦||

ಭಕ್ತನೊಳ್ಹದಿನ್ನೈದು ಮಾಹೇಶನೊಳಗೆನವ
ಯುಕಿತಯಿಂದಾ ಪ್ರಾಸಾದಿಯೊಳೇಳು ಪ್ರಾಣದಲಿ
ಶಕ್ತಿಯಿಂದ್ಯೆದು ಶರಣಸ್ಥಲದೊಳಂ ನಾಲ್ಕು ಐಕ್ಯನೊಳ್ನಾಲ್ಕಾದವು ||
ವ್ಯಕ್ತವಾಚಾರದಿ ಮಹಲಿಂಗವಂತ್ಯದೊಳ

ಗುಕ್ತಿಸಲ್ಕೊಂದು ಪ್ರಸಾದ ಬಿಟ್ಟಿಲ್ಲರೊಳು
ಪ್ರೋಕ್ತವೊಂದೊಂದರೊಳಗೊಂಭತ್ತು ಜನಿಸಿದವು ಶೇಷಲಿಂಗದೊಳು ಮತ್ತೆ ||೩೧||

ದ್ವಾದಶ ಸ್ಥಲಗಳಾದವವು ವೆಣಿಸಲ್ಕೈವತ್ತು
ವೇದಿಸಲ್ಕೇಳು ಮೇಲಾದ ವಂಗಸ್ಥಲದೊ
ಳಾದವು ನಾಲ್ವತ್ತು ನಾಲ್ಕು ಕೊಡಲು ನೂರರೊಂದು ಸ್ಥಲಂಗಳವನು ||
ಮೊದಲೊಳ್ತಂ ತಮ್ಮೊಳಾದ ಸ್ಥಲಂಗಳವು
ಸಾಧಿಸವ ತಮ್ಮೊಳೈಕ್ಯವನ್ನೆದಲೊಂದೆ ತಾ
ಸಾದರದೊಳಂ ಶೂನ್ಯ ಬ್ರಹ್ಮವುಳಿದಿಹುದೆಂದು ಮಗನೆ ಕೇಳಿ ತಿಳಿಯೈ ||೩೨||

ಇಂತು ಏಕೋತ್ತರ ಶತಸ್ಥಲದ ವಿವರವನು
ಕಂತು ಮರ್ದನರೂಪ ಕೆಂಡಗಣ್ಣಿನ ಸ್ವಾಮಿ
ಸಂತ ಕರಿಬಸವ ದೇಶಿಕರಿಗಿದೆ ಮೊದಲಾದ ಕರಣ್ಣೆಸಿಗಿ ಮಂತ್ರಗೋಪ್ಯ ||
ಪಂಥವಿದು ಪರಮಾರ್ಥಕ್ಕೆ ಮೂರ್ಸೋಪಾನ
ದಂತ್ಯಸೆವಯೀ ಮೂರು ತತ್ವಶಾಸ್ತ್ರಂಗಳನು
ಸ್ವಂತ ಪೇಳುತಲಿವರ್ಗೆ ಬಸವಪ್ರಭು ಚನ್ನಬಸವೇಶ ತೋಂಟದವರ್ಯರೆ ||೩೩||

ಮೊದಲಾದ ಪೂರ್ವದ ಪುರಾತನರ ವಚನಗಳ
ಸಾದರದೊಳಂ ತಿಳಿಪಿ ಶಾಸ್ತ್ರ ಸಂಪಾದನೆಯ
ಮೋದದಿಂ ಮಾಡಿಸಿರಿ ಚರಮೂರ್ತಿಗಳ ಕರಸಿ ಆರಾಧನೆಯ ಮಾಡಿಸಿ ||
ವಿಧಿತದಿಂ ಬಟ್ಟಲವ ಕೊಟ್ಟು ಸ್ಥಲವನು ಕೂಡಿ
ಸದುಭುತದೊಳಂ ದಾನಧರ್ಮಗಳ ಮಾಡಲದು
ಮುದದೊಳಂ ನೋಡಿ ಕರಿಬಸವದೇವರು ಗುರುವಿನಡಿಗೆ ಸಾಷ್ಟಾಂಗದಿಂದ ||೩೪||

ನಮಿಸೆದ್ದು ಹಸ್ತಗಳ ಜೋಡಿಸುತೆ ಸದ್ಗುರುವೆ
ಸ್ವಾಮಿ ಶಾಶ್ವತ ನಿರಾಕಾರ ನಿರ್ದ್ವಂದ್ವ ಸಲೆ
ತಾಮಸರಹಿತ ನಿತ್ಯ ನಿಕಾಮ ನಿಃಶೂನ್ಯ ನಿರುಪಮ ನಿರಾವಲಂಬ ||
ರಾಮ ಮಂಗಳ ನಿಷ್ಕಳಂಕ ನಿರ್ಗುಣ ಸತ್ಯ
ವಾಮನಿರೂಪಾಧಿಕಂ ನಿರಪೇಕ್ಷ ನಿರ್ಲಕ್ಷ
ಕಾಮಿತಾರ್ಥವನಿತ್ತು ಕರುಣಿಸಿದಿರೆನ್ನ ಮಾಂಸದ ಪಿಂಡವಳಿದು ಮಂತ್ರ ||೩೫||

ಪಿಂಡವನು ಮಾಡಿ ಪಾವನಗೈದಿರೆಲೆ ದೇವ
ತಂಡತಂಡದ ಬಹಳ ಜನ್ಮಾಂತರದ ದೋಷ

ಖಂಡಿಸೀಶ್ವರ ಸುಖವನಿತ್ತು ಕರುಣದಿಯೆನ್ನದುರ್ಗುಣ ಸಮೂಹವಳಿದು ||
ಪುಂಡಷಟ್ ಸ್ಥಲ ಮಾರ್ಗವನು ತಿಳುಹಿ ಅರಿವರ್ಗ
ಭಂಡಗೈವುತ್ತತೇಕೋತ್ತರ ಶತ ಸ್ಥಳದ
ಚಂಡ ಪ್ರಕಾಶಗೈದುನ್ನತ ಮರವಿದೋಷಜ ಬನ್ನ ಬಡಿಸಿದಿರಿ ಗುರುವೆ ||೩೬||

ವಿರತ ಷಡ್ಗುಣದೋಷ ದುಷ್ಟ ದುರ್ಗುಣ ನಾಶ
ವಿರತ ಕುಲ ಚಕ್ರೇಶ ದೂತ ಪಂಚಕ್ಲೇಶ
ವಿರತ ಸಜ್ಜನ ಪೋಷ ಪಂಚಾಕ್ಷರಿ ಕೋಶ ಪಂಚ ಪಾಪ ಪ್ರನಾಶ ||
ವಿರತ ಗುಣಮಣಿಹಾರ ಸದ್ಗುಣ ಗಣಪೂರ
ವಿರತ ಭವಸಂಸಾರ ಮಾಯಾ ತಮಸ್ಸೂರ
ವಿರತ ಮಾನ ಸಮುದಂಬುಜ ಸೂರ್ಯ ಗುರುವರ್ಯ ಪರಮ ಪಾವನ ಸುಖಾರ್ಯ ||೩೭||

ಇಂತು ಬಹುಪರಿಯಿಂದ ಸಂತೋಷ ಶರಧಿಯೊಳ್
ಕಂತುಹರ ರೂಪ ಕರಿಬಸವೇಶ ಮುಳುಗುತ್ತ
ನಂತ ಹಸ್ತವನು ಮುಗಿದಿರುವರೆಂಬಂತೆ ಸದರೋಮೋದ್ಗಮನ ರಾಜಿಯಿಂ ||
ಗಂತುಕದ ನೇತ್ರಾಂತ್ಯದೊಳ್ಬಾಷ್ಪ ಜಲಸುರಿಯ
ಲಂತು ಗದ್ಗದ ಕಂಠದೊಳಗುಣ್ಮುತಿರಲದನು
ಶಾಂತಶ್ರೀ ಗುರುಮೂರ್ತಿ ನೋಡಿ ಕರುಣಸ್ಫೂರ್ತಿಯಿಂ ತೆಗೆದುತೊಡೆಯ ಮೇಲೆ ||೩೮||

ಕುಳ್ಳಿರಿಸಿಕೊಂಡು ಮುದ್ದಾಡಿ ಮುಂಡಾಡುತ್ತೆ
ಬಳ್ಳಿ ಕುಡಿವರಿವ ಮಾಳ್ಕೆಯೊಳು ಸಂತೋಷ ಜಲ
ಹಳ್ಳದಂತ್ಹರಿವುತ್ತೆ ಜೊಳ್ಳ ಮಾತುಗಳಲ್ಲ ಮಳ್ಳ ಮಾನವರರಿವರೆ ||
ಸುಳ್ಳಲ್ಲ ನೀನು ಶಿವಸಂಸ್ಕಾರಿಯಿರುವೆಯೆದ
ಕಿಲ್ಲಿ ತತ್ವಜ್ಞಾನ ಸಂಕಾಶ ವಾಯ್ತುದಕೆ
ಎಲ್ಲರೊಳು ಬಹುಪೂಜೆ ಪಡೆಯೆಂದು ಪರಸುತ್ತಲಭಯ ಹಸ್ತವನಿಟ್ಟರು ||೩೯||

ಶಿವಭಕ್ತ ವೀರಮಾಹೇಶ್ವರರಿದನು ನೋಡಿ
ಭವಹರ ಗುರುಸ್ವಾಮಿ ವರಶಿಷ್ಯರುಭಯರನು
ತಾವು ಬಹುಪರಿಯಿಂದ ನುತಿಸಿ ನಲಿಸುತಲಿವರು ನರಮಾತ್ರವಲ್ಲವೆಂದು ||
ನವಯಿಕ್ಷು ವೃಕ್ಷಗಳಿಗಾಮಾಕ್ಷು ಕಿಟ್ಟಂತೆ
ಶಿವನ ಸಂಸ್ಕಾರಿಗಳೆ ಸರಿ ಮತ್ತೆ ಗುರುಕೃಪೆಯ
ತವೆಪಡೆದು ತಮ್ಮ ನಿಜವನು ತಾವೆ ತಿಳಿದ ಬಳಿಕವರಿಗೆಣೆಯುಂಟೆ ಧರೆಯೊಳ್ ||೪೦||

ಇಂತು ನುತಿಸಲ್ಕವರು ಸಂತೋಷದಿಂದಿರ
ಲ್ಕಂತರಂಗದೊಳು ಕರಿಬಸವ ದೇವರು ಮತ್ತೆ.ಮಂಥನಿಸಿ
ತಮ್ಮೊಳಗಿದ್ದಷ್ಟಾವರ್ಣ ಮಹಿಮೆಯಂ ತಳುವದಿಲ್ಲದೀಗ ||
ಶಾಂತಶ್ರೀ ಗುರುವರ್ಯ ತಿಳುಪಿ ರಕ್ಷಿಪುದೆಂದು
ಕಂತುಮರ್ದನ ಮೂರ್ತಿ ಗುರುವನಡಿಗೆರಲ್ಕೆ
ಸ್ವಾಂತದೊಳಗದನರಿದು ಪೇಳ್ದರದು ಮುಂದಲಧ್ಯಾಯದೊಳು ಪೇಳ್ವೆನೊಲಿದು ||೪೧||

ಮರುಳ ಸಿದ್ಧಾಚಾರ್ಯ ರಾಮಿದೇವಾಚಾರ್ಯ
ವರ ಪಂಡಿತಾ ಚಾರ್ಯ ಗುರುವು ವಿಶ್ವಾಚಾರ್ಯ
ರುರೆ ಮಧ್ಯೆ ವದನ ಸಂಜಾತ ರೇಣುಕದೇವನುದರ ಭವಲಿಂಗನು ||
ಹರರೂಪ ರುದ್ರಮುನಿಕರಜಾ ಮಹಂತಮುನಿ
ಚರಣ ಗುರುಪರಂಪರೆಯೊಳುದ್ಭವಿಸಿ
ದರರೆ ವಲದಿಯಪುರದ ಹಿರೆಮಠಾಧಿಪ ಪಟ್ಟಚರವರ್ಯ ಮಹಂತನುಸುರ್ದ ||೪೨||

ಅಂತು ಸಂಧಿ-೩ಕ್ಕಂ ಪದ - ೧೫೧ಕ್ಕಂ ಮಂಗಳ ಮಹಾ ||

ನಾಲ್ಕು

ಸಂಧಿ

ಪಲ್ಲವಿ : ಪರಮಗುರುಲಿಂಗದ ಮಹತ್ವ ಕಿಡಿಗಣ್ಣೊಡೆಯ
ರಿದರೆ ಕರಿಬಸವ ದೇವರಿಗೆ ಪೇಳಿದರೊಲಿದು
ಹರಭಕ್ತರಿದನಾಲಿಪುದು ಪರಮಸಂತೋಷದಿಂದಲಾದಿ ಕಥೆಯನು ||

ಕಮಲಸಂಭವ ಶಿರಃಪಾತ್ರ ಪನ್ನಗಸೂತ್ರ
ಕಮಲ ಶಿರಧರ ಕೃಷ್ಣನೇತ್ರ ಕಮಲಾಂಕ ಪದ
ಕಮಲಪತಿ ಕಮಲಜ ಪುರಂದರ ಸುರಾದಿ ಮುನಿಪತಿ ನತಾಂಭೋಜ ಚರಣ ||
ವಿಮಲ ಕಾತ್ಯಾಯಿನೀ ಗುರು ಸ್ತವಂನ್ಯಕರ
ತಮಶಿರೋಮಾಲ ವಕ್ಷ ದುರ್ಜನ ಶಿಕ್ಷ
ಸುಮನ ಶರಗಿರಿ ವಜ್ರದಂಡ ಯಮಘನ ಚಂಡವಾತ ಪರಿಪೂತ ಜಯತು ||೧||

ಎಲೆ ಮಗನೆ ನೀ ಕೇಳು ಗುರುಭಕ್ತಿಯೆಂಬುದಿದು
ಸುಲಭವಲ್ಲವು ಸತ್ಯದುರ್ಘಟವಸಾಧ್ಯವಿದು
ಪಲ್ಲಬರಿಂದಾದುದಲ್ಲವು ಲಕ್ಷಕೋರ್ವನೆ ಕೋಟಿಗೋರ್ವನೆ ತಿಳಿಯದು ||
ಶೂಲದಣೆಯಂತೆ ಶಸ್ತ್ರದ ಮೇಲೆ ನಡೆದಂತೆ
ಬೇಲಸಿಂಹಂ ವ್ಯಾಘ್ರವದನ ಚುಂಬನದಂತೆ
ಲೀಲೆಯಿಂ ಪಂಚಾನನಾ ಲಿಂಗನೋತ್ಸುಖದ ಜಾಲದಂತೆ ಸಮನಿಹುದು ||೨||

ಗ್ರ || ಶೂಲಾಗ್ರ ಶಸ್ತ್ರಗಮನಂ
ವ್ಯಾಲಸ್ನೇಹಂ ಚಮೂರಕೆ

ವದನೇ ಚುಂಬನಂ ಕೃತ್ವಾ
ಸಿಂಹಾಲಿಂಗನ ಯದ್ಭವೇತ್ ||೧||

ಗ್ರ || ತದ್ಗುರು ಶೀವ ಸಕ್ತಂಚ
ದುರ್ಘಟಂ ದುರ್ಲಭಂ ಭವೇತ್
ಶುದ್ಧ ತ್ರಿಕರ್ಣ ತತ್ಸೇವಾ
ಲಭ್ಯತೆ ಮುಕ್ತಿ ಮಾಫ್ನುಯಾತ್ ||೨||

ಗುರು ಭಕ್ತಿಯೇ ಹರನಭಕ್ತಿಗಿದು ಮೂಲಹುದು
ಗುರುಭಕ್ತಿಯೆ ವಿದ್ಯಮಂತ್ರ ಸಾಧನವಹುದು
ಗುರುಭಕ್ತಿಯೆ ಸಕಲ ಸಿದ್ಧಿ ಮೂಲವದಾಗಿ ಗುರುಭಕ್ತಿಯೆಯಧಿಕವು ||
ಗುರುಭಕ್ತಿಯೆ ಜ್ಞಾನ ಸಿದ್ಧಿಗಿದು ಕಾರಣವು
ಗುರುಭಕ್ತಿಯಿಲ್ಲದಲದಾವ ಕಾರ್ಯವದಾಗೆ
ದಾರಿಗಾದರು ಫಲಿಸಲರಿಯದಿದು ಪರಮಾನುಭವ ಬೋಧೆ ಪೇಳುತಿಹುದು ||೩||

ಪರಮಾನುಭವ ಬೋಧೆ ||ಸೂಚನೆ ||
ಗುರುವರನೊಲವಿಲ್ಲದವನೇನನೋದಲು
ಸೊಬಗಿನ ಸೋನೆ ವರ್ಣ ದೊರೆಯಲರಿಯದು ಸಮ್ಯಜ್ಞಾನ ||

ಗುರುವೆ ಪರತರ ಪಾವನವು ನಿತ್ಯ ಪರಿಪೂರ್ಣ
ಗುರುವೆ ನಿರ್ಮಾಯ ನಿರ್ದ್ವಂದ್ವ ನಿಷ್ಕಳ ರೂಪ
ಗುರುವೆ ಸತ್ಕ್ರಿಯ ಸದಾಚಾರ ಸನ್ಮಾರ್ಗ ಸದ್ಗುಣಗಳಿಗೆ ಕಾರಣವಲ ||
ಗುರುವೆ ಪರಮಾತ್ಮ ಸದ್ಗುರು ಶೌರಿ ಗುರುಬ್ರಹ್ಮ
ಗುರುವೆ ಈಶ್ವರ ಗುರುಸದಾಶಿವ ಮಹೇಶನೀ
ಗುರುವಿನಿಂದ ಪೆರತಾವುದಿಲ್ಲ ಸರ್ವ ಸಗುಣ ನಿರ್ಗುಣ ಪರಬ್ರಹ್ಮವು ||೪||

ಗುರುಭಕ್ತಿಯಿಂದ ಮುಕ್ತಿಯ ಕಂಡವರ ಕಥೆಯ
ನಿರವಿಸುವೆ ಕೇಳಮರಗುಂಡ ಮಲ್ಲೇಶ್ವರನ
ವರಶಿಷ್ಯನೋರ್ವನಿಷ್ಕರಿಪ ಶಿಷ್ಯರೆ ಮೂರುನೂರಿರಲವರ ಮನಸಿನ ||
ಪರಿಯರಿದವರಿಗವ ತೆರನಂತೆ ವರ್ತಿಸುತೆ
ಮಿರಲವರೊಳಗೊರ್ವ ಗುರುಭಕ್ತನೆಂದೆನಿಪವನು
ಗುರುಸೇವೆಯೆ ಪ್ರಾಣವಾಗಿ ಗುರುವಾಜ್ಞೆಯೆ ಪ್ರಾಣವಾಗಿರಲ್ಕೆ ||೫||

ಗುರುಗಳಾ ವರಶಿಷ್ಯನೊಳು ಪೂರ್ಣ ಕರುಣದಿಂ
ದಿರಲುಳಿದ ತ್ರಿಶತಂತ್ಯವಾಸಿಗಳು ಗುರುಭಕ್ತ
ನಿರವಿನೊಳಸಹ್ಯ ಭಾವದೊಳು ಮತ್ಸರಿಸುತಿರಲದನರಿದು ಒಂದು ದಿನವು ||
ಗುರುವು ತಾ ಪವಡಿಸುವ ಪರಿಯಂಕವನು ತರಿಸಿ
ಹಿರೆಯ ಸಭೆಯೊಳಗಿರಿಸದರ ಮೇಲ್ತಿವಾಸಿಗಿಯು
ವರಲೇಪು ತೆಕ್ಕೆಗಿರ್ದಗಳಿಡಿಸಿಯದರಡಿಯೊಳೊಂದು ಆಸನದ ಮೇಲೆ ||೬||

ತಾವು ಕುಳ್ಳಿರ್ದು ಮುನ್ನೂರು ಶಿಷ್ಯರ ಕರಸಿ
ನೀವಿದರ ಮೇಲೆ ಕುಳ್ಳಿರುವದೆಂದೊ ಗೊರ್ವ
ರಾವಗಂ ಕರೆದು ಪೇಳಲ್ಕವರು ಮೇಲುಭಯವಂತರ ಕಪಟದಿಂದಲೆ ||
ನಾವೆಂತು ಕುಳಿತಪೆವು ಗುರುಸನ್ನಿಧಾನದೊಳು
ಸೇವಕರುವುನ್ನತಾಸನ ವಾಹನಾದಿಗಳೊ
ಳಾವಗಂತಂ ಮಂಕದು ಪರಿಪದ ನ್ಯಸ್ತವಾಚಾರ್ಯ ಗ್ರಂಥಿಯುನಿಕ್ಕುತೆ ||೭||

ಕುಳ್ಳಿರಬಹುದೆ ಕುಳಿತೊಡಂ ಮಹಾದೋಷವಿದು
ಸುಳ್ಳಲ್ಲ ಗುರುಶಯನದೊಳ್ಕುಳಿತ ಮಾತ್ರದೊಳು
ಎಳ್ಳನಿತು ಕರುಣೆಯಿಲ್ಲದೆಯೆ ಯಮನು ಹಿರೆ ನರಕದೊಳಗೆ ಮುಳುಗಿಸುವ ದಿಟವು ||
ಸಲ್ಲದಿದು ಚಂದ್ರಗುರು ತಲ್ಪಕಾದುದರಿಂದೆ
ಎಲ್ಲಾಗಳುಂ ಕಳಂಕವ ಧರಿಸಿ ಚರಿಸುವನು
ಸಲ್ಲಲಿತ ದೇಹವೆಲ್ಲೆಡೆಯೊಳು ಭಗಕಾರನಾಗಿರದೆ ದೇವೇಂದ್ರನು ||೮||

ಗ್ರಾ || ಆಸನೆ ಶಯನೆ ಶಯನೆಯಾನೆ
ಗುರುಗ್ರಂಥೀವ ಬಂಧನಂ
ಆಚಾರ್ಯ ಸನ್ನಿಧಾನೇನ
ತೆ ನರಂ ನರಕಂ ವ್ರಜೇತ್ ||೩||

ಅಂಕೊ ಪರಿಪದನ್ಯಸ್ತೋ
ಯೋನಕೋ ಗುರುಸನ್ನಿಧೌ
ಸ ಏವ ಶೂತಿ ಪತತಿ
ಹ್ಯುತ್ತರೆ ಜನ್ಮನಿಧವಂ ||೪||

ಇದು ಕಾರಣಂ ನಾವು ನಮ್ಮ ಸನ್ನಿಧಿಯಲ್ಲಿ
ಒದವಿದಾ ಮಂಚದೊಳು ಕೂಡಲಮ್ಮೆವು ಗುರುವೆ

ಇದಕೆನ್ನಮ ಹಪರಾಧವೇನು ಪೇಳುವುದೆನೆಲು ಗುರುಭಕ್ತನಂ ಕರೆವುತೆ ||
ಸದಮಲ ಸುಮಂಚದೊಳು ನೀನು ಕುಳ್ಳಿರುವುದೆನೆ
ಪಾದದಪ್ಪಣೆಯೆ ಕಾರಣವೆನಗೆ ಉಳಿದಿರುವ
ಹದನವೇಕೆನಗೆ ಗುರೊರಾಜ್ಞಾನಲಂಪುಯೆತ್ತೆಂಬ ವಚನವೆ ಕಾರಣ ||೯||

ಎಂದು ಗುರುರಾಜ್ಞಾನುವರ್ತತೆ ಯೆನುತ್ತಿರುವ
ಬಂಧುರ ಶೃತಿಯನರಿದು ಚರಣಕ್ಕೆ ನತನಾಗಿ
ಚಂದರೊಳ್ಮಂಚದಗ್ರದಿ ಕುಳಿತು ಕೊಂಡಿರಲ್ಕದು ಕಂಡುಲಿದ ಶಿಷ್ಯರು ||
ಇಂದು ಧರರೂಪ ಗುರುನಮ್ಮ ಮನ ನೋಡುವಡೆ
ಕುಂದದೀ ಮಂಚವನು ಏರೆಂದೊಡಂ ನಾವು
ಮಂದಮತಿಯಿಂದೇರಬಹುದೆ ನಾವೇರಿದೆವೆ ಹೇಳಿದುದೆ ಸಾರೆನುತ್ತೆ ||೧೦||

ಮೂಡನಿವ ಕುಳಿತನಾರನು ಲಕ್ಷಿಸದೆ ಪಾಪಿ
ರೂಢಿಯೊಳಗಿಂತಹ ದುರಾಚಾರಿವಿರಲುಂಟೆ
ಮಾಡಿದಪುವಿದನ ಕೊಲ್ಲದೆ ಬಿಡುವುದೇ ಗುರುದ್ರೋಹಿಯವನಂ ನೋಳ್ಪಡೆ ||
ಗಾಢನಮಗಿದು ಬಂದು ಕಾಡದಿರುವುದೆ ನಾವು
ನೋಡಿ ಸುಮ್ಮನಿರುವುದನುಚಿತ ಶಿವದ್ರೋಹ
ಮಾಡಿದವರ ಕೊಲ್ಲವೇಳ್ಕೆಂದು ಪೇಳುತಿದೆ ಶ್ರುತಿಯ ಸಂಶಯವೇತಕೆ ||೧೧||

ಯಸ್ಯಪರಾಧಂ ಖಲುತ್ಸಯ ದಂಡವೆನು
ತಸ್ಯ ಶಿವಗುರುದ್ರೋಹ ನಿಂದೆಯವ ಕೇಳಿದೊಡೆ
ಮಸಕನಂದದಿಯೊರಸಿ ಬಿಸುಡೆಂದು ಶಿವಶಾಸ್ತ್ರಮುಸುರುವದು ದಿಟದಿಂದವೆ ||
ಪಸ್ಯತಿ ಪರದ್ರೋಹನಾತ್ಮ ದೋಷವನಾರು
ವಸ್ಯದೊಳಗರಿಯಲರಿಯರು ನಾವು ಗುರುವಾಜ್ಞೆ
ಹಾಸ್ಯದಿಂ ಕೇಳದಿರ್ಪೆವುಯೆಂಬುದೇ ಕಾಣ್ಬುದವನ ದೋಷವನರಿದೊಡೆ ||೧೨||

ಉರಗಪತಿಗರಿದೆನಲ್ಕುಳಿದವರ ಪಾಡೇನು
ಗುರುಗಳಿಗೆ ಈ ಮಾತು ಸರಿಬಾರದಿರುವವಿವು
ವರಶಿಷ್ಯನವನಿರಾಕೃತ ಶಿಷ್ಯರುಂ ನಾವು ಅವನಿಗಾವ್ಸರಿ ಬರ್ಪುವೆ ||
ಗುರುಭಕ್ತನೇಗೈದೊಡಂ ಪ್ರೀತಿಯುತನಾತ
ಗುರುಚಿತ್ತವರಿದು ನಾವ್ಸುಮ್ಮನಿರ್ಪವದಲ್ಲ
ದರಿವಡಿವನಂ ಕೊಲ್ಬುದೊಂದರಿದೆ ಇನ್ನಿವಂ ಜೀವಿಸುವನೆ ಜಗದೊಳು ||೧೩||

ಎಂದು ವಾಚಾಳಕರು ನುಡಿವ ನುಡಿಗೇಳಿ
ಇಂದುಧರ ರೂಪ ಗುರುಮಲ್ಲಿಕಾರ್ಜುನ ದೇವ
ಕುಂದ ನುಡಿಗಳ ನುಡಿವರಿವರು ಕೊಂದಲ್ಲದೇ ಬಿಡರೆಂಬಭಿಪ್ರಾಯವ ||
ಚಂದದಿಂದೊಳಗರಿದು ನಿಶಿತ ಶೂಲವದೊಂದು
ತಂದದನು ಭೂಮಿಯೊಳ್ನೆಡಿಸಿದರ ಮೇಲೆ ನೀ
ವ್ಪಂದು ಕುಳ್ಳಿರುವದೆಂದಾತ್ರಿಶತ ಶಿಷ್ಯರಿಗೆ ಅಜ್ಞಾಪನಂಗೆಯ್ಯಲು ||೧೪||

ಕೇಳುತಾ ಶಿಷ್ಯರನಿಬರು ಕೂಡಿ ಮಾತಾಡಿ
ಅಳಿಗೊಳುತಂ ಗುರುವೆ ಮಂಚದಗ್ರದೊಳು ತಾ
ಕುಳಿತಿರುವ ಗುರುಭಕ್ತಗಾಜ್ಞಾಪಿಸಲು ಬಹುದು ನಮ್ಮ ಶಕ್ಯವದಲ್ಲವು ||
ಊಳಿಗವ ಮತ್ತಾವುದಾದೊಡಂ ಪೇಳ್ವುದೆನೆ
ತಾಳಿಕೋಪವನು ಗುರುಭಕ್ತ ನೀ ಬಾರೆಂದು
ಶೂಲವನು ಸರ್ವಕರಿಯಲುಯೇರುವುದು ಎನಲು ಪರಮ ಸಂತೋಷದಿಂದ ||೧೫||

ಗುರುಭಕ್ತರಿಗೆ ಗುರುಗಳಾಜ್ಞೆಯವೆ ಕಾರಣವು
ವರಶಿಷ್ಯನಾದವಂ ಸುಖದುಃಖನರಿವನೆ
ಗುರುವಾಜ್ಞೆಯವೆ ಸುಖವು ಸಂಪತ್ತು ಸೌಭಾಗ್ಯವೈಶ್ವರ್ಯವದೆಯಿರುವುದು ||
ಗುರುವೆ ನೀವೆಗತಿಯೆನುತ್ತೆ ಒಳಗರಿವುತ್ತೆ
ಗುರುಭಕ್ತ ಗುರುವಿನಡಿಗಳಿಗೆರಗಿ ಶೂಲವನು
ಏರಿ ಗುರುಸ್ಮರಣೆಗೈವುತ್ತ ಕುಳ್ಳಿರಲಾಗ ಮಸ್ತಕವಸೊಡೆದು ಮನೆಯು ||೧೬||

ತೋರಲಾಕ್ಷಣವವನಿಗಿನಿತಾದೊಡಂ ದುಃಖ
ತೋರದೆ ವಿಶೇಷ ಸುಖದಿಂ ಕರವ ಮುಗಿವುತ್ತೆ
ಗುರುವೆ ಶರಣೆನುತಂತರಂಗದೊಳ್ಧ್ಯಾನಿಸುತೆ ಗುರುಪಾದವನು ನಂಬುತೆ ||
ಇರುವ ಗುರುಭಕ್ತಿಯತಿಲೋಲನಂ ಶೀಲನಂ
ಗುರುಪಾದಾಂಭುಜ ಗಂಧಲೀಲನಂ ಪಾಲನಂ
ಗುರುದಯಾಂಬುಧಿ ಚಂದ್ರಶಾಲನಂ ದೂರೀಕೃತಮಲನನು ||೧೭||

ಗುರುಪದಾಂಬುಜ ಸೇವಶಕ್ತನಂ ಯುಕ್ತನಂ
ಗುರುಚರಣ ಪರಿಚರ್ಯ ಸಕ್ತನಂ ಭಕ್ತನಂ
ಪರಮ ದುರ್ಗುಣಗಳನು ತ್ಯಕ್ತನಂ ವ್ಯಕ್ತನಂ ಪಂಚಾಕ್ಷರೀ ವಕ್ತನಂ ||
ನರರಭವ ಸಂಸಾರ ರಿಕ್ತನಂ ಸೂಕ್ತನಂ

ವರಸದ್ಗುಣಂಗಳ ವಿರಕ್ತನಂ ಶೀಕ್ತನಂ
ಗುರುಶೇಷವನು ಪ್ರೇಮ ಭುಕ್ತನಂ ಮುಕ್ತನಂ ಪಾವನ ವಿರಕ್ತನನು ||೧೮||

ಗುರುಗಳತಿ ಕರುಣದಿಂ ನೋಡ್ಪುಳಿದ ಶಿಷ್ಯರನು
ಕರದು ಗುರುಭಕ್ತಿನಿರವಂ ನೋಡಿದಿರೆ ನೀವು
ಸರಿಯೆಬಾರದೆ ಬಗುಳುವಿರಿ ಶ್ವಾನನಂದದೊಳು ಅಂತರಂಗವನರಿಯದೆ ||
ಜರಿವುತಿರ್ಪಿರಿ ಅಸಹ್ಯದೊಳು ಮತ್ಸರಿಸುವಿರಿ
ಕ್ಷೀರವಮರಾಳ ಸ್ವೀಕರಿಪಂದದಿಂದುಳಿದ
ನೀರಕೋಳಿಗಳೆತ್ತ ಬಲ್ಲವು ಸುಗಂಧವದು ಬಲ್ಲವೆ ವರಹ ವಿತತಿ ||೧೯||

ಈತನಂ ಚಿತ ಸಚ್ಚರಿತ್ರವನು ಪಾತ್ರವನು
ಈತನುನ್ನತ ಭಕ್ತಿ ನಿಷ್ಠೆಯನು ತುಷ್ಟಿಯನು
ಈತನತಿ ಸೂವ್ರತ ಸದಾಚಾರ ಸನ್ಮಾರ್ಗ ಸದ್ಗುಣ ಸಮೂಹಗಳನು ||
ಈತನ ಸುನೀತಿಯನು ಸಜ್ಜನರ ಪ್ರೀತಿಯನು
ಈತನ ಸುವಾಣಿಯನು ದಾನಯುತ ವಾಣಿಯನು
ಈತನ ಸುಭಕ್ತಿಯನು ನಿಜದಭಿವ್ಯಕ್ತಿಯನು ಶೃತಿಪುರಾಣೇತಿಹಾಸ ||೨೦||

ಹರಪುರಾತನರೊಳಂ ನೂತನಗಣಂಗಳೊಳ
ಗೀರೀತಿ ಗುರುಭಕ್ತಿಯನು ಕಾಣಲಾಪಿರೆ
ಅರಿಯದಂತರವನಾವ್ಭಕ್ತರೆಂಬ ಹಮ್ಮಿನಿಂದಿರ್ದ ಕುಹಪಣವಲ್ಲವು ||
ಪರಿಕಿಸುವೊಡೆ ಮಕ್ಷಮಾ ಪಾತ್ರರೇ ನೀವು
ವರಕೃಪಾ ಪಾತ್ರನುಯೆಮ್ಮಯಾಜ್ಞೆಯನು
ಶಿರಸಾವಹಿಸಿ ಮಾಡಿದನು ನಿಮಗೀಯಾಜ್ಞೆಯಪಹಾಸ್ಯವಾಯ್ತೀಗಳೆ ||೨೧||

ನಮ್ಮಿಚ್ಛೆಯೊಳಗೆ ವರ್ತಿಪನಾತಂ ನೀವು
ನಿಮ್ಮಿಚ್ಛೆವಿರ್ದಂತೆ ವರ್ತಿಸುವ ರೀತಿಗಂ
ನಿಮ್ಮುಭಯದೊಳು ಪರ್ವತಾಣು ಪ್ರಮಾಣವಹುದೇ ವೇಳ್ವೆನಾಶ್ಚರ್ಯವು ||
ಗಮ್ಮನೀತಂ ಮಂಚಶೂಲವೆಂದರಿಯನು
ಸುಮ್ಮನೇರಿದ ನಮ್ಮ ವಚನ ಪ್ರಮಾಣದಿಂ
ಹಮ್ಮು ಬಿಮ್ಮುಗಳಿಲ್ಲದಚಲ ಗುರುಭಕ್ತನ ಪರಾಕ್ರಮವ ನೋಡಿರೆಲವೊ ||೨೨||

ಎಂದು ಗುರುಭಕ್ತನಂ ನೋಡಿ ನಿನ್ನಯ ಭಕ್ತಿ
ಇಂದುಧರ ಪ್ರಮಥರ್ಪುರಾತನರ ಕವಳಿಗಿದು

ಸಂದಿತ್ತು ಮಗನೆ ಬಾರೆಂದು ಕರುಣದಿ ಕರೆಯಲತಿ ಹರುಷದಿಂದಲಾಗ ||
ಚಂದದಿಂದ ಮಣಿಯ ಮೇಲೂರಿ ಹಸ್ತವ ನಿಗುರಿ
ಮುಂದಕ್ಕೆ ಹಾರಿ ನಗುತಂ ಬಂದು ಗುರುವಿನಡಿ
ಗೊಂದಿಸಿ ಸುಖಿಂ ಚಿತ್ತು ನೂರ್ಮಡಿಸಿ ನಲವಿನಿಂ ನುತಿಸಿದನು ಸಂಭ್ರಮದೊಳು ||೨೩||

ಗುರುವೆ ವರ ಪರತರವೆ ಭಕ್ತಕಲ್ಪದ್ರುಮವೆ
ಗುರುವೆ ನಿತ್ಯದ ಇರವೆ ಶಾಶ್ವತ ಸುಖಿಂ ಕರವೆ
ಗುರುವೆ ಶಿಷ್ಯರ ಮರೆವೆ ತತ್ ಕ್ಷಣದಿ ಪರಿಹರವೆ ಗುರುವೆ ಚಿದ್ರೂಪದಿರವೆ ||
ಗುರುವೆ ಭಕ್ತರ ಪೊರೆವೆ ಗುರುವೆ ನಿಜಸುಖದೊರವೆ
ಗುರುವೆ ದುರಿತ ವಿಹರವೆ ಪೂರ್ಣ ಕರುಣಾಕರವೆ
ಗುರುವೆ ದೀಕ್ಷಿತರ ದುಃಖವನು ಪರಿಹರಿಸಿ ಸುಖವನು ಪಾಲಿಸುವ ದೇವನೆ ||೨೪||

ಮಡಿಯ ದೆಸೆಯಿಂ ವಸ್ತ್ರ ಮೈಲಿಗೆಯ ತೆಗೆವಡದು
ಬಡಿವರಲ್ಲದೆ ಹರಿಯ ಬೇಕೆಂದು ಹೊಗೆವರೆ
ಸುಡುವರಾ ಪಂಚಲೋಹವನು ಪಂಚಾಳರದು ಮಲಿನ ತೆಗೆವನಿತ್ಯದಿ ||
ಮಡಕೆಯನು ಬಾರಿಸದೆ ಕೊಳ್ಳದಂದದೊಳು ತವೆ
ತಡೆಯದೆನ್ನಯ ಮರವೆ ದೋಷ ಕಳೆವೊಡೆ ತಾವು
ಮೃಡ ಮಹಾದೇವನ ಬಡಬಡಿದು ನೋಡುವಿರಲ್ಲದೆ ಮಡಿಯಲೇಂ ಬಡಿವಿರೊ ||೨೫||

ಎಂದು ಕೊಂಡಾಡುತ್ತಮಿಹ ಕಂದನಂ ನೋಡಿ
ಸುಂದರರದ ಮುಖ ಕಂದಿತೇ ಕುಂದಿತೇ ಮನವ
ಚಂದಗೆಟ್ಟಿತೇ ವದನ ಗಾತ್ರವದು ಕುಸಿಯಿತೇ ಬಸಿಯಿತ್ತೇ ಬಿಸಿರಕ್ತವ ||
ಮುಂದುವರಿದಾರಂಭ್ರದೋರಿತೆ ವ್ರಣಂ ತಾನು
ಸಂದಿತ್ತೆ ಜ್ಞಾನ ಪ್ರಕಾಶವದು ನಂದಿತ್ತೆ
ಬಂಧುರದೊಳಿಹ ಮಗನ ತೆಗೆದು ತೊಡೆಯಲ್ಲಿರಿಸಿ ಮುಂಡಾಡಿ ಕೊಂಡಾಡುತೆ ||೨೬||

ಇರಲುಳಿದ ಶಿಷ್ಯರದನರಿದು ಧೈರ್ಯವನುಳಿದು
ಕರಿವದನರಾಗಿ ಯುದ್ಧಟವಳಿದು ಮುದ ಕಳೆದು
ತೆರವನರಿಯದೆ ನಾವು ಮತ್ಸರಿಸಿ ನಿಂದಿಸಿದ ತಪ್ಪಿರುವುದೆಮ್ಮ ಪದದೊಳ್ ||
ನರಮಾತ್ರದವನಲ್ಲ ಸಾವಿರಾಡಿದರೇನು
ಕರಕರಿಯದೇಕೆದು ನಮ್ಮೊಳು ಬಿರುದು ಬಿಸುಟಿದೆವು
ಪರಮ ಗುರುವೇ ನಿಮ್ಮ ಚರಣಕೆರಗಿದೆವು ನಾವಿನ್ನಿವನ ದೆಸೆಗ್ಹೋಗೆವು ||೨೭||

ಎಂದು ವಂದಿಸಲಂದು ಕೃಪೆಯಾಗಿ ಪೊರೆದರಿದ
ರಂದವರಿವುತ್ತೆ ಸಜ್ಜನರು ಸದ್ಭಾವಿಗಳು
ಎಂದರಿಂತೆಂದಿದುವೆ ದೃಷ್ಟಿ ಪ್ರತ್ಯಯವಲಾ ಗುರು ಮಹಿಮೆಯಂತಿದೆಂದು ||
ಬಂಧುರ ಶೃತಿ ಸ್ಮೃತಿ ಪುರಾಣೇತಿಹಾಸಂಗ
ಳೆಂದನಗುಗೊರಧಿಕ ಶಿವಶಾಸನದ ವಾಕ್ಯ
ಇಂದುಧರ ರೂಪ ಗುರುವಾಜ್ಞಾನಲಂಪುಯೆತ್ತೆಂಬುದಿದು ಸತ್ಯಸತ್ಯಂ ||೨೮||

ಎಂದು ಬಹುಪರಿಯಿಂದ ಕೊಂಡಾಡುತಿರ್ದರದು
ಕಂದ ಕರಿಬಸವ ಕೇಳ್ಗುರು ಮಹಿಮೆ ಪೇಳುವಡೆ
ಇಂದುಧರಗರಿದೆನಲುಳಿದ ತ್ರಿಭುವನದ ಮಂದಿಯಿಂದಾಗಲುಂಟೆ ತಿಳಿಯೈ ||
ಸುಂದರಾಗಂಗನೆಯೆಂದು ಗುರು ಕೆಂಡಗಣ್ಣೊಡೆಯ
ರಂದು ಪೇಳಲ್ಕೇಳಿ ಮನದೊಳು ಮುದಂದಾಳಿ
ಚಂದದಿಂದಿಂತೆಂದನೆಲೆ ಗುರುವೆ ಗುರುಮಹಿಮೆ ಬಂಧುರದಿ ಪೇಳ್ದಿರೆನಗೆ ||೨೯||

ವರಶಿಷ್ಯರಾ ನಿರಾಕೃತ ಶಿಷ್ಯರೆಂದೆರಡು
ತೆರನುಸುರ್ದಿರದರಂದವಾವುದೆನಗರಿವಂತೆ
ಗುರುವೆ ಪೇಳುವುದೆನಲು ಕೇಳಿ ಸಂತಸದಾಳಿ ಅವರಿವರ ಪೇಳ್ವೆ ಕೇಳು ||
ಗುರುಭಕ್ತಿ ನಿರಹಂತೆ ನಿರಪೇಕ್ಷೆ ಸ್ಪೈರಣೆಯು
ಕರುಣ ಪರಿಣಾಮ ಸುಸ್ಥಿರಬುದ್ಧಿ ಪರಹಿತವು
ವರನಮಳನುರ್ಜಿತನದಲಿ ಶಾಂತನುರುಚಲಿಯು ಶುಚಿಧೀರನ ವಿಕಾರಿಯು ||೩೦||

ವಿರತ ಮೃದುವಾಗಿ ಸಾತ್ವಿಕನನುಪಮಾನಂದ
ಶರಧಿ ಮದ ಮತ್ಸರ ವಿದೂರ ಪದುಳಿಗನಾತ್ಮ
ಪರಮರತಿ ಸತ್ಯಗುರು ಪರಮೇಷ್ಠಿ ಗುರುಶೌರಿಗುರುವೆ ಗಿರಿಜಾಧಿಪತಿಯು ||
ಗುರುವೆ ಪರತತ್ವ ಗುರುವಿಶ್ವ ಗುರುವಾಕ್ಯವಡೆ
ವರವೇದ ಶಾಸ್ತ್ರಸ್ಮೃತಿ ಪೌರಾಣಯುಪನಿಷತ್
ಗುರುದೇವ ತೀರ್ಥ ಮಾತಾಪಿತೃ ಬಂಧು ಬಾಂಧವ ಸರ್ವವೆಂದು ತಿಳಿಯೈ ||೩೧||

ತನುಮನೋಧನಧಾನ್ಯ ವನಿತ ವಾಹನ ವಸ್ತ್ರ
ಇನಿತು ವಂಚನೆಯಿಲ್ಲದಿರಬಹುದು ಮತ್ತೆ ಕೇ
ಳ್ವಿನಯದಿಂ ಗುರುವಲ್ಲದಿತರರಾಶಯಗೈಯದಿರ್ವಾತ ವರಶಿಷ್ಯನು ||
ಮನವಿಡಿದು ಗುರುಸೇವೆ ವಿಶ್ವಾಸದಿಂದ ಮಾಳ್ಪ

ವನುವಿನಿಂ ಗುರುವಾಳ್ದನಾಳುವೆನಿಸಿರಲಹುದು
ಘನಗುರು ಸಮೀಪದೊಳ್ತೊರೆದಹಂಕೃತಿಯಿಂದಲಿರಲವನೆ ವರಶಿಷ್ಯನು ||೩೨||

ಇಂತು ಲಕ್ಷಣವಿರುವ ವರಶಿಷ್ಯ ನೀನು ಕೇಳ್
ಪಂಥದಿ ನಿರಾಕೃತರ ಲಕ್ಷಣವ ಪೇಳುವೆನು
ಸಂತ ಶ್ರೀಗುರುವಿನಂತಃ ಕರುಣವಿಲ್ಲದಲೆಯೇನನೋದಲು ನಿರರ್ಥ ||
ಕಂತು ಮರ್ದನರೂಪ ಗುರುವಿನೊಳ್ವಂಚನೆಯು
ಸಂತತಂ ಮರೆ ಮಿಥ್ಯತರ್ಕ ಪುಸಿ ನಿಂದೆಗಳು
ಎಂತಾದೊಡಂ ಇರ್ಪ ನರನಿಗೆ ನರಕ ತಪ್ಪದೆಂದು ಶೃತಿ ಶಾಸ್ತ್ರ ಪೇಳ್ಗು ||೩೩||

ಪ್ರತಿಕೂಲನಭಿಮಾನಿ ಮತಿಹೀನನಸ್ಥಿರನು
ಅತಿಮೂರ್ಖನತಿ ಪಿಸುಣರತಿಕನತಿಕ್ರೂರ
ನತಿ ಕ್ಷುದ್ರ ದುಸ್ಥಿತಿ ದುರಾಚಾರನಾಲಸ್ಯ ಪರಪೀಡನಿದ್ರಾಪರ ||
ಅತಿಖಳನಧಮ ಕೋಪಿ ಮನಹೀನದುಷ್ಟಚಲಿ
ಸತತ ಭಕ್ತಿ ವಿಹೀನ ಗುರುದೂಷ ಪುರುಷಾರ್ಥ
ನತಿಹೀನನುರುಲೋಭಿ ಮರುಳಧೂರ್ತನು ನಿರಸ ನಿಷ್ಠುರಾಲೋಪಚೋರ ||೩೪||

ಇನಿತು ದುರ್ಗುಣ ಸಮೂಹವನುಳ್ಳ ದುಃಶಿಷ್ಯ
ರನು ನಿರಾಕೃತರೆಂದು ತಿಳಿಯಬೇಹುದು ಮಗನೆ
ಘನಗುರುಗಳೊಳಗೆ ಭೇದವನುಂಟು ಪೇಳುವೆನು ಕೇಳು ಸದ್ಭಕ್ತಿಯಿಂದ ||
ಧನದಾಸೆಯಿಂ ಪರರಿಗೀ ಲೋಕದೊಳ್ಸುಖವ
ವಿನಯದಿಂ ದೇವ ಲೋಕ ನರಕದುಃಖವನೀವ
ನನುವಿನುಪದೇಶ ಪೇಳುವ ನಿಷೇಧನೆ ತಾನು ತಾಮಪ ಗುರುವದೆನಿಸುವ ||೩೫||

ಈ ಜಗತ್ರಯದೊಳಗೆ ರಾಜಿಸುವ ಸಾಮ್ರಾಜ್ಯ
ಭಾಜನವೆನಿಸುತಿರ್ಪ ಕಾಮ್ಯೋಪದೇಶವನು
ವಾಜಯಿಂದೊರೆಯಬಲ್ಲಾತ ರಾಜಸನೆಂದು ಪೇಳುತಿಹವು ಶಾಸ್ತ್ರಂಗಳು ||
ಸಾಜದಿಂ ಸತ್ವದಿಂದನುಪಾದಿಕತ್ವವಹ
ತೇಜದ ಮಹಾತತ್ವನೋದಲು ಮುಕುತಿ ಪದವ
ರಾಜಿಯಿಂದಾಗುವುದಿದೆಂದು ಪೇಳುವೆನೆ ತಾ ಸಾತ್ವಿಕನೆನಿಪ ಸದ್ಗುರು ||೩೬||

ಅಣಿಮಾದಿ ಪದವೀವ ಗುಣಯೋಗ ಮುಳಿದು ನಿ
ರ್ಗುಣ ಮುಕ್ತಿದೊರೆರುತಿರ್ಪಾತನೇ ಗುಣಗಂಧ

ಅಣೆಯರದೆ ಪರಮಗುರುವೆಂದು ತಿಳಿಯಲ್ಬಹುದು ಮತ್ತೆ ಪೇಳುವೆನು ಕೇಳು ||
ಮಣೆದಿರುವ ನಿರಭಿಮಾನಿಕನಚ್ಚ ಸುಖಿಪೂರ್ಣ
ತಣೆಯುನಖಿಳಜ್ಞ ಕರುಣಾಂಬು ನಿಧಿ ಬೋಧಪರ
ಮೇಣೆಚ್ಛೆದೋರದತಿ ಕೃತಕೃತ್ಯನೇ ಪರಮ ಸದ್ಗುರು ವರೇಣ್ಯನಿಹನು ||೩೭||

ದುಷ್ಟ ಗುಣಗಳ ದೂರಮಾಡಿ ಸದ್ಗುಣಗಳನು
ಶಿಷ್ಟದಿಂದಾಚರಿಸಲೆ ಸದ್ಗತಿಯದಹುದೆಂದು
ಶ್ರೇಷ್ಟ ಬೋಧೆಯ ಪೇಳುತಿರ್ಪಾತ ಸೂಚಕ ಸುಗುರುವೆಂದು ತಿಳಿಯಬಹುದು ||
ನಿಷ್ಠೆಯಿಂದಾಚಾರದಿಂದೊರ್ತಿಸುವ ನರನಿ
ಗಿಷ್ಟವಹ ಬ್ರಹ್ಮವತ್ತಾಚಾರವಲ್ಲನ್ಯ
ಸೃಷ್ಟಿವಿಲ್ಲೆಂದೊರೆಯ ಬಲ್ಲ ಗುರುವಾಚಕನದೆಂದು ಪೇಳುವುದು ಮುದದಿ ||೩೮||

ಪಾರಮಾರ್ಥಿಕ ನಿಷ್ಕ್ರಿಯಾತ್ಮಕ ಪರಬ್ರಹ್ಮ
ಸಾರತರವಾದ ನಿಜವೇ ನೀನೆಯೆಂದೆನಿಪ
ಪರಮ ನಿರ್ಗುಣಬೋಧೆ ಪೇಳುತಿರ್ಪಾತನೆಕಾರಕ ಸದ್ಗುರು ||
ವರಮಗನೆವಷ್ಟ ಭಾಗವದೆನಿಪ ಗುರುಭೇದ
ನಿರವಿಸಿದೆನಿನ್ನು ರಕ್ಷಿಸುವ ತಾಯ್ತಂದೆಗಳೆ
ಯಿರದೆ ರಕ್ಷಾಗುರುಗಳೆನಿಪಾರಾಶಾತಿಯೊಳು ಶೀಕ್ಷಿಪನೆ ಶಿಕ್ಷಾಗುರು ||೩೯||

ದೀಕ್ಷಾಕಾಲದೊಳು ಕುಲಗುರು ದೀಕ್ಷಿಸುವನಾಗಿ
ದೀಕ್ಷಾಗುರುವೆನಿಪನಾ ಮೋಕ್ಷದ ವಿಚಾರವನು
ಸಾಕ್ಷಿವೆನಿಪಾತ್ಮನಿರವದು ಪೇಳುತಿರ್ಪಾತನೆ ಮೋಕ್ಷಾಗುರುವೆನಿಕ್ಕು ||
ಯೀಕ್ಷಿತಿಯೊಳಿವು ನಾಲ್ಕು ಗುರುಭೇದವೆನಿಪವಿವು
ಸಾಕ್ಷಾದ್ವಿರೂಪಾಕ್ಷ ರೂಪನಹ ಗುರುಮಹಿಮೆ
ಯೀಕ್ಷಿಸಲ್ಪೇಳುವಡ ಸಾಧ್ಯವಿನ್ನೊರವೆ ಲಿಂಗದ ಮಹಿಮೆ ಕೇಳು ಬೋಧ್ಯ ||೪೦||

ಲಿಂಗವದು ಪರಮಾತ್ಮ ಪಾವನಂ ಪರಿಪೂರ್ಣ
ಲಿಂಗವದು ಸಚ್ಚಿದಾನಂದ ನಿತ್ಯವಖಂಡ
ಲಿಂಗವದು ಮಾಯಾ ಪ್ರಬಲ ಮೇಘಪಟಲ ಜಂಝಾವಾತ ದುರಿತದೂತ ||
ಲಿಂಗವದು ನಿರ್ದ್ವಂದ್ವ ನಿಷ್ಕಳಂಕ ನಿರ್ದೋಷ
ಲಿಂಗಂ ನಿರಾಕಾರ ನಿರುಪಮ ನಿರಾಧಾರ
ಲಿಂಗವದು ಭವಕುಜ ಕುಠಾರ ದುರ್ಗುಣದೂರ ಲಿಂಗವದೆ ಪರಬ್ರಹ್ಮವು ||೪೧||

ಲಿಂಗವನೆ ಪಂಚಮಹಾಪಾತಕವಳಿರುತಿಹವು
ಲಿಂಗವನೆ ಬಹುಜನ್ಮ ದೋಷನಾಶನವಹವು
ಲಿಂಗವನೆ ತಾಪತ್ರಯಾಗ್ನಿಯಾರುತಿಹುದು ಲಿಂಗವನೆಯಿಷ್ಟಪ್ರದ ||
ಲಿಂಗವನೆ ದುರ್ಗುಣ ದುರಾಚಾರ ಪರಿಹರವು
ಲಿಂಗವನೆ ದುರ್ಮಾರ್ಗ ದುಸ್ಸಂಗ ನಾಶನಂ
ಲಿಂಗವನು ಭಜಿಸಿ ಮುಕ್ತಿಯ ಹೊಂದಿದರ ಕಥೆಯ ಕೇಳೇಕಚಿತ್ತದಿಂದ ||೪೨||

ಸಕಲ ದೇಶದ ಶಿರೋರತ್ನವೆಂಬಂತೆಸೆವ
ಪ್ರಕಟ ಕುಂತಳ ದೇಶದೊಳ್ಬಾರತೀಪೀಠ
ಸುಕರ ಪಟ್ಟಣದರಸು ಪ್ರವರಸೇನನ ಸಖ ಸುವರ್ಣಭಟ್ಟಂ ಧನಿಕನು ||
ನಿಖಿಳ ಸಾಮ್ರಾಜ್ಯ ಸಂಪತ್ತು ಸೌಭಾಗ್ಯಗಳ
ನಿಕರದೊಳಗೊಯೀಶ್ರವಣನೆನಿಸಿ ರಾಜಿಸುತಿರಲು
ಸಖನಾದ ಪ್ರವರಸೇನನಿಗೆನಿತು ದ್ರವ್ಯಬೇಕಾದನಿತು ತಾನೀವುತೆ ||೪೩||

ಪ್ರವರಸೇನನ ರಾಷ್ಟ್ರವೆಲ್ಲವನೊತ್ತೆಯವಿಡಿ
ತವನ ರಾಜಪದತ್ವ ತಂದೆಯಾಗಿರಲಾಜ್ಞ
ರವದಿಂದ ನಡೆವುತಿರಲಿನವನೆಯರಸನೆನಿಸಿ ಸಕಲೈಶ್ವರ್ಯ ಭೋಗಿಸುತಿರೆ ||
ಯುವತಿಯರು ತಂತಮ್ಮಯ ಕಾಂತರಾಶ್ರೈಸು
ವವರಂತೆ ಪಕ್ಷಿ ವೃಕ್ಷಗಳಾನಾಶ್ರೈಸುವವು
ತವೆ ನದಿಗಳೈದೆ ಸಾಗರವನಾಶ್ರಯಿಪಂತೆ ಜನ ಕನಕವಾಶ್ರಯಿಪರು ||೪೪||

ಗ್ರ || ಯಥಾವಿಹಂಗಸ್ತರುಮಾಶ್ರಯಂತಿ
ಯಥಾ ತರುಣ್ಯಾಃ ಪತಿಮಾಶ್ರಯಂತಿ
ನದ್ಯೋಃಯಥಾ ಸಾಗರಮಾಶ್ರಯಂತಿ
ಸರ್ವೇಜನಾಃ ಕಾಂಚನಾಶ್ರಯಂತಿ ||೧||

ಯಾವನಾದರು ಲಕ್ಷ್ಮಿಪುತ್ರನಾದರೆ ಸಾಕು
ಭಾವಿಸುವರವನೆ ಕುಲಿಜನು ಪಂಡಿತನು ಗುಣಿಯು
ಪಾವನಾತ್ಮಜನು ಬಹುಶ್ರುತನವನೆವಿತ್ತವನ ದರ್ಶನವೆ ಪಾತ್ರವೆನಿಪರ್ ||
ಆವಾಗಿವನಂತು ವೈದಿಕ ಸ್ಮಾರ್ತ ಬ್ರಾಹ್ಮಣನು
ಸೇವಿಸುವರಿವನರ್ತಿಯಲಿ ಸಕಲ ಪ್ರಾಣಿಗಳು
ಕಾವ ತದ್ರೂಪ ಸತ್ಪುತ್ರ ಮಲುಹಣನಿರಲ್ಕವ ಸ್ವರ್ಗವಾಸಿಯಾದಂ ||

ಗ್ರ || ಯಸ್ಯಾಸ್ತಿ ವಿತ್ತಂ ಸನರಃ ಕುಲೀನಃ
ಸಪಂಡಿತಾಸಶ್ರುತ್ವನುಗುಣಜ್ಞಃ
ಸ ಏವ ವಕ್ತಾಸಚ ದರ್ಶನೀಯೆ
ಸರ್ವೇ ಗುಣಾಃ ಕಾಂಚನಮಾಶ್ರಯಂತಿ ||೨||

ರಾಜರಾಜನೆನಿಪ್ಪ ಪೆಸರು ಧನಪತಿಗಿಹುದು
ಓಜೆಯಿಂದೀ ಮಲುಹಣನು ಧನಾದಿಪನಹನು
ರಾಜಿಯಿಂ ಪ್ರವರಸೇನನು ಕೆಲವು ಪಳ್ಳಿಗಳ ಜಾಗೀರಗಳನಿತ್ತಿಹನು ||
ಮೋಜಿನಿಂ ಚತುರಂಗ ಬಲವಮಾತ್ಯರಸಹದಿ
ಸೋಜಿಗದೊಳತ್ಯಧಿಕನೆನಿಸಿ ರಾಜಿಸುತಿರ್ಪ
ಭೂಜನರೊಳಿವನ ಸರಿದೊರೆಗಳಾರುಂಟೆಂದು ಸರ್ವರುಂ ನುತಿಸುತಿರಲು ||೪೬||

ರೂಪ ಯೌವನ ವಿದ್ಯ ಕವಿತಾಧಿಕಾರಜ
ಭೂಪತಿ ಪರಾಕ್ರಮ ಪವಿತ್ರ ವಿನಯಾಲಾಪ
ತಾಪತ್ರಯಾಪಹರ ವಷ್ಟ ಭೋಗ ಪ್ರಣೀತ ಜಾತಿಸೂನೃತ ವಾಕ್ಯನು ||
ನಿಪುಣತ್ವ ಬಲುನೀತಿ ಛಲಶೀಲ ಕಲೆ ಶೌಚ
ಕೋಪತಾಪ ವಿಲೋಪವಗಾಡಿಗರುವತನ
ಈ ಪರಿಗಣಂಗಳಿಂದಾ ಪರಮ ಮಲುಹಣ ಮಹಾಕವಿಪನೊಪ್ಪುತಿರಲು ||೪೭||

ಯೋಗದೊಳಗಿಂದ್ರ ಬಲು ಶಾಂತಿಯೊಳ್ಚಂದ್ರಮಿಗೆ
ತ್ಯಾಗದೊಳ್ ಕರ್ಣಾಬಲು ಧೈರ್ಯದೊಳ್ಧರೆಯು ಸ್ತ್ರೀ
ಭೋಗದೊಳ್ ಕಾನು ಬಲದೊಳ್ಭೀಮ ತೇಜದಿಂ ಮಧುಮಾಸದಾದಿತ್ಯನು ||
ವೇಗದೊಳ್ವಾಯು ಸಂಪತ್ತಿನಿಂದೋಯಿಶ್ರವಣ
ರಾಗದೊಳ್ಸಗರ ಚತುರತೆಯೊಳ್ ಬೃಹಸ್ಪತಿ
ಯೋಗದೊಳೆತಿಗಳಿಗೆ ಸಮನೆನಿಸಿ ಮಲುಹಣ ಮಹಾಕವಿಪ ನೊಪ್ಪುತಿರಲು ||೪೮||

ಒಂದು ದಿನ ಕರಿ ತುರಗ ರಥ ಪದಾತಿಗಳೊಲಿದು
ಚಂದದಿಂ ಶೃಂಗರಿಸಿ ವಾಹ್ಯಾಳಿಗಂ ಪೋಗಿ
ಬಂಧುರದೊಳಂ ಬರುತ್ತಿರುವಾಗಳಾಪೂರ ಸೂರ್ಯ ಚಂದ್ರವೀಥಿಯೊಳ್ ||
ಹೊಂದಿಜನ ನೋಡುತಿರೆ ವೇಶ್ಯಾವಾಟಿಯೊಳು ಬಹು
ಸುಂದರದ ರೂಪಯೌವನ ವಿದ್ಯಾ ವಿನಯದಿಂ
ಸಂದಿಬಹುಮಂದಿಯೊಳ್ನಕ್ಷತ್ರದೊಳ್ಚಂದ್ರನಂದದೊಳೊಪ್ಪುತಿರಲು ||೪೯||

ಬಾಲಪ್ರಾಯದ ಮಲುಹಣೆಯ ವರದ ಚಂದ್ರಕಲೆ
ಮೂಲಪ್ರಾಯದ ಮಲುಹಣನ ಚಿತ್ತ ಶಶಿಕಾಂತ
ಶಿಲೆಯ ಸ್ಪರ್ಶನವಾಗಲದು ಕರಗಿ ಮದನ ಬಾಣಕ್ಕೆ ಗುರಿಯಾಗಲೊಡನೆ ||
ಮಲಮಲನೆ ಮರುಗಿ ಮನಿಗಂ ಪೋಗಿಯೊಳ್ಗಳನು
ಸಲೆಕಳುಹಿ ಕರಸಿಯನುಮತಿಗೈಸಿ ಸಂತಸದಿ ಜಲಜಶರಯುದ್ದ
ದೊಳ್ಪರಿಣಮಿಸಿಹಗಲಿ ಕುಳುವುದೆ ವ್ಯಸನವಾಗಿರಲ್ಕೆ ||೫೦||

ಉಡುರಾಜಮುಖಿ ಮೃಗಮಹಾರಾಜ ಕಟಿಯರಿಗೆ
ತಡೆಯದೆ ಮತಂಗಜ ಮಹಾರಾಜ ಗಮನಿಯರ
ನೋಡಿದಾಕ್ಷಣಯತಿಯು ಜಡೆಮುಡಿಗಳಂ ಕೀಳ್ದುವವರೊಡನೆ ಕೂಡುವರೆನೆ ||
ಜಡಮತಿಯ ನರರ ಪಾಡೇನಿವನು ಮಂಡಲೀಕ
ಸಡಗರದ ರೂಪ ಯೌವನ ವಿದ್ಯ ಧನ ಕವಿತೆ
ಪಡೆದವನಿವನು ಮಡದಿಯರಿಗೆಳೆಸದಿರ್ಪನೇ ವೊಡನೊಂದಿ ಸುಖದೊಳಿರಲು ||೫೧||

ಗ್ರ || ಉಡುರಾಜಮುಖಿ ಮೃಗರಾಜ ಕಟಿ
ಗಜರಾಜ ವಿರಾಜಿತ ಮಂದಗತಿ
ಯದಿಸಾ ವನಿತಾ ಹೃದಯೆ ನಿವಾಸೆ
ತ್ವ ಜಪಃ ತ್ವ ತಪಃ ತ್ವ ಸಮಾಧಿ ವಿಧಿಃ ||೩||

ತಾಯಿ ತಂದೆಗಳು ಮಗನಿಗೆ ಮನೆವೊಳಗೆ ದ್ರವ್ಯ
ಸೋಯಿಯಂ ಸಂಗ್ರಹಿಸಿದದನು ವೆಣಿಸಿರೊಡೆದಿನ
ವಾಯವಾಗದೆ ವೆಚ್ಚಿಸಿದೊಡೆ ದಿನವೊಂದಕ್ಕೆ ಸಾವಿರದ ಪೊನ್ಗಳವನು ||
ಆಯುಷ್ಯ ಪೂರ್ಣವಹ ಪರಿಯಂತವಾಗುವೊಲು
ಪಾಯದಿಂದವೆ ಮಲುಹಣೆಯ ತಾಯಿ ತರಿಸಿಕೊಳೆ
ಕಾಯವೊಂದಲ್ಲದುಳಿದಿಲ್ಲದೆಯಿರಲುವೆಸಿ ಮಂದಿರವೆ ಮನೆಯಾಗಲು ||೫೨||

ವೇಶಿಯರ ಸಂಗ ಧನಹಾನಿ ದಾಸಿಯ ಸಂಗ
ಮೋಸದಿಂ ಕುಲನಾಶ ವಿಧವೆಯವನ ಸಂಗವಾ
ಯುಷ್ಯಹಾನಿಯು ಪರರ ಸಂಗದಿಂದವೆ ಸರ್ವಹಾನಿಯಹುದಿದು ಸಿದ್ಧವು||
ಸೂಸುತಿಹ ಸಂತೋಷದಿಂದವಳ ಮನೆವೊಳಗೆ
ಶಾಸನವೆನಿಸಿ ಸರ್ವರಂಗೂಡಿ ಸುಖಮಿರಲು
ಪೂಸರ ನಿಹತಿಗೆರದೆಯೊಡಲಿತ್ತು ನಾಟ್ಯಶಾಲೆಯೊಳಿರುವ ಶುಕನಿಗಾಗ ||೫೩||

ಗ್ರ || ವೇಸ್ಯಾಗ ಮನಂ ಧನಂ ಹಂತಿ
ದಾಸಿಗಮನಂ ಕುಲಕ್ಷಯಂ
ವ್ಯರ್ಥವಾನಾಂ ಆಯುಷ್ಯ ಹಂತಿ
ಸರ್ವಹಂತಿ ಪರಸ್ತ್ರೀಯ ||೪||

ವಿದ್ಯವನು ಪೇಳುತ್ತೆ ಕಾಮಶಾಸ್ತ್ರವನೋದಿ
ಸದ್ಯದೊಳು ಮಲುಹಣಿಗೆ ಬೋಧಿಸುತೆ ಮನೆವೊಳಗೆ
ಉದ್ಯಮಂದಾವುದಾದರು ಹೆಚ್ಚು ಕುಂದೆನ್ನದಾಗಲುಂ ಮಾಡುತಿರಲು ||
ವಿದ್ಯಮಂ ಬಿಟ್ಟು ರಾಜರ ರಾಜಕಾರ್ಯವನು
ಚೋದ್ಯವಾಗಿಯೆ ರಾಷ್ಟ್ರದೊಳಗಿಂತು ವರ್ತಿಸಲು
ಗುದ್ಯಾಟವೇಕೆಂದು ಮನೆಯವರಿವನ ಸುದ್ದಿಬಿಟ್ಟು ನಿಶ್ಚಿಂತವಿರಲು ||೨೪||

ಮಲುಹಣಿಯ ಮನೆವೊಳಗೆ ಬಹುದಿನವಿರಲ್ಕಿಂತು
ಕಲಹ ಪ್ರಿಯಳಿವಳ ತಾಯಿ ಪದ್ಮಾವತಿಯು
ನೆಲೆಯಗಾಣೆನು ವಿಚಿತ್ರತೆಯದೆಂತೆನಲು ಪೇಳುವೆ ಕೇಳು ಕರಿಬಸವನೆ ||
ನೆಲಕೆ ಗಗನಕೆ ಸೂತ್ರವಿಡಿವಳಂ ಬಿಲದೊಳಗೆ
ಸುಲಭದಿಂದ್ಹೊಸೆದು ನವನೀತಮಂ ತೆಗೆವುತಿಹ
ಳೊಲವಿನಿಂದಾ ಮರೀಚಿಯ ಜಲವನೀಂಟುವಳು ಹಿಡಿದೊನಕೆ ಚಿಗಿಸುವಳು ||೨೫||

ಕಾಲಿಲ್ಲದವನಿಗೋಡಲ್ಕೆ ಕಲಿಸುತಿಹಳು
ಜಲವನೊಕ್ಕುಡುತೆಯೊಳು ತೇಲಿ ಮುಳುಗುತ್ತಿಹಳು
ಮಳಲವನು ಹೊಸದು ಸರವಿಯು ಮಾಡುವಳು ಹಗಲನಿರುಳು ಯಿರುಳುವೆ ಹಗಲವು ||
ಸಲೆ ಮಾಡುವಳು ಗಗನದೊಳ್ಚಿತ್ರ ಲಿಖಿಸುವಳು
ಸುಲಭದಿಂದಾ ಕಾಶವೇ ರೂಪ ಮಾಡುವಳು
ಜಲಜ ವಾಕಾಶದೊಳಗೆತ್ತುವಳು ಸುರಚಾಪವೇರಿಸುವಳಾ ಗೊಂಬೆಗೆ ||೨೬||

ಪ್ರಾಣವನು ಕೊಡುವಳಾ ಶಿಲೆಯೊಳಗೆ ನಾರವನು
ಜಾಣೆ ತೆಗೆವಳು ಗಾಳಿಯನು ಗಂಟನಿಕ್ಕುವಳು
ಮಾಣದಾ ನೇತ್ರದೊಳಗಿಹ ಬೊಂಬೆಯಿಂ ಸಾಜ್ಞಾ ಮಾತುಗಳನಾಡಿಸುವಳು ||
ತಾಳದೊಳಗಾ ಮಿಂಚುಹೊಳೆಯಲು ಸೆಳೆಯುತಿಹಳು
ಪಾಣೆಯಿಂದಾಕಿ ಕಲ್ಲಳಮಾಲೆ ಪವಣಿಸುತೆ
ಕಾಣುವಳು ಕೊರಳೊಳಗೆ ಹಾಕಿ ನಲಿವುತ್ತಿಹಳು ನೀರವನು ಸೀಳುತ್ತಿಹಳು ||೨೭||

ಬೆಳದಿಂಗಳವನಂಬರವ ಮಾಡಿ ಪೊದೆಯುವಳು
ಹುಲಿಯ ಗಿಣ್ಣವ ಮಾಡಿ ಮಾರುವಳು ವಿಪಣಿಯೊಳು
ಸಲೆ ಕುರುಡನಿಂದೋದಿಸುವಳು ಪತ್ರವ ಮಂಜು ಬಳ್ಳದಿಂದಳಸುತಿಹಳು ||
ಲಲನೆ ತನ್ನಯ ನೆಳಲನುಲ್ಲಂಘಿಸುವಳು ತಾ
ಬಲುವಿನಿಂದ ಸತ್ತು ಹುಟ್ಟಲು ಬಲ್ಲ ಜಾಣೆಯಳು
ಮಲಹರಾತ್ಮಕ ಭಕ್ತ ಮಲುಹಣನು ನಂಬಿರಲ್ಕೊಂದು ದಿನವವನಿಗಾಗ ||೫೮||

ಕೂಡೆ ದಿಟ್ಟಿಸಿ ನೋಡೆ ತಾನೆಂದಳಣಕದಲಿ
ರೂಢಿಸಿದಾ ಕವಿತ ಪ್ರವೀಣ ಮಾತಿನ ಜಾಣ
ನಾಡೊಳಗೆ ನಿನಗೆ ಸರಿಯಾದ ಧನಿಕನದಾರುವಿದರೊಳಗೆ ಪ್ರೌಢನೀನು ||
ಜಾಡರೊಲ್ಕರವ ಝಾಡಿಸಿ ಕೊಳುತೆ ಬರುತಿಹೆಯು
ಬೇಡೆಂದರುಂ ಕೇಳಿ ಬೇಡಿದುದು ತಂದೀಯೆ
ನಾಡಮಾತುಗಳೇಕೆ ನಿನ್ನ ಕೂಡಿದ ಮಗಳು ಮಾತ್ರಾರನುಂ ಬಲ್ಲಳೋ ||೫೯||

ಸೂಳೆ ಸದನದ ಮುಂದೆ ಆನೆ ಕಟ್ಟಿದರೇನು
ಕೇಳಸಲ್ಲದೆ ಮೂರು ಗಳಿಗೆಯಿರ್ದಡೆ ಸಾಕು
ಜಾಳಮಾತುಗಳೇಕೆ ಪ್ರಾಯವಿರುವುದರೊಳಗೆ ಧನವ ಸಂಗ್ರಹಿಸಬೇಕು ||
ಮೂಳನಾದೊಡೆ ವಿಟರು ಕೇಳುವರೆ ಮುಂದಿರಲು
ಹಾಳು ಮಾಡಿದಿ ನಮ್ಮ ತೂಳಗ ವಿಟನು ನೀನು
ಹೂಳಿರ್ದ ದ್ರವ್ಯವನೆನಿತುಯಿರ್ದಡುಂ ತಾನು ಸಾಲುವುದೆ ಕುಂತುಣ್ಣಲು ||೬೦||

ಬಲ್ಲೆ ಚಿಕ್ಕಂದಿನಿಂ ನೀನಲ್ಲದಿನ್ನೋರ್ವ
ನಲ್ಲನಂ ನೋಡಿದೊಳೆ ಮಾತಾದೊಡಾಡಿದಳೆ
ಬುಲ್ಲವಿಸಿ ಕೂಟಮಂ ಕೂಡಿದಳೆ ಧನವನಾರ್ಜಿಸಿದಳೆ ಸ್ವಲ್ಪಾದರು ||
ವಲ್ಲಭನ ಮಾಳ್ಕೆಯಿಂ ನಿನ್ನ ಕೂಡಿಹಳು ತಾ
ಸಲ್ಲುವುದೆ ನಿನಿಗಿಂತು ನಮ್ಮ ಧರ್ಮವದಹುದೆ
ನಲ್ಲಳು ನಿನಗೆ ಮೆಚ್ಚಿ ಮರುಳಾಗಿಯೊಲಿದುದೇ ತಪ್ಪವೆ ಪೇಳ್ಮಲುಹಣ ||೬೧||

ನಿನ್ನಯ ಧನಿಕತ್ವವೆನ್ನಯಗಳಗೆ ಭತ್ತಹುದೆ
ನಿನ್ನ ಕವಿತಾ ಪ್ರೌಢಿರನ್ನ ತೊಡುಗೆಗಳಹುದೆ
ನಿನ್ನವಳು ನುಡಿಗಡಣ ಹೊನ್ನಜಾಳಿಗೆ ವಹುದೆ ನಿನ್ನ ಭಕ್ತಿಯದು ನಮಗೆ ||
ನನ್ನಿಸುಗತಿಯು ಮಾರ್ಗವಹುದೆ ನಮಗದು ಮತ್ತೆ

ಸನ್ನಿ ಹಿಡಿದವರಂತೆ ತಿರುತಿರುಗಿ ಬಂದಪೆಯು
ಮನ್ನಿಸಿದೊಡಂ ದೈವಮಿಲ್ಲದೊಡೆ ಕಲ್ಲೆಂಬ ಗಾದಿ ಮಾತುಗಳನರಿಯ ||೬೨||

ಎಲ್ಲ ಬಿಟ್ಟಿಯ ತೆರದಿ ಸೂಳೆಗಿರುವುದೆ ಬಿಟ್ಟಿ
ಸಲ್ಲದಿದು ಸರಿನಿನ್ನ ಸಲಿಗೆ ಸಾಕಿನ್ನು ನಡೆ
ಪುಲ್ಲನಯನಿಗೆ ಕೊಟ್ಟು ಕೊಟ್ಟಾರಿತೆದೆಯು ಎನಿತೆಂದೊಡಂ ನಾಚಿಕೆ ||
ಇಲ್ಲ ನಿನಗಿನಿತಾದೊಡಂ ಸತಿಯಳಾಸೆಯನು
ತಲ್ಲಣಿಸಿ ಬಿಡೆ ಬೀಯಕೆಮಗಿಲ್ಲ ಹಬ್ಬಗಳಿ
ಗುಲ್ಲಸದೊಳಂ ನಿನಗೆ ಮೀಸಲಿರಿಸಿದ ತೆರದಿಯಾಯ್ತಿ ಮಗ ಮೊನ್ನೆಪರ್ವ ||೬೩||

ಬಂದಿತಾ ವೀರಭದ್ರನ ಜಾತ್ರೆಗಂ ಸತಿಯ
ರೊಂದಿ ಪೋಗುತ್ತಮಿರೆ ಕೇಯೂರಮಂ ಸುತೆಯು
ಬಂದು ಮಾರುತ್ತೆ ಜಾತ್ರೆಗೆ ವೆಚ್ಚ ಮಾಡಿದಳು ಮೌಕ್ತಿಕಾಹಾರ ಮತ್ತೆ ||
ಚಂದದಿಂ ವಿಕ್ರೈಸಿ ಶಿವರಾತ್ರಿ ಹಬ್ಬವನು
ಬಂಧುರದೊಳಂ ಮಾಡಿದಳು ವಸಂತೋತ್ಸವಕೆ
ತಂದುನೆವೂರವತ್ತೆಯನಿಟ್ಟು ಮಾಡಿದಳು ಗುರುಪೂಜೆಯಂ ಮುದದೊಳು ||೬೪||

ಒನ್ನೆನೇವಳವನೊತ್ತೆಯಿರಿಸ ಶಿವಗಣಕ್ಕೆ
ಮನ್ನಣೆಯೊಳಾರಾಧನೆಯ ಮಾಡಿಸಿದಳೊಲಿದು
ಸನ್ನುತದಿ ಕರ್ಣಾವತಂಸನೊತ್ತೆಯನಿಟ್ಟು ನೂಲಹಬ್ಬದ ಮಾಡಳೆ ||
ಪನ್ನತಿಯೊಳ್ಪದಕ ಮಾರಿ ದೀವಳಿಗೆಗೆ ಪೊಸ
ಉನ್ನತಿಯೊಳಂ ದೀಪಕಂಭವನು ಮಾರಮಣ
ಗಿನ್ನು ಎತ್ತಿಸಿದಳಲ್ಲಾಯೀಗ ಶಿವರಾತ್ರಿಯ ದೆಹಲಿಯ ಹಗೆ ಬಂದುದು ||೬೫||

ಕಳುಹಿದಳುಪಾಯ ಪಟ್ಟವನು ವಿಕ್ರೈಸಲಿಕ್ಕೆ
ಪಲವ ಸಾಲವದಾಯ್ತಿದೆಂದಿಂಗೆ ಕೊಟ್ಟಪೆವು
ಸಲೆಮನೆಯ ದ್ರವ್ಯವೆಲ್ಲವನಿಂತು ನೀಗಿದೆವು ಹೀಗಾದ ಬಳಿಕಲೆಮ್ಮ ||
ಬಲವ ತೀರಿದ ಬಳಿಕವೀ ಋಣವ ಮುಟ್ಟುವುದೆ
ಕಲಹವೇತಕೆ ಜಾತಿವಂತನಾದೊಡೆ ಸಾಜ್ಞೆ
ಯೊಳಗರಿಯ ಸರಿವುದುತ್ತಮಗುಣವು ನೀಪೇಳ್ವ ಮದನಕಲೆಗಳನು ನನ್ನ ||೬೬||

ಸುತೆಯ ಪರಿಯಂಕದಡಿಯಲಿ ಕಟ್ಟಿಸುವೆ ನಿನ್ನ
ಪ್ರೀತಿ ಗೀತೆಯು ಕೊಡುವಗಿಡುವದನು ಸಾಕಿನ್ನು

ಅತಿಶಯದ ಮಾತುಗಳವೇಕೆಂದು ಮೂದಲಿಸಿ ನಾಚಿಸಾ ಮಲುಹಣನನು ||
ಖತಿಯಿಂದೆ ತೊಂಡನಿಕ್ಕುತೆ ಭಂಡಗೆಯ್ಯುತಲಿ
ಮತಿಯ ವಿಭ್ರಮಿಸಿ ನೂಂಕಿಸಿ ಮತ್ತೆಯೋರ್ವನನು
ಪತಿಕರಿಸಿ ಮಂಡಲೇಶನ ತಂದು ಸುತೆಯಳೆಡೆಗವನ ಕಳುಹಲು ಮಲುಹಣಂ ||೬೭||

ವಿರಹಾಗ್ನಿಯಂ ಮಡಿಸಿ ತನ್ನ ತನು ಧರ್ಮಗಳ
ತೊರೆವುತ್ತೆ ಮದನ ಶರ ಕತಿಗೆದೆಯ ನೀವುತ್ತೆ
ಸ್ವೈರಣೆಯದಿಲ್ಲದ್ದಗಲಿರುಳು ವೇಶ್ಯೆಯಳ ಭಾವಾತಿರೇಕವನೆನವುತೆ ||
'ಪರಶಿವನ ನೆನೆವ ಯೋಗೀಂದ್ರನಂದದಲಿ ತಾ
ನುರವಣಿಸಿ ಮುನ್ನವಾ ಸ್ತ್ರೀಯೊಳೊಲಿಸುವ ಭಾವ
ವನು ವಿನಯದೊಳುಸ್ಮರಿಸಿ ವಿಕಳತೆಯಗೊಂಡು ಸನ್ನಿಯವಿಡಿದ ಮನುಜನಂತೆ ||೬೮||

ಪವಳದುನ್ನತ ವೋಷ್ಠನವ್ಯ ಮೃದುವನ್ನೆನವ
ಯುವತಿ ಶೃಂಗರಿಸುವತಿ ಚೇಷ್ಟೆಭಾವವನು ನವ
ಸವಿಮಾತುಗಳ ಮನೋಹರ ರೂಪಲಾವಣ್ಯಕಾಮತೆ ಕಲೆಗಳನು ನೆನೆವಂ ||
ತಲೆಯೊಂದುಗೂಡುತಿಹ ಮಮತೆಯಿರವನೆ ನೆನೆವ
ನವಕದಾಸ ರಸದೊಯ್ಯಾರದಂಗಚ್ಛವಿಯ
ನವಿರತಾಲಿಂಗನಾದಿಗಳ ನಿಬಿಡಸ್ತನವ ನಿಮ್ನನಾಭಿಯನು ನೆನೆವಂ ||೬೯||

ಗಿರಿಯೆನಲ್ಕೊಪ್ಪುತಿಹ ಹೊರವಾರಗಳ ನೆನೆವ
ಸರಿಸಾಗಿ ಮಿಸುಪ ಕಬ್ಬಿನ ಭಾಷೆಯಂ ಸ್ಮರಿಪ
ಹರಿಯ ಕಟಿಯಂತೊಪ್ಪುತಿಹ ಮಧ್ಯರಂಬೋರು ಸುರತ ಸಂತಸವ ನೆನೆವಂ ||
ಕರಿಗಮನವೆಳೆವೆರೆಯದಳಿಕವಂ ಭಾವಿಸುವ
ವರನೀಲದಳಿಯಂದದಳಕ ಭಾವಂ ನೆನೆವ
ಕರಿಯುರಗನಂತೆಸೆವ ವೇಣಿಯೊಪ್ಪುವನೆ ನವಕುಡುತೆಗಂಗಳ ನೆನೆವಂ ||೭೦||

ಸಂತಸದ ಸಮಯದೊಳಗಂಗ ಪುಳಕಂ ರೋಮ
ನಿಂತಿರುವ ಭಾವ ಭಾಷ್ಪೋದಕಂಗಳ ನೆನೆವ
ತಂತಿಯಿಂ ಚರಮೃದಂಗಾದಿ ನಾದದಿಲ್ಸೆಪ ಸ್ವರರಾಗಗಳನು ನೆನೆವಂ ||
ಚಿಂತೆಯಿಲ್ಲದೆ ವಿನೋದಿಪ ಕಾಮ ಕಲೆಗಳನು
ಮಂತಣದಿ ಮಾಡುತಿಹವಳು ನುಡಿಗಳಂ ನೆನೆವ
ಕಂತುಹರಗುರು ಚರರಿಗಷ್ಟವಿಧದಿಂದರ್ಚಿಪಾನಂದ ಭಾವ ನೆನೆವಂ ||೭೧||

ಗಂಧದುಶ್ವಾಸ ಘ್ರಾಣದ ಕಂಪು ಸ್ವರದಿಂಪು
ಸುಂದರರದ ಮುಖದ ಕಾಂತಿಯ ಕೆಂಪುನವಿರ್ಗೆಂಪು
ಚಂದವಾಗಿಹದಂತ ಮಧ್ಯದಿರವಿನ ಕೆಂಪುಕದನಗಳ ನಸುಗೆಂಪವು ||
ಕಂಧರದ ಕಂಬು ತ್ರಿರೇಖೆಯಂಗ ಸುರೇಖೆ
ಅಂದವಾಗಿಹವಂಗಶಾಕೆ ಚತುರತೆ ವಾಕ್ಯ
ಕುಂದದಂತಾ ಮಲುಹಣೆಯ ದೇಹ ಕಲೆಕುಶಲ ಗುಣಕಾರ್ಯಗಳ ನೆನೆವುತೆ ||೭೨||

ವಿರಹತಾಪದ ಕೂಪದೊಳ್ಮುಳುಗಿಹ ವಸನ ತೃಷೆ
ಮರೆದ್ದುಚ್ಚನೊಲ್ಕುಡಿಯಲ್ಲುಚ್ಚ ನೆನಿಸದು
ಸುರೆಯು ವರವಧುವ ನೋಡಿ ನುಡಿಸಿದನೆ ಸದರಂ ಹುಚ್ಚುಗೊಳಿಸುತಿಹುದೇನೆಂಬೆನು ||
ಇರದೆ ಮಲುಹಣನು ಕಾಂತಾ ವಿಯೋಗನಲದೊ
ಳುರಿವುತುಪ ತಾಪಿಸುತೆ ಧೃತಿಗುಂದಿ ಮಾನವಂ
ಪಿರಿದು ಹೋಗಾಡಿಯಳಲುತ್ತೆ ಮಲುಹಣೆಯ ಮಾತುಗಳನಾದೊಡೆ ಕೆಲವುದು ||೭೩||

ಕೇಳಿದಲ್ಲದೆ ತಳುವಿದೊಡೆ ತನ್ನೊಡಲ ಜೀವ
ನಿಲಲರಿಯದೆನುತೆ ಮಲುಹಣೆಯ ಕೇಳೆಯ ಮನೆಯ
ಕೀಳಿನೊಳು ಬಂದು ನಿಲ್ಲುತಲಾಕಿ ಧ್ವನಿಯನಾಲಿಸುತಿರ್ಪ ಸಮಯದೊಳಗೆ ||
ಮೇಲು ಮಂದಿರದೊಳಾ ಮಂಡಲೇಶನ ನೆರವು
ತೊಲವಿನಿಂ ಸ್ಮರಸುಖವನಿತ್ತನಿತುವೇದ್ಯರಲಿ
ಜಲವ ಮುಕ್ಕುಳಿಸಿಯುಗುಳಲು ಕಿಟಕಿ ದ್ವಾರದಿಂದವನಂಗದೊಳ್ಬೀಳಲು ||೭೪||

ಉರಿವಗ್ನಿಯೊಳ್ನೀರ ಬೀಳಲುರಿನಂದುವೊಲು
ವಿರಹಾಗ್ನಿ ತವಿಸಿ ಮಲುಹಣೆಯಂದು ನುಡಿಯಲ್ಕೆ
ಮರೆದು ಕಾವಳದೊಳಗೆ ಮಲುಹಣನೆ ಬಂದನೆಂಬನಿತದೊಳು ಮಿಂಚಲಾಗ ||
ಪರಮ ಮಲುಹಣನ ರೂಪವ ಕಂಡು ಕೆಳಗಿಳಿದು
ಅರಿಯದಾ ತೂಪಿರಿಯಲದು ನಿಮ್ಮಾಲಯದೊಳಗೆ
ಪಿರಿದು ಬೀಳಲ್ಕಂಜಿ ಬಂದೆನೀ ತಪ್ಪ ಮನ್ನಿಸಿ ಪೊರೆವುದೆಂದೆರಗಲು ||೭೫||

ಚಂದ್ರವದನಿಯೆ ನಿನ್ನ ನುಡಿಗೇಳದೆನ್ನ ಮನ
ನಿಂದ್ರಲಾಗದುಯೆಂದು ನಿನ್ನ ಮನ ಕೇಳದೊಳು
ನಿಂದ್ರಲೀ ಮುಖ ಚಂದ್ರಬಿಂಬ ಕಂಡೆನು ತರುಣಿ ಜೀವಿಸುವುದಿನ್ಯಾತಕೆ ||
ರಂಧ್ರವಾದವು ಕಾಯ ತುಂಬಿ ನಿನ್ನಯ ಮಾತೆ

ರುಂದ್ರ ವಾಕ್ಯಾಳಿ ಶರಹತಿಗಿನ್ನು ಬಾಳುವೆನೆ
ನಿಂದ್ರುಯಿನ್ಯಾತಕೀ ಸರಸವಾಕ್ಯವ ನಾನು ಪೋಗಿಮ್ಯತವಪ್ಪೆನೆನಲು ||೭೬||

ಈ ವಚನವನು ಕೇಳಿ ಕಳವಳಗೊಂಡು ಸತಿ
ತವೆ ಚರಣಕೊಂದಿಸಿಯು ಮನೆಯೊಳಗೆ ಕರೆದೊಯ್ದು
ಸವಿನುಡಿಗಳಾಡಿ ಗಂಧೋದಕದಿಂ ಮೈದೊಳೆದು ಹೊಸ ವಸ್ತ್ರವನು ಹೊದಿಸುತೆ ||
ನವಗಂಧ ಲೇಪನಂಗೈದು ಮಾಲೆಯ ಧರಿಸಿ
ಶಿವಶಿವಾಯಿಂತವಪರಾಧ ಘಟಿಸಿತೆ ನನಗೆ
ನೀವಿರ್ದು ನಾನೆ ಸತ್ತೊಡೆ ಪರಮ ಸಂತೋಷವೆನಗುಭಯ ಸಂಕಟವಿದು ||೭೭||

ಹಡೆದ ಮಾತೆಯವಾಜ್ಞೆಯನು ಮೀರುವೆವೆ ನಾನು
ತಡೆಯದೀ ನಿಮ್ಮ ಕಷ್ಟವನು ಕಾಣ್ಬೆನೆ ನನಗೆ
ಮೃಡನೇಕೆ ಮರಣ ಕೊಡನೊಯನಲ್ಕೇಳಿ ಧರೆಯೊಳು ತಾನೊಳಿತಮಿರ್ದ ||
ಸಡಗರದೊಳಂ ಸಕಲ ಜನರ್ಯೆದೆ ಸೇವಿಪರು
ಬಡವಾದರೊಡಲ ಮಾಂಸದ ಬಿಡುವದೀ ಸತಿಯು
ಪಡೆದ ವರ ಪತ್ಯರೊಡಗೂಡಿದ ಜನರು ತನಗೆ ಬಿಡುವದರಿದೆ ಜಗದೊಳು ||೭೮||

ಎನಲದನು ಕೇಳಿ ಮಲುಹಣೆಯು ಗಾಢಾಲಿಂಗ
ನನುವಿನಿಂ ಮಾಡಿ ಕೇಳಿ ಸದನ ಕೆಳೆದೊಯ್ದು
ಮನುಮಥ ಹವನನೆಸಗಲ್ಕನುವದಾಗಲಾ ಮಲುಹಣಂ ತಿಳಿದೆಂದನು ||
ವಿನಯದಿನ್ನೊರ್ವನೊತ್ತೆಯನಿತ್ತ ಬಳಿಕವೆನೆ
ನಿನಗೆ ವಲ್ಲಭನಲ್ಲದೆ ಮರಳಿ ಮತ್ತೋರ್ವ
ವಿನಯನೊಲಿದುವದನುಚಿತವುವಧರ್ಮವದೆನುತೆ ಸರಿಯಲಾಗಂ ಮಲುಹಣೆ ||೭೯||

ಶಿವಭಕ್ತರುಂ ಮೇಲೆ ಶಿವಶಾಸ್ತ್ರ ಸಂಪನ್ನ
ಕವಿತಾಧಿಕಾರಿ ಶಿವಸಂಸ್ಕಾರಿ ಸಜ್ಜನರು
ಶಿವನ ದರ್ಪಣದೊಳುದ್ದಿನ ಬೀಜಯುರುಳುವನಿತಂ ಮನವ ನಿಲಿಸಿ ಸ್ಮರಿಸಿ ||
ಶಿವನೊಲಿದು ಭೋಗ ಮೋಕ್ಷವನೀವನಿದು ಸತ್ಯ
ತವೆ ನರರ ಬುಲ್ಲವಿಪ ಹಂಗೇಕೆನಲು ಕೇಳಿ
ಹವಣಿಸುವದೇಕದನೆ ಮಾಳ್ಪುದುಚಿತವೆ ಮನವನಿಲ್ಲುವಡುಪಾಯವೊಂದು ||೮೦||

ಇರುವುದದರಂತೆ ನೀನೆಸಗಿದಡಹುದುಯೆನಲು
ಒರೆದಂತೆ ಮಾಳ್ಪೆ ಪೇಳುವುದೆನಲ್ಮಲುಹಣನು

ಗಿರಿಯೊಳಿಹ ಕುಚಗಳಿನ್ನಿಯ ಪೃಷ್ಟಮೊಂದಿ ನಿಲೆ ಮನವ ನಿಲ್ಲುವದೆಂದೆನೆ ||
ಶಿರವದೂಗುತ್ತಿದನು ಮಾಳ್ಪೆನೆನೆ ಕೇಳುತ್ತೆ
ಹರುಷದಿಂದುಭಯ ತರುಸ್ನಾನವಂ ಮಾಡುತಲಿ
ಸರಸದಿಂ ಗಂಧ ಪುಷ್ಪಾಕ್ಷತೆಯ ಜಲಧೂಪದೀಪ ನೈವೇದ್ಯಗಳನು ||೮೧||

ಚಂದದಿಂ ಕೊಂಡ್ಹೋಗಿ ವಿಜಯೇಶ್ವರನ
ಮಂದಿರವ ಪೊಕ್ಕು ಲಸರಷ್ಟಾಂಗದಿಂ ನಮಿಸಿ
ಕುಂದದತ್ಯಾನಂದದಿಂದ ಜಲಗಂಧಾಕ್ಷತಾ ದಷ್ಟವಿಧ ಷೋಡಶ ||
ಸುಂದರದವುಪಚಾರದಿಂದಲರ್ಚಿಸಲಾಕೆ
ಬಂದು ಬೆನ್ನಿನೊಳೊಂದಿ ನಿಲ್ಲಲೇಕಾಗ್ರತೆಯೊ
ಳೊಂದಿ ವಿಜಯೇಶ್ವರನ ನಿಟ್ಟಿಸುತಿರಲ್ಯಾಕೆ ನೆರಳು ಲಿಂಗದಿ ಬೀಳಲು ||೮೨||

ಕಾಂತಾಕಚಪ್ರಚಯ ಪುಷ್ಪ ಸುಗಂಧ ಗಂಧಿಯೆನೆ
ತಾಂ ತವಕದಿಂದೆನ್ನ ಶಿರದ ನೆಳಲನು ನೋ
ಡಿಂತು ತುತಿಸುವೆನೆಂದು ಮೆಲ್ಲಮೆಲ್ಲನೆ ಸರಿಯೆ ಕಂದುಕಂಧರನೆನ್ನುತೆ ||
ಕಂತುಹರನಂ ಮಧುರಲಂಕಾರ ನವರಸದ
ಪಂಥದಿಂ ಷಟ್ತ್ರಿಂಶ ವೃತ್ತವದೊನ್ನತ ತಿಲ
ಕಂತುರಚನಂಗ್ಯೆಯಲಾಕ್ಷಣದಿ ಶಂಕರಂ ನಿಜ ರೂಪಮಂ ತೋರಲು ||೮೩||

ಎದ್ದು ಸಾಷ್ಟಾಂಗ ಪ್ರಣುತಂಗ್ಯೆಯ್ಯಲೆತ್ತುತ್ತೆ
ಮುದ್ದುಗಳ ಬೇಡಿಯಂಕದೊಳಿರಿಸಿನಿನ್ನ ಮನ
ಇದ್ದುದಂ ಬೇಡೆನಲು ನಿಮ್ಮ ಚರಣವನಲ್ಲದಿತರವಂ ಬೇಡೆನೆನಲು ||
ಸಿದ್ಧಿಯಾಯಿತು ಸಕಲ ಕಾಮ್ಯಾರ್ಥವೆಂದೆನುತ
ಲಿದ್ದ ಮಲುಹಣ ಮಲುಹಣೆಯು ಯೀಕೆ ತಾಯಿಗಿಳಿ
ಗುದ್ದತದೊಳಂ ಪುಷ್ಪಕದೊಳಿಟ್ಟು ಕೊಂಡೊಯ್ದು ಕೈಲಾಸ ಪರ್ವತಕ್ಕೆ ||೮೪||

ದೋಷವೆನಿತಿರ್ದೊಡಂ ಸೊನೆಗಾರರ ಕರದಿ
ವಾಸಕತ್ತಿಯನು ಪರುಷವ ಸೋಂಕಲೋಹವದು
ಮೋಸವಿಲ್ಲದೆಯಳಿದು ಕನಕವಾಗುವುದು ಘನತಿಮಿರವೆನಿತಿರ್ದಡೆನು ||
ಪೂಷನುದಯಕೆಯುಳಿವುದೇಯದ ರತೀಶವನು
ಪಾಶಹರ ಶಂಕರನ ಕರುಣವಾಗಲು ದುರಿತ
ರಾಸಿಯುಳಿವುದೆ ಪರಮಲಿಂಗದ ಮಹಿಮೆಯೆಂತು ಕರಿಬಸವಾರ್ಯನೆ ||೮೫||

ಮರುಳಸಿದ್ಧಾಚಾರ್ಯ ರಾಮಿದೇವಾಚಾರ್ಯ
ವರಪಂಡಿತಾಚಾರ್ಯ ಗುರುವು ವಿಶ್ವಾಚಾರ್ಯ
ರುರೆ ಮಧ್ಯೆ ವದನ ಸಂಜಾತ ರೇಣುಕದೇವನುದರಭವ ಘನಲಿಂಗನು ||
ಹರರೂಪ ರುದ್ರಮುನಿಕರಜಾ ಮಹಂತಯತಿ
ಚರಣ ಸಂಭವಗುರು ಪರಂಪರೆಯೊಳುದ್ಭವಿಸಿ
ದರರೆ ವಲದಿಯಪುರದ ಹಿರೆಮಠಾಧಿಪ ಪಟ್ಟಚರವರ್ಯ ಮಹಂತನುಸುರ್ದ ||೮೬||

ಅಂತು ಸಂಧಿ - ೪ಕ್ಕಂ, ಪದ - ೨೩೭ಕ್ಕಂ ಮಂಗಳ ಮಹಾ

ಐದು

ಸಂಧಿ

ಪಲ್ಲವಿ : ಪರಮ ಜಂಗಮ ಮಹಿಮ ಕರಿಬಸವ ದೇವರಿಗೆ
ಚರ ವರ್ಯ ಕಿಡಿಗಣ್ಣೊಡೆಯರೀಗ ಪೇಳ್ವರದ
ವರಭಕ್ತರಿದನಾಲಿಪುದು ಬಸವರಾಜ ಸತ್ಕಥೆಯ ಘನವಿಮಲ ನುತಿಯ ||

ಶ್ರೀಗುರು ಪರಮಯೋಗಿ ಜನವಂದ್ಯ ಪದಕಮಲ
ರಾಗ ಜಟಿಲಾಂಚಿತಾಮೃತ ಧೀದಿತಿ ಪ್ರವರ
ನಾಗಪತಿ ಕಂಕಣ ಸುರಾರ್ಚಿತ ಪದಾಂಭೋಜ ಭಕ್ತ ಜನಷ್ಟನ್ನಿವಾಸ ||
ಸೋಗೆರಥಪಿತ ಮಹಾರಾಜಿರಾಜ ಸುಮಿತ್ರ
ರೋಗ ಭವಹದ ವೈದ್ಯ ಪೂರ್ಣ ಕರುಣಾವೇದ್ಯ
ತ್ಯಾಗ ತ್ರಿಮುಲ ತ್ರಿಪುರ ಹರಮಹಾದೇವ ಶಂಕರ ಪಾರ್ವತೀವರಜಯ ||೧||

ಜಂಗಮವು ಸಚ್ಚಿದಾನಂದ ಪರಿಪೂರ್ಣ ಘನ
ಜಂಗಮವು ನಿತ್ಯನಿರುಪಾಧಿಕ ನಿರಾಲಂಬ
ಜಂಗಮವು ಸತ್ಯಶುಚಿ ಶುದ್ಧ ನಿರ್ಮಲರೂಪ ಶಾಶ್ವತ ಕೃಪಾಪೂರ್ಣನು ||
ಜಂಗಮವು ನಿರ್ಮಾಯ ನಿರ್ದೋಷ ನಿರ್ದ್ವಂದ್ವ
ಜಂಗಮವು ನಿರಾಕಾರ ನಿರ್ಲೇಪ ನಿರ್ಗುಣಂ
ಜಂಗಮವೆ ತ್ರಿಜಗ ಪಾವನ ಪಾರ್ವತೀ ರಮಣರೂಪ ದುರಿತ ವಿಲೋಪನು ||೨||

ಜಂಗಮವೆ ಜಗದೀಶ ದುಷ್ಟ ದುರ್ಭವ ನಾಶ
ಜಂಗಮವು ನಿರ್ನಾಶ ಜ್ಞಾನಧನ ನಿಧಿಕೋಶ
ಜಂಗಮವೆ ಜ್ಞಾನಪ್ರಕಾಶ ದುರ್ಗುಣನಾಶ ಕಷ್ಟದಾರಿದ್ರ ಶೋಷ ||

ಜಂಗಮವೆನಲು ಪಂಚಕ್ಲೇಶ ಮೂಲವಿನಾಶ
ಜಂಗಮವದಜ್ಞಾನದೋಷ ಪರಿಗತ ಪೋಷ
ಜಂಗಮವೆನಲು ಪಂಚಪಾಶಕೋಶ ವಿನಾಶ ಚರವೆ ಸರ್ವೋತ್ಕರ್ಷವು ||೩||

ಉದಯದೊಳೆದ್ದು ಜಂಗಮದ ದರ್ಶನವ
ಸದಯದಿಂ ಮಾಡಲ್ಕೆ ಕೋಟಿ ಲಿಂಗವ ಕಂಡ
ಒದವಿದ ಫಲವದಹುದು ಚರಣ ಮಧ್ಯದೊಳು ನಿಟಿಲವನಿಡಲು ಕೋಟಿಪಾಪ ||
ವಿಧಿತದಿಂ ಪರಿಹರಿಸುವದು ಜಂಗಮಾರ್ಚನೆಯ
ವಿಧಿಯಿಂದವೆಸಗಿ ಪಾದೋದಕ ಪ್ರಸಾದವನು
ಮುದದಿ ಶ್ರದ್ಧೆಯೊಳು ಭುಂಜಿಸಲಾಗುವುದು ಮುಕ್ತಿ ಕರಿಬಸವಯತಿ ವರ್ಯನೆ ||೪||

ಜಂಗಮಕೆ ತನುಮನ ಧನಗಳೊಂಚನೆಯಿಲ್ಲ
ದಂಗವಿಸಿ ಸಲಿಸಿ ಸನ್ಮುಕ್ತಿ ಕಾರಣರಾದ
ಪುಂಗವ ಪುರಾತನರ ಕಥೆಯನಾಲಿಸು ಏಕಚಿತ್ತದಿಂ ಪೇಳ್ವೆನೊಲಿದು ||
ತುಂಗ ಕೈಲಾಸ ಮಂದಿರದೊಳು ಮಹಾದೇವ
ಶೃಂಗರಿಸಿರುವ ಸಿಂಹವಿಷ್ಟರದಿ ಕುಳಿತಿರಲು
ಮಂಗಳಾತ್ಮಕ ಗಿರಿಜೆ ಗುಹ ಗಣಪ ವೀರ ವೃಷಭ ಭೃಂಗಿ ದಾರುಕಾಮುಖ ||೫||

ಗಣಮುಖ್ಯರಿರಲಜಾಚ್ಯುತಯಿಂದ್ರ ಸುರ ನಿಕರ
ಮಣಿದು ತಂತಮ್ಮುಚಿತ ಸ್ಥಾನದೊಳ್ಕುಳಿತಿರಲು
ವೀಣೆವಿಡಿದಾ ನಾರದನು ಬಂದು ಮೈಯಿಕ್ಕಿ ಹಸ್ತಗಳ ಜೋಡಿಸುತೆ ||
ಫಣಿಪ ಕುಂಡಲನೆ ಕೇಳ್ಮರ್ತ್ಯ ಲೋಕದೊಳು ದು
ರ್ಗುಣ ದುರಾಚಾರ ದುರ್ವರ್ತನ ದುರಾಸೆಯಿಂ
ತಣಿಯದನ್ಯ ದ್ರವ್ಯ ಭೂಭಾಮೆಯರನುವಪಹರಿಸುತಿಹರೇನೆಂಬೆನು ||೬||

ಗುರು ಲಿಂಗ ಜಂಗಮವ ಪೂಜಿಸದು ಭಕ್ತಿಯಿಂ
ಗುರುಚರ ಪರವದೆಂದೆಡೇನೆಂದು ನಿಂದಿಪರು
ವರ ವಿಭೂತಿಯು ರುದ್ರನಯನವಂ ಧರಿಸರಾ ಮಂತ್ರವನು ಜಪಿಸಲೊಲಿದು ||
ಹರಸಮಯಕವರು ದೂಷಿಪರು ದುರ್ಮದದಿಂದೆ
ಪರರಿಗುಪಕಾರವನು ಮಾಡರಾ ದುರ್ಜನರು
ಸರಿಯಲ್ಲರವರೊಡನೆ ರೂಢಿಯಾಡುತ್ತಲಿಹರೇನೆಂಬೆನದ್ಭುತವನು ||೭||

ಚಾರ ಚೋರರುವನೃತವಾಡುವರು ಹಗಲಿರುಳು
ಪಾರಮಾರ್ಥವನರಿಯರಾ ಪರಮ ದ್ರೋಹಿಗಳು

ಪರಮಶಿವಮತವ ಮಸಣಿಸಿ ಪೋದುದಾ ಧರೆಯೊಳಾರಿಗಾದರು ಕಳುಹಲು ||
ಹರಸಮಯ ವರ್ಧಿಪುದಾಗದನ್ಯರ ಕರದಿ
ಪರಮನೇ ನೀವಲ್ಲದೆಂದು ನಾರದ ಋಷಿಯು
ಒರೆಯಲ್ಕೆದರಿದು ನಂದಿಯು ನಮ್ಮ ರೂಪನಿಪನೀತನಿಂದಾ ಕಾರ್ಯವು ||೮||

ಖ್ಯಾತಿಯಿಂದಾಗುವದಿದೆಂದು ನಂದಿಯ ನೋಡೆ
ಪ್ರೀತಿಯಿಂದೆದ್ದು ಕರವನು ಮುಗಿದು ಬಿನ್ನವಿಸಿ
ಸಾತಿಶಯದಿಂ ಧರೆಗೆ ಪೋಗಿ ಶಿವಮತವನುದ್ಧರಿಸಿ ಬಾಯೆನೆ ಕೇಳುತೆ ||
ಪಾತಕದ ನಾಡು ದುಃಖದ ಬೀಡು ಪುಣ್ಯತತಿ
ನೀತಿಗಳೆ ಕೇಡು ದುರ್ಗುಣಗಳಿಗೆ ಬಹುಪಾಡು
ತಾತನೇ ನಾನಲ್ಲಿಗ್ಹೋಗಿ ಮರಳೀ ಚರಣ ಕಾಂಬೆನೆಂತೆನಲು ಶಿವನು ||೯||

ಎಲೆಮಗನೆ ನೆರವಿಗೆ ತಮ್ಮ ಭಯವುಂಟೆವಗ್ನಿಗತಿ
ಸಲೆ ಶೀತಭಯವುಂಟೆ ಕಮಲ ಪತ್ರಕ್ಕೆ ವರ
ಜಲವ ಪತ್ತುವದುಂಟೆ ನಿನಗದರ ಭಯವೇಕೆ ನಿನ್ನಷ್ಟದಯದೊಳು ನಾವು ||
ನೆಲಸಿರ್ಪೆವಾವಗಂ ನೀನು ಪಿಡಿದುದು ಪಿಡಿವೆ
ಗಲವಿಲ್ಲದುದ ನೀನು ಬಿಟ್ಟಡದು ನಾಂ ಬಿಡುವೆ
ಒಲವಿನಿಂ ಬೇಕಾದುದಂ ಕೊಡುವೆಯರಿಯದುದೊಳಗಿರ್ದು ತಿಳಿಸುವೆನದಂ ||೧೦||

ಅಡಿದುದ ಮಾಡುವೆನು ನಾಡ ಮಾತುಗಳೇಕೆ
ರೂಢಿಯೊಳಗೆರಡನೆಯ ಶಂಭುವೇ ನೀನೆನಿಪ
ಗಾಡ ಪೋಗುವರೆನಲ್ಕಡಿಗೆರಗಿ ಕೇಳಿದನದಾರ ಬಸುರೊಳು ಪುಟ್ಟುವೆ ||
ಮೃಡನು ಪೇಳಿದ ನಿಂಗಳೇಶ್ವರ ನಿಕಟ ಬಾಗ
ವಾಡಿಯೊಳ್ಮಾದರಸ ಮಾದಲಾಂಬಿಕೆ ಪುಣ್ಯ
ಕಿಡವಹ ಗರ್ಭದೊಳಗುದಿಸುವದವರು ಮೊದಲೆ ನಂದಿನೋಂಪಿಯ ಮಾಳ್ಪರು ||೧೧||

ಎನಲಿಕಂತಾಯ್ತೆಂದು ನಮಿಸಲಾಕ್ಷಣ ಗಿರಿಜೆ
ವಿನಯದಿಂ ಗುಹಗಣಪ ವೀರನಾರದ ಮೊದಲು
ಮನುಮಥಾರಿಗೆ ಬಿನ್ನಹಗೈದರೆಲೆ ದೇವನಾವೂ ಪೋಪೆವೆಂದೆನಲ್ಕೆ ||
ಸನುಮತವು ನೀವು ಪೋಗಲು ಬೇಡದುತ್ತಮವು
ಘನಬಸವರಾಜ ರಚಿಸುವ ಭಕ್ತಿ ಮಹಿಮೆಗಳಿ
ಗನುಕೂಲಮಾಗಿ ಬೆಂಬಲವಾಗಿ ಜೇಷ್ಟಾ ಪ್ರತಿಷ್ಠೆಗೆಯ್ಯಲು ಬೇಕದು ||೧೨||

ಅರುವತ್ತು ಮೂರು ಪೂರ್ವದ ಗಣಂಗಳು ನೀವು
ಸರಿಯಾಗಿ ಪೋಗುವುದೆನಲ್ಕೇಳಿ ಸಂತಸದಿ
ಪರಮನಡಿಗೆರಗಲೀ ವಾರ್ತೆ ಕೈಲಾಸದೊಳು ಹರಿದು ಸರ್ವರು ಕೇಳಲು ||
ವರದ್ವಾರಪಾಲನಾಯಕನಾಗ ಹಾಸ್ಯದೊಳು
ನಿರದೆ ನುಡಿದಂಯೆತ್ತ ನೀಯಿತೆನೆ ಕೊಟಗೆಯೊಳ
ಗರಿದು ಕಟ್ಟುವುದು ಗಿಣ್ಣವನುಣ್ಣ ಬೇಹುದೆಂಬಂತೆ ನಂದಿಯೆ ಮೊದಲಹ ||೧೩||

ವರಪುರಾತನರೀಗೆ ಧರೆಗೆ ಪೋಗುತ ಭಕ್ತಿ
ಪರುಟವಿಸಿ ಬಹರೆಂಬುದಶ್ಚರ್ಯವೆಂದೆನುತೆ
ಕರವನೆತ್ತುತೆಗಳಹಲದು ಕೇಳ್ಯುಪೇಂದ್ರರಿಂದ್ರರು ನಿಂದೆ ಕೇಳಿದದಕೆ ||
ಶಿರವಗಡಿಯಲು ಬೇಹುದೆಂದು ನಿಶ್ಚೈಸುತ್ತೆ
ಪರಮಾತ್ಮಗರುಹಿಸದೆ ಮಾಡಲು ಮತವದಲ್ಲ
ವರವೆನುತಲಿ ಸಭೆಗೆ ಪೋಗಿದರ ವೃತ್ತಾಂತವನು ಪೇಳ್ದಿರೂಪವನು ||೧೪||

ಕೇಳಿದಾಕ್ಷಣವಿದೇ ನಿಯಮ ನಿಮಗಿದು ಸಹಜ
ಇಳೆಗಿವರ ಸಂಗಡವೆ ಪೋಗಿವನ ಶಿರಗಡಿದು
ಸಲಿಸಿಕೊಳುವುದು ನಿಮ್ಮ ವಾಂಛೆಯನಲದನರಿದು ನಮಿಸಿದು ಹಸಾದವೆಂದು ||
ಪುಳಕದೋರುತಲಿರಲ್ಕಾ ದ್ವಾರಪಾಲಕನ
ಸಲೆ ಕರಸಿ ಗಣನಿಂದೆ ಮಾಡಿದುದರಿಂದೆ ಸ
ಫಲವನುಣ್ಣೆಲೆ ಮಂಗಲಾಷ್ಟಯಪುರದ ದೊರೆಯು ಚಾಳುಕ್ಯನುದರದೊಳಗೆ ||೧೫||

ಜನಿಸು ಪೋಗೆಂದಪ್ಪಣೆಯನೀಯಲೆಲ್ಲ ರತಿ
ಘನ ಮಹಿಮಗಂ ನಮಿಸಿ ತಂತಮ್ಮುಚಿತವಹ
ಸ್ಥಾನದೊಳ್ಪುಟ್ಟಲಿತ್ತಂ ಬಾಗವಾಡಿ ಪುರಸೇನ ಬೋವದೊಳಗ್ರಜ ||
ನೆನಿಪ ಮಾದರಸ ಮಾದಂಬೆಯರು ಪುತರತಿ
ವಿನಯದಿಂ ಮಾಡಿ ನಂದೀಶ್ವರನ ಪೂಜಿಸಲು
ಮನುಮಥಾರಿಯ ವಾಹನಾದಿ ವೃಷಭೇಶ್ವರ ಪ್ರಸನ್ನನಾಗುತ್ತವರಿಗೆ ||೧೬||

ಬಂಡೆಯಂ ಕೊಡಲದಂ ಕೊಂಡು ಸಂತಸದಿಂದೆ
ಮಂಡೆಯೊಳಗಾಂತುಯತ್ನುತ್ತವದೊಳಂ ನಂದಿ
ಗಂಡುಫಲವ ಕೊಡುವನಿದು ಸತ್ಯವೆಂದು ಮನೆಗೆ ಬಂದರಾ ದಂಪತಿಗಳು ||
ರುಂಡ ಮಾಲಾಭರಣನಂ ನೆನೆವುತಿರಲು ತವೆ

ಕಂಡರಾಗಂ ಗರ್ಭಚಿಹ್ನವಂಕುರಿಸಲದು
ತಂಡ ತಂಡದಿ ಸ್ತ್ರೀಯರುರೆ ಬಂದುದಂ ಕಂಡುವಚ್ಚರಿಯಾಗುತೆ ||೧೭||

ತನಯರಿಲ್ಲೆಂದು ನಂದೀಶ್ವರನ ಪೂಜೆಯನು
ವಿನಯದಿಂ ಮಾಡಲ್ಕೆ ತತ್ಕಾಲದೊಳ್ಫಲವ
ಘನಮಹಿಮನಿತ್ತನಿದು ಸಟೆಯಲ್ಲ ಭಜಿಸಿದೊಡೆ ಪುಸಿಯಾಗುವುದೆ ಜಗದೊಳು ||
ಎನುತೆ ಕೀರ್ತಿಸುತಿರಲ್ಪಂಚ ಮಾಸಗಳಾಗ
ಲನಿತರೊಳ್ಗರ್ಭದಾನ ಸಂಕರ್ಮ ಶೋಭನವ
ಮನದೊಳುತ್ಸವದಿಂದೆ ಮಾಡಿದರೇನೆಂಬೆ ದಾನಧರ್ಮಾಧಿಗಳನು ||೧೮||

ಮಾರಮರ್ದನನೊಳಗೆಯೂರಿ ಮನವಂ ಯೋಗ
ಸಾರಸುಖದೊಳಗೆ ಶಿಶುಹೃದಯ ಗವಿಯೊಳಗಿರಲು
ಮರದುದಾ ನವಮಾಸ ಲೋಕ ಪ್ರಮಾಣವದು ಮಿಕ್ಕಿ ಜನನ ಕ್ರಮವನು ||
ಮೂರು ವರ್ಷವದಿಂತು ಪೂರೈಸಿಕೊಂಡಿರುವ
ಮೀರಿದತಿ ಗರ್ಭಬೇನೆಯ ತಾಳಲಾರದತಿ
ಘೋರ ದುಃಖದೊಳೊಂದು ದಿನ ನಂದಿಕೇಶ್ವರನ ದೇಗುಲಕೆ ಪೋಗಿ ನಮಿಸಿ ||೧೯||

ದೇವ ದೇವೇಶ ನಂದೀಶ್ವರ ಮಹಾರಾಜ
ಪಾವನಾತ್ಮನೆಯೆನಗೊಲಿದು ನೀನು ಫಲವಿತ್ತೆ
ಭಾವದೊಳು ಸಂತಸವ ತಾಳಿರಲ್ಕೇಡಿ ಗರ್ಭವದಾಯ್ತು ತಾಳಲಾರೆ ||
ಕಾವುದೆಂದರಗಿ ಭಸ್ಮದ ಧಾರಣಂಗೈದು
ಸಾವಧಾನದೊಳು ಸ್ವೀಕರಿಸಿ ಸದನಕೆ ಬಂದು
ಪವಡಿಸಿರಲಾ ರಾತ್ರಿಯೊಳು ಶಂಕರಂ ಬಂದು ಚರವೇಷದಿಂ ಪೇಳಿದ ||೨೦||

ಭಾವೆ ಏತಕೆ ಚಿಂತಿಸುವೆ ನಿನ್ನ ಗರ್ಭದೊಳು
ಭಾವಿಸಲ್ನಂದಿ ಲೋಕವ ಪಾವನಂಗೈಯ್ಯ
ಲಾವಗಂ ಬಂದಿಹನದಾಗಿ ಸಂಕಟವಿಲ್ಲದೀಗ ಜನಿಸುವನವನಿಗೆ ||
ಕಾವಹರ ಲಿಂಗವನು ಧರಿಸದೆ ಪಯವನೀಂಟಿ
ಸುವ ಬಾರೆಂದುದು ಪೊಗಳಿಲ್ಕಿತ್ತ ಮಗ್ಗುಲೊಳು
ಗಾವಗಂ ಮಲಗಿರುವ ಕೋಟಿ ರವಿಶಶಿ ಪ್ರಭೆಯ ಮಿಕ್ಕಿದರ್ಥೋದಯೆದೊಳು ||೨೧||

ಹೊಳೆವುತಿಹ ಶಿಶುವ ಕಂಡಾಗಲಚ್ಚರಿಯಾಗಿ
ಮಲವಿಲ್ಲ ಮಾಸಿಲ್ಲ ದುಷ್ಟಗಂಧವದಿಲ್ಲ

ಸಲಿಲಗೊಳ್ಳೊಳೆಯ ಬೇಕೆಂದು ಸಂಶಯವಿಲ್ಲದಿರ್ದಡಂ ಚಾತಕರ್ಮ ||
ಘಳಿಲನೆಸಗುವ ಮಾತ್ರದೊಳ್ಗುರು ವರಂತಾನೆ
ಮಲಹರಂ ಸಂಗಮೇಶ್ವರ ಜಂಗಮಾಕೃತಿಯ
ತಳೆದಾಗ ಬಂದು ನಾವೀ ಶಿಶುವಿಗಂ ಗುರುಗಳೆಂದು ನಾಮವ ಪೇಳುತೆ ||೨೨||

ಭವಹರ ಮಹಾಚಾರ್ಯ ಲಿಂಗಧಾರಣಗೈದು
ತವೆ ಬಸವನೆಂಬ ನಾಮವನಿಡುವದೆಂದೊರೆದು
ಶಿವನಾಗ ಬಯಲಾಗೆ ತ್ರಿದಶಾಹದೊಳಗೆ ತೊಟ್ಟಿಕ್ಕಿಲಿನಾಮವಿಟ್ಟು ||
ಭಾವಜಾಂತಕ ರೂಪ ನಂದಿಯಾರಾಧನೆಯ
ತಾವೆಸಗಿ ಸಂತಸದಿ ಬಾಲದೊಡುಗೆಯ ತೊಡಿಸಿ
ತಾವಗಂ ಪರಿಪಾಲನಂಗೆಯ್ಯುತಿರೆ ಬಾಲಲೀಲೆ ತೀರಲು ಪಂಚಕ ||೨೩||

ವರುಷವಾಗಲು ಶೀಕ್ಷಾಗುರುವಿನೆಡೆಗೊಯ್ದವನ
ಹರುಷದಿಂದೋದಿಸುವವೆಂದು ಪೇಳುತ್ತೆ ಕೊಡೆ
ಪರಮ ಪಂಚಾಕ್ಷರಿಗಳೈವತ್ತೆರಡು ವರ್ಣವಂಗಳವ ಸರಿದು ಮುಂದೆ ||
ವರವೇದ ಶಾಸ್ತ್ರ ಪೌರಾಣಾಗಮ ಸ್ಮೃತಿಯು
ಭರದೊಳಾಗಲೆ ನೆನವು ಮಾತ್ರದೊಳ್ಬರಲವನಿಗಿ
ಗರರೆಯುಪನಯನ ವೆಸಗಲ್ಬೇಹುದೆಂದು ಸಂಭ್ರಮದೊಳಿರಲದನರಿವುತ್ತೆ ||೨೪||

ತಂದೆಗೆಂದನು ನನಗೆ ಭವಕೆ ತಂದಿಹೆ ನೀನು
ತಂದೆಯೆ ನೀನೆನಗೆ ಗುರುವೆ ತಾಯ್ತಂದೆಗಳು
ಹೆಂದದಾನಂದದಿಂ ಕಪ್ಪಡಿಯ ಸಂಗಮನು ಲಿಂಗಧಾರಣಗೆಯ್ದಿದ ||
ಹಿಂದೆಯರಿಯದೆ ಮತ್ತೆ ಮುಂಜಿ ಮಾಡುವೆನೆಂದು
ಬಂಧುಗಳ ನೆರಪಿ ಸಂಭ್ರಮಗೊಳುವೆ ನೀನೀಗ
ಚಂದವಲ್ಲಿದು ಭಕ್ತಹಾಸ್ಯಮಾಡುವರೆಂದು ನುಡಿಯೆ ತಂದೆ ಮಗನಿಗೆ ||೨೫||

ಚಂದದಿಂ ತರ್ಕವಾಗಲ್ ಜೈಸಿ ನಾನಿಮ್ಮ
ಮಂದಿರದೊಳಿರಲೊಲ್ಲೆನೆಂದು ನಾಗಾಂಬಿಯನು
ಬಂಧುರದೊಳಗೂಡಿ ಮಹಾ ಮನೆಗೆ ಪೋಗಬೇಕೆಂಬ ಸಮಯದೊಳಿರುತೆ ಭಕ್ತಾ ||
ಸಂದೋಹವೆಯ್ದ ನಮ್ಮನೆಗೆ ನಡೆಯೆಂದವನ
ತಂದು ತಮ್ಮಯ ಸದನದೊಳಗಿಟ್ಟು ರಕ್ಷಿಸಲು
ಒಂದು ದಿನ ಶಾಲೆಯೊಳಗೋಡುತಿಹ ಕುವರರು ಚತುರ್ದಶಿಯ ಪೂಜೆಯನು ||೨೬||

ಮಾಡುವೆವೆನುತೆ ನಂದಿಕೂಪದೊಳು ಪಲಗೆಗಳ
ಗಾಡತೊಳವುತ್ತಿರಲ್ಕಿದರೊಳೊರ್ವ ಬಸವ
ರೂಢಿವೆತ್ತಿಹ ನಾಮದವ ಮತ್ತೆಯೋರ್ವನಿಗೆ ಕೂಪದೊಳ್ ದಬ್ಬಲಾಗ ||
ಪಾಡಳಿದು ಮುಳುಗಿ ಸಾಯಲ್ಕಾಗಲೀ ಬಸವ
ನೋಡುತಲಿರಲ್ಕಿವನೆ ನೂಕಿಸಿದನೆಂದೆನುತೆ
ಬಾಡಬರು ಬಂದಿವನ ಕಡಿಕೊಲ್ಲು ಬಡಿಯೆನುತೆ ಬೆನ್ಹತ್ತಲೋಡಲಾಗ ||೨೭||

ಈ ವಾರ್ತೆಯಂ ಕೇಳಿ ಮಾದಿರಾಜಂ ಮರುಗಿ
ಸಾವನೆಂದಾ ಮಾದಲಾಂಬೆ ದುಃಖದಿ ಮುಳುಗಿ
ದಾವಗಂ ಭಕ್ತರ ಮನೆಯೊಳಿರ್ದೊಡಂ ಕಣ್ಣ ಮುಂದಿರುವನಿದೆ ಲಾಭವು ||
ಕೋವಿದಂ ಬಸವನೆಂದೀ ತೋಷದಿಂದಿರಲು
ಗಾವಿಲರು ಬೆನ್ನಟ್ಟಿ ಕೊಲ್ಲುವೆನೆನುತಲೀಗ
ಭಾವವರಿಯದೆ ಪೋದರೆಂದವನ ಬೆನ್ನಿನೊಳಗೋಡೆವರ ಕೊಡಲಾಗ ||೨೮||

ಬಸವರಾಜಂ ತನ್ನಯಕ್ಕನಾಗತಿಗೊಂಡು
ಸಸಿನೆ ಸಂಗಮದಾರಿವಿಡಿದು ಪೋಗಲ್ಕಾಗ
ಬಸವಳಿದು ಮದ್ವಭಟ್ಟನೆ ಮೊದಲು ವೈದಿಕ ಗೃಹಸ್ತರೆಲ್ಲರುವೋಡುತೆ ||
ತೋಷವಳಿದಾಗ ಬರಲಿಲ್ಲ ಕೃಷ್ಣವೇಣಿ
ಸೂಸಿ ಪರಿವುತ್ತಿರಲು ಬಸವ ಗಂಗಾಂಬಿಕೆಗೆ
ಮೋಸವಿಲ್ಲದೆ ಮಾರ್ಗಗೊಡುವುದೇ ಗುರುಚರಣ ದರ್ಶನಕೆ ಪೋಗುವೆವೆನೆ ||೨೯||

ಎರಡು ಭಾಗಗಳಾಗಿ ನಿಲ್ಲಲಾಗಂ ಬಸವ
ಹರುಷದಿಂ ನಾಗಾಂಬೆ ಸಹ ದಾಟಿ ಪೋಗಲದು
ಪೂರವಾಗಿಯೆ ಮೊದಲ ಪರಿವುತಿರಲಾಗ ದ್ವಿಜಗಣ ಬಸವಗೆ ||
ಪರಮ ವಿದ್ಯದ ಬಲದಿ ದಾಟಿಯೋರ್ವನೆ ನಮ್ಮ
ಗಿರದೆ ದಾರಿಯ ಕೊಡದಲಾಚೆಯ ತಟಾಕದೊಳ
ಗಿರಲು ಘನತೆಯೆ ನಮಗೆಲ್ಲರಿಗೂ ಮಾರ್ಗವನು ಕೊಡಿಸಲದು ಸಹಜವೆಂದು ||೩೦||

ನುಡಿಯಲಾಗಂ ಕರುಣದಿಂದವರಿಗಂ ಮಾರ್ಗ
ಕೊಡುವದೆಂದಪ್ಪಣೆಯ ನೀಯಲಾಗಂ ನದಿಯು
ತಡಿಯದಾಗಲೆ ಪಥವನೀಯಲಾಚೆಗೆ ಸರ್ವಬಾಡ ಬರದೋಡಿ ಪೋಗೆ ||
ಗುಡಿಯನೊಳ ಪೊಗುತೆ ಬಸವೇಶ್ವರಂ ಸಂಗಮನ

ಸಡಗರದೊಳಂ ದರ್ಶನಂಗೊಂಡು ಕುಳ್ಳಿರಲು
ಬಡಬಡನೆ ವಿಪ್ರರಲ್ಲಿಗೆ ಬಂದು ಕೇಳಿದರು ನಮ್ಮ ಪುತ್ರನ ಕೂಪದೊಳ್ ||೩೧||

ಮುಳುಗಿಸಿಲ್ಲಿಗೆಯೋಡಿ ಬರುವುದುಚಿತವೆ ನೀನು
ಯಳುಕಿದರೆ ನಾವು ಬಿಡುವೆವೆಯವನ ಸರಿಮಾಡ
ದಳಲುವರು ನಿನ್ನ ಮಾತಾಪಿತರುಯೋದಿ ಕೆಟ್ಟ ಕೂಚಂಭಟ್ಟನಂತೆ ||
ಬಾಳುವೆಯದೇತರದು ಜೀವಹಿಂಸವನೆಸಗಿ
ಬಾಳಲಾಪೆಯೊಯೆನಲು ಬಸವನಿಂತೆಂದನವ
ರ್ಗಳವೆ ಸುಮ್ಮನೆಗಳಹುದಪಿರೇನೆಕೆ ನೂಕಿಸಿದುದಿಲ್ಲ ಸಟೆಯಲ್ಲವು ||೩೨||

ಎನಲದವರಿದಕೆ ಸಾಕ್ಷಿ ಯಾರಿರುವರದ ಪೇಳು
ಎನಲು ಸಂಗಮನಾಥನೆ ಸಾಕ್ಷಿ ನುಡಿಸುವೆನು
ಎನಲದಕೊಡಂಬಡಲು ಬಸವರಾಜಂ ನದಿಯಸ್ನಾನವ ಮಾಡಿಬಂದು ||
ತಾನೆ ಪತ್ರೆಯ ತಂದು ನಿರ್ಮಲೋದಕದಿಂದೆ
ಮೌನದಿಂದಾ ಮೊದಲ ಪೂಜೆಯ ತೆಗೆಯಲಾಗ
ನೂನವಿಲ್ಲದೆ ಮಾಡಿದಾ ಪೂಜೆಯಳುಕಿಸದೆ ಮಾತಾಡನೆ ಸಂಗನು ||೩೩||

ಎಂದಿಂತು ಗೌಳಯತಿಗಳು ನುಡಿಯಲರು ಕೇಳಿ
ಇಂದು ಧರನಾಂ ಪೂಜೆಗೈದಲ್ಲದೇ ವಚಿಸ
ನೆಂದು ತತ್ಸಂಗಿನಿಂದವೆ ವಚಿಸಿದಪೆ ಕೇಳಿರೆಂದು ಜಲಗಂಧಾಕ್ಷತೆ ||
ಸುಂದರದ ಪತ್ರೆ ಪುಷ್ಪಗಳಿಂದಲರ್ಚಿಸುತ
ಮುಂದನಿಂದೆಲೆ ಮಹಾಗುರುವೆ ಸಂಗಮನಾಥ
ಚಂದದಿಂದೀಗಳೀ ವಿಪ್ರರೆಲ್ಲರು ಕುವರನಂ ಕೊಂದನೆಂದರಿಯದೆ ||೩೪||

ಗಳಹುವರಿದಕೆ ಸಾಕ್ಷಿ ನೀನಲ್ಲದೇ ಗುರುವೆ
ತಳುವ ಮಾಡದೆ ಪೇಳಿರೆಂದು ಬಿನ್ನವಿಸಲದ
ಕೇಳಿ ಸಂಗಮನಾಥನೀತನ ನುಡಿಯೊಳವನು ಸಿಕ್ಕಿದನೆಂಬ ತೆರದಿ ||
ತಾಳು ವಿಪ್ರರೆ ಕೇಳಿನೀತ ನೂಕಿದುದಿಲ್ಲ
ಜಾಳ ಮಾತುಗಳೇಕೆ ಮಧ್ವಭಟ್ಟನ ಕುವರ
ನಾಳಿಗೊಳುತಂ ಬಸವನಾಮಿಯವ ನೂಂಕಿದನು ಕೇಳಮೃತವಾದ ಸುತಗೊ ||೩೫||

ಎಂದು ಗುಡಿಘುರ್ಜಿಸುವ ತೆರದಿ ಮೃಡ ಪೇಳಲದ
ನಂದು ಕೇಳುತ್ತಪರುವಶ್ಚರ್ಯರಾಗೆ ಮುದ

ದಿಂದೆ ಬಸವಾರಾಧ್ಯ ಪೂಜೆಕರ ಪೂಜೆಯದು ವಧಿಕವೇನಾ ಮಾಡಿದ ||
ಬಂಧುರದ ವರ್ಚನೆಯು ಶ್ರೇಷ್ಟವೋ ಪೇಳಿರೆನೆ
ಕಂದುಕಂಧರನೆಂದನೆಲೆ ಪೂಜಕರೆ ಕೇಳಿ
ಕುಂದದೀ ಬಸವನೆಸಗಿದ ಪೂಜೆಯೇ ಘನವು ನಿರ್ವಂಚನೆಯ ಭಕ್ತನು ||೩೬||

ನೀವು ಮಾಡುವ ಪೂಜೆ ನಿಮ್ಮೊಡಲ ಪೋಷಣೆಯ
ದಾವುದಾದರೆ ಲಿಂಗಕೆಂದು ತಂದ ಪದಾರ್ಥ
ನೀವು ವಂಚನೆಯಿಂದೆ ಕದ್ದು ಕೊಳವ ನಿಮಿತ್ಯ ನಿಮ್ಮಾರ್ಚನೆಯು ಯೋಗ್ಯವು ||
ಭಾವಜಾಂತಕನಿಂತು ಪೇಳಲು ಸಕಲ ಜನರು
ಶಿವನೆಯಿವನೆಂದು ಸಾಷ್ಟಾಂಗ ಪ್ರಣಮಿತರಾಗಿ
ದೇವ ದೇವೇಶ ದೇವರ ದೇವ ಮದ್ದೇವಯೆಂದು ವಿಪ್ರರು ನುತಿಸುತೆ ||೩೭||

ಅರಿಯದೆಲ್ಲರು ನಾವುಗಳಹಿದಪರಾಧವನು
ಕರುಣ ಸಾಗರಮೂರ್ತಿ ಕ್ಷಮಿಸುವುದೆಂದಡಿಗೆರಗಿ
ಕರವ ಶಿರದೊಳಗಿಟ್ಟು ಅಂಜಬೇಡೆಂದಭಯವಿತ್ತು ಮೃತವಾದ ಸುತನಂ ||
ಕರತರುವದವನ ಮುಖದಿಂ ನುಡಿಸುವೆನುಯೆಂದು
ವರಬಸವ ನುಡಿಯಲವನೆಂತು ಬಂದಪನೆನಲು
ಪರಮ ಪಾವನಮೂರ್ತಿ ನಾನು ಕರದಪೆನೆಂದು ಪೇಳೆ ಬರ್ಪನು ಕರೆಯನೆ ||೩೮||

ಅವರು ಪೋಗುತೆ ಬಸವ ಕರೆಯೆಂದನೇಳೆನಲು
ಸಾವರಿಸಿ ಕೇಳುತ ಮೈಯ ಮುರಿದೆದ್ದನದ್ಭುತವು
ಪವಮಾನ ಭಕ್ಷ ಭೂಷಣ ರೂಪನೆ ಬಸವನರನೆಂದು ನುಡಿಯೆ ನರಕಂ ||
ಸವನಿಸುವದಿದು ಸತ್ಯವೆಂದು ಸರ್ವರನು ನುತಿಸಿ
ಇವನ ಕರೆದೊಯ್ದು ಬಸವನ ಮುಂದೆ ನಿಲ್ಲಿಸಲು
ತವೆದಿಟದಿ ಪೇಳು ನಿನ್ನ ಕೂಪದೊಳು ನೂಂಕಿದರಾರುಯೆನೆ ಬಸವನು ||೩೯||

ಕುವರ ಪೇಳಿದ ಮಧ್ವಭಟ್ಟನ ಕುಮಾರನೆನ
ಗವನೂಂಕಿದನುಯೆಂದು ನೆಲಕೆ ಬಿದ್ದಳಿಯಲರಿ
ದವರು ಚರಣದೊಳು ಬಿದ್ದುರುಳಿ ನಾವುಯಾರಪರಾಧಿಗಳು ದೇವನಮಗೆ ||
ಸಾವತಪ್ಪಿಸಿ ಪೊರೆವುದೆಂದು ಬಹುಪರಿಯಿಂದ
ಗಾವಿಲರು ನುತಿಸಲದು ಕೇಳಿ ಸರಿಯಲ್ಲದವ
ರಾವವಪರಾಧಗಳನೆಣೆಸುವೆನೆನುತ ದಯದಿ ಮೃತವಾದ ಸುತಗಸುರನು ||೪೦||

ಇತ್ತು ಮೆರೆದನು ಎಂದು ಕರಿಬಸವ ಯತಿವರಗೆ
ಸತ್ತು ಚಿತ್ತಾನಂದ ಮೂರ್ತಿ ಕಿಡಿಗಣ್ಣೊಡೆಯ
ರತ್ತ ಪೇಳಿದರಿತ್ತ ವಿದನರಿದು ಸಕಲಜನರದುಭುತಮಿದೆಂದು ನುತಿಸೆ
ಸತ್ತ ಕುವರನು ಚರಣದೊಳು ಬಿದ್ದು ನುತಿಸುತ್ತೆ
ಚಿತ್ತ ಜಾರಿಯೆ ನೀನು ಎಂದಭಯಗೊಂಡು ಪುರ
ದತ್ತ ವಿಪ್ರರಗೂಡಿ ನಡಿಯೆ ಮಾತಾಪಿತರಿಗೀಶನೆ ದೈವವೆಂದು ||೪೧||

ನಂಬಿಕೊಂಡಿರೆ ನಿಮಗೆ ಸದ್ಗತಿಯಹುದೆಂದು
ಶಂಭು ಬಸವಂ ಪೇಳಿ ಕಳುಹಲಿವರೆಲ್ಲರತಿ
ನಂಬಿಗೆಯೊಳಾಕೃಷ್ಣ ತೀರದೊಳ್ನಿಂದದನು ತುಂಬಿ ಪೋಗುತ್ತಮಿರಲು ||
ಗಂಭೀರ ಬಸವರಾಜನು ಹೇಳಿ ದಾಂಟಿಸಿದ
ರಿಂಬುವರಿಯಲು ಮುನ್ನ ತಾ ದಾಟಿದುದನೊಂದು
ಅಂಬುರಾಸಿಯನವರ ದಾಟಿಸಿದುದೆರಡು ವ್ಯಡನೆರಡು ವೇಳ್ಯವನು ನುಡಿಸಿದ ||೪೨||

ವ್ಯತನಾದ ಸುತನ ಕರೆಯಲು ದಾಟಿಸಿದುರೈದು
ಆತಗಾಗಲೆ ಪ್ರಾಣವಿತ್ತುಯೆಬ್ಬಿಸಿದಾರು
ಸುತ ಬರಲು ಅವರಿಗಾ ನದಿ ದಾಟಿಸಿದುದೇಳು ಪೇಳಿಳಿದನಾ ಪ್ರಾಣವು ||
ವಿತತದಿಂ ಕೊಟ್ಟುದೆಂಟಂ ಮತ್ತವೆಲ್ಲರಿಗೆ
ಸಾತಿಶಯದಿಂ ತೆರಪು ಮಾಡಿದುದಿದೊಂಭತ್ತು
ಸತತ ಮಹಿಮೆಯ ಮೆರೆದು ಸಂಗಮನೊಳಿರಲಂದು ಜಂಗಮಾಕೃತಿದಳೆವುತೆ ||೪೩||

ಲಿಂಗದಿಂದ್ಹೊರ ಹೊರಟು ಬಂದು ಬಸವನ ಕರೆದು
ಮಂಗಲಾತ್ಮನೆಯಂಗದೊಳು ಲಿಂಗವಿರ್ದವರ
ಸಂಗನೆಂದರಿ ಬೇಡಿದುದ ವಂಚನೆಯಿಲ್ಲದಿತ್ತು ಪೂಜಿಸೈ ವತ್ಸನೇ ||
ಮಂಗಳಾಹ್ವಯ ಪಟ್ಟಣಕ್ಕರಸು ಬಿಜ್ಜಳನು
ತುಂಗ ಮರ್ಯಾದಿಗಳ ಮಾಡಿ ಕರೆಯಲು ಪೋಗಿ
ರಂಗಿಸಲು ವಸ್ತುವಾಹನ ರನ್ನ ಚಿನ್ನ ಚನ್ನೆಯು ರಾಜಕಾರ್ಯ ಬರಲು ||೪೪||

ಒಲ್ಲನೆಂದೇಗ್ರಹಿಸು ಸಲ್ಲದಿಹ ಕಾರ್ಯವದ
ನೊಲ್ಲದಿರು ಸಾಧುಸಜ್ಜನ ಸಂತರೊಡನಾಡು
ಬಲ್ಲದ ಮಹಾಮಹಿಮರೆಲ್ಲ ಬೆಂಬಲವಾಗೆ ಭಕ್ತಿದಾಸೋಹ ನಡೆಸು ||
ಖುಲ್ಲಜನಸಂಹರಿಸು ಬಲ್ಲ ಮಹಿಮರನೊಲಿಸು

ನಿಲ್ಲದೆ ಸದಾಚಾರ ಸುಜ್ಞಾನಗಳ ಗಳಿಸು
ಅಲ್ಲಮ ಬರಲ್ಕರಿದು ಮೋಕ್ಷ ಮಾರ್ಗವ ತಿಳಿದು ಸಲ್ಲು ಸನ್ನಿಜವನೊಲಿದು ||೪೫||

ಎಂದಿಂತು ಬೋಧಿಸಲು ಬಸವರಾಜಂ ಗುರುವಿ
ಗೊಂದಿಸುತೆ ದೀಕ್ಷವಿತ್ತುದ್ಧರಿಸುದೆಂದೆನಲು
ಇಂದು ಧರನಾಗಳಂತಾಯ್ತೆನ್ನುತಾಚಾರ್ಯರಂ ಬರಿಸಿ ದೀಕ್ಷವಿತ್ತು ||
ಬಂಧುರ ಮಹಾಮಂತ್ರಮಂ ನಾಗಲೆಯ ಸಹದಿ
ಸುಂದರದೊಳುಪದೇಶಸುತೆ ಹರಸಿ ಲಿಂಗದೊಳು
ಸಂದನಾಗಲೆ ಬಸವನಗ್ರಜೆಯ ಸಹಜವಾಗೆ ಲಿಂಗಪೂಜೆಯನೆಸಗುತೆ ||೪೬||

ಜಪತಪ ಸಮಾಧಿಗಳನೆಸಗುತತಿ ಸುಖದಿಂದೆ
ವಪರಿಮಿತ ಮಹಿಮನಲ್ಲಿರಲಿತ್ತ ಕಲ್ಯಾಣ
ಸುಪವಿತ್ರ ಕಟ್ಟಣದ ಚಾಳೋಕ್ಯರಾಯನೆಂಬರಸು ಪುತ್ರನಕಾಂಕ್ಷೆಯ ||
ತಪಗೈಯಲಾಕ್ಷಣದಿ ತ್ರಿದಂಡಿಯುದಿಸಲ್ಕವಗೆ
ಗುಪಿತದಿಂ ಬಿಜ್ಜಳನೆನಿಪ್ಪ ನಾಮವನಿತ್ತು
ಉಪವೀತ ಧಾರಣಂಗೈದು ಲಗ್ನವನೆಸಗಿ ಮೃತವಾದ ಚಾಳೋಕ್ಯನು ||೪೭||

ಪರಮ ಬಿಜ್ಜಳ ನೃಪಾಲಂ ಧರೆಯ ಪಾಲಿಸುತೆ
ಕರಿ ತುರಗ ರಥ ಪದಾತಿಯು ಸಕಲ ಸಂಭ್ರಮದೊ
ಳಿರುತಿರಲದೊಂದಿನವು ಸಭೆಯ ಮುಂಭಾಗದೊಳ್ ಲಿಪಿಯು ಪತನವಾಗೆ ||
ವರಪಲವ ಲಿಪಿಯ ಬಲ್ಲರ ಕರೆಸಿಯೋದಿಸಲು
ನರಲೋಕ ಲಿಪಿಯಲ್ಲವಿದು ಮುಪ್ಪುದಪ್ಪುಗರ
ಬರಹವೆಂದುವರೊರೆಯಲಾಗ ಬಹು ಚಿಂತಿಯೊಳಗಿರಲು ಬಲದೇವನಾಗ ||೪೮||

ನನ್ನು ಜಾಮಾತ ಸಂಗಮ ಕ್ಷೇತ್ರದೊಳಗಿಹನು
ನನ್ನಿವಂತನು ಮಹಾಮಹಿಮ ಸಂಗಮನೊರವು
ಮುನ್ನೆಯುಳ್ಳವನವನಕರೆಸಿದೊಡಿದಂ ಓದಿಹೇಳುವನು ಸತ್ಯವೆನಲು ||
ಚೆನ್ನಾಗಿದನು ಓದಿ ಪೇಳಿದರಿಗೀ ಧರೆಯ
ಪನ್ನತಿಕೆಯಿಂದ ಪಾಲಿಸುವ ಸಕಲ ಸಾಮ್ರಾಜ್ಯ
ವನ್ನುಯಿತ್ತಪೆ ಕರೆಸುವುದೆನಲು ತಕ್ಷಣದಿ ರಾಯನಿಂ ರಾಯಸವನು ||೪೯||

ಬರೆಸಿ ಮುದ್ರೆಯನೊತ್ತಿಯಂ ದಳ ಪದಾತಿಯನು
ತರಿಸಿ ಮಂತ್ರಯನೋರ್ವನಂ ಕರಿಯ ಕಳುಹಲವ

ಸರಸರನೆ ಸಂಗಮಕೆ ಪೋಗಿ ಪತ್ರವನಿತ್ತು ಶರಣೆನ್ನುತವರಿಗಾಗ ||
ಕರವ ಜೋಡಿಸಿ ಬರುವದೆಂದು ವಿಜ್ಞಾಪನವ
ವಿರಚಿಸಲು ಬಸವರಾಜಂ ಲಿಂಗಕೊಂದಿಸುತೆ
ಕರೆಯಬಂದರು ದೇವರಪ್ಪಣೆಯದೆಂತೆನಲು ಗುರು ರೂಪದಿಂ ಪೇಳಿದ | ||೫೦||

ಎಲೆ ಮಗನೆ ಪೋಗು ಸಂಶಯವೇಕೆ ಸರ್ವಾರ್ಥ
ಪಲವು ಸಿದ್ಧಿಗಳ ಬಯಸದೆ ತಾನೆ ಕೈ ಸಾರ್ದು
ನೆಲಸುವವು ವಷ್ಟಮಹದೈಶ್ಚರ್ಯ ಪಂಚವರುಷಗಳೆಂದು ಪರಸುತೆ ||
ಒಲವಿನಿಂ ಲಿಂಗದೊಳಡಗಲಾಗಂ ಬಸವಂ
ಸುಲಭದಿಂದ ದಳವನೇರಿನಾಗಲೆಯ ಸಹಾ
ನಲವಿನಿಂ ಕಲ್ಯಾಣ ಪಟ್ಟಣಕೆ ನಡೆತಂದನೆಲೆ ಕರಿಬಸವ ಯತಿವರ ||೫೧||

ಬಸವರಾಜಂ ಬಂದನೆಂಬ ವಾರ್ತೆಯ ಕೇಳಿ
ಖುಷಿಯಿಂದೆ ಬಿಜ್ಜಳ ಮಹಾರಾಜ ಸಂಭ್ರಮದ
ಎಸಕದಿಂದಿದಿರ್ಗೊಂಡು ಕರೆ ತಂದು ಬಲದೇವಮಾತ್ಯ ನವಗೃಹದೊಳಿಳಿಸಿ ||
ಹಸನಾದ ಸಕಲ ಭೋಜನ ಪದಾರ್ಥವ ಕಳುಹಿ
ಸಸಿನೆ ತಾಂಬೂಲ ಸದ್ಗಂಧ ಮಾಲೆಯನು ಕಳಿಸಿ
ಸಸಿನ ಬಸವೇಶ್ವರನ ಭೋಜನಾಂತರದೊಳವರಂ ಕರೆಯ ಕಳುಹಿದನಲ ||೫೨||

ಬಲದೇವ ಮಾತುಳನು ಬಂದು ಕರೆಯಲಾಗ
ಒಲವಿನಿಂದಂತಾಗಲೆಂದು ಬಸವೇಶ್ವರನು
ಸುಲಭದಿಂದದೋಲಗಕೆ ಪೋಗಲ್ಮಹಾರಾಜನೆದ್ದು ಕೈವಿಡಿದು ಕರದು ||
ಲಲಿತ ತನ್ನರ್ಧ ಸಿಂಹಾಸನದಿ ಕುಳ್ಳಿರಿಸಿ
ಕೊಳುತೆತಲ್ಲಿಪಿಯ ಕರದೊಳಗೀಯೆ ಕೊಳುತದನು
ತಲೆಯೊಳಾಂತಾ ಸುರುಳಿ ಬಿಚ್ಚಿಯೋದಿದನದ್ಭುತವದೆಂತೆನಲಾ ಪೇಳ್ವೆ ||೫೩||

ಶ್ರೀಪದಮ ಕೈಲಾಸದಿಂ ಶಿವನು ಬರೆಸಿರುವ
ನಾ ಪರಮ ಧರಣೇಶ ಬಿಜ್ಜಳ ಮಹಾರಾಜ
ಗೀ ಪತ್ರದ ಪರಕೆ ಲೇಖಿಯದೆಂತೆನಲು ನಿನ್ನ ವಿಷ್ಟರದ ಕೆಳಗೆ ||
ಗೋಪಕೋಟಿ ಪ್ರಭೆಯ ಹೊನ್ನರಾಶಿಯ ಶಂಖೆ
ರೂಪಿಸಿರುವೆಂಭತ್ತರೆಂಟು ಕೋಟಿಯ ಧನವು
ಭೂಪ ಚಾಳೋಕ್ಯರಾಯನ ಪಿತಾಮಹರಿಟ್ಟುದಂ ತೆಗೆದುಕೊಟ್ಟಾತಗೆ ||೫೪||

ಪರಮ ಪ್ರಧಾನತ್ವ ಸಾಮ್ರಾಜ್ಯ ಸಂಪತ್ತು
ಹಿರೆತನ ಸ್ವತಂತ್ರತ್ವ ಕೊಟ್ಟವಂ ಪೇಳ್ದಂತೆ
ಇರುವುದೆಂದುಂ ಬರೆದ ಲೇಖೆಯನದಂ ಬಸವ ಗಡಗಡೆನ ಓದಲಾಗ ||
ಧರಣೇಶ ಬಿಜ್ಜಳನು ಕೇಳುತುತ್ಸವದಿಂದೆ
ಚರಣಕೆರಗುತ್ತಿದನು ತೆರೆಯಬೇಹುದು ನಿಮಗೆ
ಬರದಿರುವಭಿಪ್ರಾಯಕಧಿಕವಾಗಿಯೆ ಕೊಡುವೆಗಿದು ಸತ್ಯವೆಂದು ಪೇಳ್ ||೩೩೫||

ಬಸವರಾಜಂ ವಿಷ್ಟರದ ಮುಚ್ಚಳವ ತೆಗೆಸಿ
ವಶವಲ್ಲದಿಹ ಹೊನ್ನರಾಶಿಯ ತೋರಿಸಲು
ಸೂಸುತಿಹ ಸಂತೋಷದಿಂದದಂ ತೆಗೆಯೆನಲ್ಕೀಗಲೆ ಬೇಡವೆಂದ ||
ವಾಸಕೋಗುವೆನು ನಾನು ಬಂದದಂ ತೆಗೆಸುವೆನು
ಮೀಸಲದು ಹೊನ್ನರಾಶಿಯದಾರು ಮುಟ್ಟದಿರಿ
ನಾಶವಾದಿರಿ ಕಾಯ್ದುಕೊಂಡಿರುವದೆಂದು ಪೇಳುತ್ತೆ ಸದನಕೆ ಪೊಗಲು ||೩೩೬||

ಬರುವುದಕೆ ತಡವಾಯಿತೆಂದು ಬಿಜ್ಜಳ ಭೂಪ
ಚರರಿಂದೆ ತೆಗೆಸ ಪೋಗಲ್ಕವರು ಕರ ಮುಟ್ಟಿ
ಲರೆರೆ ನೆತ್ತರಕಾರಿ ಬಿದ್ದಳಿಯಲದು ನೋಡಿ ಬಿಜ್ಜಳನ ಧೈರ್ಯನಾಗಿ ||
ಕರೆಯಲಟ್ಟಿದ ಬಸವಗಂ ಬೇಗ ಬಹುದೆಂದು
ಚರರಿದರ ವೃತ್ತಾಂತವೆಲೆ ವಿಸ್ಮಿತನಾಗಿ
ಭರದೊಳಂ ಬಂದು ಕೋಪಿಸಿವದರ ದೆಸೆಯಿಂದಲೇ ಮುಪ್ಪು ಬೇಡಿರೆಂದು ||೩೩೭||

ಪೇಳಿಪೋಗಿರ್ದೆನವಸರಿಸಿರಬೇಕೆಂದು
ನೀಲಗಳವತಾರ ಬಿದ್ದಳಿದವರಿಗಾಗ
ಫಾಲನೇತ್ರನ ಧ್ಯಾನದಿಂ ಕೃಪಾಲೋಚನದಿ ನಿಟ್ಟಿಸಲವರುಯೇಳುತೆ ||
ಸಾಲಸಾಲಕೆ ಧೀರ್ಘದಂಡದಿಂ ಬೀಳಲ್ಕೆ
ಪಾಲಿಸುತವರ ಕೈಯೊಳರನು ತೆಗೆಸಲ್ಕಾಗ
ನೀಳದೋಳ್ ರಾಸಿಯುಂ ಗಣದೊಳಗೆ ಧಗಧಗಿಸುತಂ ಬಿದ್ದಿಹುದ ನೋಡುತೆ ||೩೩೮||

ಚಿಂತಾಲಗಳಂ ತರಿಸಿ ತೂಗಿಸಲು ಮೊದಲಿರ್ದು
ದಂತದಂ ಬಸವರಾಜನ ದೃಷ್ಟಿ ಪರುಷದಿವ
ನಂತಕೋಟಿಯುವಧಿಕಸಿರಲದಂ ನೋಡಿಯದ್ಭುತವ ಚಿತ್ತನಾಗಿ ಮಹಿಮ ||
ವಂತನೆಂದೆನುತೆ ಪೊಗಳಿಯಾಕ್ಷಣದಿ ಮಂತ್ರಿವರ

ನಿಂತಿವನೆಯೆಂದು ಪತ್ರವ ಬರೆಸಿ ಮುದ್ರಿಸುತೆ
ಸಂತಬಸವಗೆ ಕೊಟ್ಟು ಶಾಲಜೋಡಿಯ ಹೊಚ್ಚಿ ಗಜಮಸ್ತಕವನೇರಿಸಿ ||೫೯||

ಊರೊಳಗೆ ಕವಿ ಶಶಿಯ ವೀಥಿಯೊಳ್ಮೆರೆಸುತೆ
ವಾರನಾರಿಯರರ್ಥಿಯಲಿ ನೃತ್ಯವಾಡಿದೌ
ವಾರಿಕರು ಪೊಗಳಲತಿ ಸಂಭ್ರಮದಿ ಸಭೆಗೈದಿ ಸರ್ವಪ್ರಧಾನಿಗಳಿಗೆ ||
ಒರೆದನೀತನವಾಜ್ಞೆಯೊಳಗೆ ನೀವಿರಿಯೆಂದು
ಪರಮಭಂಡಾರ ಬೊಕ್ಕಸ ಬಸವಗೊಪ್ಪಿಸುತೆ
ಧರೆಯ ಭಾರವನೆಲ್ಲ ವಹಿಸಿಕೊಂಡೆನಗಿಷ್ಟು ಕರೆತುಂಬಿ ಬೋನವಿತ್ತು ||೬೦||

ರಕ್ಷಿಸುವದೆಂದು ಸರ್ವಾಧಿಕಾರವನಿತ್ತು
ಪಕ್ಷಪಾತಗಳಿಲ್ಲದತಿ ಸೌಖ್ಯದಿಂದಿರಲು
ಮಕ್ಷವಾಹನ ಭಕ್ತಿಗೆನ್ನಯ ಸುತೆಯನಿತ್ತು ಲಗ್ನವನು ಮಾಳ್ಪನೆಂದು ||
ಈ ಕ್ಷಿತಿಯ ವಲ್ಲಭನ ವರಮಂತ್ರಿ ಬಲದೇವ
ರುಕ್ಷಪತಿ ಶಿವರೂಪನೆಡೆಗೈದಿಯೆನ್ನ ಸುತೆ
ಯೀಕ್ಷಣವೆ ನಿಮಗಿತ್ತು ವಿವಾಹವೆಸಗುವೆನೆಂಬಕಾಂಕ್ಷದೋರಿತ್ತಭವನೆ ||೬೧||

ಎಂದು ವಿಜ್ಞಾಪನಂಗೆಯ್ಯೆ ನಸುನಗುತೆಂದ
ಬಂಧುರ ಶ್ರೀವೀರಶೈವ ಬ್ರಾಹ್ಮರು ನಾವು
ಬಂಧನಕ್ಕೊಳಗಾದ ಶೈವಬ್ರಾಹ್ಮರು ನೀವು ನಮಗೆಂತು ಸಂಬಂಧವು ||
ಎಂದ ಮಾತಿಗೆ ಮಾವನಿಂತೆಂದ ನಿಮ್ಮ ಮನ
ಬಂದ ಪ್ರಕಾರದೊಳು ಶುದ್ಧತೆಯ್ದುತೆ ಲಿಂಗ
ಬಂಧನಂಗೆಯ್ದು ಸಲ್ಲಿಸಿಕೊಳುವದೆನಲದಕೊಡಂಬಟ್ಟನಾ ಬಸವ ||೬೨||

ಬಲದೇವ ಮಂತ್ರಿಯತಿ ಸಂತೋಷದಿಂ ಲಗ್ನ
ಒಲವಿನಿಂ ತೊಡಗುತೆ ವಿವಾಹ ಮಂಟಪವ ರಚಿಸಿ
ನಲವಿನಿಂ ಗುಡಿ ತೋರಣ ಕಟ್ಟಿ ಏಳೆಗೊಟ್ಟು ಸೂರ್ಯಚಂದ್ರರ ವೀಥಿಯೊಳ್ ||
ಸಲೆ ಬಾಗೆವಾಡಿಯಿಂದಕ್ಕ ಮಾವನ ಕರೆಸಿ
ಬಲವನ್ಮಹಾಚಾರ್ಯರಂ ಬರಿಸಿ ದೀಕ್ಷವನು
ಸುಲಲಿತದೊಳಂ ರಚಿಸುತಾಹಳಿದ್ರವಧರಿಸಿ ನಂದಿಕಾರ್ಯವನೆಸಗುತೆ ||೬೩||

ಧರಣೇಶ ಬಿಜ್ಜಳ ಮಹಾರಾಜರಂ ಕರೆಸಿ
ಸುರುಚಿರೋನ್ನತ ಭಕ್ತ ಮಾಹೇಶ್ವರಂ ಬರಿಸಿ

ವಾರನಾರಿಯರು ನರ್ತಿಸುತಿರಲು ಬಸವ ಗಂಗಾಂಬಿಕೆಯರ ಶೃಂಗರಿಸುತೆ ||
ಗುರುಸೂತ್ರವಿಡಿದು ಕಲಶಸ್ಥಾಪನವ ಮಾಡಿ
ಧಾರೆಯೆರೆವುತೆ ಬೋರಜಗಲಿಯೊಳು ಕುಳ್ಳಿರಿಸಿ
ವರ ಬಾಸಿಗವ ಧರಿಸಿ ದಂಡಿತೊಂಡಿಲಕಟ್ಟಿ ಜೀರಗುಡವನು ಬಂಧಿಸಿ ||೬೪||

ಪರಮ ಮಂಗಲ ಸೂತ್ರ ಗುರುಹಸ್ತದಿಂ ಧರಿಸಿ
ಬೆರಳಿನೊಳ್ಬೊಟ್ಟುಂಗುರವನಿಟ್ಟು ಶೇಶೆಯನು
ವರಭಕ್ತ ಮಾಹೇಶ್ವರದ್ಯೆವ ಧರಣೇಶ ಬಾಂಧವರುಗಳ ಕೈಗೊಳಿಸುತೆ ||
ಭರದೊಳಾವಾದ್ಯದಬ್ಬರವಷ್ಟದಿಶ ತುಂಬಿ
ಸುರಚಿತ ಸುಮಂಗಳಾಷ್ಟಕ ಪಠಣಸುಮುಹೂರ್ತ
ಗುರುಹಸ್ತದಿಂ ಸಾವಧಾನೆಂದುವಕ್ಷತೆಯನಿಟ್ಟರತ್ಯುತ್ಸವದೊಳು ||೬೫||

ಅಡಿಕೆ ದಕ್ಷಿಣದಾನ ಧರ್ಮಗಳ ಕೊಡಿಸುತತಿ
ಬಡಬಡನೆ ಸರ್ವಜನರಿಗೆಯಪ್ಪಣೆಯನಿತ್ತು
ತಡೆಯದಾಗತಿ ಭೂಮ ಮಾಡಿಯ್ಯೆದೆಯರು ಪಾಡಿಯರಿಸಿಣವನಾಡಿಸುತಲಿ ||
ಸಡಗರದೊಳಾಗೆ ಮೆರವಣಿಗೆಯನು ಮಾಡಿಸುತೆ
ಮೃಡರೂಪ ಬಸವನಾಗಲೆ ಬಳುವಳಿಯನಿತ್ತು
ಒಡನೆ ಶರಣೆಂದು ಬಲದೇವ ತನ್ನರಮನೆಯೊಳಿರುತಿರ್ದನತಿ ಸುಖದೊಳು ||೬೬||

ಮಡಿವಾಳಯ್ಯ ಕಿನ್ನರಯ್ಯ ಸೊಡ್ಡಳಬಾಚಿ
ಹಡಪದಪ್ಪಣ್ಣ ಮೇದರಕೇತಿ ಹರಳಯ್ಯಾ
ಬಡಿಹೋರಿ ಬ್ರಹ್ಮಯ್ಯದ ಸರಿ ದೇವಯ್ಯ ಕನ್ನದ ಬೊಮ್ಮಿ ಕಲಕೇತನು ||
ಒಡಿಯಮುಸುಡಿಯ ಚೌಡ ಗುಂಡಬ್ರಹ್ಮಯ್ಯಗಳು
ತಡಿಯದಾಯ್ದಕ್ಕಿ ಮಾರಯ್ಯ ದಾಸಿಮಯ್ಯಗಳು
ಮೃಡಭಕ್ತ ಮುಗ್ಧಸಂಗಯ್ಯ ಬಾವೂರ ಬ್ರಹ್ಮಯ್ಯತೀಶ್ವರ ಕೇತನು ||೬೭||

ಚೋರ ಚಿಕ್ಕಯ್ಯ ಶೂಲದ ಬ್ರಹ್ಮಿ ಮರುವಯ್ಯ
ಪಾರಮಹಿಮೆ ಕಾಂತರಾಮೇಶ ಶಂಕರದಾಸಿ
ಪರಮ ನಿಡುಗುಡಿಮಾರಯ್ಯ ನಿಜಲಿಂಗ ಚಿಕ್ಕಯ್ಯ ಮೊದಲಾದ ಗಣರು ||
ಅರವತ್ತು ಮೂರು ಪುರಾತನ ಗಣಂಗಳುರೆ
ಅರುವಿಡಿದು ತಂತಮ್ಮುಚಿತ ಸ್ಥಾನದಿ ಜನಿಸಿ
ವರಬಸವ ದಂಡನಾಯಕರ ದಾಸೋಹಕ್ಕೆ ಬಲವಾಗಿ ಬಂದರೊಲಿದು ||೬೮||

ನಿರುತಲಕ್ಷದ ಮೇಲೆ ತೊಂಭತ್ತು ಸಾವಿರವು
ವರಮಿಂಡಜಂಗಮರು ಪನ್ನೆರಡು ಸಾವಿರವು
ಪರಿಮಿತದೊಳಿರಲಾರುಸಾವಿರ ಗಣಂಗಳಿವರಿಗೆ ಕಡಿಮೆಯಾಗಿರಲ್ಕೆ ||
ಕೋರಿಶೆಟ್ಟಿಯ ವೇಷಧರಿಸಿ ಕಾಶ್ಮೀರರಸ
ಪಾರೆಯೊಳಗಿಟ್ಟವರ ತಂದೆ ವರಗೂಡಿಸುತೆ
ಸಾರಪಾಯಸ ಭಕ್ಷ್ಯರಸ ರಸಾಯನ ಷಡ್ರುಚಿಯ ಬೇಡಿದುದ ನೀಡುತೆ ||೬೯||

ಇರಲೊಂದು ದಿನ ರಾಜರರಮನೆಗೆ ಪೋಗುತಿರೆ
ಭರದೊಳಾ ಕಕ್ಕಯ್ಯ ಚರಶೇಷವನು ಕೊಂಡು
ಯಿರದೆ ಪೋಗಲ್ಪೇಹುದೆಂದು ಬಸವರಸದಂ ಕರೆಯಲ್ಕದೀಗ ಬಂದೆ ||
ನಿರುತವೆಂದುಂ ಮುಂದಕೊಂದು ಚರಣವನಿಡಲು
ವರಪ್ರಸಾದ ದ್ರೋಹಿಯೆಂದು ಕದವನು ಮುಚ್ಚಿ
ಅರಿದು ಬಸವನು ತಿರುಗೆ ವರಕವಾಟವ ಕಾಯ್ದು ಪನ್ನೆರಡು ವರುಷಮಿರಲು ||೭೦||

ರಾಜಕಾರ್ಯವನು ದಿನದಿನದಲ್ಲಿ ಮಾಡುತಿಹ
ಪೂಜಿಸುವನಾ ಜಂಗಮರು ಬೇಡಿದುದನಿತ್ತು
ಸೋಜಿಗದೊಳೆಂಭತ್ತರೆಂಟು ಮಹಿಮೆಯ ನಿತ್ಯಮೆರೆವುತ್ತೆ ಕಾಯ್ದಿರ್ದನು ||
ಮಾಜದೊಂದಿನ ಪಿಪೀಲಿಕದೊಂದಗಳು ತಾನು
ಮೋಜಿನಿಂ ಗ್ರಹಿಸಿ ಬರುವದಕೆ ಶರ್ಕರೆಯಿಟ್ಟು
ರಾಜಿಯಿಂದದ ಕೊಂಡು ಸೆರಗಿನೊಳ್ಬಂಧಿಸುತೆ ಸಂತೋಷದಿಂದ ಮನೆಗೆ ||೭೧||

ಬಂದಪ್ಪ ನಾಗಲಿಗೆ ಶರಗಿರಿ ಪ್ರಸಾದವಿಹು
ದೆಂದು ಪೇಳುತ್ತಾರೆ ಮುಂದಿಟ್ಟು ಸ್ನಾನಕವ
ದೆಂದು ಪೋಗಲ್ಯಾಕೆ ಬಿಚ್ಚಿದನು ಕೊಂಡು ಸೇವಿಸಿ ಗರ್ಭವಂಕುರಿಸಲು ||
ಬಂಧುರದೊಳಾ ಗರ್ಭ ನಿತ್ಯ ವರ್ಧಿಸುತಿರಲು
ಚಂದದಿಂದೀ ವಾರ್ತೆ ಕಟಕವಾವರಿಸಲದು
ವೊಂದು ದಿನವಾ ಕೊಂಡಿಮಂಚಿ ಬಿಜ್ಜಳಗೆ ಪೇಳಿದನಿದರ ವೃತ್ತಾಂತವ ||೭೨||

ಕೇಳುಭೂಪತಿ ಹೇಳಿದರೆ ಕೊಂಡಿಯೆಂಬರಿದು
ಹೇಳದಿರ್ದಡೆ ಲೋಕನಿಂದೆ ನಿಮಗಹುದಿಂತು
ಜಾಳಮಾತವಿದಲ್ಲ ಹೇಳುವಧಿಕಾರಿಗಳೊಳಿಂತಾದ ಬಳಿಕುಳಿದರ ||
ಪೇಳಲೇನವರ ಪಾಡೇನೆನಲದೇನೆನಲು

ಮೂಲ ಮಾತಿದು ಬಸವನಕ್ಕೆ ನಾಗಾಂಬೆಯಿಹ
ಳೋಳೆಯಿಂದಾಕೆ ಲಗ್ನವದಿಲ್ಲದಿರುತಿಹಳದೀಗ ಗರ್ಭವದಾಗಲು ||೭೩||

ಎಂಬ ವಾರ್ತೆಯ ಕಟಕದೊಳ್ಪೂರ್ಣವಾಗಿಹುದು
ಶಂಭುವೇ ಬಲ್ಲವ ದೋಷವೇನಲಾ ದೊರೆಯು
ಕುಂಭಿನಿಯ ಮೇಲೆದ್ದು ಬಿದ್ದು ಬಸವನ ಮನೆಗೆ ಪೋಗಲಾಕ್ಷಣಮಾತ್ಯನು ||
ಹಂಬಲಿಸದಾಗೆದ್ದು ಕರೆದು ಕುಳ್ಳಿರಿಸಿ ಕೊಳ
ಲಂಬುಜಾಂಬಕಿ ನಿನ್ನವಗ್ರಜೆಯು ಪ್ರಿಯನಿಲ್ಲ
ದೆಂಬಸುರ ನಿರ್ದಹಳದೆಂಬ ವಾರ್ತೆಯು ಕೇಳಿ ಬಂದೆನದರಂದ ಪೇಳು ||೭೪||

ಎಂದೆನಲದಂ ಕೇಳಿ ಶೇಷದಿಂದಾದ ಬಸು
ರೆಂದು ಪೇಳಲು ನಿತ್ಯ ಶೇಷವನು ಸವಿವೃತಿಹಿ
ರೆಂದಯಿಲ್ಲದ ಬಸುರದಿಂದು ಕಂಡಬಳಿಕ್ಕೆ ಲೋಕದೊಳಗಪಹಾಸ್ಯವು ||
ಕುಂದ ನುಡಿಗಳ ಬರ್ಪವೆಂದೆನಲು ವರಮನೆಯೊ
ಳಂದು ಬಿಜ್ಜಳನ ಕರೆದೊಯು ನಾಗಮ್ಮನವ
ರಂದು ಬರಿಸುತ್ತೆ ಕುಳ್ಳಿರಿಸಿ ಕೇಳಲು ಬಸುರೊಳಿದ್ದ ಮಹಿಮನೆ ಪೇಳಿದ ||೭೫||

ಎಲೆಲೆ ದ್ರೋಹಿಗಳೆ ಕಕ್ಕಯ್ಯನ ಪ್ರಸಾದಿಂ
ದೊಲಿದು ಜನಿಸಿದ ಪಿಂಡವಲ್ಲದಿತರವದುಂಟೆ
ಮಲಿನ ಮಾನಸರು ದೋಷವ ನುಡಿದ ಮಾತ್ರದೊಳೆ ನರಕ ತಪ್ಪದು ದಿಟವಿದು ||
ಬಲವನ್ಮಹಿರಮಣ ಕೇಳೆಂದು ಪೇಳಲ್ಕೆ
ನೆಲದೆರೆಯನಶ್ಚರ್ಯನಾಗಿ ಶಾಲೆಯನುಡಿಸಿ
ನಲವಿನಿಂ ಮಣಿದು ತನ್ನರಮನೆಗೆ ಪೋಗಲಿತ್ತಾ ನಾಗಲಾಂಬೆ ಮುದದಿ ||೭೬||

ಇರುತೊಂದು ದಿನ ಪಡೆದಳಾ ಕುಮಾರನ ನಾಮ
ವರ ಚನ್ನಬಸವನೆಂದಿಟ್ಟು ರಕ್ಷಿಸುತಿರಲು
ಮರುಗವದು ಪುಟ್ಟಿದಾಗಲೆ ಗಂಧವಿರುವ ಪರಿಸಕಲ ವಿದ್ಯಾಪ್ರವೀಣಂ ||
ಬರಸದೋದಿಸದೆ ಪೂರ್ಣ ಜ್ಞಾನಿಯಾಗಲವ
ಗಿರದೆ ದೀಕ್ಷೆಯನಿತ್ತುಪದೇಶಿಸಿದನು ಬಸವ
ಪರಮ ಷಟ್ ಸ್ಥಲದಿರವನರಿದು ಸ್ಥಲಕರಣ್ಣಸಗಿ ಮಂತ್ರಗೋಪ್ಯವ ರಚಿಸಿದ ||೭೭||

ಪದಿನಾರು ಸಾವಿರ ಷಟ್ಸ್ಥಲ ಬ್ರಹ್ಮಿಗಳು
ಒದವಿ ತನ್ನರಮನೆಯೊಳಿರಿಸಿ ರಕ್ಷಿಸುತಿರ್ದ

ರದುಭುತದೊಳೆತ್ತನೋಡಲ್ಕೆತ್ತ ಗಣಸಮೂಹಂ ಕಟಕವಾವರಿಸಿರೆ ||
ತದಮಿತದ ಕ್ಷೀರನೇಮಿಗಳು ಪನ್ನೆರಳ್ಸಹಸ್ರ
ಸದಲ ಸುಘೃತಥ ನೇಮಿಗಳು ಹನ್ನೆರಳ್ಸಹಸ್ರ
ದಧಿನೇಮಿಗಳು ಪನ್ನೆರಳ್ಸಹಸ್ರ ಶರ್ಕರೆಯ ನೇಮದವರೀರಾರೆ ||೭೮||

ವರಖರ್ಜೂರಾಮ್ರ ಜಂಬೂ ಪನಸ ಜಂಬೀರ
ಪೇರು ದಾಡಿಮ ರಂಭದದಿ ಕ್ಷೀರ ಕೆನೆಗಳಿವ
ಸಾರನೇಮಿಗಳು ಪನ್ನೆರಡು ಪನ್ನೆರಡು ಸಾವಿರವಿರವಿಕಿವರ ನಿಯಮ ||
ಇರುವದಂತೆ ತಿಳಿದವರ ನೇಮಗಳ ಸಲಿಸುತಲಿ
ಚರವೆ ಜೀವನಮಾಗಿಯಿರಲದಂ ಪರಿಕಿಪಡೆ
ಹರನೊಂದಿನ ಮೇದರ ಕೇತಿದೇವಯ್ಯನಸುವ್ಯೆದನದನೆಂತೆನೆ ||೭೯||

ಮೇದರ ಕೇತಿದೇವಯ್ಯನೆಂಬ ನಿಜಶರಣ
ನಾದರದಿನಿತ್ಯ ಜಂಗಮ ನೇಮವಾಗಿರಲು
ಕೋದುಬಿದಿರವಂತೆಂದು ಪುಟ್ಟಿ ಮೊರಜಿ ಬಿಲಿಕೆಯ ಮಾಡಿ ಮಾರುತೆ ಹಾಗವಂ ||
ಮುದದಿಂದೆ ಕೊಳುತದರಿನಿಂದಾ ಪದಾರ್ಥಗಳ
ಸದುಹೃದಯ ತಂದು ಸತಿಗೀಯಲ್ಕೆ ಪಚಿಸುತ್ತೆ
ಒದವಿ ಜಂಗಮ ಪೂಜಿಕರಣ ಶುದ್ಧದಿ ಮಾಡಿ ತೀರ್ಥ ಪ್ರಸಾದ ಕೊಂಡು ||೮೦||

ಅನಿತರೊಳಗೆನಿತು ಜಂಗಮರು ಬರಲವರುಗಳಿ
ಗನಿತ ದೊಳಗೆ ಬೇಡಿದುದ ನೀಡಿ ತೃಪ್ತಿಪಡಿ
ಸನುದಿನಂ ನಾಳೆ ಬೇಕೆಂಬ ಬಯಕೆದೋರದಿರುತಿರಲು ಪರಮನಾಗ ||
ಮನದೊಳಿದನರಿದು ಕಷ್ಟವ ಬಿಡುವನಿವ ಬಡವ
ನೆನುತೆ ಬಸವರೂಪದಿಂ ತಾನೆ ಬಂದವನ
ಮನೆಗೊಯ್ದು ಹೊನ್ನ ಜಾಳಿಗೆಯವನ ಸತಿಗೀಯಲಕೆವಲ್ಲದಿರಲು ಮನೆಯೊಳ್ ||೮೧||

ವಿನಯದಿಂ ಸುರುವಿ ಪೋಗಲ್ಕೇತಿ ದೇವಬರೆ
ವಿನ ದಿಂದವನು ನೋಡಿದನುಯಲ್ಲಿಯದುದಾರು
ಧನವಿತ್ತರದು ಪೇಳೆನಲು ಸತಿಯ ಪೇಳ್ದಳದ ಬಸವರಾಜನೆ ತಂದಿದಂ ||
ನನಗೆ ಕೊಳ್ಳೆನುತೆ ಕೊಡಬರಲೊಲ್ಲೆನೆನಲ್ಯಾಕೆ
ಸನುಮತದೊಳಂ ಕೊಳವದೊಲ್ಲೆನುವ ಬಗೆಯಾವ
ದನುವಿನಿಂ ಬಡತನವದುಂಟು ನಿಮಗಿದು ಜಂಗಮಕೆ ಮಾಡಿರೆಂದು ಪೇಳಿ ||೮೨||

ಕೊಡಲೊಲ್ಲೆವೆನಲು ಬಲ್ಪಿಂ ಸುರುವಿ ಪೋದನಿದು
ನೆಡೆವಿಡದೆ ನಲ್ಬಡವನೆಂದು ಕಳವಳದಿಂದೆ
ಒಡೆಯನಿತ್ತನು ತಾನು ಧನಿಕ ಶಿವಭಕ್ತರತಿ ಬಡವರೆಂದು ತಿಳಿದನೆ ||
ಗಡನಿಧನವರ ಮನೆಗೆ ಪೋಗಿ ಕೊಡುವದೆನಲು
ಮಡದಿ ಅಂತಾಯ್ತೆಂದು ಹೊನ್ನನುಡಿಯೊಳು ತುಂಬಿ
ಬಡಬಡನೆ ಬಸವರಾಜರ ಮನೆಗೆ ಪೋಗಿವನು ಕೊಳ್ಳಿರೆಂದವನು ಕೊಡಲು ||೮೩||

ಎಲ್ಲೆವಿವು ಪೊನ್ನನಿವರಾರಿತ್ತಪರುಯೆಂದು
ಬಲ್ಲಿದಂ ಬಸವರಾಜಂ ಕೇಳಲಾ ವನಿತೆ
ಬಲ್ಲವರು ನೀವರಿಯದಂತಾಡಿದಪಿರಿ ರವಿಯುದಯದೊಳ್ ನೀವೆ ಬಂದು ||
ಒಲ್ಲೆನೆಂದರು ಕೇಳದಲೆ ಬಲ್ಪಿನಿಂ ಸುರುವಿ
ನಿಲ್ಲದಾಗಲೆವೋಡಿ ಬಂದಿರೀಗಲೆಯೆನ್ನ
ನಲ್ಲ ಕೋಪಿಸಿಕೊಟ್ಟ ಬಹುದೆಂದು ಕಳುಹಿದರು ಕೊಳ್ಳಿರೆಲೆ ದೇವರೆಂದು ||೮೪||

ಭಾವೆ ಕೊಡಲದನಂತರಂಗದೊಳ್ತಿಳಿವುತ್ತೆ
ಭಾವಜಾಂತಕನ್ಯೆದಿ ಕೊಟ್ಟು ಪೋಗಿಹನಿವನು
ಭಾವಿಸುವಡಿವು ಲಿಂಗಮುದ್ರೆಯುಂಟೆಂದರಿದು ಸುಮ್ಮನಿರಲಾಕೆ ಪೋಗೆ ||
ಕಾವಹರನಿದನರಿದು ಕೊಟ್ಟಿಡಂ ಕೊಳನಿದನು
ಆವಗಂ ವನದೊಳಿವ ವಂಶವಂ ಭೇದಿಸುವ
ನವರೊಳಗೆ ಪೂರ್ಣವಿರುವಂತೆಸಗುವೆನುಯೆಂದು ಭವಹರನದೆಂತೆಸಗಲು ||೮೫||

ಮಾನನಿಧಿ ಕೇತಿದೇವಂ ಉದಯದೊಳೆದ್ದು೦
ಧ್ಯಾನಿಸುತ ಶಿವನ ಮುಖದೊಳದೆಂದಿನಂದದೊಳು
ಸಾನುರಾಗದೊಳು ಭಸ್ಮವಧರಿಸಿ ಕರದೊಳಗೆ ರಜ್ಜು ಶಸ್ತ್ರವನುಗ್ರಹಿಸಿ ||
ಕಾನನಕೆ ಪೋಗಿ ವಂಶವನಾಗ ಖಂಡಿಸಲು
ತಾನದಾವೇಣುವಿನೊಳೆಲ್ಲಿ ನೋಡಲು ಪೂರ್ಣ
ಕನಕಮಯವೆಂದೆನಿಸಲಿವ ಪೋಗಿ ಕೊರೆಯಲವು ಬುಳುಬುಳೆಂಬುತ್ತ ಸುರಿಯೆ ||೮೬||

ವನವನಾಂತರವ ತಿರುಗಿ ನೋಡಲಿದರಂತೆಯಿದೆ
ಕೊನೆಯ ವೇಣುವಿನೊಳಗೆಯಿಲ್ಲದಿರಬಹುದೆಂದು
ಮನದೊಳಗೆ ತಿಳಿದು ಬಡಬಡನೇರಿ ಕೊಯ್ಯಲದು ಮುರಿದುತಾಂ ಬೀಳೆವಂಶ ||
ಮೊನೆಯ ಪೊಡೆಯೊಳ್ಳು ಚ್ಚಿತಟಹಾಯ್ದಿರಲ್ನೋಡಿ

ಸೋಹಭಾವವನು ಬಯಸಿದೆಯಲಾ ದಾಸೋಹ
ಮೋಹದೊಳ್ವರ್ಜಿಸಿಲ್ಲವೆನೆಂಬುವೆನಮ್ಮ
ವಾಹನನೆ ಚಂದ್ರನ ಚಕೋರ ಬಯಸುವ ತೆರದಿ ನಿನ್ನ ಬಯಸುತಿರ್ಪರು ||
ಊಹಿಸುವೊಡೇ ಕದನದೊಳು ಸೋತು ಬೆಂಗೊಟ್ಟು
ಬಾಹೆನೆಂದಂಜಿಲ್ಲಿ ಕುಳಿತ ಪರಿಯಹುದು ತಿಳಿ
ಸಾಹಸವದೇಕಿನಿತು ಹೋದಕಾರ್ಯವ ಮಾಡದಲೆಯಿರುವುದುಚಿತವಲ್ಲ ||೯೭||

ಎಂದು ಶಂಕರ ಪೇಳಲದಕೊಡಂಬಟ್ಟು ಶರ
ಣೆಂದಲ್ಲಿಯಿಂದ್ಹೊರಟು ತಮ್ಮ ದೇಹದೊಳುಭಯ
ರಂದು ಬಂದವರು ಕಣ್ದೆರೆದೆದ್ದು ಸರ್ವಗಣಕುಲಕೆ ಸಾಷ್ಟಾಂಗವೆರಗಿ ||
ಕಂದು ಕಂಧರರೂಪ ಮಡಿವಳೇಶನ ಚರಣ
ಕಂದು ನಮಿಸುತ್ತೆನ್ನ ತಂದೆ ನನ್ನಯ ಮರವಿ
ಸಂದ ದೋಷವನು ಪರಿಹರಿಸಿವೆಚ್ಚರಿಸೆನನ್ನುದ್ಧರಿಸಿದಿರಿ ದೇವರೆ ||೯೮||

ಎಂದು ಬಹುಪರಿಯಿಂದ ನುತಿಸಲಾನಂದದಿಂ
ಚಂದವಾಯ್ತಿಲೆ ಬಸವ ಬಂದಿಹ ಪುರಾತನರು
ಕಂದಿಕುಂದುತೆ ಭಾನುವಿಲ್ಲದಿಹ ದಿವಸ ಹಿಮಭಾನುವಿಲ್ಲದ ರಾತ್ರಿಯೋಲ್ ||
ಬಂದು ಸನ್ಮಾನವಿಲ್ಲದಿಹ ನಂಟ ಪ್ರಭುವಿಲ್ಲ
ದಂದವಹ ಗ್ರಾಮದಾನವದಿಲ್ಲದಾ ಗಜವು
ಸುಂದರಶ್ವಗಳಿಲ್ಲದಾ ಮೊಹರಂ ಜ್ಞಾನವಿಲ್ಲದಿಹ ಯೋಗಿಸತ್ಯ ||೯೯||

ವಿಲ್ಲದಿಹವಾಲಾಪದಾನವಿಲ್ಲದ ಸಿರಿಯು
ನಲ್ಲನಿಲ್ಲದ ನಲ್ಲಳಂಗನೆಯದಿಲ್ಲದಿಹ
ಸಲ್ಲಲಿತ ಪುರುಷನೃಪ ನಿಲ್ಲದವನಿಯ ಮಾತ್ಯನಿಲ್ಲದಿಹ ಭೂಪಾಲನು ||
ನಿಲ್ಲದಾಹಂಸೆಯಿಲ್ಲದಾ ಕೊಳಂ ಮಧುವ್ರಜಗ
ಳಿಲ್ಲದಬ್ಜಾಳಿ ಶುಕನಿಲ್ಲದಾರವೆ ವಿಭುದ
ರಿಲ್ಲದಾಸ್ಥಾನವಭಿಮಾನವಿಲ್ಲದ ಲಲನೆ ಭಕ್ತಿಯಿಲ್ಲದ ಶಿಷ್ಯರು ||೧೦೦||

ಗುರುಗಳಿಲ್ಲದ ಮಠವು ಲಿಂಗವಿಲ್ಲದ ಗುಡಿಯೊ
ಲಿರಿವುದೀ ಸಭೆಯೊಳಗೆ ನೀನಿಲ್ಲದದ ಕೇತಮು
ಯಿರದೆ ಯಾವಸಿರಿ ಭಕ್ತಿಯದೆಂತು ವರ್ಧಿಪುದು ನೀನಿಲ್ಲದಿರಲು ಜಗದೊಳ್ ||
ಪರರಗೀತನು ಮನಧನಂಗಳೆಲ್ಲವನೀವ

ವೃಂದರದ್ಭುತರಾಗಿ ದುಃಖ ಶರಧಿಯೊಳು ಮುಳುಗ್ಯಾಗ ಕಟಕವ ಕೇಳುತೆ ||
ಚಂದಗೆಟ್ಟಿತು ಭಕ್ತಿಯೆಂಬುದಿನ್ನೆಲ್ಲಿಹುದು
ಬಂಧನವ ಬಂತು ಚರರಿಷ್ಟರೀವರದಾರು
ಎಂದು ಗೋಳಿಟ್ಟಳುವ ಧ್ವನಿಯು ದಿಕ್ತಟ ಮುಸುಕೆ ಮಂದರಾಚಲ ಶರಧಿಯೊಳ್ ||೯೨||

ಮಥನಿಸಿದ ಪರಿಯತ್ತನೋಡಲತ್ತೀ ವಾರ್ತೆ
ಅತಿಶಯವಾದಾಗಲಿ ಬಾಚಿದೇವಂ ಮರಳಿ
ಭೂತನಾಥ ಸ್ವರೂಪ ಮಡಿವಳ ಮಹಾರಾಜನಡಿಗೆ ಬಂದೀ ವಾರ್ತೆಯು ||
ತಾತನೆ ತಮ್ಮ ನುಡಿ ಕೇಳಿದಾಕ್ಷಣ ಬಸವ
ಕೇತಿದೇವನ ಸಮವೆಯಾತನಾದನುಯಿದಕೆ
ಪಥವಾವುದಯ್ಯ ಪಾಲಿಪುದು ತಾವ್ ಬಂದಲ್ಲದಿತರದಿಂದಾಗದೆನಲು ||೯೩||

ಮಡಿವಳ ಮಾಚಿದೇವಂ ಕೇಳಿ ಸಂತಸದಿ
ನುಡಿಯಲಹುದಂ ಮರಳಿ ನುಡಿಯಲಹುದಂ ನುಡಿಯ
ನುಡಿದಂತೆ ನಡೆವುದದು ದಂಡನಾಥನಿಗಲ್ಲದಿತರಂದಾಗದೆಂದು ||
ತಡೆಯದಲ್ಲಿಗೆ ಪೊಗಿ ಒಡೆಯರಿಗೆ ನಮಿಸಿನೆರೆ
ಮೃಡರೂಪ ಬಸವ ಮಜಬಾಪು ನಿನ್ನ ಸಮಾನ
ಪೊಡವಿಯೊಳಗೊಳರೆ ಭಕ್ತರು ಜಂಗಮ ಪ್ರಾಣಿಯಹುದಹುದು ನಿಶ್ಚಯವಿದು ||೯೪||

ಎಂದು ಪರಮಾತ್ಮನಿಗೆ ವಿಗಡ ಮಡಿವಳ ದೇವ
ಎಂದನೆಲೆ ಶಿವನೆ ಕೇತಿ ನಿಮಿತ್ಯ ಬಾ ಬಸವ
ಬಂದೆನಿದೆ ಸನ್ನಿಧಿಗೆ ಬಂದೆಡೇನಾಯ್ತಲ್ಲಿ ಮಡಗುವುದುಚಿತ ಕಾರ್ಯವೆ||
ಬಂದ ಕಾರ್ಯವುಯಿಲ್ಲಿ ಮುಂದೆಯಿರುವುದ ತ್ಯಜಿಸಿ
ಚಂದವೇ ಬಂದವರನಲ್ಲಿ ಕುಳ್ಳಿರಿಸಿ ಕೊಳು
ವಂದವಲ್ಲದು ಬೇಗ ಕಳುಹುವುದು ರವಿಶಶಿಗಳಿಲ್ಲದಾಗಸದಂದದಿ ||೯೫||

ಅಂಧಕಾರವದಾಗಿದೇ ಕಳುಹದೊಡೆ ಮೂರು
ಬಂಧುರದ ಲೋಕಗಳಿಗ್ಹೊರಗೆಂದು ಡಂಗುರವು
ನಿಂದು ಸಾರಿಸುವೆನೆಂದಾಗ ಜಾಗಟೆ ಧ್ವನಿಗೈಯಲಾ ಮೃಡನಂಜುತೆ ||
ಬಂದ ಬಸವಾ ಕೇತಿಗಳ ಕರೆದು ಪೋಗಿರೆನೆ
ಇಂದು ಧರನೇ ಲೋಕದಂದ ಬಲ್ಲೆವು ಮರಳಿ
ಬಂಧನಕ್ಕೊಳಗಾಗಲೊಲ್ಲೆವು ಚರಣ ಬಿಟ್ಟು ಹೋಗೆವೆನೆ ಅಹಹಾ ಬಸವ ||೯೬||

ಮನುಮಥಾರಿಯನೆನೆವುತದು ಬೊಡ್ಡಿ ಕಡೆಗೊಯ್ದು
ಅನುವಿನಿಂದಾ ಬಿದಿರು ಕಟ್ಟಿಕೊಂಡವತಂದು ಪುಟ್ಟಿ ಮೊರಗಳನು ಮಾಡಿ ||೮೭||

ಮಾರಿಹಾಗವ ತಂದು ಪದಪದಾರ್ಥವ ಗೂಡಿ
ನಾರಿಯಿಂ ಪಚಿಸಿ ಜಂಗಮರ ಪೂಜೆಯ ಮಾಡಿ
ಸಾರಸುಪದಾರ್ಥಗಳನು ನೀಡಿ ತೃಪ್ತಿಯವಡಿಸಿ ಕನಕದಕ್ಷಿಣವನಿತ್ತು ||
ಚರಣದೊಳ್ಬಿದ್ದವರ ವರ ಪ್ರಸಾದವ ಕೊಂಡು
ಕರದಿಂದೆ ಮೆಚ್ಚಿಸಿದನಟ್ಟವಂಶವನದರ
ಸರಿಯಾಗಿ ಪ್ರಾಣಲಿಂಗದೊಳಡಗಲಿದು ಕೇಳಿ ಬಸವಾದಿ ಪ್ರಮಥರಾಗ ||೮೮||

ಬಂದು ಸಭೆಯಾಗಿ ಕುಳ್ಳಿರ್ದು ದುಃಖಿಸುತಿರಲು
ಕಂದು ಕಂಧರಪರವತಾರ ಮಡಿವಳ ದೇವ
ಬಂದುದಿಲ್ಲವರ ಕರೆಯೆಂದು ಪಡಿಹಾರಿ ಬಾಬರಸರಿಗೆ ಪೇಳೆ ಪೋಗಿ ||
ವಂದಿಸುತೆ ಮೇದರ ಕೇತಿ ಲಿಂಗದೊಳು
ಸಂದನದರಿಂ ಸಕಲ ಗಣರೈದೆ ಬಂದಿಹರು
ತಂದೆ ನಿಮಗೀಗ ಕರೆ ತರುವುದೆನ್ನುತೆ ಕೇಳಲಿಂಗ ನಾಟಂದೆನಿಲಿದು ||೮೯||

ಎಂದು ಪೇಳಲ್ಕೇಳಿ ಬಸವ ಬಂದಿಹನೆಯೆನೆ
ಬಂದು ಕುಳಿತಿಹನವರು ಯೇಂ ಮಾಡಿದಪನೆನಲು
ಮುಂದೆ ದುಃಖಿಸುತೆ ಕುಳಿತಿಹನೆನಲು ಚಂದಾಗಿ ಶೋಕಿಸುತೆ ದುಃಖಿಸುತ್ತೆ ||
ಬಂಧುರದೊಳಂ ಪೇಳು ಬಸವಜಂಗಮ ಪ್ರಾಣಿ
ಎಂದು ನುಡಿ ಮೆರೆದನೇ ಜೀವಗಳ್ಳನ ಬಳಿಗೆ
ಎಂದು ನಾಂ ಬಾರೆನೆಲ್ಲರಗೂಡನಳುವದಕೆ ಬರುವೆನೇ ಪೋಗೆನ್ನಲು ||೯೦||

ಬಾಚಿದೇವಂ ತಿರುಗಿಬಂದು ಸಭೆಗಂ ನಮಿಸಿ
ಸೂಚಿಸಿದ ಮಡಿವಳಯ್ಯನಂ ನುಡಿದ ವಾಕ್ಯವ
ನಾಚಿಕಿಲ್ಲದೆ ಬಸವಚರ ಜೀವಿಯೆಂದು ತಾನಾಡಿ ಮರೆದನಾ ವಚನ ||
ವಚನ ತಪ್ಪಿದ ಬಳಿಕ ವರ ಸಂಗವೇಕೆಂದು
ವಚಿಸಿದರು ಮತ್ತೆಲ್ಲ ಭಕ್ತ ಮಾಹೇಶ್ವರರು
ಉಚಿತವೇಯರುಹಿಸದೆ ಸುಮ್ಮನಿರುವದು ಬಸವನಿರ್ದ ಸಭೆಗಾಂ ಬಾರೆವು ||೯೧||

ಎಂದು ಪೇಳಿದರೆಂದು ಹೇಳಲಾಕ್ಷಣ ಬಸವ
ನಿಂದುಧರನೊಳಗೈಕ್ಯವಾದನದು ನೋಡಿಗಣ

ದ್ಧರಣವಿತ್ತವರುಂಲಿವಲೋಕದೊಳ್ನಿನ್ನಂತೆ
ಪರಿಭಾವಿಸುವರೆಡನೆಯ ಶಂಭವೇ ನೀನುಯೆಂದು ಮಡಿವಳನು ನುತಿಸಿದಂ ||೧೦೧||

ವರವೀರ ಘಂಟಿ ಮಡಿವಳ ಮಾಚೀದೇವರಿಗೆ
ಹರಪುರಾತನರೊಲಿದು ಕೀರ್ತಿಸಿದರಂತೆನಲು
ಸಾರಿದ ಸಭೆಯೊಳೆಲ್ಲರಿರ್ದು ತಿಳಿಯದೆ ಸುಮ್ಮನೆ ಕುಳಿತೆವಲ್ಲದಿತರ ||
ಒರೆದವೆ ಬಸವರಾಜನ ಮರ್ಮ ತಿಳಿದು ನೀ
ವರುಹಿ ಕೊಡಲಾಗ ತನ್ನಯ ಪ್ರಾಣ ಕಳುಹಿಸಿದನು
ಅರರೆಯವಘುಡಿಸಿ ಮೂದಲಿಸಿಯಂಜಿಸಿ ಶಿವನ ತರಿಸಿದಿರಿ ಹೋದವರನು... ||೧೦೨||

ಈ ವೀರಭಕ್ತಿಯು ಪರಾಕ್ರಮವು ಸದ್ಗುಣವು
ಯೀವರ್ಮವೀಯುಕ್ತಿವೀ ಶಕ್ತಿ ಗುರುಭಕ್ತಿ
ಯೀವಿಭುವಿನಭಿಮಾನ ಶಿವಗಣಂಗಳ ಬಿರುದು ಯಿನ್ನಾರಿಗಳವಡುವುದೆ ||
ತವೆಜಂಗಮಕೆ ಪ್ರಾಣಬಸವ ತದ್ಬಸವಂಗೆ
ನೀವು ಪ್ರಾಣವು ಕ್ಷೋಣಿಯೊಳಗೆರಡನೆಯ ಶಿವರೆ
ನೀವಲ್ಲದನ್ಯವಿಲ್ಲಾಗಿ ಬಸವನ ಜೊತೆಗೆ ನಿಮ್ಮ ಕಳುಹಿದ ಪರಮನು ||೧೦೩||

ಎಂದು ಬಹುಪರಿಯಿಂದ ನುತಿಸಿಗಣವೃಂದ ಬಹು
ಚಂದದಿಂ ತಂತಮ್ಮಾಶ್ರಮಕೆ ಪೋದರದ
ರಿಂದ ಜಂಗಮಭಕ್ತಿಯೆ ಮಿಗಿಲು ಲೋಕದೊಳು ಕಂದ ಕರಿಬಸವನೆ ಕೇಳ ||
ಎಂದು ಕಿಡಿಗಣ್ಣೊಡೆಯರಂದು ಪೇಳಲು ಕೇಳಿ
ಮುಂದುವರಿವುತ್ತಿರುವ ಮೋಹದಿಂ ಕರಿಬಸವ
ರಂದು ಗುರುಗಳಿಗೆ ಬಸವರಸರ ಸುಕಥೆಯನು ಮುಗಿವ ಪರಿಯಂತ ಪೇಳಿ ||೧೦೪||

ಎಂದು ಶ್ರೀ ಕರಿಬಸವರಂದು ವಿಜ್ಞಾಪನವ
ಚಂದದಿಂ ಮಾಡಲ್ಕದಂ ಕೇಳಿ ಸಂತಸವ
ನೊಂದಿ ನಿನಗಾನು ಪೇಳುವೆನೆನಲ್ಕುಮದದಿಂದೆ ವಂದಿಸಿದರರ್ತಿಯಿಂದ ||
ಇಂದುಧರ ರೂಪ ಬಸವೇಶ್ವರನ ಕಥೆಯಿದನು
ಮುಂದುವರಿವುತ್ತಿರುವ ಮೋಹದಿಂ ಕೇಳ್ವರಿಗೆ
ಕಂದು ಕಂಧರನೊಲಿದುವರ ಈಪ್ಸಿತವನೀವನೆಂದು ಸತ್ಯಕೇಳು ||೧೦೫||

ಮರುಳ ಸಿದ್ಧಾಚಾರ್ಯ ರಾಮಿದೇವಾಚಾರ್ಯ
ವರಪಂಡಿತಾಚಾರ್ಯ ಗುರುವು ವಿಶ್ವಾಚಾರ್ಯ

ರುರೆ ಮಧ್ಯವದನ ಸುಜಾತ ರೇಣುಕದೇವನುದರ ಭವಘನಲಿಂಗನು ||
ಹರರೂಪ ರುದ್ರಮುನಿ ಕರಜಾ ಮಹಂತಯತಿ
ಚರಣ ಸಂಭವ ಗುರು ಪರಂಪರೆಯೊಳುದ್ಭವಿಸಿ
ದರರೆ ವಲದಿಯಪುರದ ಹಿರೆಮಠಾಧಿಪ ಪಟ್ಟಚರವರ್ಯ ಮಹಂತನುಸುರ್ದ ||೧೦೬||

ಅಂತು ಸಂಧಿ-೫ಕ್ಕಂ ಪದ - ೩೩೯ಕ್ಕಂ ಮಂಗಳ ಮಹಾ

ಆರು

ಸಂಧಿ

ಪಲ್ಲವಿ : ಶ್ರೀ ಬಸವರಾಜ ಕಲ್ಯಾಣ ಪಟ್ಟಣದೊಳತಿ
ವೈಭವದೊಳಂ ಗಣಸಮೂಹದಿವ ಸಲಿಸಿ
ತಾಭವ ಗೆಲಿದುವಗಣಿತ ಮಹಿಮೆಗಳ ಮೆರೆದು ಸಂಗಮನೊಳೈಕ್ಯವಾದಂ ||

ಗೋಪಶಕಲ ವಿಜಟಾಜೂಟ ರಾಜಿತ ವಿಮಲ
ಗೋಪಮಿತ್ರಂ ವೀತಿ ಹೋತ್ರ ತ್ರಿನೇತ್ರವರ
ಗೋಪಭವ ವಕ್ಷೋಜ ನಿಹಿತಸು ಕಟಾಕ್ಷಮೃತಗೊ ತರಂಗಿಣಿಗೊ ಶಶಿ ||
ಗೋಪಯ ಸ್ವರೂಪ ಗೋಪವಾಹನ ಸಂತಾನ
ಗೋಪರಥ ಗೋಗೋಜ ಗೋತ್ರವಲ್ಲಭ ಚೈತ್ರ
ಗೋಪಚಿನ್ಹಧವಳಗಾಗ್ರ ಗೋಪತಿಸೂತ್ರಗೋರಾಡ್ವ ರೂಥಜಯತು ||೧||

ಎಲೆಮಗನೆ ಕರಿಬಸವ ಕೇಳ್ಬಸವರಾಜನ ವಿ
ಮಲಕಥೆಯದುಳಿದಿರುವದೆಂತೆನಲು ಪೇಳ್ವೆಸಲೆ
ಸುಲಲಿತದೊಳೊಂದಿನಾಸ್ಥಾನಕೈದುವ ಸಮಯ ದೊಳಗಾಗ ಜೈನರೆಲ್ಲ ||
ಹುಲು ಜಂಗಮವ ಮಾಡಿ ಬಸವ ನಮ್ಮೋಣಿಯೊಳು
ಪಲವರಿಲ್ಲಹರೆಂದು ತೋರಲಾಗಂ ಬಸವ
ನಲವಿನಿಂ ಶರಣೆಂದು ಬಹುದು ಸ್ವಾಮಿಯೆ ನೀವುಯಿಲ್ಲಿರುವುದುಚಿತವಲ್ಲ ||೨||

ಎಂದು ಕರಿಯಲ್ಕಾಗ ಬಂದು ಸಜೀವದೊಳು
ಬಂಧುರದಿ ಮತ್ತೊಮ್ಮೆ ಭಿತ್ತಿಯೊಳು ಚಿತ್ತವನು
ಸುಂದರದ ಜಂಗಮಾಕೃತಿ ರಚಿಸಿ ಬಸವಂಗೆ ತೋರಲಾಕ್ಷಣ ಶರಣೆನೆ ||

ಬಂದರವರಿಗೆ ಚರಸಮೂಹದೊಳ್ಕಲಸಿ ಮ
ತ್ತೊಂದು ದಿನವಾಸ್ಥಾನದೊಳ್ಳುಳಿತ ಸಮಯದೊಳು
ವಂದು ಹರವಿಯನೆತ್ತು ವಂದದೊಳು ಕರವನೆತ್ತುತ್ತೆ ಹೋ ಹೋ ನಿಲ್ಲೆನೆ ||೩||

ಬೊಟ್ಟಿನನಿತುಂ ಭಸ್ಮಧರಿಸಿ ಜನರಿಗೀಗ
ಬೆಟ್ಟದನಿತ್ತುಚ್ಚಿರುವದೆಂಬ ಗಾದಿಯ ತೆರದಿ
ತಟ್ಟನೀ ಸಭೆಯೊಳಗೆ ಸುಮ್ಮನಿರ್ದೊಮ್ಮಿಂದೊಮ್ಮೆಲೆ ಕರದನೆತ್ತಿದ ಪರಿ ||
ನಿಟ್ಟಕೀಗತಿ ಪೇಳ್ವುದೆಂದು ಬಿಜ್ಜಳ ನುಡಿಯೆ
ನೆಟ್ಟನಾ ಬಸವ ತನ್ನಯ ವಿಶೇಷಣ ತಾನೆ
ದಿಟ್ಟತನದಿಂ ಪೇಳ್ವಡದು ಆತ್ಮ ಪೌರುಷವದೆನಿಪುದದು ಪೇಳದಿರಲು ||೪||

ನೆಟ್ಟನೀ ಸಭೆಯೊಳಗೆ ಹಾಸ್ಯವಾಗಿ ತೋರುವದು
ಕಷ್ಟ ಬಂತಿದನೆಂತು ಮಾಡುವೆನೆನಿತು ಮನದಿ
ಶಿಷ್ಟನಾಗಲೆ ಬಗೆದು ದಿಟವಿರ್ದುದಂ ನುಡಿವೆನೆಂದಾವೃತ್ತಾಂತವ ||
ಸ್ಪಷ್ಟವಾಗಿಯೆ ಪೇಳ್ದನೆಂತೆನಲು ಗೊಲ್ಲತಿಯು
ನಿಟ್ಟಕಾ ತ್ರಿಪುರಾಂತಕೇಶ್ವರನ ಮೂಡುಗಡೆ
ಬಟ್ಟೆಯೊಳ್ಕಪಿಲೇಶ್ವರನಿಗೋರ್ವ ತಾಪಸನು ಸಾವಿರಾರು ನೂರ್ಖಡುಗ ||೫||

ಕ್ಷೀರಾಭಿಷೇಕವನು ಮಾಡಲದು ಪರಿವುತಿರೆ
ಕರಿತುರಗಗಳ ಮೆಟ್ಟಿ ಜೌಗೆದ್ದಿದಲ್ಕಲ್ಲಿ
ನೆರೆ ಪುಟ್ಟಿಯೊಳ್ಪಾಲ್ಮೊಸರು ತುಂಬಿ ತಲೆಯೊಳಗೆ ಧರಿಸಿ ಪೋಗುತ್ತುಮಿರಲು ||
ಜಾರಿ ಬೀಳುವ ಸಮಯದೊಳ್ಬಸವ ನೀನೆ ಗತಿ
ತಾರಿಸುವದೆಂದು ನುಡಿಯಲ್ಕರಿದು ಕರವೆತ್ತಿ
ಧರೆಗೆ ಬೀಳದ ತೆರದಿ ಪುಟ್ಟಿ ನೆಗಹಿದೆನವಳ ಕೇಳ್ವುದು ದೊರೆಯನೆ ||೬||

ಚರರ ಕಳುಹುತ್ತೆ ಧರಣಿ ಪತಿಯು ತಾಟಕಿಯ
ತರಿಸುತ್ತೆ ಕೇಳಲಾ ಬಸವ ಪೇಳಿದ ತೆರದಿ
ಬರೆದು ಹಸ್ತದ ಪಂಕ ತೋರಲಾಕ್ಷಣ ದೊರೆಯು ಶರಣೆಂದನಾ ಬಸವಗೆ ||
ಅರಿಯದಾನು ನುಡಿದ ತಪ್ಪ ಮನ್ನಿಪುದೆಂದು
ತರಿಸಿ ಶಾಲೆಯ ಗೊಲ್ಲತಿಗೆಯಿಡಿಸಿ ಕಳುಹಿದನು
ಪರಮಪಾವನ ಶೀಲವಂತ ಮಹಿಮೆಯನಿಂತು ಮೆರೆವುತಲೆ ಸುಖದೊಳಿರಲು ||೭||

ಅಲ್ಲಮಪ್ರಭುವೆನಿಪ ಸಯ್ಯಮಿಯು ವಿದ್ರೂಪ
ನಿಲ್ಲದಾಗಲೆ ಪಲವು ರೂಪಗಳ ಧರಿಸುತ್ತೆ

ಸಲ್ಲಲಿತ ಕಲ್ಯಾಣದೋಣಿ ವೋಣಿಯೋಳೋರ್ವರಾಗಿ ಬರಲಾ ಬಸವನು ||
ತಲ್ಲಣಿಸದದರಂತೆ ಭಕ್ತರೂಪವಧರಿಸಿ
ಬಲ್ಲ ಮಹಿಮನುಯೆದುರಿಗ್ಹೋಗಿ ನಮಿಸುತ್ತವರ
ನೆಲ್ಲರನು ಕರೆತಂದು ತನ್ನರಮನೆಯ ಬಾಗಿಲೊಳಗೊಂದೆ ರೂಪದಿಂದ ||೮||

ಇಬ್ಬರು ಪೋಗಲ್ಕಾರ ಸಬ್ಬರಿದನದ್ಭುತದಿ
ತಬ್ಬಿಬ್ಬಿನಿಂದೆ ಸಾಷ್ಟಾಂಗವೆರಗಲು ನೋಡಿ
ಮಬ್ಬಿನಿಂ ಪರಸುತಿರೆ ಮೊದಲೆ ರಚಿಸಿಟ್ಟಿರುವ ಶೂನ್ಯ ಸಿಂಹಾಸನದೊಳು ||
ಸಬ್ಬೆರೆಯನನ್ನು ಕುಳ್ಳಿರಿಸಷ್ಟವಿಧದಿಂದೆ
ಹುಬ್ಬುತಿಹ ಸಂತೋಷದಿಂದರ್ಚಿಸುತ ನಮಿಸಿ
ಸಬ್ಬಗಣರೊಡಗೂಡಿ ಚರಣತೀರ್ಥವ ಕೊಂಡು ಕನಕದ್ವರಿವಾಣದೊಳು ||೯||

ಪರಮ ದೇವಾನ್ನ ದಿವ್ಯಾನ್ನ ರಾಜಾನ್ನಗಳು
ಸರಳ ಶಾವಿಗೆ ಫಾಲಿಗುಂಡ ಸಾಲೆಯ ಬೀಜ
ಪರಡಿ ಪಾಯಸ ಭಕ್ಷ ಸಂಡಿಗ್ಹೆಪ್ಪಳ ಕ್ಷೀರ ಪಾಯಸ ಹೆಸರುಗ್ಗಿಯು ||
ಕುರುಡಿಗೆಯು ಲಡ್ಡಿಗೆಯು ಯೆಳ್ಳು ಸಂಡಿಗೆ ಪುಗೆವು
ಕರದ ಹೂರಣ ಗಡಬ ತೈಲ ವೃಂತಾಕ ಫಲ
ಭರದೊಳಾ ಶರ್ಕರೆ ಘೃತ ಕ್ಷೀರವ ಮಹಿಮನು ಬೇರೆ ಬಟ್ಟಲದೊಳಗವು ||೧೦||

ಹಿರೆಬೆಂಡಿಯು ಚೌಳಿಚೌಧಾರಿ ಕೇಳಿಫಲ
ಕ್ಷೀರ ಹರಿತಂ ರಾಮಗುಂಬಳಸು ಪಡುವಲವು
ಸಾರ ಚಗಚಿಯು ಮುಲಂಗಿ ಕಾರ್ಚಿಕಾಯಿಯೆ ಮೊದಲಾದ ಪಚನಫಲಗಳನು ||
ಸರಸ ಮೆಂತಿಯು ರಾಜಗಿರಿ ಸಬಸಿ ಚಿಗ್ಹೋಳಿ
ವರಗೋಳಿ ಪುಂಡಿಹುಳಚಿಕೆ ಕಲ್ಲ ಸಬಸಿಗೆಯು
ಹರಿಬೇರ ನುಗ್ಗಿ ಮೊದಲಹ ಪಲ್ಯಗಳಿಗೆ ಹೃಂಜಲಸುನದೊಗ್ಗರಣೆಯ ||೧೧||

ಹಾಕಿದಸು ಪದಾರ್ಥಪದಗಳನೆಡೆ ಮಾಡುತಲಿ
ಸಾಕೆನಿಸುತಾಮ್ರಲಿ ಕುಚನ್ನೆಲಿಯಂ ಬಾಡಿ
ಬೇಕೆನಿಪ ಮಾಗಣೆಯು ರಂಜಿಕೆಯು ಮೊದಲಾದವುಪ್ಪುಗಾಯ್ಗಳ ನೀಡುತೆ ||
ಕಾಕವಿಲ್ಲದ ನಾರಗಡ್ಡಿ ಹೆಚ್ಚಿಸಿಯದಕೆ
ಪಾಕವಾಗಿಹ ಕಡಲೆ ಪಿಷ್ಟ ಮೊಸರಂಗಬೆರಸಿ
ಸ್ವೀಕರಿಪ ಸವಿಯುಳ್ಳ ಪಚ್ಚಡಿಯನೆಡೆ ಮಾಡಿ ಶರಣಾರ್ಥಿಯೆಂದೆರಗಲು ||೧೨||

ಅಲ್ಲಮ ಪ್ರಭುಗಳಾಗಲೆ ಲಿಂಗಕರ್ಪಿಸುತೆ
ಧಲ್ಲಲಿತ ಭೋಜ್ಯಗಳ ಕಟ್ಟಿಸಲಿಸುತ್ತಿರಲು
ಯೆಲ್ಲ ಜಂಗಮರ ದೆಸೆಯಿಂ ಮಾಡಿಸಿರುವ ಸುಪದಾದರ್ಥವನೆಲ್ಲವನು ನೀಡೆ ||
ನಿಲ್ಲದೆಡೆಮಾಡಿದ ಪದಾರ್ಥವೆಲ್ಲವ ಸಲಿಸಿ
ಇಲ್ಲೆನಿಸುತಿರೆ ಬಸವ ಮನೆಯೊಳಿರುವ ಪದಾರ್ಥ
ವೆಲ್ಲವನು ಸವರಿ ನೀಡಲು ಸಲಿಸಿ ಚನ್ನಬಸವೇಶ್ವರನ ಮನೆಯೊಳಿರುವ ||೧೩||

ಬಲ್ಲಿದಂ ಬಸವೇಶನೆಲ್ಲವ ತರಿಸಿ ನೀಡ
ಲಲ್ಲಮ ಪ್ರಭು ನೋಡಿದಾಕ್ಷಣ ಕರಗತಿರಲು
ತಲ್ಲಣಿಸದಾಗ ಕಲ್ಯಾಣ ಪಟ್ಟಣದ ಭಕ್ತರ ಮನೆಯೊಳಿಹ ಪದಾರ್ಥ ||
ಎಲ್ಲವೆಳ್ಳನಿತಿಲ್ಲದಂತದು ತರಿಸಿ ನೀಡೆ
ಒಲ್ಲೆನೆನ್ನದೆ ಹಸ್ತಮುಟ್ಟಿದಾಕ್ಷಣ ಕರಗೆ
ಬಲ್ಲಬಸವಂ ನೆಲ್ಲು ಗೋಧಿ ಕಡಲೆಯು ಹೆಸರು ಅಲಸಂದಿ ಅವರೆತೊಗರಿ ||೧೪||

ಚಣಗಿ ಜೋಳವು ಸಜ್ಜೆ ಲೆಂಕೆಯುವ ಪಾಣಿಗಳ
ಮಾಣದಲೆ ನವಣೆ ಬರಗಂ ಸಾವೆ ಹಾರಕವು
ಕಾಣುತಿಹ ತನ್ನ ಮನೆಯೊಳಗಿರುವ ಧಾನ್ಯಗಳೊಂದೊಂದುಳಿಯದಂತೆ ನೀಡೆ ||
ತಣೆಯದೆಯಿರಲು ರಾಜರರಮನೆಯ ಧವಸವನು
ಗಣನೆಯಿಲ್ಲದೆ ತುಂಬಿಸಿರುವ ಬಳತಗಳು ಹಗೆ
ಗಣಜಗಳನೊಡೆದು ತರಿಸವ ನೀಡುತಿರೆ ಬಸವ ಬಾಣತಿಯ ಬಸುರಿನಂತೆ ||೧೫||

ಎಡೆಯೊಳಗೆ ಭಗಭಗವೆನುತ್ತಿರಲ್ಕೆಲೆ ಬಸವ
ನೀಡುನೀಡೆನೆ ಕಟಕದೊಳಗಿರುವ ಧಾನ್ಯವನು
ಪಂಚಮ ಪರುಷದಿಂದೊಂದಬತ್ತು ಸಾವಿರ ಲಕ್ಷ ಕೋಟಿ ಭಾಗ ||
ತಡೆಯದಾಗಲು ಸಾಲದ ತೌಡ ಮೊದಲಾದ
ಮಡುಗಿ ನೀಡಲು ಪಂಚಪರುಷನೀಳನಗೈದು
ಕಡಿಮೆಯಾಗಲ್ಕರಿದು ಪೊಡೆಯೊಳಗೆ ಪದಿನಾಲ್ಕು ಲೋಕಗಳಡಗಿಸಿಹನೆ ||೧೬||

ಒಡೆಯಗಾಂ ತೃಪ್ತಿಪಡಿಸುವಡೆನ್ನಳವೆ ಬಡವ
ನೀಡುವೆವೆನುವರ್ಗರ್ವಬಂದ ಮಾತ್ರದಿನೆನಗೆ
ಕಾಡುತಿಹನೆಂದರಿದು ಮಾಚಿದೇವಡ್ಡಣಿಗೆ ಚನ್ನಬಸವನೆ ಹರಿವಣಂ ||
ಮೃಡಮೂರ್ತಿ ಬಸವರಾಜಂ ಪದಾರ್ಥವಾಗೇ

ಪೊಡವಿಯೊಳಗಷ್ಟಾಂಗದಿಂ ನಮಿಸಲದು ನೋಡಿ
ಕಡುಗಲಿ ಬಸವರಾಜನ ಹುದಹುದು ದಾಸೋಹಿ ಸೋಹದಿಂದಿನಿತಾಯ್ತು ||೧೭||

ಎಂದು ತೃಪ್ತಿಯವಡೆದು ತೇಗಿ ಮೂವರ ಕರೆದು
ಬಂಧುರದೊಳಪ್ಪಿ ಮುಂಡಾಡಿ ಮುದ್ದವ ನೀಡಿ
ಮುಂದೆಯಿದರಂತೆಯಾಗಲ್ಕಿನಿತು ದಂದುಗವದೇಕಾಗಲೆನಹುದು ಬಸವ
ಇಂದುಧರ ರೂಪನೀನಹುದು ಲೋಕದೊಳು
ಯೆಂದುಗೀಳನಗ್ಯೆದ ಪಂಚಪರುಷಗಳೀಯ
ಲಂದು ಮೂವರು ಧರಣಿಗೊಂದಿ ಸಾಷ್ಟಾಂಗವನುವಜ್ಞಾನ ಮೂಢರಾವು ||೧೮||

ನಮ್ಮಯಪರಾಧವನು ಕ್ಷಮಿಸಿ ಪಾಲಿಪುದೆಂದು
ಗಮ್ಮನೇ ನುತಿಸಲತಿ ಕರುಣದಿಂದಭಯವನು
ಬೊಮ್ಮರೂಪನು ಕೊಡಲ್ಕತ್ತು ಲಕ್ಷದ ಮೇಲೆ ತೊಂಭತ್ತಾರು ಸಹಸ್ರಂ ||
ತಮ್ಮಯಾಶ್ರಮದೊಳಗೆ ಲಿಂಗಾರ್ಚನೆಯನೆಸಗಿ
ಸುಮ್ಮನೆ ಚರರು ಕುಳಿತಿಹರು ನಿತ್ಯದ ಸಮಯ
ಕಿಮ್ಮಡಿಸಿ ಮೇರೆ ಮೀರಿತು ಬಸವ ನಮ್ಮೆಲ್ಲರನು ಮರೆತುಬಿಟ್ಟನಮಮ ||೧೯||

ಎಲ್ಲಿಯಿಂ ಬಂದನೊ ಕುಲಂದಾವದೋಯಿವನ
ಬಲ್ಲತನದಾವುದ್ಯೆ ಮಗಂ ತಿಳಿಯದಿವನ ಸ್ಥಲ
ವೆಲ್ಲಿಹುದೊ ಹುಟ್ಟಿದ ನಡೆಲ್ಯೊ ಗಾವಿಲನನಾಚಾರಿ ದುರ್ಗುಣ ವೇಷವ ||
ಹಲ್ಲಣಿಸಿ ಕೊಂಡಿವನ ಮರುಳ ಮಾಡಿದನಮಮ
ತಲ್ಲಣಿಸದಿವನ ಚರಿಸಿದವರುವರು
ಬಲ್ಲಚಾಣರುಗಳಿಗೆ ಹೇಳುವರದಾರು ನಿತ್ಯದ ನೇಮ ತಪ್ಪಲಿವರು ||೨೦||

ಸತ್ತು ಹೋಗುವರಷ್ಟೆ ಯೆತ್ತ ಹೋಯಿತೊ ವ್ರತವ
ಮಿಥ್ಯಕೀ ಲೋಕ ರಂಜನೆಯ್ಯೆಸೆ ಸತ್ಯವದು
ಪಥ್ಯಕಿಲ್ಲದೆ ಹೋಯಿತು ಅತಿಪರಿಚಯದಿಯವಜ್ಞಯದೆಂದು ನೀತಿಯಹುದು ||
ತಥ್ಯವಾಯಿತು ಜಂಗಮರುಯಿರುವರೋ ಮತ್ತೆ
ಸತ್ತರೋಯೆಂಬ ಸ್ಮರಣೆಯದಿಲ್ಲದ್ಹೋಯಿತವ
ರಕ್ತನಾವಿತ್ತವಿನ್ನೆತ್ತಾದರುಂ ಪೋಗಬೇಕೆಂದು ಸಮಯದಲ್ಲಿ ||೨೧||

ಅಲ್ಲಮನುಣುತ್ತಿರುವ ಶೇಷವನು ಸರ್ವಚರ
ರೆಲ್ಲರ್ಗೆ ತೃಪ್ತಿಯಾಯಿತು ಲೋಕದೊಳಗಿರುವ

ಸುಳ್ಳಲ್ಲವಿರುವೆ ಮೊದಲಾನೆ ಕಡೆಯಾದ ಚತುಸೀತ ಲಕ್ಷಪ್ರಾಣಿಯು ||
ಸಲ್ಲಲಿತದಿಂ ತೃಪ್ತಿಯಾಯಿತಿತ್ತೀ ಬಸವ
ನೆಲ್ಲ ಜಂಗಮರಲ್ಲಿ ಹಸಿದು ಕುಳಿತಿಹರಷ್ಟೆ
ಬಲ್ಲತನದಿಂದವರು ಬುಲ್ಲವಿಸಿ ಕರೆತರುವದೆಂದು ಧೀಯುತರ ಕಳುಹೆ ||೨೨||

ಅವರು ಪೋಗುತ ಚರರಿಗಷ್ಟಾಂಗದಿಂ ನಮಿಸಿ
ಶಿವರೂಪ ಚರಮೂರ್ತಿಗಳೆ ತೀವ್ರ ಬಾಹುವದು
ಭಾವಜಾಂತಕನೆ ತಾನಲ್ಲಮನೆನಿಸಿ ಬರಲ್ಕವರನುಪಚರಿಸುತಿನಿತು ||
ತವೆ ವೇಳ್ಯವಾಯಿತಾದರೆ ಕ್ಷುಧೆಯ ಕೋಪಿಸದೆ
ತಾವು ಬರುವುದೆನಲ್ಕೆ ನಾವಿನಿತು ವೇಳ್ಯದೊಳು
ಜೀವವಿಡಿದಿಹೆವೀಗವರುದೋರಿತೆ ನಿಮಗೆ ನಾವಾದರಿನಿತು ವೇಳ್ಯ ||೨೩||

ತಾಪವಾದೆವು ಕೋಪದಿಂ ಬಹಳ ಬೈದೆವಿದ
ನಾ ಪರಮನಿಂದಾದ ಕೃತ್ಯವೋ ಬಸವ ತಾನೆ
ತಾಪವನು ತಿಳಿದಿರ್ದ ಸ್ಥಲದಲ್ಲಿಯೇ ತೃಪ್ತಿಪಡಿಸಿದನೊ ತಿಳಿಯದಿದನು ||
ಗೋಪ್ಯದಿಂದವೆ ಜಠರ ಪೂರ್ಣವಾಗಿಹುದೆಮಗೆ
ರೂಪಿಸಿದ ಪೇಳ್ದಪರೆ ಮತ್ತೆ ಪೊಡೆಗಳ ತೊರೆ
ಯೀ ಪರಿ ಮಹಿಮೆ ನಾವು ಕೇಳ್ದರಿಯವೆಂದವಶ್ಚರ್ಯದಿಂ ಮರಳಿ ಬಂದು ||೨೪||

ಬಸವರಾಜಂಗೊರೆಯಲದು ಕೇಳಿ ಸಂತಸದಿ
ಪಶುಪತಿಯ ಮಹಿಮೆಯಿದನೆಂದರಿಯೆ ಕಟಕದೊಳು
ವಶವಲ್ಲದಿರುವ ಧಾನ್ಯವ ತರಿಸಿದದನವರ ಹಗೆ ಬಳತಗಳಗೆಗಳನು ||
ಸೂಸುವಂತಿರೆ ತುಂಬಿ ತೋರೆ ಮಂಚಣ್ಣನುರೆ
ಪೂಷನುದಯದೊಳೆ ಬಿಜ್ಜಳನ ಮಂದಿರಕೈದಿ
ಸಾಸಿಗನು ಪೇಳ್ದ ಬಸವೇಶನರಮನೆಗೆ ನಿನ್ನಿನ ದಿವಸ ಒಬ್ಬ ಯತಿಯು ||೨೫||

ಬಂದಿಹನವನು ಬ್ರಹ್ಮರಾಕ್ಷಸನೊ ತಿಳಿಯದದು
ಕುಂದದೀ ಕಟಕದೊಳು ಪಚಿಸಿ ಪದಾರ್ಥವನು
ತಿಂದನದು ಸಾಲದಾ ಬಸವನರಮನೆ ಧವಸ ನಿಮ್ಮ ಧವಸಗಳುಳಿಯದೊ ||
ಚಂದದಿಂದವು ಹೊತ್ತು ಹೊತ್ತುಡಕಿ ಸಾಲದಲೆ
ಮುಂದೆ ಕಲ್ಯಾಣದೊಳಗಿರುವ ಧಾನ್ಯವ ತರಿಸಿ
ಬಂಧುರದೊಳಂ ನೀಡೆ ತೌಡಮೊದಲಾದವನು ಸಾಲದ್ಹೂಂಕರಿಸುತಿರಲು ||೨೬||

ತಾವೆ ಮೂವರು ಬಸವ ಚನಬಸವ ಮಡಿವಳನು
ತಾವೆ ನಿಮಗರ್ಪಿತವೆನುತ್ತೆರಗೆ ತೇಗಿದನು
ಭಾವವಾವುದೊ ತಿಳಿಯದದು ನಿಮ್ಮ ಕೋಟಿಯನು ಹಾಳಾಗಿ ಹೋಯಿತಲ್ಲ ||
ಶಿವಶರಣರೆಲ್ಲೆಡೆಯೊಳಿರಲವರವರು ವಂದೆ
ತವೆ ನಿಜ ಕುಟಾರ ಬಾಚರಸರೊಂದಿನಿತಾದ
ರವನೀಶಗರುಹದಲೆ ನಾನೆಂತು ಕೊಡುವೆನೆಂದೋಚಿಸಿದನೆ ಸ್ವಲ್ಪಾದರು ||೨೭||

ಒಳಹೊರಗವರೆಯಾದರಿನ್ನು ನಿಮ್ಮಂ ಕೇಳ್ವ
ರೊಳರೆ ನಾವೇನಿರ್ದು ಮಿತ್ಯ ಗುರಿಯಾಕೆಂದು
ಪೇಳಲಾಕ್ಷಣ ಕಣ್ಣಕೆಂಪಾದವಾ ಮೀಸೆ ಹುರಿಯೇರುತೌಡುಗಚ್ಚಿ ||
ಕಳವಿನಿಂದಿಂತೆನ್ನ ಪಾಳ್ನೋಡುವರೆಯೆಂದು
ತಳವಾರರಂ ಕಳುಹಿದಂಡನಾಥನ ಕರೆಸಿ
ಹಳಹಳನೆರಡು ಮಾತಕಳವಳವದಿಲ್ಲದತಿ ಕೋಪದಿಂದಾಡಿದನು ||೨೮||

ಎಲೆಬಸವ ನಿನ್ನೊಳಗೆ ವಿಶ್ವಾಸದಿಂ ಮನೆಯ
ನಲೆಯೊಪ್ಪಿಸಿದುದೆ ತಪ್ಪಾಯ್ತೆನ್ನನಂ ಕೇಳದ
ದಲೆ ಮನೆಯ ಧಾನ್ಯವನೆಲ್ಲವ ಕೊಂಡು ಪೋಗುವರೆ ನಮಗಾರು ದಿಕ್ಕುವಿಲ್ಲ ||
ಭಲರೆ ನಿಮಗಾರಿದುರುಯಿಲ್ಲದಂತಾಯ್ತೊರೆಗೆ
ಒಳಗೆ ನೀವಾದಿರಿನ್ನಾರ್ನಮಗೆ ಕೇಳುವರು
ತಲೆಯ ಕೊಯ್ದರೆ ಕೇಳುವವರಿಲ್ಲದಂತಾಯ್ತು ಇನಿತು ಮತ್ಸರವೇತಕೆ ||೨೯||

ಧರೆಯ ಪಾಲಕತನವ ನೀವೇ ಕೊಳ್ಳಿರಿ ನಾವು
ದೂರದೊಳಗೆಲ್ಲಾದರುಂ ಜೀವಿಸುವೆವೆನಲು
ಪೂರ ತಿಳಿಯದೆ ತಾವು ಹೇಳಿಕೆಯ ಮಾತವನು ಕೇಳಿನಿತು ಕೋಪದಿಂದ ||
ಜರಿದಾಡಿದೊಡೆ ದೊರೆತನಕಿದಿರಾರುಂಟು
ತೆರೆದು ನಿಮ್ಮಯ ಪಗೆಕುಟಾರ ಬಳತಂಗಳರು
ಇರದೆ ನೋಡಲು ಬಹುದವೆಂದವರ ತೊಂಡುಲ ಹೋಗುವೆನು ತೋರಲಾಗಿ ||೩೦||

ಪೂರವಾಗಿಯೆ ಸೂಸುತಿರೆ ನೋಡಿ ಬಿಜ್ಜಳನು
ಮಾರವೈರಿಯೆ ನೀನಿಜಗಕೆಯಹುದಹುದೆಂದು
ಸಿರಿಚರಣಕೆ ನಮಿಸಿ ಮಾಡಿದಪರಾಧವನು ಕ್ಷಮಿಪುದೆಂದಡ್ಡಬೀಳೆ ||
ಶಿರವಿಡಿದವನನೆತ್ತಿಯಭಯವಿತ್ತೆಲೆ ಭೂಪ

ಪರಿಕಿಸದೆಯಾಡುವದದನುಚಿತವು ತಿಳಿಯದಿದು
ಹೆರರಮಾತಿಗೆ ಕಿವಿಯಗೊಡುವದತಿ ಮೂರ್ಖತ್ವದಿಟವಿರ್ದದಾಡಲುಂಟೆ ||೩೧||

ಎಂದು ಹಸ್ತದ ಪಿಡಿದು ಓಲಗಕೆ ಬಂದುಭಯ
ದಂದು ಸಿಂಹಾಸನದೊಳಂ ಕುಳಿತು ಭೂಪನತಿ
ಮುಂದುವರಿವುತ್ತಿರುವ ಮೋಹದಿಂ ಬಸವಂಗೆ ವಿಜ್ಞಾಪನಂಗೈದನು ||
ಬಂದವರದಾರೆನಿತು ಭುಂಜಿಸುವುದೇ ನಮಿತ
ಬಂಧನವದಿಲ್ಲದಾಯ್ತೆಂದಿಂಗೆ ಕೇಳ್ದರಿಯ
ವೆಂದು ಕೇಳಲ್ಕಲ್ಲ ಮನು ನಿರಂಜನನದ್ವಯನು ನಿರಾಬಾರಿ ಗುರುವೆ ||೩೨||

ನನ್ನ ಮೇಲತಿ ದಯಾಲೋಕನದಿ ಬಂದಿಹರು
ನಿನ್ನಿವರ ತೃಪ್ತಿಪಡಿಸುವೆನೆಂದು ತಿಳಿಯದಲೆ
ನನ್ನಿಯಿಂದಗಣಿತ ಪದಾರ್ಥವನೀಡೆ ಭಸ್ಮವಾಯಿತು ಕ್ಷಣದೊಳು ||
ಬನ್ನ ಬಟ್ಟೆವು ನಾವೆ ಅನ್ನವೆಂದೆರಗೆ ಬಹು
ಮನ್ನಿಸಿದರಿವರುಂಡ ಶೇಷಚರ ಜೀವಿಗಳಿ
ಗಿನ್ನು ತೃಪ್ತಿಯದಾಯ್ತು ಕೇಳೆಂದು ಪೇಳಲೊಬ್ಬಂ ತೃಪ್ತಿದಡಿಯೆಸರ್ವ ||೩೩||

ಜೀವಗಳಿಗದು ತೃಪ್ತಿಯಾಯ್ತೆಂದು ಪೇಳುವಿರಿ
ಭಾವಿಸುವಡೀ ದುರ್ದರದ ಜಠರದೊಳ್ ಶೇಷ
ವಾವಗಿರುವದೆಯೆನಲ್ಕುಂಟು ತೋರೆನೆ ಕಪ್ಪೆಯುದರವನು ಬಗೆದು ತೋರೆ ||
ಶಿವರೂಪನಲ್ಲಮನು ಸೇವಿಸಿರುವ ಪದಾರ್ಥ
ಕವಿದದರೊಳಿನಿತಿನಿತು ಸರ್ವ ದ್ರವ್ಯವನಿರಲು
ತವೆನೃಪನೆಯಾದಿಯಾಗಿಹ ಸರ್ವಜನರು ನೋಡಶ್ಚರ್ಯರಾದರಾಗ ||೩೪||

ಕಪ್ಪೆ ಪ್ರಾಣವನಿತ್ತು ಕಳುಹಿದ ಮಹಾಮಹಿಮ
ತಪ್ಪುರತಿ ಬಿಜ್ಜಳ ಮಹಾರಾಜ ಮೊದಲಾದ
ರೊಪ್ಪುಗೋಳುತಂ ನುತಿಸಿನತಿಶೀಶನೇಯೆಂ ಬಹುಮಾನಮಂ ಮಾಡಲು ||
ನೆಪ್ಪಿನಿಂದಲ್ಲಮನ ಚರಣ ಸೇವೆಗೆ ಮನಿಗೆ
ಅಪ್ಪಣೆಯ ತೆಗೆದುಕೊಂಡಾಗ ಬಂದಲ್ಲಮನ
ಗಪ್ಪನಾಗತಿ ಸಫಲದಷ್ಟಾಂಗದಿಂ ನಮಿಸಿಯನುಭವ ಮಂಟಪದ ||೩೫||

ಕುಳಿತು ಏಕಾಂತವಾಗಿಯೆ ಪ್ರಶ್ನೆಗೈದನದು
ನಳಿಕ ಲೋಚನ ಮಹಾಗುರುವೆ ತಾವ್ ಪೂರ್ವದಲಿ

ಥಳಥಳಿಸುತಂ ಬಂದು ಸುಗುಣದಷ್ಟಾಂಗವನು ಬೋಧಿಸಿದಿರೆಲೆ ದೇವರೆ ||
ಸೆಳೆಮಿಂಚಿನಂತೆಸೆವ ಮಂತ್ರಲಯ ನಟರಾಜ
ಕಳೆವೇರ್ವ ಶಿವಯೋಗ ಮೊದಲಾದ ಸಾಧನವ
ಸ್ಥಲವೈದು ಭಕ್ತಮಾಹೇಶ್ವರ ಪ್ರಸಾದಿಯೂ ಪ್ರಾಣಲಿಂಗಿಯು ಶರಣವು ||೩೬||

ವರತಾರ ಕೋಪದೇಶವನಾದ ಬ್ರಹ್ಮವನು
ಸುರುಚಿರೋನ್ನತವಾಗಿ ಸದ್ಗುಣ ಸಹಾಯವನು
ತಾರತಮ್ಯದಿ ತಾವನುಗ್ರಹಿಸಿರುವ ಪರಿಯನಾಚರಿಸಿದೆನು ಬೇಗದಿ ||
ಅರಿದೆನವನೆಲ್ಲವನು ಚಕ್ಷು ಗೋಚರಮಾದ
ಪರಿಯದೃಶ್ಯಂ ನಾಶವಾಗುವದದೆಂತೆನಲು
ಅರಿಯದಲೆ ದೃಶ್ಯಂ ತನ್ನಸ್ಯವೆಂದುಸುರುತಿಹ ಸೂಕ್ತಿಯರಿಯಲ್ಕ ನಿಜವು ||೩೭||

ಅಳುವ ಮಕ್ಕಳ ಕೈಲೆ ಗಿಂಡಿ ಕರಣೆಯ ಕೊಟ್ಟು
ತಳುವದವರಿಗೆ ಸಮಾಧಾನ ಮಾಡಿದ ಪರಿಯು
ಸೆಳೆಮಿಂಚಿನಂತೆಸೆವೆ ನಾದಬಿಂದುಂ ಕಳೆಯ ತೋರಿದಿರಿ ಮನನೋಡಲು ||
ಗಾಳಿಮಾತುಗಳೇಕೆ ಪೂರ್ಣ ಬೋಧೆಯನೆನಗೆ
ನಾಳೆನ್ನದೀಗಲೆಯನುಗ್ರಹಿಸಿ ಪಾವನವ
ತಾಳಲಾರೆನು ಗುರುವೆ ತೀವ್ರವಾಗಿಯೆ ಕರುಣಗೆಯ್ಯುದೆಂದೆರಗಲಾಗ ||೩೮||

ಅಲ್ಲಮನಿದಂ ಕೇಳಿ ಪರಮ ಹರುಷದಿ ಮಗನೆ
ಸಲ್ಲಲಿತ ನಿರ್ಗುಣ ವಿಚಾರ ಕೇಳುವೆವೆಂಬ
ಬಲ್ಲಿದರದಾರು ಲೋಕದಿ ಪರಮಪುಣ್ಯದೊಬ್ಬಳಿಯುಳ್ಳವರ್ಗಲ್ಲದೆ
ಸಲ್ಲದಿದರರಿಗೆ ಅಧಿಕಾರವಿಲ್ಲದವರ್ಗೆ
ಸೊಲ್ಲಿಸಿದ ಮಾತ ಕಿವಿಯೊಳು ಕಾದ ಕಬ್ಬುನದ
ನಲ್ಲವಾದ ಶಲಾಕೆ ಚುಚ್ಚಿದಂದದೊಳಪ್ಪುದಾಗಿ ನೀನಧಿಕಾರಿಯು ||೩೯||

ಇದ್ದೆಯಾದ ನಿಮಿತ್ಯ ಸದ್ಯದೊಳು ಪೇಳುವೆನು
ಬದ್ಧ ಭವವೆನಗಿರುವದೆಂಬುದುವ ಬದ್ಧವಿದು
ಶುದ್ಧ ನಿಜವೇ ನೀನುಯಿದ್ದುದೆಲ್ಲವು ಮಿಥ್ಯವಜ್ಞಾನ ದೋಷವಿದನು ||
ಸಿದ್ಧವೇ ಪೂರ್ವದಲಿಯಿದ್ದುದಿದು ಮಧ್ಯದಲಿ
ಯೆದ್ದು ತೋರಿತ್ತೆಂಬ ಬುದ್ಧಿಯರು ಬಿಡುಬೇಗ
ಸಾಧ್ಯವೇ ನಿನಗಿಹುದು ಸಾಧನವದೇಕೆ ಪೂರ್ಣಬ್ರಹ್ಮವೇ ನೀನಹೆ ||೪೦||

ವರಸಚ್ಚಿದಾನಂದ ನಿತ್ಯ ಪರಿಪೂರ್ಣ ಘನ
ಪರಮ ಪರತರ ಪರಂಜ್ಯೋತಿ ಪರಬ್ರಹ್ಮವದು
ನಿರುಪಾದ್ಯನಾದಿ ಸಂಸಿದ್ಧನಾನೆಂಬ ಕಲ್ಪನೆದೋರದತಿಶಯದೊಳು ||
ಇರಲಲ್ಲಹಂ ಬ್ರಹ್ಮವೆಂಬ ಸ್ಫೂರ್ತಿಯನುದಿಸಿ
ಪರಶಕ್ತಿಯೋಗದಿಂ ಪಂಚಬ್ರಹ್ಮರು ಜನಿಸಿ
ಅರಿದೆನಲ್ಕದರೊಳಗೆ ಪಂಚದಾದಾಖ್ಯವಾ ಪಂಚತತ್ವವನು ಜನಿಸಿ ||೪೧||

ಇವರೊಳ್ವಿಭಾಗದಿಂ ಪಂಚವಿಂಶತಿ ತತ್ವ
ಭಾವ ಭೇದದೊಳಾದವಾ ಪಿಂಡ ಬ್ರಹ್ಮಾಂಡ
ಸಾವಧಾನದೊಳದರ ಭೇದ ತಿಳಿಯಲು ಬಂಜೆಪುತ್ರರ ರಚನೆಯಂತಿರೆ ||
ತಾವೆ ತೋರುತ್ತಡಗುತ್ತಿರುವ ಗುರಳಿಯ ತೆರದಿ
ನಾವಿನೊಳ್ಕುಳಿತು ನದಿಯ ದಾಟುವವರು ತಾ
ಭಾವಿಸುವರಾ ತಟಾಕದೊಳಿರುವ ವೃಕ್ಷಗಿರಿ ತಾವೆ ತಿರುಗುವವೆಂದುರೆ ||೪೨||

ಊರಗುದ್ದತಿಗೊಂಡು ನಾಡನೆಗೆಯುವನಂತೆ
ಊರು ಧೂಳಿಯನುಡುಗಿ ಮೈಯೊಳ್ಪೂಕುವನಂತೆ
ಮರಕಡಿದು ತನ್ನ ಮೇಲುರುಳಿಸಿಕೊಳುವನಂತೆ ಪಟ್ಟಣದ ಚಿಂತೆಯಿಂದ ||
ವರಕಾಜಿ ಬಡವಾದ ತೆರನಂತೆ ನೀನಿದರ
ತೆರನರಿಯದೇ ತನಗೆ ವಿಕೃತಿದೋರುವದೆಂದು
ಪಾರಮಾರ್ಥವನರಿಯದಾ ಮಿತ್ಯಕಾರ್ಯವದು ಸತ್ಯವೆಂದುಂ ಕಷ್ಟದೊಳ್ ||೪೩||

ಬಿದ್ದುರುಳ್ವುದುಚಿತವೇ ರಜ್ಜು ಸರ್ಪನ ತೆರದಿ
ಯಿದ್ದ ಸ್ಥಾಣುವೆ ಕಳ್ಳನೆಂದರಿದ ವೋಲ್ ಶಕ್ತಿ
ಬಿದ್ದ ಚೂರ್ಣವೆ ರಜತಭಾವವೆಂಬಂತೆಯಿದು ಪರವಪರವಾದುದೆಂದು||
ಬುದ್ಧಿವಂತರು ನುಡಿವರೇವಮೃತದೊಳ್ವಿಷವ
ಯಿದ್ದಿರುವುದುಂಟೆ ಬೆಳಗಿನೊಳು ಕತ್ತಲೆಯುಂಟೆ
ಶುದ್ಧವೇ ಬದ್ಧವಾಯ್ತೆಂಬ ಬದ್ಧದ ನುಡಿಯು ಸಿದ್ಧಿಸುವದೇ ನಿಜದೊಳು ||೪೪||

ಈ ನಿಜವ ತಾನೆಯರಿವುತ್ತಿರುವನಾಗಿ ನಿಜ
ತಾನೆಯೆಲ್ಲದೆ ಮತ್ತೆ ಬೇರಿರುವುದೇ ಬಸವ
ಜ್ಞಾನ ಬೋಧಿಯನಿಂತು ಸಗುಣ ನಿರ್ಗುಣಗಳಿಲ್ಲದೆ ನೀನೆಯಿರುವೆ ದಿಟವು ||
ಜ್ಞಾನ ಜ್ಞಾತೃಜ್ಞೆಯ ಮಾತೃಮಾನಮ್ಮೆಯ

ಧ್ಯಾನ ಧಾತೃ ಧೇಯ ತ್ರಿಪುಟಿಗಳಿವಿಲ್ಲವಿಹ
ಮಾನನಿಧಿ ನೀನೆ ಪರಿಪೂರ್ಣ ಬ್ರಹ್ಮವು ತಿಳಿವುದಾನೆಂಬುದಿಲ್ಲವಲ್ಲ ||೪೫||

ಎಂದು ಪೇಳಲ್ಕಾಗ ಸಂತೋಷದಿಂ ಬಸವ
ನಂದೆದ್ದು ಸಾಷ್ಟಾಂಗದಿಂ ನಮಿಸಿ ಗುರುವೆಯನ
ಗಿಂದು ನಿಜವಂ ತಿಳುಹಿ ಬಂಧನವ ಭೇದಿಸಿದೆ ಕಂದುಕಂಧರನೆ ಜಯತು ||
ಬಂಧುರ ಪರಬ್ರಹ್ಮ ಮೂರ್ತಿ ನೀವಲ್ಲದೆನ
ಗ್ಡೊಂದಿದ ಮಹಾಬಂಧು ಬಳಗವಿನ್ನೆಲ್ಲಿಹುದು
ಮಂದರಾದ್ರಿಯ ಚಲನೆನಿಂದ ದುಗ್ಧಾಂಬುನಿಧಿಯಂತೆ ನಿಶ್ಯಬ್ಧಮಾಯ್ತು ||೪೬||

ಎಂದು ಬಹುಪರಿಯಿಂದೆ ನುಡಿಸಿ ನುತಿಸುತ್ತಿರಲು
ಕಂದನಂ ನೋಡಲ್ತೆ ಕರುಣದಿಂ ಕೊಂಡುತೊಡೆ
ಗಂಧದಿಂ ಕುಳ್ಳಿರಿಸಿ ಕೊಂಡಪ್ಪಿ ಮುಂಡಾಡಿ ಮುದ್ದುಗಳ ನೀಡಿ ಮುದದಿ ||
ಚಂದದಿಂದಿರುಯೆನ್ನುತಾಶೀರ್ವಚನವಿತ್ತು
ಮುಂದವರಿಯುತ್ತಿರುವ ಮೋಹದಿಂದಿರೆ ನೋಡಿ
ಬಂದು ಗಣ್ಯವೃಂದ ಸಾಷ್ಟಾಂಗದಿಂದಂ ನಮಿಸಿಯಿಕ್ಷುಮಾಶ್ರಯದಿಂದಲು ||೪೭||

ಉರುಬೂಕ ನೀರುಂಬ ತೆರದಿ ನಮ್ಮೆಲ್ಲರಿಗೆ
ಅರವುದೋರಿತು ಗುರುವೆ ಪರಮಪಾವನವಾದೆ
ವಿರತಿಯು ವಿವೇಕವಾ ದೈವಗತಿ ಮೂವರಳ್ಕೊರನೆಯವಧಿಕಾರವು ||
ಕರುಣಿಸಿದರೆಲೆ ದೇವ ಬಂದಕಾರ್ಯವದಾಯ್ತು
ಚರಣ ಸೇವೆಯೊಳು ಪರಿಣಮಿಸಿರುವೆವಿನ್ನುದಯ
ಪರಿಪೂರ್ಣವಿರುವದೆಂದತಿ ದೈನ್ಯದಿಂದ ನುತಿಸುತ್ತಿರಲ್ಕನಿತರೊಳಗೆ ||೪೮||

ಸೊನ್ನಲಿಗೆಯ ಸಿದ್ಧರಾಮ ಮುನ್ನವೆ ನಮ್ಮ
ನನ್ನಿಯಿಂ ನಂಬಿ ಬಂದಿಹನವಗೆ ದೀಕ್ಷೆಯನು
ಉನ್ನತಿಯೊಳಂ ಮಾಡಿ ಲಿಂಗವನು ಧರಿಸಿರೆಂದಪ್ಪಗೆಯ ಕೊಡಲಾಗಲು ||
ಸನ್ನುತದೊಳಾಗವನೆ ತ್ರಿವಿಧ ದೀಕ್ಷೆಯನೆಸಗಿ
ಮನ್ನಣೆಯೊಳಂ ಲಿಂಗವನು ಧರಿಸನುಗ್ರಹವ
ಪನ್ನತಿಕೆಯಿಂ ಚನ್ನಬಸವನಿಂ ಪೇಳಿಸಿದ ಪ್ರಾಣಲಿಂಗದನುವನು ||೪೯||

ಉಡುತಡಿಯೊಳಾ ರಾಜನಂ ತಿರಸ್ಕರಿಸಿ ತ
ನ್ನುಡಿಗೆಯವ ಬಿಟ್ಟು ನಿರ್ವಾಣ ವೇಷವ ಧರಿಸಿ

ತಡಿಯದೀ ಕಲ್ಯಾಣ ಪಟ್ಟಣಕೆ ಬಂದುಯನುಭವದ ಮಂಟಪದ ಮುಂಗಡೆ ||
ಮೃಡಮೂರ್ತಿ ಮೊದಲಹ ಪುರಾತನರಿಗತಿಶಯದಿ
ಸಡಗರದೊಳಷ್ಟಾಂಗದಿಂ ನಮಿಸಿ ಶ್ರೀಗುರುವೆ
ಕೊಡುವದೀಗಲೆ ಮೋಕ್ಷವೆಂದು ವಿಜ್ಞಾಪನವ ಮಾಡಿದುದ ಕೇಳೆಲ್ಲವು ||೫೦||

ತನ್ನಂಗದೊಳ್ ಧರಿಸಿರುವ ವಸ್ತ್ರವನು ತೆಗೆದು
ನನ್ನಿಯಿಂದಾಕೆಗೀಯಲು ವುಟ್ಟುಕೊಂಡದನು
ಮನ್ನಣೆಯೊಳಂ ಚರಣಕೆರಗಲದಕೆ ಧೃಢಮನವನರಿದನುಗ್ರಹಿಸಿ ಮುದದಿ ||
ಇನ್ನು ನಾವ್ ಶ್ರೀಶೈಲ ಕದಳಿವನಕೋಗುವೆನು
ಸನ್ನುತದೊಳಂ ನಿಮ್ಮ ನಿಮ್ಮ ಕಾರ್ಯವನೆಸಗಿ
ಬನ್ನಿಯಂದವರಿಗಾಶೀರ್ವಚನವಿತ್ತು ನಡೆಯಲ್ಮಹಾದೇವಿ ನಾನು ||೫೧||

ಬಂದಪೆನೆ ನಲ್ಗೊಂಡು ಪೋದರತ್ತಂ ಯಿತ್ತ
ಬಂಧುರ ಮಹಾಗಣಂಗಳ ಸಹದಿ ಮಹಿಮೆಯನು
ಚಂದವಾಗಿಯೆ ಮಾಡುತುನ್ನತಿಯೊಳಾರಾಜ ಕಾರ್ಯವ ದುರಂಧರತೆಯಿಂ ||
ಅಂದವಾಗಿಯೆ ರಚಿಸಿ ಅನ್ಯ ಸಮಯರ್ಕಳತಿ
ಹೊಂದದವರ್ಮತ್ಸರದೊಳಂ ಚೇಷ್ಟೆಗೈದೆಡೆಯು
ಸುಂದರದೊಳಂ ಪ್ರತಿಷ್ಠೆಯ ಮಾಡಿಯವರಿಂದೆ ಬಹುಮಾನವಂ ಕೊಳುತಲಿ ||೫೨||

ಇಲ್ಲದುದನಂ ಘೋನಿಸಿ ತೋರುತಲ್ಲಿದ್ದುದದು
ಯಿಲ್ಲೆನಿಸುತಂ ಬಯಲವೇ ರೂಪ ಮಾಡುವನು
ಬಲ್ಲಿದಂ ಬಸವೇಶ ರೂಪವದೆ ಬಯಲು ಮಾಡುವನಪ್ರತಿಮ ಮಹಿಮನು ||
ಕಲ್ಲನಂದಿಗೆ ಮೇವ ಮೆಲ್ಲಿಸಿ ಮೆರೆದನಭವ
ಹುಲ್ಲಜಂಗಮರಿಗುಲ್ಲಸದಿ ಪ್ರಾಣವನಿತ್ತ
ಯೆಲ್ಲ ಜೈನರು ಕೂಡಿ ಮರದಗೊಂಬೆಯ ಮಾಡಿ ನಿಲ್ಲದದಕಸುವಿತ್ತನು ||೫೩||

ಜೋಳ ತೊಗರಿಯ ಮುತ್ತು ಮಾಣಿಕವ ಮಾಡಿದನು
ಬಾಲಗರ ಗೊಡ್ಡಗರದಭಿಷೇಕಗೈಸಿದನು
ಶೂಲಿಯರ್ಚನೆಗೆ ಕೊರಡಂ ಚಿಗಿಸಿ ಸಲಿಸಿದನುಲಿಕುಚ ಲಿಂಗವ ಮಾಡಿದ ||
ಶೀಲವಂತರ ಕರದ ಕನ್ನಡಿಯೆನಿಸಿ ಮೆರೆದ
ಬಾಲಕನ ಕರದಿ ಗಿರಿಯತ್ತಿಸಿ ಹನುಮನಲ್ಲಿ
ಸೋಲಿಸಿದ ಶಿವನಾಗಮಯ್ಯನ ಕರದಿ ಪಾಲಕರೆಸಿದ ವಿಚಿತ್ರ ಮಹಿಮ ||೫೪||

ಧರಣಿಪಾಲಕ ತನ್ನಯರಮನೆಯ ರಾಣಿಯರ
ಚರರ ವೇಷವ ಮಾಡಿ ತೋರಲವರಿಗೆ ನಮಿಸಿ
ಬರುವದೆಂದವರ ಕರೆದೊಯ್ಯಲರಮನೆ ಹಾಳವಾಯ್ತೆಂದು ಗೋಳಿಡಲ್ಕೆ ||
ಮೂರು ಸಾವಿರ ರಾಣಿಯರು ಮುನ್ನಿನಂತೆ ನೃಪ
ನರಮನೆಯೊಳಂ ತೋರಿ ಮೆರೆದನಪ್ರತಿಮಹಿಮ
ಜಾರ ಜಂಗಮರಾಣಿಯುಟ್ಟಶಾಲೆಯ ಬೇಡಿ ಸುಗಿದಿತ್ತ ಮೈದೆರೆಯದೆ ||೫೫||

ಕಿನ್ನರಿಯ ಬ್ರಹ್ಮಯ್ಯ ಮೊದಲದ ಗಣಂಗಳುರೆ
ಹೊನ್ನ ಬೆಟ್ಟಕೆ ಪೋಗಲವತರಿಸಿದ ಬಸವ
ಪನ್ನಗಾಭರಣ ಚರರೂಪದಿಂ ಬಂದಗ್ನಿಲೋಚನವ ಬೇಡೆಮುಕರ ||
ನನ್ನಿಯಂ ತೋರಿ ನಾಚಿಸಿ ಮತ್ತೆ ವಿಠಚರರಿ
ಗುನ್ನತಿಯೊಳಂ ಬೇಡಿದುದನಿತ್ತ ಧರಣಿಪನ
ಸೊನ್ನ ಪೆಟ್ಟಿಗೆ ತರಿಸಿ ಜಂಗಮರಿಗಿತ್ತದನು ಮುನ್ನಿನಂತಿರಿಸಿ ಮೆರೆದನು ||೫೬||

ಧರಣಿಪನು ತನ್ನನುಜೆಯಂ ಕೊಟ್ಟು ಲಗ್ನವನು
ಪರಮೋತ್ಸಹದಿ ರಚಿಸಬೇಕೆನ್ನಲಾಕೆಗತಿ
ವೀರಶೈವದೀಕ್ಷೆಯವನಿತ್ತು ಪರಿಣಯ ನೀವನು ಮಾಡಿಕೊಂಡ ನಭವಂ ||
ಕರಿಯ ಬದನೆಕಾಯಿಯ ಲಿಂಗವೆಂದುಂಗಳದಿ
ಧರಿಸಿ ಬರಲಾ ಲಿಂಗವಂತನಂ ಕರದಿಂದೆ
ಪರಿಪೂರ್ಣದನೆ ಲಿಂಗವ ಮಾಡಿ ತೋರಿದನು ಕಬ್ಬಿಲಗೆ ಚರನೆನಿಸಿದಂ ||೫೭||

ಇಂತನಂತ ಪವಾಡಂ ಮಾಡಿ ಮೆರೆದಂ ಬಸವ
ನಂತಪತಿಗರಿದು ಪೇಳಲ್ಕುಳಿದವರಿಗಳವೆ
ಸಂತತಂ ಯಿಂತು ಸುಖದಿಂದಿರಲ್ಕೊಂದು ದಿನ ಬಸವನಾ ಪಲ್ಲಕಿಯೊಳು ||
ಕುಂತು ನೃಪನೋಲಗಕೆ ಪೋಗುವ ಸಮಯದಲ್ಲಿ
ಸಂತ ಹರಳಯ್ಯ ಬೀದಿಯೊಳು ಪೋಗುತಿರಲ್ಕೆ
ನಿಂತು ಶರಣಾರ್ಥಿಯೆನೆ ಶಿವನೆ ಶರಣಾರ್ಥಿಯೆಂದುಂ ಮರಳಿಯಂದುದಕ್ಕೆ ||೫೮||

ನೊಂದು ಮನದೊಳು ಬಂದು ಮನೆಗೆ ಸತಿಗಂ ಪೇಳೆ
ಬಂಧುರದ ಪಾದುಕೆಯ ಮಾಡ್ಬೇಕರ ಮೇಲಿನಂ
ದೊಂದು ರೂಪಂ ನಿಮ್ಮದೊಂದು ರೂಪವ ರಚಿಸಿ ಮೆಡಿಸಿಲ್ಲದೆ ಪಾಪದ ||
ಬಂಧನವ ಬಿಡದೆನಲ್ಕದಕೊಡಂಬಟ್ಟು ಹೊಸ

ಸುಂದರದ ಚಮ್ಮಾವುಗೆಗಳೆರಡು ಮಾಡಿಯವಕೆ
ಹೊಂದಿಸುತೆ ಮುತ್ತು ಕನಕವತಾರ ಹರಳುಗಳ ಬಹುಚಂದದಿಂ ಮಾಡುತೆ ||೫೯||

ಹರಳಯ್ಯ ತಾ ಸ್ನಾನವಂ ಮಾಡಿ ಮಡಿಯುಟ್ಟು
ವರಭಸಿತವಂ ಧರಿಸಿ ಧೌತಾಂಬರದಿ ಸುತ್ತಿ
ಪರಮ ವಿಶ್ವಾಸದಿಂದಂ ಪಾದುಕೆಯ ಕೊಂಕುಳೊಳಗವಚಿಕಂಡು ಬಸವ ||
ನರಮನೆಗೆ ಪೋಗೆ ದಂಡಾಧೀಶ ಸಭೆಯೊಳಿರೆ
ಕರವ ಮುಗಿವುತಲಿಲ್ಲಗೈದಿಯೂ ಪಾದುಕೆಯ
ಚಿರವ ಬಿಚ್ಚವನು ಮುಂದಿಟ್ಟು ಮೆಟ್ಟುವದೆನಲು ಸಿಂಹಾಸನವನಿಳಿವುತೆ ||೬೦||

ಬಸವರಾಜಂ ಬಂದು ಕುಳಿತುಪಾದುಕೆಯನವ
ನೊಸೆದು ಕರದಿಂ ಪಿಡಿದು ತನ್ನ ಶಿರದೊಳಗಿಡಲು
ಕಸಿದುಕೊಂಡ್ಹರಳಯ್ಯ ಮೊದಲ ದೋಷವ ಕಳೆಯಲೆಂದು ಮಾಡಿದುಪಾಯದಿ ||
ಹೊಸಪಾಪ ಸಮನಿಸಿತು ಶಿವಶಿವಯಿದೇನೆಂದು
ಹಸನವಾಗದುಯಿದನು ನಸಿದು ಪೋಪೆವು ನಾವು
ಪಶುಪತಿಯೆ ಬಲ್ಲೆನಿದನೆಮದವನವಚಿಕೊಂಡು ಬೀದಿಯೊಳ್ಪೋಗುತಿರಲು ||೬೧||

ಧರಣಿ ಪಾಲನಮಾತ್ಯ ಮಧುವರಸ ನೊಡೆವನು
ಹರಳಯ್ಯ ನಿನ್ನ ಕಂಕುಳೊಳಿರುವ ಪಾದುಕೆಯ
ಚರಣಕೆಮಗಿಲ್ಲವನು ಕೊಡುವದೆಂದೆನಲು ಕೊಡದಿರೆ ಬಲ್ಪಿನಿಂ ಸೆಳೆವುತೆ ||
ವರಪಾದುಕೆಯ ಮೆಟ್ಟಿ ಮನೆಗೆ ಪೋಗಲ್ಕಾಗ
ಶರೀರದೊಳ್ ಕುಷ್ಟರೋಗವು ಸಮನಿಸಿತ್ತವಗೆ
ನಾರಿ ಮೊದಲಹ ಸಕಲ ಬಂಧುಗಳು ಮನೆವೊಳಗೆ ಹೇಸಿ ಕೆಲಸಾರುತಿರಲು ||೬೨||

ನೆತ್ತರಕೀವವನೊಸರಿ ದುರ್ಗ ಧವದು ಹೆಚ್ಚಿ
ತತ್ತರಿಸಿ ಬೀಳುತೇಳುತ್ತಲಾ ಕಷ್ಟವನು
ಬಿತ್ತರಿಸಲರಿದೆನಿಸಿ ಬಚ್ಚಲಪುಳಗಳಂತೆ ಕೀಟಗಳನುದುರುತಿರಲು ||
ಎತ್ತ ನೋಡಿದರತ್ತ ಜೊಮ್ಮೆಂದು ಮಕ್ಷಿಕವು
ಮುತ್ತುತಿರಲನ್ನ ಪಾನವ ನೊರ್ಜಿಸುತ್ತವನು
ಸತ್ತು ಹೋಗುವುದುಚಿತವಿದ್ದು ಸುಖವೆನೆಂದು ಬಹುದುಃಖವಂಬಡುತಿರೆ ||೬೩||

ಒಂದು ದಿನವರ್ಧರಾತ್ರಿಯೊಳು ತಿಂಡಿಯನೆದ್ದು
ಚಂದದಿಂದುಷ್ಣ ಜಲಮಂ ಹಾಕೆ ಸುಖವಹುದು

ಎಂದು ದಾಸಿಯ ಕರೆದು ನೀರ ಕಾಸುವದೆಂದು ಅಪ್ಪಣೆಯ ಮಾಡಲಾಗ ||
ಅಂದು ಮಹಾದೇವಿಯ ವಾರಿಯನುಷ್ಣಸುತ ಕರೆಯೆ
ಬಂದು ನೋಡಲ್ಕೆಸರಿನಂತಿರಲು ಬೆರಸುವಡೆ
ತಂದು ಕೊಡು ಶೀತಜಲವೆನಲಾ ಮಹದೇವಿ ಕುಂಭವನು ಪೊತ್ತುಪೋಗೆ ||೬೪||

ಅಂಧಕಾರದೊಳಗಸಿಗಂಭಿಯನಿಕ್ಕಿರಲು
ಬಂಧನವ ಬಂತೆಂದು ತಿರುಗಿ ಬರುತಿರಲಲ್ಲಿ
ಕಂದುಕಂಧರ ಶರಣ ಹರಳಯ್ಯನಂಗಣದಿತೋಕುಳುದಕವ ತುಂಬುತೆ ||
ತಂದು ಬೆನ್ನೀರೊಳ್ಬೆರಸಿ ತೊಳೆಯಲ್ಕಾಗ
ಸುಂದರ ಸುವರ್ಣಮಯವಾಗಿ ತಿಂಡಿಯ ಪೋಗೆ
ಎಂದು ಮಹದೇವಿಯ ನೀರನೆಲ್ಲಿಂ ತಂದೆ ದಿಟದಿಂದ ಪೇಳ್ವುದೆಂದನಲು ||೬೫||

ಅಂಜುತ್ತಿರಲ್ಕೆಯಭವ ಕೊಟ್ಟು ಕೇಳಲಕೆ
ಸಿಂಜಿಗತ್ತಲೆಯೊಳ್ಮಹಾದ್ವಾರ ಮುಚ್ಚಿರಲು
ಮಂಜಿನೊಳ್ತಿರುಗಿ ಬರುವಾಗ ಮಿಂಚಲು ಕಾಣಿಸಿತು ದ್ವಾರ ಮುಚ್ಚದಿರವ ||
ನಂಜುಗೊರಳನ ಭಕ್ತ ಹರಳಯ್ಯನಂ ಗಣದಿ
ಕುಂಜರಂ ದುರಿತ ಕಂಜಂ ತೋರುತಿರೆ ಗುಂಡ
ಅಂಜುತ್ತೆ ತುಂಬಿ ತಂದೆರದೆನೆನೆ ನಿನ್ನ ಜಠರದೊಳು ಜನಿಸಿದೆ ತಾಯಿಯೆ ||೬೬||

ಒಂದು ದಿನ ಬೀದಿಯೊಳ್ನಾಂ ಪೋಗುತಿರಲಾಗ
ಕಂದು ಕಂಧರ ಶರಣ ಹರಳಯ್ಯ ಪಾದುಕೆಯ
ಹೊಂದಿಸುತೆ ಕಂಕುಳೊಳು ಪೋಗುತಿರೆ ಬಲ್ಪಿನಿಂ ಸೆಳೆದುಕೊಂಡವ ಮೆಡಲ್ಕೆ ||
ಅಂದಿನಿಂ ಮೊದಲು ಈ ರೋಗವಾಯ್ತೆನಗೆ ಬಹು
ಮಂದಿಯೋಳ್ರೋಗದ ತೆರದಿ ಮನೆಯೊಳಗೆ ಬಿದ್ದೆ
ಯಿಂದಾ ಮಹನ್ಮಜ್ಜನೋದಕದಿ ತೊಳೆಯೆರೋಗಂ ಪೋಗಿ ಸುಖವದಾಯ್ತು ||೬೭||

ಇಂದುಮುಖಿ ಮಹದೇವಿಯಾಯಯ್ಯನಿರುತಿರುವ
ಮಂದಿರವದಾವುದದು ತೋರೆನಲ್ವಾರದೊಳು
ಬಂಧುರದ ಲಿಂಗವಂಗದೊಳಿಲ್ಲದಿರಲವರು ಚರಣವಿಡೆ ಬಂಡಿಸುವವು ||
ಎಂದೆನತ್ನನೆಂತು ಹೊದಿಯೆನೆ ಮಸ್ತಕದಿ
ಸುಂದರದ ಶಿವಲಿಂಗವಿರ್ದಪುದೆನಲ್ತೋರು
ಚಂದದಿಂದೆನೆ ತೊರೆಲಿಂಗ ಕೊಡುವ ಸಮರ್ಥರಾರವರ ಮಠವನೀಗ ||೬೮||

ತೋರಿ ಬದುಕಿಸೆನಲ್ಕೆ ಅಂತಾಯಿತೆಂದಾಕೆ
ಗುರುಗಳ ಮಠವ ತೋರೆ ಮಧುವರಸ ಸಾಷ್ಟಾಂಗ
ವೆರಗಿ ಸ್ವಾಮಿಯೆ ನಮ್ಮ ಭವಿತನವ ಕಳೆದು ಭಕ್ತರ ಮಾಡಿರೆಂದು ಪೇಳೆ ||
ಗುರುವರನ ವರದೃಢವನೋಡಿ ದೀಕ್ಷವ ಮಾಡಿ
ವರಲಿಂಗ ಧರಿಸಿದರವನ ಕುಟುಂಬಕೆಯವನು
ಗುರುದಕ್ಷಿಣೆಯನಿತ್ತು ಮನೆಯ ಶುದ್ಧಂಗೆಯ್ದುವಾರಾಧನೆಯನು ಮಾಡಿ ||೬೯||

ಹರಳಯ್ಯನವರ ಮಠಕಂ ಪೋಗಿ ಸಾಷ್ಟಾಂಗ
ವೆರಗುತೆನ್ನಯ ತಪ್ಪ ಮನ್ನಿಪುದರಿಯದಿರುವ
ವರನೆಯೆನ್ನ ಪುತ್ರಿಯಂ ಕೊಡುವೆ ನಿಮ್ಮ ಪುತ್ರನಿಗೆ ಲಗ್ನವ ಮಾಳ್ಪುದು ||
ಪರಮ ಪಾವನಶೀಲ ಪಾರ್ವತೀ ವರಕರುಣ
ಪೂರ ಕಾರುಣ್ಯಾಬ್ಧಿ ಶರಣಾಗತರ ದುರಿತ
ಪರಿಹಾರವೆಂದಡ್ಡ ಬಿದ್ದೇಳದಿರೆ ನೋಡಿ ಹರಳಯ್ಯನೆಂದನವಗೆ ||೭೦||

ರನ್ನಕಾಜಂಗಳಿಗೆ ಖಿನ್ನಕನಕಂ ಮೋಹ
ನನ್ನಿಯಿಂ ಸಾಟಿಯಪ್ಪವೆ ಕಾಕ ಕೋಕಿಲವು
ಚನ್ನ ಕುಲದವ ನೀನು ಚಿನ್ನಕುಲದವರಾವು ನಮನಿಮಗೆ ನಂಟುತನವು ||
ಬನ್ನ ಬಡುವೀ ಮಾತವ್ಯಾತಕಾಡದಿರಯ್ಯ
ವೆನ್ನಲಾ ಚನ್ನನಂಬಲಿಗೆ ಚೋಳನೆಡೆ
ಮನ್ನಣೆಯದಾಯ್ತೆ ಶಿವನೇ ದೈವ ಶಿವಭಕ್ತನೇ ಕುಲಜನೆಂಬುದುಕ್ತಿ ||೭೧||

ಶಿವನೊಲಿದುದೇ ಕುಲವಲ್ಲದಿತರವದುಂಟೆ
ಭವಿತನವದ್ಯಾತಕ್ಕೆ ಬಾತೆಯೆನೆ ಕಲ್ಯಾಣ
ತವೆವಂತ್ಯ ಕಾಲ ಸಮನಿಸಿತೆಂದು ಬಹುವಿಧದಿ ಪೇಳಲವ ಕೇಳದಿರಲು ||
ಭಾವಿಸುವಡಾಗುವುದು ತಪ್ಪದಾದ ನಿಮಿತ್ಯ
ಕಾವಹರನಪ್ಪಣೆಯದಾವ ತೆರದಿಂದಿಹುದು
ವೋವಿ ಅಂತಾಗಲೆಂದಾಡಲಾಕ್ಷಣದೊಳ್ ಸಕಲವಹ ಸಾರಂಭದಿಂದ ||೭೨||

ಪರಿಣಯನ ಕಾರ್ಯವಾಗಲು ಸಕಲಜನಕೇಳಿ
ಪರಮ ಪಾತಕವಹಿತ ಕಾರ್ಯ ಮೂಲೋಕದೊಳು
ಅರಿಯಲಿಂತಹುದುಂಟೆ ಕಲ್ಯಾಣ ಹೋಲೆಗಲಯತೆಂದು ಸರ್ವರು ನುಡಿಯಲು ||
ಹಿರೆಕೊಂಡಿ ಮಂಚಣ್ಣನಿದಕೇಳಿ ಭಾಗ್ಯದೊಳು

ದೊರೆ ಬಿಜ್ಜಳನ ಬಳಿಗೆ ಪೋಗಿದರ ವೃತ್ತಾಂತ
ಪರಿಪರಿಯಲಿಂದ ಪೇಳಿದನೆಲೆ ಮಹಾರಾಜ ರಾಷ್ಟ್ರಕೃತ ಪಾಪವಿದನು ||೭೩||

ರಾಜರಿಗೆ ರಾಜರೆಸಗಿದ ವೈನ ಪುರೋಹಿತಗೆ
ಮಾಜದಾ ಸತಿದೋಷವಂ ಪತಿಗೆ ಶಿಷ್ಯರುರೆ
ಸಾಜದಿಂ ಕೃತದುರಿತ ಗುರುವದೆಂದುಂ ಪೇಳ್ವ ನೀತಿಯುಂಟದು ಕಾರಣಂ ||
ಸೋಜಿಗವದೊಂದು ಕೇಳಿದಿರೆ ಕಲ್ಯಾಣದೊಳು
ರಾಜಿಯಿಂ ಮಧುವರಸ ಹರಳಯ್ಯನಿಗೆ ಮಗಳ
ವಾಜಿಯಿಂದಿತ್ತು ಲಗ್ನವನೆಸಗಿದರುಯೆಂಬ ವಾರ್ತೆ ಪಟ್ಟಣ ತೀವಿತು ||೭೪||

ಎಲ್ಲಿ ನೋಡಲ್ಕಲ್ಲಿ ಗಣವೃಂದವೇ ಮುಸುಕಿ
ತಲ್ಲದಿಹ ಕಾರ್ಯ ಮಾಡಿದರು ಕೇಳುವರಿಲ್ಲ
ಎಲ್ಲವಾಜ್ಞೆಯು ಬಸವನಲ್ಲಿಯಿಹುದುಂ ನಿಮನಾರು ಕೇಳುವರು ಜನರು ||
ಬಲ್ಲವರಿಗಾವು ಪೇಳುವರೆಷ್ಟರವರೆಂದು
ಖುಲ್ಲತನದಿಂ ಕೊಂಡಿಯೂರಲ್ ದೋಷಿಯು ಮುನಿದು
ಎಲ್ಲಿಯಿರುವನು ಬಸವಯಿದ್ದಲ್ಲಿಯಿಂದವನ ವಾಗ್ರವದಿ ತರುವದೆಂದು ||೭೫||

ಚರಕನಟ್ಟಲೋಗಿ ಬರುವದೆಂದು ಬಸವ
ಗಿರದೆ ಕರೆತಂದೊಪ್ಪಿಸಿದರಾಗ ಭೃತ್ಯರುರೆ
ಧರಣಿ ಪಾಲಂ ಕೋಪದುರಿಕಾರುತಿಹ ಕಣ್ಗಳಿಂ ನೋಡೆಲೆ ಬಸವನೆ ||
ದೊರೆತನದ ಕಾರ್ಯ ನಿನಗೊಪ್ಪಿಸಿದರೀ ಪರಿಯ
ಸುರನರೋರುಗರೊಳಗಲ್ಲದಿಹ ವ್ಯವಸಾಯ
ಪರಿಕಲ್ಪಿಸಿದೆ ನಿಮ್ಮ ಭಕ್ತಿರಿದಿರಾರುಂಟು ಅವರು ಮಾಡಿದುದೆ ಮಾರ್ಗ ||೭೬||

ಪುಣ್ಯ ಪಾಪದ ಪರೀಕ್ಷೆಯದಿಲ್ಲದ್ಹೋಯಿತ್ತು
ಸಣ್ಣಕುಲ ದೊಡ್ಡ ಕುಲವೆಂಬುಭಯವವು ಸರಿಯೆ
ಸುಣ್ಣ ನಕ್ಕರೆ ಕಳ್ಳಿಗೋಕ್ಷಿರ ಕನಕ ಹಿತ್ತಾಳೆ ಸರಿಯೆಂಬುದಾಯ್ತು ||
ಕಣ್ಣಮುಂದೀ ಕಾರ್ಯ ನೋಡಿದರೆ ದೋಷವಿದು
ಪುಣ್ಯದವರೀ ಕಾರ್ಯ ಮಾಡುವರೆ ಲೋಕದೊಳು
ಗಣ್ಯ ಪಾಪಿಷ್ಟರೆಸಗುವ ಕಾರ್ಯ ನೀವು ಶಿವಭಕ್ತರೆಯಿರುತ್ತಿಹೆರಲ ||೭೭||

ಎನಲು ಬಸವೇಶ್ವರಂ ಕೇಳೆಲೆ ಮಹಾರಾಜ
ಘನತೆಯುವರನುವನರಿಯದೆ ನುಡಿವುದನುಚಿತವು

ವಿನಯದಿಂ ಕಾರ್ಯದೊರ್ಮವನರಿಯದಾಡುವರೆ ಒಲ್ಲೆನೆಲ್ ಬಲ್ಪಿನಿಂದ ||
ಸನುಮತದೊಳಿತ್ತಡಿಕಿಂಮಾಳ್ಪುದುಂಟು ಸಲೆ
ಮನುಮಥಾರಿಯ ಭಕ್ತರೇ ಕುಲಜರುಳಿದವರು
ಮಾನಕುಲದವರೆಂತೆನಲ್ವೇಳ್ವೆನಾಲಿಸುವದಾ ಬ್ರಾಹ್ಮಣನೆ ಪರಶಿವಂ ||೭೮||

ನಾರಾಯಣ ಕ್ಷೇತ್ರಿಕಂ ಜನವನೇ ವೈಸ್ಯ
ವರಪಾಕ ಶಾಸನನೆ ಶೂದ್ರಮಿಂತಿ ನಾಲ್ಕು
ವರಣಾಧಿಕರ ಸಾಂಪ್ರದಾಯದವರೇ ವರ್ಣಜಾತರೇಂದೆನಿಸುತಿರ್ಕು ||
ವೀರಶೈವ ಬ್ರಾಹ್ಮಣನೆಯಧಿಕ ಬ್ರಾಹ್ಮಣನು
ಭರದಿಂದ ಜನಿಸಿದಾಗತಿ ಶೂದ್ರಕರ್ಮಕವ
ನಿರದೆಯಧಿಕಾರಿ ದ್ವಿಜಶೃತಿ ಪಠಿಸಲವ ವಿಪ್ರ ಬ್ರಹ್ಮವ ತಿಳಿದವ ಬ್ರಾಹ್ಮಣ ||೭೯||

ಗ್ರ || ಬ್ರಾಹ್ಮಣೋ ಭಗವಾನ್ ರುದ್ರೋ
ಕ್ಷೇತ್ರಿ ನಾರಾಯಣೋ ಹರಿಃ
ಹಿರಣ್ಯಗರ್ಭ ವೈಸ್ಯಾಯ
ದೇವೇಂದ್ರೊ ಶೂದ್ರಮುಚ್ಚತೆ ||೧||

ಜನ್ಮನಾ ಜಾಯತೆ ಶೂದ್ರ
ಕರ್ಮನೋ ದ್ವಿಜಮುಚ್ಯತೇ
ವೇದಧ್ಯಯ ಥರೋವಿಪ್ರ
ಬ್ರಹ್ಮಜಾನಾತಿ ಬ್ರಾಹ್ಮಣಾ ||೨||

ಎಂದಿಂತು ಶಿವನೆ ಆಗಮದಲ್ಲಿ ಪೇಳ್ದನಿದ
ರಂದವರಿಯದೆ ಗಳಹುವುದುಚಿತವಲ್ಲವೆನೆ
ಚಂದವಲ್ಲೀಮಾತ ಲೋಕದವರಿಗೆ ಮತವದಾಗದಿದು ಸುಮ್ಮನಿರು ನೀ ||
ಬಂದ ಕಾರ್ಯವು ನಾವು ನೋಡಿದಪೆವಪರಾಧ
ರಿಂದು ಶೀಕ್ಷಿಪೆನವರ ಕಣ್ಣು ತೆಗೆಸುವೆ ನೋಡು
ಬಂಧಿಸಳಹೋಡಿಕಟ್ಟಿಸುವೆನೆಂದಾಗ್ರಹದಿಯವರ ತರಿಸಲ್ಕಳುಹಲು ||೮೦||

ಅರಿದುಬಸವೇಶನಿಂದಿಗೆ ಥರೆಯಭೋಗವನು
ತೀರಿತಿನ್ನಿಲ್ಲಿರಲ್ಬಾರದೆಂದು ಯೆದ್ದು
ಭರದೊಳಂ ತನ್ನ ಮನಿಗ್ಹೋಗದಲೆ ಸಂಗಮದ ಮಾರ್ಗದೊಳ್ಕಳಿತು ಕರೆಸಿ ||
ಮಾರವೈರಿಯ ಭಕ್ತ ಮಡಿವಾಳ ಮಾಚಯ್ಯ

ಬರಲಾಗ ಬಸವರಾಜಗಂ ಪೇಳ್ದ ನಾವಿನ್ನು
ವರಸಂಗಮೇಶ್ವನಲ್ಲಿಗೆ ಪೋಪೆವಾ ಚನ್ನಬಸವಕ್ಕನಾಗಮ್ಮನು ||೮೧||

ಇರುವರವರುಂ ನೀವು ಪರಿಣಾಮದೊಳ್ಸಕಲ
ಚರರ ದಾಸೋಹವನು ಚೆನ್ನಾಗಿ ನಡೆಸುತ್ತ
ವರು ಬೇಡಿದುದನಿತ್ತು ಬಿಜ್ಜಳನ ಭೇದಿಸುತೆ ಮೂರುವರೆ ತಿಂಗಳೊಳ ||
ಬರುವದೆಂದುಂ ಪೇಳಿವರ ಯೌವನಾಶ್ವವನು
ಯೇರಿಕೊಳುತಂ ನೀಲಲೋಚನೆಯ ಕರೆದುದಂ
ಯೀಕಡೆ ಪಡಿಹಾರಿವುತ್ತಣ್ಣನಂ ಕಳುಹಲವ ಪೋಗಿ ಸಂಗಮನಲ್ಲಿಗೆ ||೮೨||

ವರಬಸವರ್ಯೆಕ್ಯವಾಗುವಡೆ ಕರೆದರು ನಿಮ್ಮ
ರೆಯೆಂದರಾಂ ಬಂದೆ ಬರುವದೆನಲುಂ ಮೊದಲೆ
ಕರೆಯದಲೆ ಪೋದರಲ್ಲುಂಟು ಯಿಲ್ಲಿಲ್ಲವೇ ಸಂಗಮೇಶ್ವರನೆನುತಲಿ ||
ಕರದೊಳಗೆ ತಮ್ಮಿಷ್ಟಲಿಂಗವಿಟ್ಟದರಲ್ಲಿ
ಪರಿಪೂರ್ಣ ಭಾವದಿಂ ಬೆರೆದು ಬಯಲಾಗಲಾ
ಯಿರದವನು ಪೋಗಿದರ ವೃತ್ತಾಂತವನು ಪೇಳಲದು ತೋರೆನಲು ಕರದೊಳು ||೮೩||

ಇಷ್ಟಲಿಂಗವನಿಟ್ಟುವದರಲ್ಲಿ ದೃಷ್ಟಿಯನು
ನಟ್ಟುತಾಂ ಬಟ್ಟಬಯಲಾದ ಬಸವಂ ನೋಡಿ
ದಿಟ್ಟಿ ಮೂರುಳ್ಳನೊಲುಮೆಯನುಳ್ಳವರಿಗರಿದೆಯೆಂದು ಸಂಗಮಕೆ ಪೋಗಿ ||
ದೃಷ್ಟಿಯಿಂದಾದ ಮಹಾದ್ವಾರವನು ನೋಡುತಲೆ
ಸಾಷ್ಟಾಂಗದಿಂ ನಮಸ್ಕರಿಸುತ್ತೆ ದೇಗುಲಕೆ
ಶ್ರೇಷ್ಠ ಬಸವೇಶ್ವರಂ ಪೋಗಿ ಲಿಂಗದ ಮುಂದೆ ನಿಂತು ನುತಿಸುತಿರ್ದನು ||೮೪||

ಗಂಗಾ ತರಂಗಪಿಂಗಲಜಘಾನ್ವಿತ ಮೌಳಿ
ತುಂಗ ಪವಮಾನ ಭಕ್ಷಣ ರಾಜದೃತ ಮಾಲಿ
ಸಂಗ ವಿಷ್ವಕ್ಸೇನ ಸಲಲಕ್ಷ್ಮವರಸುಭಕ್ತ ಪರಿಪಾಲ ಲೋಲ ||
ಮಂಗಲ ಮಹಾಮಹಿಮ ಜಾಲಕಾಲ ವಿಶಾಲ
ಪುಂಗವ ಮಹಾಗಣಂಗಳ ಬಾಲ ಸುಖ ಜಾಲ
ಹಿಂಗದಿಷ್ಟವನಿತ್ತು ರಕ್ಷಿಪುದು ದಯನೀಲ ಮೂಲಕರುಣಾಲವಾಲ ||೮೫||

ಎಂದಿಂತು ನುತಿಸಲಾನಂದದಿಂ ಗಣಸಹದಿ
ಇಂದುಧರ ನಿಜರೂಪದಿಂ ಬಂದನುತ್ಸವದಿ

ಚಂದದಿಂದಾಗ ಬಸವರಸರಂ ತೆಗೆದಪ್ಪಿ ಮುಂಡಾಡೆ ಕೊಂಡಾಡುತೆ ||
ಬಂದಕಾರ್ಯವ ಪೂರ್ಣಗೈದೆ ನಿನ್ನಿಂದೆನಗೆ
ಬಂದು ಬೇರೆಯಿಲ್ಲವಾಙ್ಞಾ ಪ್ರಕಾರದೊಳು ನೀ
ನಿಂದುವರೆಗುಂ ನಡೆದೆಯೆಂದು ತನ್ನಯ ಹೃದಯಮಂ ಒಗೆದು ಕೂಡಿಕೊಂಡಂ ||೮೭||

ದೇವದುಂದುಭಿಯೊಳಗೆ ಪುಷ್ಪಮಳೆಗರೆದರತಿ
ದೇವತೆಗಳೆಲ್ಲವಾಕಾಶದೊಳ್ ಸ್ತೋತ್ರವವನು
ಸಾವಧಾನವ ಭಕ್ತಿಯಿಂದೆಸಗಿದರು ಸಕಲ ಜನರೈದೆ ಕೀರ್ತಿಸಿದರು ||
ಕಾವಹರನೆ ನಾಮಭೇದದಿಂದವತರಿಸಿ
ಭಾವಿಜನರಂ ಪಾವನವ ಮಾಡಿಯುದ್ಧರಿಸಿ
ಸೇವಕರಯಿಷ್ಟ ಪ್ರದಾಯನಾಗುತೆ ಚರರ ದಾಸೋಹವನು ನಡೆಸುತೆ ||೮೭||

ದುಷ್ಟರಂ ಶಿಕ್ಷಿಸಿ ವಿಶಿಷ್ಟರಂ ರಕ್ಷಿಸುತೆ
ತುಷ್ಟಿಯಂ ತ್ರಿವಿಧ ಲಿಂಗವನರ್ಚಿಸುತ ಜೇಷ್ಠ
ತಿಷ್ಟೆಗೆಯ್ಯುತೆ ಲಿಂಗನಿಷ್ಟಾಪರತತ್ವದಿಂದಾಚರಿಸಿ ಲಿಂಗದೊಳಗೆ ||
ಶ್ರೇಷ್ಠ ಸದ್ಗುರು ಮಹಾರಾಜ ಬಸವೇಶ್ವರನು
ನಿಷ್ಠೆಯಿಂದೈಕ್ಯನಾದನು ಯಿವನ ದೆಸೆಯಿಂದ
ಶಿಷ್ಟ ಶಿವದರ್ಶನೋತ್ಸುಖ ಪ್ರಾಪ್ತಿಸಿತು ಎಮಗೆ ಹಾ ಬಸವನೆಂದು ನುತಿಸಿ ||೮೮||

ಪರಮಾತ್ಮನೊಳೈಕ್ಯನಾದಂ ಬಸವಯಿತ್ರ
ವರ ಪುರಾತನ ವಾದ್ಯ ವೇದ್ಯ ಸಾಧ್ಯಾದಿಗಳು
ಪರಮ ಹರುಷಕ್ಲೇಶವೆರಸಿ ನುತಿಸುತ್ತಿರಲ್ಕತ್ತ ಕಲ್ಯಾಣದೊಳಗೆ ||
ಗುರುಬಸವರಾಜ ಸಂಗಮನೊಳೈಕ್ಯವನಾದ
ತೆರವನಾ ಗುಜುಗುಜೆಂಬುತೆ ಕಟಕ ತೀವಿರಲು
ವೀರಘಂಟೆಯ ಮಡಿವಳಯ್ಯ ಬಸವರಸರರಮನಿಗೆ ಪೋಗುತೆ ವಾರ್ತೆಯು ||೮೯||

ಚನ್ನಬಸವಣ್ಣ ನಾಗಮ್ಮನವರಂ ಕರೆದು
ನನ್ನಿಯಿಂದಾ ಬಸವರಾಜ ಸಂಗಮದೊಳಗೆ
ಮನ್ನಣೆಯೊಳೈಕ್ಯನಾಗಲು ಪೋದನಿದನೆನ್ನನರುಹೆಂದು ಪೇಳಿದನಲ ||
ಎನ್ನಲಾಕ್ಷಣಮುಭಯರುಂ ದುಃಖಶರಧಿಯೊಳ
ಗುನ್ನತಿಯೊಳೋಳಾಡುತೆಮಗೀ ವಾರ್ತೆಯನು
ಪನ್ನಗಾಭರಣನಪ್ರತಿಮ ಪೇಳದಲೆ ಪೋಗುವುದುಚಿತವೆ ಮುನ್ನವೆ ||೯೦||

ಜನಿಸಿದಾಕೆಯ ಬಿಟ್ಟು ಮುನ್ನ ನೀ ಹೋಗುವುದು
ಸನುಮತವೆ ಚೆನ್ನಬಸವಂ ಚಿಕ್ಕವನು ಚರರ
ಮನದಿಷ್ಟವಿತ್ತು ದಾಸೋಹ ನಡೆಸುವ ಕಾರ್ಯವೆಂತಾಗುವುದು ತಿಳಿಯದೆ ||
ಆನೆ ಭಾರದ ಆನೆಗಲ್ಲದಿರುವೆಂದಹುದು
ಭಾನುದೀಧಿತಿಯಂತೆ ಮಿಂಚುಪುಳುವಿಂದಹುದೆ
ಮಾನನಿಧಿ ತಾನೋರ್ವನೆಸಗುತ್ತಿರುವ ಕಾರ್ಯ ಜಗವ ತಾನೆಸಗಲಹುದೆ ||೯೧||

ಎಂದು ಬಹುಪರಿಯಿಂದ ದುಃಖಿಸಲು ಮಡಿವಳನು
ಚಂದವಲ್ಲೀ ಲೌಕಿಕತೆರದಿ ದುಃಖಿಪುದು
ಬಂದವರದೊಂದಿನವು ಪೋಗುವುದುಚಿತವ್ಯೆಸೆ ನಾವಾದರೊಂದು ದಿನವು ||
ಹೊಂದುವದೆ ಸಹಜವೀಗಂ ಬಂದ ಕಾರ್ಯವದು
ಅಂದದಿಂ ಮಾಡಬಹುದು ಚರ ದಾಸೋಹ
ಕುಂದದಂದದೊಳು ರಚಿಸುವುದುಚಿತ ಮೇಲಾದ ಕಾರ್ಯಕಾನಿಹೆ ಚಿಂತೆಯೇಂ ||೯೨||

ಮಾಡದಿರಿಯೆಂದಭಯವನಿತ್ತವರ ಸಂತೈಸಿ
ಮಡಿವಳಂ ಪೋಗಲತ್ತ ಬಿಜ್ಜಳಂ ಕೋಪದ
ಕಿಡಿಗಳಂ ಕಾರುತಾ ಹರಳಯ್ಯ ಮಧುವರಸರಂ ತರಿಸಿ ನೇತ್ರಗಳನು ||
ಪೊಡವಿಯಾಣ್ಮಂ ಕೀಳಿಸುತೆ ಎತ್ತುಗಳ ತರಿಸಿ
ಪಿಡಿದುಯಳ ಹೂಟಿಯಂ ಕಟ್ಟಿಸುತ್ತೆಳಸಲವು
ಮೃಡನ ಪುರಿಗಂ ಪೋದವೆತ್ತುಗಳಿವರ ಕಣ್ಗಳಿತ್ತರಾಗಣ ತಿಂತಿಣಿ ||೯೩||

ಶಿವ ನಿರೂಪದಿ ವ್ಯೋಮಯಾನವಂ ಬಂದಿವರ
ತವೆಮುಭಯರ ಕುಟುಂಬ ಸಹವಾಗಿ ಕುಳ್ಳಿರಿಸಿ
ಶಿವಶಿವಾಯೆನುತಾಗ ಶಿವಲೋಕಮಂ ಸಾರ್ದು ಸುಖದಿಂದಲಿರ್ದರವರು |
ಶಿವಗಣಂಗಳು ಯಿತ್ತಮರಗುತ್ತಮನೆಗೈದ
ರವರೊಳಗೆ ಜಗದೇವ ಮಲ್ಲೆ ಬೊಮ್ಮಣ್ಣಗಳನು
ಭವನ ಕಂಬರಲೊಡನೆ ಮಾತೆಕೇಳಿದಳಿನಿತುವೇಳ್ಯವೆಲ್ಲಿರ್ದರೆಂದು ||೯೪||

ಧರಣಿಪಾಲಂ ಗಣದ್ರೋಹವೆಸಗಿದನದನು
ಪೂರವಾಗಿಯೆ ನೋಡಿಬಂದೆವೆನೆ ಮಾತೆಬಹುದು
ಕ್ರೂರ ಕೋಪದಿ ನೋಡಿದಳು ವಡಿದಕೆ ನಾಚಿಕಿಲ್ಲವೆ ನಿಮಗೆನುತ್ತೆ ||
ಗುರು ಲಿಂಗ ಜಂಗಮ ಶಿವಂ ಶಿವನ ಭಕ್ತರ್ಹಿರೆ

ಇರುವುದಾಗಿಯ ನೀನುಯಧಿಕಾರಯಿಹೆಯೆಂದು
ಹರುಷದಿಂದಾಗ ಗಜವನು ತರಿಸಿಯುಡುಗೊರೆಯ
ಪರಮಶಾಲ್ಕಿರಪೇಚವಮೌಕ್ತಿಕ ತುರಾಯಗಳ ಧರಿಸಿ ಗಜಶಿರಬೇರಿಸಿ ||
ವರಸಂಭ್ರಮದಿ ಸೂರ್ಯಚಂದ್ರವೀಥಿಗಳೊಳಗೆ
ಮೆರವಣಿಗೆಯನು ಮಾಡಿಯರಮನೆಗೆ ಕರದೊಯ್ದು
ಭರದೊಳಾ ಸಭೆಗೆ ಕುಳಿತು ಕಾಣಿಕೆಕೊಂಡು ವೀಳ್ಯವನು ಕೊಟ್ಟು ಕಳುಹೆ ||೧೦೫||

ಚನ್ನಬಸವಣ್ಣ ತನ್ನರಮನೆಗೆ ಬಂದುನೆರೆ
ನನ್ನಿಯಿಂದಾ ಮಾತೆ ಚರಣವ ನಮಸ್ಕರಿಸಿ
ಭಿನ್ನವಿಲ್ಲದೆ ಸಕಲಗಣವೃಂದಮಂ ಕರಸಿ ಚರರಾಶ್ರಮಕೆ ಪೋಗುತೆ ||
ಮನ್ನಣೆಯೊಳವರ ಸಂತೈಸಿ ಬಿನ್ನಹ ಮಾಡಿ
ಚೆನ್ನಾಗಿ ಸರ್ವ ಷಡ್ರುಚಿ ಪದಾರ್ಥವ ರಚಿಸಿ
ತನ್ನ ಲಿಂಗಾರ್ಚನೆಯ ಮಾಡಿ ಸುಖದೊಡಗೂಡಿ ಸರ್ವಜಂಗಮರ ಕರೆಸಿ ||೧೦೬||

ಚರಣಪೂಜೆಯ ರಚಿಸಿಯೆಡೆಮಾಡಿ ಸರ್ವರಿಗೆ
ಶರಣೆಂದು ಬೇಡಿ ಬೇಡಿದವಪದಾರ್ಥ ನೀಡಿ
ಕರುಣ ಸಾಗರ ಮೂರ್ತಿಗಳೆ ಬಾಲನಪರಾಧವನು ಕ್ಷಮಿಸಿ ರಕ್ಷಿಸುವುದು ||
ಕರಬಡವ ನಾನು ಯೆನ್ನಿಂದಾ ಬಸವನನಿತು
ಚರರಗಳ ಗರ್ಜನೆಯ ತಡೆಯಲಾಪೆನೆ ಗುರುವೆ
ಮರುಳ ಮಗನಂ ನೋಡಿ ಸಹನ ಮಾಡುವದೆಂದು ಬೇಡಿಕೊಳುತಂ ಕಳುಹಿದ ||೧೦೭||

ಎಲ್ಲಾ ಗಣಂಗಳಿಷ್ಟವನು ಸಲ್ಲಿಸುತ ಬೇಗ
ಪುಲ್ಲ ಹರಶರನಸ್ಮರಣೆಯೊಳಿರಲು ರಾತ್ರಿಸಭೆ
ಗುಲ್ಲಸದಿ ಪೋಗುವಾಗಂಡಳವನೇರಿ ಜಗದೇವ ಮೊಲ್ಲಿಯರುಭಯರು ||
ಸಲ್ಲಲಿತ ದೀವಟಗಿಯರ ಮಾಡಿ ಶೃಂಗರಿಸಿ
ಬಲ್ಲ ಮಡಿವಳ ಪೇಳ್ದವಿವರದಿಂ ಮಾತಾಡಿ
ಅಲ್ಲಿವರನಿರಿಸೆನಲ್ಕಿಟ್ಟು ಬಾಹುವದೆಂದು ಕಳುಹಿದ ಸಭಾಂಗಣಕ್ಕೆ ||೧೦೮||

ಪಲ್ಲಕ್ಕಿಯೆಡಬಲದಿ ಜಗದೇವ ಬೊಮ್ಮಿಯರ
ನಲ್ಲಕರ್ಪೂರವೆರದ ದೀವಟಿಗೆಯವ ಪಿಡಿಸಿ
ನಿಲ್ಲದಾಗಲು ಪೋಗೆ ಧರಣೀಶ ಬಿಜ್ಜಳನುಯಲ್ಲಿಯುವರೆಂದು ಕೇಳೆ
ಕೊಲ್ಲಾಪುರದಿ ಬಂದರಿವರ ಹಿರೆಯರನಲ್ಲಿ

ಭಾವಿಸಲ್ತಾಂಬೂಲವನು ಯುಗುಳಿ ನೆಲಕೆ ಬಿದ್ದೊರಳಿ ಮುಖವೆದೆಗಳನು ||
ಆವಗಂ ಬಡಿದುಕೊಳ್ಳುತ್ತೆನಗೆ ಪೇಳದೆಲೆ
ಕೋವಿದಂ ಹೋದನಿನ್ನೆಲ್ಲಿ ದೊರೆತನವೆನಗೆ
ಕಾವಹರನೇ ಬಲ್ಲ ನಿನ್ನೊಳೊಂಚನೆಯಿಲ್ಲದೆಲ್ಲವೊಪ್ಪಿಸಿದೆ ನಿನಗೆ ||೧೦೦||

ನೀನು ಪೇಳ್ದಂತೆ ನಾಂ ಕೇಳುತಿರ್ದಪೆಯೆಲ್ಲ
ದೇನುವಂ ಪ್ರತ್ಯುತ್ತರವ ನುಡಿದೆ ನೀ ನೆನಗೆ
ಬಾನುತಡದಾಗಣಿತವನು ಒಪ್ಪಿಸಿದೆ ನಿನಗೆಯೇನಾದಡಂ ನುಡಿದೆನೆ ||
ಸಾನುರಾಗದೊಳು ನೀ ಮಾಡಿದುದೆ ಮಾರ್ಗವೆನು
ತಾನು ಸಂತೋಷದೊಳಗಿರ್ದೆ ನನಗಿತರವಹ
ನೂನವೆನಿತಿಲ್ಲದಂದದದೊಳು ನಡೆಸುತಿದೆ ಯೀಗ ನಾನೆಂತು ಮಾಳ್ಪೆ ||೧೦೧||

ಎಂದು ಬಹುವಿಧದಿಂದ ದುಃಖಿಸುತೆ ಮತ್ತೆಯವ
ರೊಂದಿಗರುದಾರಾದರುಂಟೆಯೀ ಭೂಮಿಯನು
ಚಂದದಿಂ ಪಾಲಿಪ ಬಲತ್ಕಾರಿಗಳುಯೆಂದು ಕೇಳಲಾಕೊಂಡಿ ಪೇಳ್ದೆ ||
ಅಂದು ನಾಗಮ್ಮನುದರದಿ ನುಡಿದ ಮಹಿಮನಿಹ
ಬಂಧುರ ಸುವಿದ್ಯಾ ಬಲಾತ್ಕಾರಿ ವಾಚಕನು
ಯೆಂದು ಪೇಳಲ್ಕವರ ಮಂದಿರಕೆ ಪೋಗಿ ಬಹೆವೆಂದ್ದೊರಟು ಪೋಗಲಾಗಿ ||೧೦೨||

ಕರೆದು ಕುಳ್ಳಿರಿಸಿಕೊಂಡವರು ತಾವುಂ ಕ್ಲೇಶ
ದುರಿಯೊಳಂ ಸಂತಾಪವಾಗಿನಿತು ವ್ಯಾಳ್ಯದೊಳು
ಮರುಗಲಾಧರಣಿಪತಿ ಸಂತೈಸಿ ನಾನಿಹೆನು ಚಿಂತಿಸದಿರೆಂದು ಪೇಳಿ ||
ವರಬಸವರಾಜ ಮಾಳ್ಪಧಿಕಾರಮಂ ನೀನು
ಮರಿಯದಾಗಲು ಮಾಡುವಮಾತ್ಯತ್ವವವುದ
ಹಿರಿಯ ಪಟ್ಟವ ಕೊಡುವೆನೆನಲದಕೆ ಚನ್ನಬಸವಂ ನುಡಿದನೆಲೆ ಭೂಪನೆ ||೧೦೩||

ಪನ್ನಗ ಪತಿಯು ಧರಣಿ ಭಾರ ಪೊತ್ತಿಹನೆಂದು
ಇನ್ನುಳಿದ ಸರ್ಪಗಳು ಹೊರಲಾಗುವುದೆ ಧರೆಯ
ನನ್ನಿಯಿಂದೆರಡನೆಯ ಶಂಭು ಮಹಿಮಾ ಶಾಲಿ ಬಂಧುರ ಬಲಾತ್ಕಾರಿಯು ||
ಸನ್ನುತಾಮಳ ಬಸವರಾಜನೆನಗಂ ಸರಿಯೆ
ಎನ್ನಲಾಧರಣಿಪತಿಯಧಿಕಾರ ಎಲ್ಲದಲೆ
ತನ್ನೊಳೀ ವಾಕ್ಯಗಳು ಹೊಡಲಾಪವೆ ಮರುಗ ಜನಿಸಿದಾಗಲೇ ಗಂಧವು ||೧೦೪||

ಯರ ನಿಂದೆ ಮಾಡಿದವರಂ ಕೊಲುವುದಲ್ಲದೊಡೆ
ಹರಣವನು ಕೊಡುವದಿದನಾಗದೊಡೆ ಕರ್ಣವನು ಮುಚ್ಚುತೇಳುವುದುಯೆಂದು ॥೯೫॥

ವರಶಾಸ್ತ್ರಗಳನು ಹೇಳುವವುಮದರಿಂದಧಿಕ
ದುರಿತಕಾರ್ಯವ ನೋಡಿ ದ್ರೋಹಿಯನು ಕೊಲ್ಲದಲೆ
ತಿರುಗಿ ಬಂದೀಮಾತ ಹೇಳುವಿರೆನಲ್ಪಿರಿದು ದ್ರೋಹಿಗಳು ನೀವಲ್ಲವೆ ॥
ಸರಿಯಬಾರದೆನಲ್ಕೆ ಗುರುಬಸವನೀ ಕಾರ್ಯ
ನರುಹಿ ಪೋಗಿಹರೀಗಲುಳಿದ ಗಣತಿಂತಿಣಿಗೆ
ಅರುಹಿ ಅಪ್ಪಣೆಗೊಂಡು ಮಾಡುವೆವು ಸತ್ಯವೀಗುಂಡು ಪೋಗುವೆವೆನ್ನಲು ॥೯೬॥

ಛೀ ನಾಯಿಗಳೆ ನೀವು ಉಣ್ಣುವೊಡೆ ಮನೆಯೊಳಗೆ
ಹಾನಿ ಬರ್ಪುದು ಶಿವಮತಕ್ಕೆ ಕುನ್ನಿಯ ತೆರದಿ
ಸಾನುರಾಗದೊಳುಣ್ಣುವಡೆ ನೀಡುವೆನೆನಲು ಹಾಗಾಯಿತೆಂದು ಮತದಿಂ ॥
ಶ್ವಾನನಂದದಿ ಭೂಮಿಯೊಳ್ನೀಡೆ ಮುಖದಿಂದ
ಮಾನವಿಲ್ಲದೆ ತಿಂದು ಬಾಯ್ದೊಳದು ನಡುಗಟ್ಟಿ
ಖೂನದ ಕಠಾರಿಗಳ ಕೈಯೊಳಗೆ ಪಿಡಿದು ಮಾತೆಗೆ ನಮಸ್ಕರಿಸಿ ನಡೆಯೆ ॥೯೭॥

ಮೊಲ್ಲೆ ಬೊಮ್ಮಣ್ಣ ತಮ್ಮಕಗೆ ನಮಸ್ಕರಿಸಿ
ಉಲ್ಲಸದೊಳುಭಯದೊಡಗೂಡಿ ಬಸವೇಶ್ವರಸ
ಸಲ್ಲಲಿತವರಮಣೆಗೆ ಪೋಗಿ ಗಣತಿಂತಿಣಿಗೆ ನಮಿಸಿ ವಿಜ್ಞಾಪನವನು ॥
ನಿಲ್ಲದಾಗಲೆ ರಚಿಸಿದರು ಸ್ವಾಮಿದ್ರೋಹಿಯನು
ಕೊಲ್ಲುವುದಕೆ ನಿರೂಪವೆಂತೆನಲು ಮಡಿವಳಗೆ
ಎಲ್ಲ ಗಣಮುಖ್ಯರೊಂದಿಸಿ ಕೇಳೆ ಮೂರುವರೆ ತಿಂಗಳಿಗೆ ಪೂರ್ಣಬಹುದು ॥೯೮॥

ಅಂದಿದಂ ಪೇಳುವೆನು ಮುಂದೆ ಬಂದೀಕಾರ್ಯ
ದಂದದಂತಿರವೇಳ್ಕುಯೆಂದು ಗಣವೃಂದವದು
ಚಂದದಿಂ ತಮ್ಮಾಶ್ರಮಕೆ ಪೋಗಲಿತ್ತಲಿವರು ಮಂದಿರಕೆ ಬಂದು ತಾಯ್ಗೆ ॥
ವಂದಿಸುತಲೀ ಕಾರ್ಯದಂದವೆಲ್ಲವ ಪೇಳಿ
ಮುಂದಿನಾಗಮವರುಹಿ ಸಂದೇಹವಿಲ್ಲದೆಲೆ
ಬಂಧುರದೊಳಂ ಮನೆಯೊಳಿರಲಿತ್ತ ಬಿಜ್ಜಳಗೆ ಬಸವೇಶ್ವರಂ ಪೋದು ॥೯೯॥

ವಿವರವೆಲ್ಲವ ಕೊಂಡಿಮಂಚಿಯರುಹಲ್ಕೇಳಿ
ಆವರಿಸಿತಾ ಕ್ಲೇಶದುರಿ ಮುಖದೊಳು ಮೆಲ್ಲ

ಕೊಲ್ಲಿದವರಿವರ ವೈರವ ತೀರಿಸುವೆವಿಲ್ಲಿ
ಬಲ್ಲಿದರ ಬಲದಿಂದವೆಂದು ಬಂದರುವೆನಲ್ಕನ್ನಲ್ಲಿ ವರನಿರಿಸಲು ||೧೦೯||

ವೈರವನು ತೀರಿಸುವೆನೆನಲಿರಿಸಿ ಕೊಂಡಡೆಯು
ಯಿರಿಸಿಕೊಳಬಹುದೆಂದು ಪೇಳುತ್ತವರನಿರಿಸಿ
ತಿರುಗಿತನ್ನರಮನೆಗೆ ಬಂದು ಸುಖದಿಂದಿರಲು ಮೂರುವರೆ ತಿಂಗಳದಿನ ||
ತೀರಿತಾಗಳೆಯನತ್ತಿನದಿನವು ಸಕಲಗಣ
ರರಿದಾಗ ಬಸವನರಮನೆಗೆ ಬಂದವರೆಲ್ಲ
ಕರಸಿ ವಿಚಾರಿಸಲಾಗ ಮಡಿವಳದೇವರಿಗೆಯಹುದೆಂದು ಜಗದೇವನ ||೧೧೦||

ಕರೆಸಿ ಪೇಳಿದವರಿಗಿಂದಿನರಾತ್ರಿಯೊಳೇ
ವರಸಭೆಯ ಜನರಿಗಪ್ಪಣೆಯಿತ್ತುವಂದಳವ
ನೇರಿ ಧರಣೀಶವರಮನಿವಳಗೆ ಪೋಗುವಾಗ ಹೊನ್ನಮನವರಮನಿಯ ||
ಸರಿಸದಲ್ಲಿಳಿಸುವರು ನರವಾಹನವನಾಗ
ಲರಸ ಪಲ್ಲಕ್ಕಿಯಿಂದಿಳಿವಾಗ ದೀವಟಿಗೆಯೊ
ಳಿರುವ ಶಸ್ತ್ರವ ತೆಗೆದು ವೀರಬೊಬ್ಬೆಯನಿಟ್ಟು ಕರಶಿರವುದರ ಮೂರನು ||೧೧೧||

ಕಡಿದು ಸೀಳುತೆ ಬೇಗ ಬಂದುದೆಂದು ಪೇಳುತ್ತೆ
ವೊಡೆಯ ಶ್ರೀ ಚನ್ನ ಬಸವೇಶ ನೀ ಲಿಂಗವನು
ತಡಿಯದರ್ಚಿಸಿ ತೃಪ್ತಿವಡೆದು ಸರ್ವಪದಾರ್ಥ ಬಂಡಿಗಳ ಮೇಲೇರಿ ||
ಸಡಗರದೊಳಂ ಸರ್ವರೊಡಗೂಡಿರುವರೆಂದು
ಗಡಬಡೆಯೊಳಂ ಪೇಳ್ದು ಚರಸಮೂಹವ ಕರೆಸಿ
ನಡೆವುದೆಲ್ಲರು ನಾವು ವುಳುವಿಗೀ ರಾತ್ರಿಯೊಳು ಪೈಣವೆಸೆ ನಮ್ಮಿಂದಲು ||೧೧೨||

ಆಗದಿಲ್ಲಿಯೆ ನಾವುಯಿರ್ಪವೆನೆ ನಿಮ್ಮ ಮತ
ವಾಗಲೆಂದವರು ಬೇಡಿದ ಪದಾರ್ಥವನಿತ್ತು
ಯೀಗಿದನು ಬರುವೆವೆಂಬವರ ಕರದರಮನೆಯೊಳಿರಿಸಿ ಸರ್ವಗಣಂಗಳ ||
ಬ್ಯಾಗ ಬರಿಸವರ ಲಿಂಗಾರ್ಚನೆಯನೆಸಗೆಂದು
ಕೂಗಿ ಹೇಳುತ ತೃಪ್ತಿಯನುವಡಿಸಿ ಬಂಡಿಯೊಳ
ಗಾಗಹೇರಿಸಿ ನಡೆವುದೆಂದು ಪೇಳುತ್ತೆ ತಾ ಜಗದೇವ ಬೊಮ್ಮಿಗಳನು ||೧೧೩||

ಸಿದ್ಧಮಾಡಿ ಕಳುಹಲಿದ್ದಾಯುಧವ ತೆಗೆದು
ತಿದ್ದಿಯದರೊಳಗಿಟ್ಟು ಹರಹರಯೆನುತಾಗ

ಸಿದ್ಧಿಸಿತಿವತ್ತವನುತುದ್ದಟದಿ ಸಭೆಗೈದಿನಿಂತಿರುವ ಸಮಯದೊಳಗೆ ||
ಯಿದ್ದ ಪಾರಿಷದರೆಲ್ಲರು ತಮ್ಮನಿಗಳಿಗೆ
ಯೆದ್ದು ಹೋಗಲು ಭೂಪನಿದ್ದ ನರವಾಹನದಿ
ಸದ್ಯವೆ ಕುಳಿತು ಯಮನ ಪುರಕೆ ನಡೆವಂತೆ ನಡೆದ ರಾಣಿವಾಸದೆನೆಯಂ ||೧೧೪||

ಮಧ್ಯದೊಳಗಿರುವ ಹೊನ್ನಮ್ಮನರಮನೆ ಮುಂದೆ
ಬುದ್ಧಿವಂತರು ಅಂದಳವನಿಳುಹಲಾಗವನು
ಯೆದ್ದು ಹೋಗುವ ಸಮಯದೊಳಗಿದ್ದ ಜಗದೇವ ಮೊಲ್ಲೆ ಬೊಮ್ಮಣ್ಣಗಳನು ||
ಸಿದ್ಧವಾಗಿಹ ಶಸ್ತ್ರವನು ತೆಗದು ಬೊಬ್ಬಿಡುತೆ
ಕದ್ದ ಕಳ್ಳನ ಶಿರವ ಛೇದಿಪೊಲು ಛೇದಿಸಿದ
ರುದ್ದಟದೊಳವರು ಗದ್ದಲವಾಗಲನಿತರೊಳಗೆದ್ದವೆಂದೆನುತೆ ಹೊರಗೆ ||೧೧೫||

ಹೊರಟುಬಂದರ ಚಲ್ಲಬಡಿವುತ್ತೆ ಬಸವರಸ
ರರಮನೆಗೆ ಬಂದು ಮಡಿವಳಿಗೆ ನಮಿಸುತೆ ಪೇಳಿ
ದರುಶಿರವ ಛೇದಿಸಿದೆವೆಂದೆನಲ್ಕರವುದರ ಸೀಳಿದಿರೆಯೆಂದೆನಲ್ಕೆ ||
ಮರವೆಯಾಯ್ತೆಮಗೀಗ ಪೋಗಿ ಸೀಳುವೆವೆನಲು
ಅರಿಯದುದು ನಿಮಗೆ ವಶವಾಗದದು ನಾಂ ಪೋಪೆ
ಭರದೊಳೆಲ್ಲರುಗೂಡಿ ನಡೆಯೆಂದು ತಾ ನೃಪಸದನಕ್ಕೆ ಪೋದನಾಗ ||೧೧೬||

ವೀರಭದ್ರನ ಗುರುತು ತೋರಿದಪೆನೆಂಬಂತೆ
ವೀರಘಂಟಿಯನುಡಿಸಿ ಘೀಳಿಡುತೆ ಜನರೊಳಗೆ
ಮುರಿಗಿ ಬಡಿಗೆಯನಿಡಲುಲಜನ ಸಮೂಹದೊಳು ಸಿತಿವಗದ ಪರಿಯಂತಾಗಲು ||
ಕರಿಯ ಹಿಂಡಿನೊಳು ಹರಿಹೊಕ್ಕ ಪರಿಯಂತಾಗೆ
ವೀರ ಬೊಬ್ಬೆಯನಿಟ್ಟು ಧೀರನಲ್ಲಿಗೆ ಪೋಗಿ
ಅರೆಜೀವಿಯಾದ ನೃಪನೆದೆ ತುಳಿದು ಕರವಳಿದುವುದರವನು ಸೀಳಿಬೇಗ ||೧೧೭||

ಗೋಳಿಡುತೆ ಜನರಳುತ್ತಿರುವಾಗ ಮಡಿವಳನು
ಹೋಳಿಯಾಡುವ ತೆರದಿ ಕರವ ಬೀಸುತ ಹೊರಗೆ
ಗಳಿಗೆಯೊಳು ಬಂದೂರವೋಣಿವಿಡಿವುತಲಸಿಲಗವ ಬರಲು ಮೊದಲೆಯಿದ್ದ ||
ನೀಲಗುದುರಿಯನೇರಿದಾ ಚನ್ನಬಸವನಾ
ಗಲೆ ಮೊದಲಹರ ತಡೆದಿರಲ್ನೋಡಿ ಪದದಿಂದ
ನೆಲಕೆಕರ ಬೀಳುವಂದದಿಯೊದೆಯಲದು ಗಳಗಳಲೆಂದು ಮುರಿದುಬೀಳೆ ||೧೧೮||

ಸರ್ವರೊಡಗೂಡಿ ದಾರಿಯವಿಡಿದು ಪಯಭೂಗತಿ
ಗುರ್ವಿನಿಂದಂ ನಡೆಯಲತ್ತ ಪೊಳಲೊಳು ದುಃಖ
ಪರ್ವಿಯರ ಮನೆ ರಾಣಿ ವಾಸದವರುಂ ಮುಸುಕಿ ಗೋಳಿಡುತಲಳುತಿರ್ದರು ||
ಸಾರ್ವಭೌಮನ ಲವಣವುಂಡು ಯಿಂತೀಪರಿಯ
ಗರ್ವದಿಂ ಶಿರವ ಭೇದಿಸಿ ಪೋದರಿವರಿಗೀ
ವುರ್ವಿಯೊಳಗೆಲ್ಲಾದರುಂ ಸುಖವಹುದುಂಟೆಯೆಂದು ಶೋಕಿಸಿಯಳುವರು ||೧೧೯||

ಪರಿಜನರು ಪುರಜನರು ಗೋಳಿಟ್ಟಳುತ್ತಿರಲು
ಪರಮ ಭಕ್ತರುಯೆನುತ್ತಿಹರು ಭಕ್ತದ್ರೋಹ
ವಿರದೆ ಮಡಿದ ಫಲವನುಂಟು ಬಿಡಲುಂಟೆಯಿನ್ನಾದರಿಷ್ಟರಿಂದೆ ||
ಸರಿವುದೇ ನೋಡಿರೆಂದುಚ್ಚರಿಸುತಿರಲಾಗ
ಭರದೊಳು ನೃಪಗಾತ್ರಕಗ್ನಿಪ್ರವೇಶವನು
ಅರಿದು ಮಾಡಲ್ಕಾಗ ಮಂಚಿ ಮೆಲ್ಲನೆ ಅಳಿಯ ಬಿಜ್ಜಳನ ಬಳಿಗೆ ಪೋಗಿ ||೧೨೦||

ನಿಮ್ಮನಾಶ್ರಯಿಸಿ ವುಂಡುಟ್ಟು ಸುಖದಿಂದಿರ್ದು
ನಿಮ್ಮ ಮೇಲೀಗ ಕೈಮಾಡಿ ಪೋದರೆನಲ್ಕೆ
ಸುಮ್ಮನೆಯೇನಿಲ್ಲದವರಂತೆ ಶರಣರಿಗೆ ಅಂಜಿಕುಳ್ಳಿರುವುದುಂಟೆ ||
ನಿಮ್ಮ ಸರಿಯಾದ ದೊರೆಗಳು ಹಾಸ್ಯಮಾಡಿದಪ
ರಮ್ಮಮ್ಮಯೇನೆಂದು ಚಪ್ಪಳಿಡುತ ನಗುವ
ರೊಮ್ಮೆಯೇನಾದರಾಗಲಿ ಸರ್ವ ಚತುರಂಗ ಬಲಗೊಂಡು ಅವರ ಮೇಲೆ ||೧೨೧||

ಹೋಗಿ ದಳದುಳಿ ಮಾಡಿ ಕಾಗಿಬಳಗದ ತೆರದಿ
ಕೂಗಿಯವರನು ನೆಲಕೆ ಬಾಗಿಸುತೆ ತಲೆಗಡಿದು
ಸಾಗಿಬರೆ ಕೀರ್ತಿಯಪ್ಪುದುಯೆಂದು ಬೋಧಿಸಲ್ಕಂತಾಯಿತೆಂದು ಬೇಗ ||
ರಾಗದಿಂದಾ ಜಯಭೇರಿಯನು ಹೊಡೆಸುತ್ತೆ
ಪಾಗದವರಿಗೆ ಪೇಳಿ ಅಶ್ವಗಜ ಶೃಂಗರಿಸು
ತಾಗರಥಗಳು ಪದಾತಿಯ ತರಿಸಿರಾವುತರಯೇರಿಸುತ ನಡೆದರಾಗ ||೧೨೨||

ಒಂದೆರಡು ಪಯಣ ಪೋಗಲ್ಕಾಗ ಕಂಡವರ
ರಿಂದು ಬಂದಿಹ ದಂಡವೆಲ್ಲ ಗುಂಡಾಗಲೆಂ
ದಂದು ಶಪಿಸಲು ಸರ್ವದಂಡ ಗುಂಡಾಗಿ ಬೀಳಲ್ಕಾಗ ನೋಡಿಯಲ್ಲಿ
ಇಂದುಧರ ಕಂದಶ್ರೀ ಚನ್ನಬಸವೇಶ್ವರನು

ಬಂಧುರದ ಮಡಿವಾಳ ಮಾಚಿದೇವರೆ ಮೊದಲು
ಸುಂದರದ ಸರ್ವಗಣವೆಯ್ದೆ ಬಸವೇಶ್ವರನ ಮೂರ್ತಿಯನು ಸ್ಥಾಪಿಸುತಲಿ ||೧೨೩||

ಸರ್ವಗಣಕಾರಾಧನೆಯನು ಮಾಡಿಸುತಾಗ
ಪರ್ವದಿಂ ದಿನದಿನವಿದೆಂದು ಸರ್ವೋತ್ಸಾಹದಿ
ಸರ್ವರಿಗು ದಾನಧರ್ಮವ ಮಾಡಿ ಮುಂದಕ್ಕೆ ಸಾಗಿದರು ಶಿವಸ್ಮರಣೆಯಿಂ ||
ಉರ್ವಿಯೊಳಗಾಕ್ಷೇತ್ರ ಸರ್ವರರಿಯಲು ಮಹಿಮೆ
ಪರ್ವಿತಾ ದಂಡಗುಂಡದ ಬಸವನಾದ ಮಲ
ಖರ್ವಗಣರತ್ತ ಶ್ರೀ ಚಂದ್ರಬಾಗಾನದಿಯ ದಾಟಿ ಹಿಪ್ಪರಗಿ ಪುರಕೆ ||೧೨೪||

ಹೋಗಲ್ಲಿ ಕಲ್ಲಿನಾಥನ ಮಹಾಕ್ಷೇತ್ರದೊಳು
ಹಾಗೆ ಸರ್ವಗಣಕ್ಕೆ ತೃಪ್ತಿ ಪಡಿಸುತೆ ದಾನ
ಸಾಗವಾಗಿಯೆ ಮಾಡಿ ಚನ್ನಬಸವೇಶ್ವರಗೆ ಮಡಿವಾಳ ಮಾಚಿದೇವ ||
ಹೀಗೆಯೂ ಕಲ್ಲಿನಾಥನೊಳೈಕ್ಯವಾದಪೆನು
ರಾಗದೊಳೆ ಕೈಲಾಸದೊಳೆ ನಮ್ಮ ದರ್ಶನವ
ದಾಗುವದು ನೀವೀಗವುಳವಿಗ್ಹೋಗುತಲಲ್ಲಿ ಐಕ್ಯವಾಗುವದುಯೆಂದು ||೧೨೫||

ಪೇಳಿ ಮಡಿವಳದೇವ ಸರ್ವಗಣಕಂ ನಮಿಸಿ
ತಾಳಿಸಂತೋಷವನು ಕಲ್ಲಿನಾಥನ ಮುಂದೆ
ಲೀಲೆಯೊಳ್ನಿಂದು ಸ್ತೋತ್ರವ ಮಾಡಿ ಲಿಂಗದೊಳೈಕ್ಯವಾದಂ ಮುದದೊಳು ||
ಫಾಲನೇತ್ರನ ನೇಮದಿಂದವಾಕಾಶದೊಳು
ಸಾಲುಸಾಲಲಿ ಪುಷ್ಪಮಳೆಗರೆವುತಿರೆ ಸುರರು
ತಾಳಕಾಸಳ ದುಂಧುಬಿನಾದ ಬೋರ್ಗರೆಯಲಾನಂದ ಮುಸುಕಿತಾಗ ||೧೨೬||

ಚನ್ನಬಸವನಾಗಮ್ಮ ಮೊದಲಾದ ಗಣ
ನನ್ನಿಯಿಮದಾಗ ಕಪ್ಪಡಿಗೆ ದಯೆಮಾಡುತಲಿ
ಚೆನ್ನಾಗಿ ಸಂಗಮದಿ ಸ್ನಾನವನು ಮಾಡಿ ಲಿಂಗಾರ್ಚನೆಯನೆಸಗಿ ಬೇಗ ||
ಪನ್ನಗಾಭರಣ ಸಂಗಮನಾಥನರ್ಚಿಸುತ
ಇನ್ನುಳಿದ ಗಣಕುಲಕೆ ಆರಾಧನೆಯ ಮಾಡಿ
ಮನ್ನಣೆಯೊಳಾದಾನ ಧರ್ಮಗಳ ರಚಿಸುತ್ತೆ ಲಿಂಗದ ಪಣೆಯಗೊಂಡು ||೧೨೭||

ಯಲ್ಲಾಪುರಕೆ ಪಯಣಗತಿಯಿಂದೆ ಪೋಗುತ್ತೆ
ಬಲ್ಲಿದಂ ಚನ್ನಬಸವೇಶಂ ನಿಲ್ಲುವಗಣಕೆ

ಸಲ್ಲಲಿತದಿಂದ ಕೈಯೆತ್ತಿ ನಿಲ್ಲಿರಿಯೆಂದು ಪೇಳಿ ಮುಂದಕೆ ಸಾಗಲು ||
ಅಲ್ಲದಕೆ ಮೇಲುಗೈಯಲ್ಲಾಪುರವದೆಂದು
ಸಲ್ಲುತ್ತಿರುವ ನಾಮವಾಗಲಾಗ ಗಣಕುಲವ
ಯೆಲ್ಲರುಂ ಗೂಡಿ ಮಲೆಯೊಳುಪೋಗಿ ಗಣಪತಿಯ ಸ್ಥಾಪಿಸುವ ಪೂಜೆಯ ಮಾಡಿ ||೧೨೮||

ಅಲ್ಲಿಯಿಂ ಕರಿಹೊಳೆಗೆ ಹೋಗಿ ಸ್ನಾನವ ಮಾಡಿ
ಬಲ್ಲಿದಂ ಚನ್ನಬಸವೇಶ ಮೊದಲಾದ ಗಣ
ಯೆಲ್ಲರತಿ ಸೌಖ್ಯದಿಂ ಲಿಂಗಾರ್ಚನೆಯವೆಸಗಿ ಫಲಾಹಾರಮಂ ಮಾಡುತೆ ||
ನಿಲ್ಲದಾ ಚಿತಿ ಪೋಗಿ ಮಲೆಯೊಂದೆಸೆಯೊಳಗೆ
ತಲ್ಲಣಿಸದಲ್ಲಿಳಿದು ಒಂದೆರಡು ರಾತ್ರಿಯೊಳು
ಬಲ್ಲವರು ಮೃತ್ತಿಕೆಯ ಧೂಪಾರತಿಯ ಪಾಳಿಗೊಂದೊಂದು ರಚಿಸುತ್ತಲಿ ||೧೨೯||

ಕೋಮಲದ ಪತ್ರೆ ಪುಷ್ಪಗಳೆಲ್ಲ ತಿರಿತಂದು
ರಾಮಣೀಯಕವಾಗಿ ಲಿಂಗಾರ್ಚನೆಯನೆಸಗಿ
ನೇಮದಿಂದಾ ಧೂಪದಾರತಿಗಳೆಲ್ಲವನೊಂದೆ ಸ್ಥಾನದೊಳೊಟ್ಟುತೆ ||
ಕಾಮಹರರೂಪರಲ್ಲಿಂದ ಮುಂದಕೆ ಪೋಗ
ಲಾ ಮಹಾಧೂಪಾರತಿಯ ಮೇಲೆ ವಾಲ್ಮೀಕವು
ರಾಮನಾಗಿಯೆ ಹಬ್ಬಲಿದಕೆ ಹುತ್ತಿನಗುಡಿಯದೆಂದು ನಾಮವದಾಯಿತು ||೧೩೦||

ಅಲ್ಲಿಯಂ ರಕ್ಕಸಿಯ ಬೆಟ್ಟನಡರಲ್ಕವಳು
ನಿಲ್ಲದಾಗಲೆ ಬಂದು ನಮಿಸಿ ನುತಿಸುತ್ತೆ ನಾ
ನೆಲ್ಲಿರಲಿ ಸ್ವಾಮಿ ನಮ್ಮಯ ಚರಣವಿಲ್ಲರಲ್ಲಾನಿರುವದಕ್ಕಶಕ್ಯಂ ||
ಸೊಲ್ಲಿಸುವದೆನೆ ಪೇಳ್ದೆದಿಲ್ಲಿ ನೀನಿರುವದತಿ
ಬಲ್ಲವರು ಬರಲಿದು ದುರ್ಬಲರು ಬಂದರು ನೀನು
ನಿಲ್ಲದವರಿಗೆ ಭಾವಿಸಲು ಬೇಡ ನಿನಗೊಂದು ಫಲವಗೊಡುವಂತೆನೇಮ ||೧೩೧||

ಮಾಡುವೆನೆನುತ್ತಲಭಯವನಿತ್ತು ಸರ್ವಗಣ
ಗಾಢದಿಂದಾ ಚಿಲಿಯವರ್ಪೊಗಿಸು ಸ್ಥಲವ
ನೋಡಿಯವರಲ್ಲಲ್ಲಿ ಒಂದೊಂದು ಗರ್ವಿಗಳನುಮಾಡಿದರಂತೆನ್ನಲು ||
ರೂಢಿಯೊಳಚನ್ನಬಸವೇಶನೊಂದು ಮತ್ತೆ
ಪಾಡಾಗಿ ನಾಗತಿಯದೊಂದು ಭಸ್ಮದ ಕಣಜ
ಮಾಡದಳಲೆಯ ದ್ವಾರದಾಕಳಗವಿಯದೊಂದು ರುದ್ರಾಕ್ಷಿ ಮಂಟಪವನು ||೧೩೨||

ಹರಳಯ್ಯನವರ ಗುಂಡವದೊಂದು ಮಹಾಮನೆಯು
ಪರಮಗವಿಯೊಳೆ ಮೊದಲು ಉನ್ನತ ಸ್ಥಾನಗಳು
ತರವರಿದು ತಮ್ಮಯ ವಿನೋದಾರ್ಥ ರಚಿಸುತ್ತೆ ಲಿಂಗಾರ್ಚನೆಯನೆಸಗುವಡೆ ||
ಚರಗಣಾರಾಧನೆಯುನ್ನತದೊಳಂ ಮಾಡಿ
ಪರಿಪರಿಯ ವಸ್ತ್ರ ದಕ್ಷಿಣ ದಾನಗಳನಿತ್ತು
ಪರತರದ ತತ್ವಶಾಸ್ತ್ರವನೋದಿಯನುಭವವ ಮಾಡಿ ನಿತ್ಯಾನಂದದಿ ||೧೩೩||

ಬನ್ನಿಯ ಮರಕ್ಕೊಂದು ಉಯ್ಯಲೆಯ ಕಟ್ಟುತ್ತೆ
ಚನ್ನಬಸವೇಶ ಮೊದಲಾದ ಗಣತಿಂತಿಣಿಯು
ನನ್ನಿಯಿಂದೊಬ್ಬೊಬ್ಬರಂ ಕುಳ್ಳಿರಿಸಿ ತೂಗಲವರು ಕೈಲಾಸಪುರಕೆ ||
ಸನ್ನಿಧಾನವ ಸೇರಿ ಬನ್ನಿಬನ್ನಿಯೆನುತ್ತೆ
ಉನ್ನತ ಪ್ರೀತಿಯಿಂ ಕರೆಯಲಿದರಷ್ಟಾಂಗ
ದಿ ನಮಿಸಿ ಬಸವೇಶ ಮೊದಲಾದ ಪ್ರಮಥಗಣ ವೃಂದ ಸುಖದಿಂದಿರ್ದರು ||೧೩೪||

ಪರತರದ ಜಂಗಮು ಮಹತ್ವವಿದು ಕೇಳ್ಮಗನೆ
ವರಭಸ್ಮ ರುದ್ರಾಕ್ಷಿ ಮಹಿಮೆ ಮುಂದೀಗಲಾ
ನೊರೆವೆ ಕೇಳಲೆಂದು ಕರಿಬಸವಯತಿರಾಜರಿಗೆ ಕೆಂಡಗಣ್ಣೊಡೆಯರೊಲಿದು ||
ಪರಮ ಪ್ರೀತಿಯೊಳು ಪೇಳಿದರೀಗಲೀ ಕಥೆಯ
ಗುರುಭಕ್ತರಾದವರು ನೈಷ್ಟೆಯಿಂ ಕೇಳಿದರೆ
ಪರಮಾತ್ಮನವರ ಮನದಿಷ್ಟವನುಯಿತ್ತು ಪಾಲಿಪನಿದನು ಸತ್ಯ ಸತ್ಯಂ ||೧೩೫||

ಮರುಳಸಿದ್ಧಾಚಾರ್ಯ ರಾಮಿದೇವಾಚಾರ್ಯ
ವರಪಂಡಿತಾ ಚಾರ್ಯ ಗುರುವು ವಿಶ್ವಾಚಾರ್ಯ
ರುರೆ ಮಧ್ಯವದನ ಸಂಜಾತ ರೇನುಕದೇವನುದರ ಭವಘನಲಿಂಗನು ||
ಹರರೂಪ ರುದ್ರಮುನಿ ಕರಜಾ ಮಹಂತಯತಿ
ಚರಣಸಂಭವಗುರು ಪರಂಪರೆಯೊಳುದ್ಭವಿಸಿ
ದರರೆ ವಲದಿಯಪುರದ ಹಿರೆಮಠಾಧಿಪ ಪಟ್ಟಚರವರ್ಯ ಮಹಂತನುಸುರ್ದ ||೧೩೬||

ಅಂತು ಸಂಧಿ - ೬ಕ್ಕಂ, ಪದ ೪೪೫ಕ್ಕಂ ಮಂಗಳ ಮಹಾ

ಏಳು

ಸಂಧಿ

ಪಲ್ಲವಿ : ವರಭಸಿತ ರುದ್ರಾಕ್ಷಿಗಳ ಮಹಿಮೆ ಕರಿಬಸವ
ಪರಮ ಯತಿವರಗೆ ಗುರು ಕಿಡಿಗಣ್ಣೊಡೊಯರೊಲಿದು
ಹರುಷದಿಂದ ಪೇಳಿದರು ಗುರುಭಕ್ತರಿದನಾಲಿಪುದು ಏಕಚಿತ್ತದಿಂದ ||

ಪರಮಪುಷ್ಕರ ಜಟಾಜೂಟ ಮಂಡಿತ ವಿಮಲ
ವರಪುಷ್ಕರ ಶಿರೋಜ ಪುಷ್ಕರಜ ಶಿರಪಾತ್ರ
ಪರತರಸುವ್ಯೋಮ ಪುಷ್ಕರಮಿತ್ರ ಸುನೇತ್ರ ಸಿತಗಾತ್ರ ಸುಜನಮಿತ್ರ ||
ಸರಸಸಾರಂಗ ಕರಪುಷ್ಕರ ಭವಸ್ತಿಮಿರ
ಸೂರಪುಷ್ಕರಪದ್ಮ ವಲ್ಲಭ ಸುನೇತ್ರಪದ
ಸಾರಸಕು ದಕ್ಷರಾಕ್ಷಸ ಶೀಕ್ಷಮಮರಕ್ಷ ಚತುರ್ದಶ ಭವನಸುಕ್ಷ ||೧||

ಯತಿಮಗನೆ ಕರಿಬಸವ ಕೇಳು ಭಸ್ಮದ ಮಹಿಮೆ
ಮಹರಾತ್ಮಕನಂಗಥವಿಯೆ ಭಸ್ಮವದಹುದು
ಸುಲಭದಿಂದದು ವೆಚ್ಚಿದ್ಭಸಿತವೆನಿಪುದು ಧರಿಸಿ ಚಿದ್ರೂಪ ತಾನೆಯಹನು ||
ಸುಲಲಿತದ ಭಸ್ಮಧಾರಣವಿಲ್ಲದಿಹ ವ್ರತದ
ಫಲವದಾಗದು ಕಾರಣಂ ಲಿಂಗದರ್ಚನೆಗೆ
ನಲವಿನಿಂ ಧರಿಸುವುದುವದರ ಕ್ರಮಗಳ ತಿಳಿದು ಸುಜನ ಶಿವಭಕ್ತರೊಲಿದು ||೨||

ಶಿವನ ಸದ್ಯೋಜಾತ ಮುಖದಿಂ ಜನಿಸಿ ಧರೆಯು
ತವೆಯದರೊಳಂ ನಿವೃತ್ತಿಯ ಕಲೆಯುಮದರೊಳಗೆ

ಭವಿಸಿತು ಕಪಿಲ ವರ್ಣವಹನಂದೆವೀಧೇನುಗೋಮಯದಿ ಭೂತಿ ಜನಿಸಲ್ ||
ನವ್ಯವಹ ಭೂತಿಯನು ವಿಶ್ವಾಸಪೂರ್ವಕದಿ
ರವದೊಳಂ ಧರಿಸಲ್ಮಹೈಶ್ವರ್ಯಮಂ ಪೊರ್ದಿ
ಮವನಬಿಡಲರಿಯದರು ಸತ್ಯಸತ್ಯಂ ಕೇಳು ಕರಿಬಸವನೆಂದನಾರ್ಯ ||೩||

ಎರಡನೆಯ ವಾಮದೇವಾನನದಿಯುದಕವನು
ಪರಿಭವಿಸಿತದರೊಳು ಪ್ರತಿಷ್ಠೆ ಕಲೆಯದರೊಳಗೆ
ವರಕೃಷ್ಣವರ್ಣದ ಸುಭದ್ರೆವೀಧೇನುವಿನ ಗೋಮಯದಿ ಭಸಿತವುದಿಸಲ್ ||
ಧರಿಸಲೀ ಭಸಿತವನು ರವಿಧೀದಿತಿಯ ಗೆಲುವ
ಪರಮ ತೇಜಃ ಪುಂಜಮಯರಾಗುವರೆಂದು
ಪರತರಾಮ್ನಾಯ ವಚನವ ಪೇಳುತಿಹುದ್ಯೆಸೆ ಕೇಳ್ ಕರಿಬಸವ ಧೀವರ ||೪||

ಜನಿಸಿತವಘೋರ ಮುಖದಿಂದಗ್ನಿಯಗ್ನಿಯೊಳ್
ಜನನ ವಿದ್ಯಾಕಲಾವೀಕಲೆಯೊಳಂ ರಕ್ತ
ವರ್ಣದ ಸುರಭಿಯದರ ಗೋಮಯದಿ ಭಸಿತವುದ್ಭವಿಸಿತದನುದ್ಧೂಳಿಸಲ್ ||
ಮನುಜನುಪಪಾತಕ ಮಹಾಪಾತಕಂಗಳುವ
ವನಿಯೊಳಳಿದವಗೆ ಸಂಪತ್ಸುಖ ದೊರಕೊಳುವ
ವಿನಿತರಿಂದೆಲೆ ಮಗನೆ ಕರಿಬಸವ ಕೇಳೆಂದನಾಚಾರ್ಯ ಫಣಿತಿಲಕನು ||೫||

ಉದಿಸಿತಾ ತತ್ಪುರುಷವದನದೊಳ್ವಾಯು ಸಲೆ
ವದರೊಳಗೆ ಜನಿಸಿತಾ ಶಾಮತಿ ಕಲೆವರರಿಂದೆ
ವಿಧಿಸಲ್ಪದಳ ವರ್ಣ ಸುಸಿತಿಯೆಂಬಭಿದಾನ ಧೇನುಗೋಮಯದಿಂದಲು ||
ಉದಯವಾಯಿತು ಕ್ಷೌರವಿದನಾಗಮದ ವಿಧಿಯೊ
ಳದು ಧರಿಸಲಪಮೃತ್ಯು ಮೃತ್ಯು ವಿಪದಾಳಿಗಳ
ಯರಿದಮ್ಮೆನಡೆಕೆಡಿಸುವದು ಮಗನೆ ಕರಿಬಸವನೆಂದನಾ ಗುರುವರೇಣ್ಯ ||೬||

ಈಶಾನ ವಕ್ತ್ರದೊಳ್ಜನಿಸಿತಾಕಾಶವದ
ನಾ ಶಾಂತತೀತಕಲೆವದರೊಳುದ್ಭವಿಸಲಾ
ನಾಶವಿಲ್ಲದ ಕಲೆಯೊಳಾದಿತ್ಯ ಬಹುವರ್ಣದಾ ಸುಮನಯೆಂಬಧೇನು ||
ಪೂಷ ಕೋಟಿ ಪ್ರಭೆಯದಿಂದ ಜನಿಸದರಲಮಯ
ಭಾಸುರದೊಳಂ ಪುಷ್ಟಿತಾ ರಕ್ಷೆಯದನು ವಿ
ಶ್ವಾಸದಿಂ ಧರಿಸಲು ವಪಸ್ಮಾರಬ್ರಹ್ಮರಾಕ್ಷಸ ಮುಖಾಖಿಲವಳಿವುದು ||೭||

ಭಸಿತದಿಂ ಶಿವಮುನಿಗಳೊಲಿದು ಮೂವೇಳೆಯೊಳು ||
ಸಸಿನೆಪಾಯುಷ್ಯಮಂ ಪಡೆದರು ಮದಲ್ಲದಲೆ
ಋಸಿಯಿಂದೆ ತಮ್ಮಿಷ್ಟಫಲವ ಪಡೆದರು ಗೌತಮಾಗಸ್ತ್ಯ ಕಶ್ಯಪಮುನಿ ||
ವಸೆದು ಜಮದಗ್ನಿವುಪಮನ್ಯು ಮೊದಲಾದವರು
ವಶವದಲ್ಲದ ಪಾಪಶಾಪವನು ಕಳೆದು ನಿಜ
ಭಸಿತಮಂ ಸಾರ್ದು ಸುಖದಿಂದಿರುವವರ ಕಥೆಯ ಪೇಳ್ವನಾಲಿಸುಪುತ್ರನೆ ||೮||

ವಾಮದೇವನೆನಿಪ್ಪ ಮುನಿ ಮಹಾಸತ್ಪುರುಷ
ಕಾಮಾದಿ ಷಡ್ವರ್ಗ ದೂರ ನಿಜ ಸುಖಾಗಾರ
ಪಾಮರ ಗುಣಾಂಕುರವದೋರದತಿಶಯನ ಧೀರಯಿಂದ್ರಿಯ ವಿಜಯಶೂರನು ||
ಸೋಮಧರ ಚರಣಮನಪೂರ ಸದ್ಗುಣ ಸಾರ
ರಾಮಣೀಯಗುಣ ವಿಹಾರಕರುಣಾಕಾರ
ರಾಮ ನಿಸ್ಪೃಹ ನಿಃಸಂಸಾರಿ ವೈಕಾರದೂರ ಮೋಕ್ಷಕಾರಿಯು ||೯||

ಇಂತೊಪ್ಪುವಿಮಲ ವಾಮದೇವನುವದಿ
ಸಂತತಂ ತಪವನೆಸಗುತೆ ಭಸ್ಮಲೇಪನದಿ
ಕಂತು ಹರನೆಂಬಂತೆಯೇ ಕಾಂತದೊಳ್ಕಳಿತು ತನ್ನ ದೇಹ ಸ್ಮರಣೆಯು ||
ಎಂತೆಂಬುದರಿಂದೆ ನಿಜಸ್ವಾಂತ ಶಿವನೊಳಗೆ
ಚಿಂತನೆಯದಾವುದಿಲ್ಲದೆ ಮಗ್ನವಾಗಿರಲು
ಪಂಥವಿಡಿದೋರ್ವರಾಕ್ಷಸ ಚರಿಸುತಂ ಬಂದು ನಿಂತು ನೋಡುತ್ತಲಿವನ ||೧೦||

ತಿಂದು ತೇಗುವೆನೆನುತೆ ಮುನಿಯನಾವರಿಸಲದು
ಬಂಧನದ ದೈತ್ಯತನು ಗುಣಕಾರ್ಯವವನಳಿದು
ಸುಂದರದ ಗಂಧರ್ವದೇವ ಸದ್ಗುಣವ ಸುಜ್ಞಾನಗಳನಳವಡುತತಿ ||
ಹಿಂದಿನ ಸಹಸ್ರ ಜನ್ಮಸ್ಮರಣವಾಗುತವೆ
ಬಂಧುರ ಸುಭಸ್ಮ ಲೇಪನ ತನುವನಪ್ಪುತಿರೆ
ಕುಂದುಕೊರತೆಗಳಳಿದು ಸುಜ್ಞಾನಮಂ ತಿಳಿದು ಮುಂದೆ ನಿಲಲಾಗ ಮುನಿಯು ||೧೧||

ನೀದಾರುಯಿಲ್ಲಗೇಂ ಕಾರಣಂ ಬಂದೆಯೆನೆ
ಪಾರದೊಳ್ಬಿದ್ದು ಪೇಳಿದ ನಾಮ ದುರ್ಜಯನು
ಮೇದಿನಿಪತಿ ಯೌವನೋನ್ಮದದಿ ಪರದಾರವಿತ್ತಧರೆ ಮೊದಲಾದವಂ ||
ಸಾದಿಸವನಪಹರಿಸಿ ಪರರ ಪೀಡಿಸಿ ದುಷ್ಟ

ವಾದ ಗುಣ ದುರ್ನಡೆ ದುರಾಚಾರ ಪರನಿಂದೆ
ಸದುಹೃದಯರಂ ನಿರಾಕಾರಣ ಕರುಣದಿ ಹೀನಜನವ ಹಿಂಸಕನಧರ್ಮಿ ||೧೨||

ಹುಟ್ಟಿದುದೆ ಮೊದಲು ದುರ್ಗುಣ ವರ್ತನವೆ ನನಗೆ
ಯೆಷ್ಟು ಹೇಳಿದರಲ್ಲವೇಯಹುದು ನಿತ್ಯದೊಳು
ಶಿಷ್ಟ ಕುಲವಾಕನಿಷ್ಟವನೆನ್ನದೇನವೀನ ಸ್ತ್ರೀಯರೆ ಭೋಗಿಪೆಂ ||
ಕಷ್ಟವಾಗಿಹ ಪಿಶಿತ ಭಕ್ಷ ಸುರೆಗುಡುಕತನ
ನಷ್ಟ ದುರ್ಗುಣದಿ ಕಡಿಪರ್ಯಂತ ವರ್ತಿಸಿಕ
ನಿಷ್ಟವಂತ್ಯದಿಕ್ರಿಮಿ ವಿಶಿಷ್ಟ ಮಲಮೂತ್ರದೊಳಗುರುಳಿ ಮರಣವದಾಗಲು ||೧೩||

ಯಮದೂತದೊಯ್ದು ನರಕದೊಳು ಹಾಕಲುಮದರ
ಶ್ರಮವ ನಾನೆನಿತು ಪೇಳಲಿ ಭೋಗಿಸಿದೆ ಬಹಳ
ವಮಮವಲ್ಲಂ ಕನಿಷ್ಟವದಾದ ಸಾವಿರಕುಜನ್ಮದೊಳು ಹುಟ್ಟಿದೆನಲ ||
ಸಮಯವರಿದೀಗಳದರೊಳ್ಚತುರ್ವಿಂಶತಿಯ
ನಾಮಜನ್ಮಗಳ ಪೇಳುವೆ ಮೊದಲು ವ್ಯಾಘ್ರಫಣಿ
ರಾಮವೃಕ ಸೂಕರೋಲೆಯ ಕಾಷ್ಟ ಶ್ವಾನನರಿಮರೆಮೃಗ ಪ್ಲವಂಗ ಬರವು ||೧೪||

ವರನ ಕುಲವಾಯಸ ಬಕಂ ಕುಕ್ಕುಟ ಗೃದ್ರ
ಪರಮಾರ್ಜಾಲ ಮಂಡುಕ ಕೂರ್ಮಮತ್ಸ್ಯವಿಲಿ
ಖರಕಿರಣ ಕಾಣದಿಹವುಲಕವನಗಜ ವುಷ್ಟ್ರರಾಕ್ಷಸವೆ ಕಡೆಯಾಗಿಹ ||
ಕರಕನಿಷ್ಟಗಳಾದ ಜನ್ಮಗಳೊಳಂ ಪುಟ್ಟಿ
ಭರದೊಳಲ್ಲಿಗೆ ಬಂದು ನಿಮ್ಮ ಗಾತ್ರವನೀಗ
ಕರಗಿ ಸಸಿನವ ಮಾಳ್ಪೆನೆಂದುಷ್ಪಲಾಭಸ್ಮಸ್ಪರ್ಶದಿಂ ಸರ್ವದೋಷ ||೧೫||

ಪರಿಹರವದಾಗಿ ನಿಜರೂಪವೆನಸೊದಗಿತಿದು
ಪರಮಪಾವನನೆಯನೆ ಭಸ್ಮ ಮಹಿಮೆಯ ಕೇಳು
ನಿರವಿಸುವೆ ಪಾಂಚಾಲ ದೇಶದರಸನು ಸಿಂಹಕೇತು ಚತುರಂಗ ಬಲದಿ
ಪರಿಪೂರ್ಣ ಸಾಮ್ರಾಜ್ಯದಿಂದೊರ್ತಿಸುತ್ತಿರಲು
ದೊರೆಯೊಂದು ದಿನ ಬೇಟೆಗೆಂದು ಪೋಗಲ್ಬೇಡ
ರರರೆ ಬ್ಯಾಟೆಯ ನಾತುತಿರಲದರೊಳೊಬ್ಬ ಸುಮತಿಯನೆಂಬ ಶಬರವನದೊಳ್ ||೧೬||

ಚರಿಸುತಿರುವಾಗನಾಥವಾದಲಿಂಗವನ್ನು
ಉರುಳುತಿರುವುದ ನೋಡಿ ಸುಂದರವದಿಹುದೆಂದು

ಕರದೊಳಗೆ ಪಿಡಿದೊಯ್ದು ನರನಾಥನಿಗೆ ತೋರಿ ಪೂಜಿಪೆನಿ ಲಿಂಗವನೆನೆ ||
ಸುರುಚಿರದ ಲಿಂಗದರ್ಚನೆಯ ಮಾಡಬಹುದಿದ
ಪರಮ ಚಿತ ಭಸ್ಮದಿಂ ರಚಿಸಲುತ್ತಮಪದವ
ದೊರಕುವುದೆನಲ್ಕೆ ಅಂತಾಯ್ತೆಂದು ಲಿಂಗಸಹ ಮನೆಗೆ ಬಂದಾ ಸುಗುಣೆಗೆ ||೧೭||

ತೋರಿದಕೆ ಚಿತಭಸ್ಮದಿಂದರ್ಚಿಸುವುದೆಂದು
ದೊರೆರಾಯ ಪೇಳಿದನೆನಲ್ಕೇಳಿ ಸಮ್ಮತದಿ
ಹರುಷದಿಂದೊಂದು ಜಗಲಿಯನಿಕ್ಕಿ ಅದರ ಮೇಲೆ ಲಿಂಗವನು ಸ್ಥಾಪಿಸಿ ||
ಧರೆಯೊಳೆಲ್ಲಿಲ್ಲಿ ಚಿತಭಸ್ಮವನು ದೊರೆತಿಹುದು
ಚರಿಸುತಲ್ಲೆಲ್ಲದನು ತಂದು ಲಿಂಗಕೆ ಧರಿಸಿ
ಪರಮ ವಿಶ್ವಾಸದಿಂ ಪೂಜಿಸಲ್ಕಿರುತಿವನ ಮನದನು ನೋಡುವೆಡೆ ಶಿವನು ||೧೮||

ಧರೆಯೊಳೆಲ್ಲಾದರುಂ ಚಿತಭಸ್ಮವಿರದಂತೆ
ಚಿರಚಲ್ಕವನು ಬೆದಬೆದಕಿ ದೊರೆಯದಿರಲ್ಕೆ
ನಿರವಿಸಿದ ತನ್ನ ಸತಿಗಿಂತು ವ್ರತಭ್ರಷ್ಟವಾಗುವ ಸಮಯವಾಯ್ತಿದಕೆ ||
ಶರೀರವೇ ತ್ಯಾಗ ಮಾಡಲ್ಬೇಹುದೆಂದು ಸತಿ
ಗರುಹಲಾಕೆಯು ನನ್ನ ತನು ದಹನ ಮಾಳ್ಪೆನಿದ
ನಿರದೆ ಧರಿಸುತ್ತೆ ವ್ರತಪೂರ್ಣ ಮಾಳ್ಪುದೆನಲ್ಕೆ ಅಂತಾಯಿತೆನೆ ಸುಗುಣೆಯು ||೧೯||

ಕಾಷ್ಟವನು ತರಿಸಿಯೊಟ್ಟಿಸಿಯದರೊಳಗೆ ಕುಳಿತು
ನೈಷ್ಟೆಯಿಂದಗ್ನಿ ಪ್ರವೇಶ ಮಾಡಲ್ಕರಿದು
ಶಿಷ್ಟಭಸ್ಮವದಾಗಲದು ಕೊಂಡು ಪೂಜಿಸುತೆ ಮುನ್ನುರುಹಿಕೊಂಡ ಸತಿಯು ||
ಸ್ಪಷ್ಟ, ಸ್ಮರಣವದಿಲ್ಲದಲೆ ನಿಮಗ್ನತೆಯಿಂದೆ
ಶ್ರೇಷ್ಟ, ನೈವೇದ್ಯದಿನದಂದದೊಳು ತಾಯ್ಕೆದು
ನಿಟ್ಟಿಸಲ್ಕಾ ನೈವೇದ್ಯ ನಿತ್ಯದ ತೆರದಿ ತಂದು ಕೊಡಲರ್ಪಿಸಿದನು ||೨೦||

ಶಿವನಿವರ ನೈಷ್ಠಿಭಾವವನರಿದು ಮೆಚ್ಚುತ್ತೆ
ತವೆ ನಿಜವ ತೋರಿಮುಭಯರ ಪುಷ್ಪಕದೊಳಿಟ್ಟು
ತವಕದಿಂ ಕೈಲಾಸ ಪುರಕೊಯ್ದನದರಿಂದ ಭಸ್ಮ ಮಹಿಮೆಯಧಿಕವು ||
ನವದಿವ್ಯರೂಪಿ ಗಂಧರ್ವ ಕೇಳೆನಲಾಗ
ತವದಿಯತಿ ವಿಶ್ವಾಸದಿಂದೆ ಸಾಷ್ಟಾಂಗವನು
ಶಿವರೂಪ ವಾಮದೇವಂಗೆರಗಿನುತಿಸಿ ಪಾವನಗೆಯ್ದಿರೆಲೆ ದೇವರೆ ||೨೧||

ಎಂದುಕೊಂಡಾಡಿ ತನ್ನಯ ಪಟ್ಟಣಕೆ ಪೋದ
ನಿಂದುಧರರೂಪ ಶ್ರೀ ವಿಭೂತಿ ಮಹಿಮೆಯಿಂದ
ಚಂದದಿ ಕೇಳೆಂದು ಕಿಡಿಗಣ್ಣೊಡೆಯ ಕರಿಯಬಸವೇಶ್ವರಗೆ ಪೇಳ್ದರು ||
ಕಂದುಕಂಧರ ಭಕ್ತರಿದನಾಲಿಪುದೆಂದು
ಸಂದುವದು ಧರಿಸಿ ಶಿವತಾನೆಯಪ್ಪನು ತಿಳಿಯೆ
ಬಂಧರದ ರುದ್ರಾಕ್ಷಿ ಮಹಿಮೆ ಕೇಳಿನ್ನು ಪೇಳುವೆನೆಂದುಸುರ್ದರೊಲಿದು ||೨೨||

ವೀರವಿದ್ಯುನ್ಮಾಲಿ ಕಮಲಾಕ್ಷರೆಂಬವರು
ತಾರಕನ ಪುತ್ರರಿವರತಿ ಬಲಾತ್ಕಾರಿಗಳು
ಸುರರ ಮೇಲತಿ ದ್ವೇಷದಿಂ ಮೂರು ಪಟ್ಟಣವ ಕಾರ್ಬೋನ್ನ ಕನಕ ರಜತ ||
ಪರಮ ವಿಶ್ವಾಮಿತ್ರನಿಂ ರಚಿಸಿಕೊಂಡವನು
ಭರದೊಳದರೊಳ್ದುಳಿತು ಚಕ್ರವತಿ ರುಹುತಿರ್ದು
ಸೂರ್ಯನಸ್ತಮಿಸೆ ದೇವತರೊಕ್ಕಲಿಕ್ಕುತಮಿರಲಮರ ಸಂದೇಹ ||೨೩||

ಪರಮಾತ್ಮನವರು ವಿಜ್ಞಾಪನಂಗೆಯ್ದರ
ಧರೆಯರಥ ಚಕ್ರವಿರ ಶಶಿಕುದುರೆ ವೇದಗಳು
ಶರವಿಷ್ಣು ಕಾರ್ಮುಕ ಹಮ್ಮೇರು ಬತ್ತಳಿಕೆ ಶರಧಿಮಾಗಲ್ ತ್ರಿಪುರವು ||
ಹರನಾಗದಿವ್ಯ ದ್ವಾದಶ ಸಹಸ್ರಾಬ್ದದೊಳು
ಮೂರುಪುರಗಳ ಕೀಲನೀಕ್ಷಿಸುತಿರಲ್ನೇತ್ರ
ವಾರಿಗಳ್ಸುರಿಯಲಾ ಮೂರು ವೃಕ್ಷವ ಜನಿಸಲದರ ಬೀಜಗಳ ಮೂರು ||೨೪||

ತೆರೆದವರ್ಣ ರಕ್ತ ಶುಭ್ರ ಕೃಷ್ಣಂಗಳಿದ
ಸೂರಶಶಿ ವಸುನಯನ ಸಂಜಾತ ರುದ್ರಾಕ್ಷ
ಪಾರಮಹಿಮೆಯ ಪೇಳ್ದಡರಿದುರಗಪತಿಗೆನಲು ನರರ ಪವಣೆನಿತಿರುವದು ||
ಗುರುಕೃಪೆಯ ಬಲದಿ ಪೇಳ್ವೆನು ಸ್ಥಾನಗಳ ತಿಳಿದು
ಧರಿಸುವುದು ವಕ್ತ್ರಗಣನಾಮಣಿಯ ಶಂಕೆಗಳ
ನರಿದವರ ಮಂತ್ರಪೂರ್ವಕವಾಗಿ ಧಾರಣಂಗೈಯ್ಯೆ ರುದ್ರನೆಯಪ್ಪನು ||೨೫||

ಧರಿಸಿದರ ಮಹಿಮೆಯಿಂ ಶಿವಲೋಕ ಪ್ರಾಪ್ತಿಸಿದ
ವರಭಕ್ತರಾದವರ ಕಥೆಯ ಪೇಳ್ವೆನು ಕೇಳು
ಧರೆಯೊಳು ಕಾಶ್ಮೀರ ದೇಶದರಸನು ಭದ್ರಸೇನ ಸಂಪತ್ತಿನಿಂದೆ ||
ಪರಮ ಸತ್ಯದಿ ಪೃಥ್ವಿ ಪಾಲಿಸುತಿರಲ್ಕವಬ

ವರಸುತ ಸುಧರ್ಮನೆಂಬದನಿರಲ್ಕವನ ನಿಜ
ಭರದೊಳಾಮಂತ್ರಿಯರ್ಭಕ ತಾರಕಾಷ್ಟಯನುಯೀರ್ವರತಿಸ್ನೇಹದಿಂದ ||೨೬||

ಇರುತವರು ಪೂರ್ವಜನ್ಮಸ್ಮರಣದಿಂ ಕನಕ
ವರಮೌಕ್ತಿಕಾ ಮಣಿಗಳಾಭರಣಗಳನುಳಿದು
ಪರಮ ರುದ್ರಾಕ್ಷಿಗಳ ಧರಿಸುತಾರಾಜ ವೈಭವಗಳು ತ್ಯಜಿಸಿರಲ್ಕೆ ||
ಯಿರದಿವರ ಪಡರವರು ವಿಸ್ಮಿತದೊಳಿರಲಾಗ
ಹರಮುನಿ ಪರಾಶರರೊಂದಿನ ಬರಲ್ಸಂತಸದಿ
ಭರದೊಳವರಂ ಕರೆದು ಆಸನವನಿಕ್ಕಿ ಕುಳ್ಳಿರಿಸಿ ನಮಿಸುತಮುಭಯರು ||೨೭||

ವಿನಯದಿಂ ಹಸ್ತವನು ಮುಗಿದು ಬಿನ್ನವಿಸಿದರು
ಮುನಿವರನೆ ಪೇಳೆಂದು ಪುತ್ರರೀರ್ವರು ಕನಕ
ಘನಮಣಿಮಯದ ಭೂಷಣವನುಳಿದು ರುದ್ರಾಕ್ಷಿಯಾಭರಣವನೆ ಧರಿಪರು ||
ಮುನಿಮುಖದೊಳೀವರು ಶಾಸ್ತ್ರವ ಕೇಳಿದವರಲ್ಲ
ಮನದೊಳಗೆ ತಿಳಿದು ವರ್ತಿಪರಿದರ ತೆರನಮಮ
ಗನುವಿನಿಂ ತಿಳಿಸುವುದೆನಲ್ಕೆತಿವರನು ಮನದೊಳರಿದವರ ವೃತ್ತಾಂತವ ||೨೮||

ಪೇಳಿದರದೆಂತೆನಲು ಧರೆಯೊಳೊಪ್ಪುವ ನಂದಿ
ಪೊಳಲೊಳೋರ್ವಳು ರೂಪವತಿ ವಿದ್ಯವಿನಯದಿಂ
ಪೇಳಲರಿದೆನಿಪ ಸದ್ಗುಣಮಣಿಯು ಮೋಹನದ ಖಣಿಯು ಘನಶುಕವಾಣಿಯು ||
ಪಲತೆರದ ಸದ್ಗುಣಗಳಿಂದೆ ಸಂಪನ್ನೆಯುಹ
ಬಲವದ್ವಿಮಲ ವಾರಸ್ತ್ರೀ ಶಿರೋಮಣಿಯೆನಿಪ
ಳೊಲವಿನಿಯ್ಮಹನಂದಿಬಿರುತಿಹಳವಳು ತನ್ನ ನಾಟ್ಯಶಾಲೆಯೊಳು ಮುದದಿ ||೨೯||

ಪ್ಲವಗ ಕುಕ್ಕುಟವೆರಡನತಿ ಪ್ರೀತಿಯಿಂದವಕೆ
ತವೆ ವಸ್ತ್ರಲಂಕಾರ ರುದ್ರಾಕ್ಷಿಯಿಂ ರಚಿಸಿ
ಭವದೊಳಗವನು ಕುಣಿಸುತ್ತೆ ಗುರುಲಿಂಗಜಂಗಮವನೆರೆ ಭಜಿಸುತಿರಲು ||
ಶಿವನೀಕೆ ಮನವ ನೋಡುವನೆಂದು ವಿಟಸ್ವರೂ
ಪವನತ್ಯಧಿಕ ಸುಂದರಾಕಾರಮಂ ತಳೆದು
ನವ ಮೌಕ್ತಿಕಾಹಾರ ಕೊರಳೊಳಳವಡಿಸಿ ಹತ್ತುಂಗುರವ ಬೆರಳೊಳಿಟ್ಟು ||೩೦||

ಇತ್ತುತುದ್ದುದ ಕೋರೆಮೀಸೆ ತುಂಬಿದ ಮುಖವು
ಸುತ್ತಿ ಬಂಗಾರ ತಾರಿನ ಚಂದಿ ಮಸ್ತಕದಿ

ಕತ್ತುರಿಯ ತಿಲಕ ಫಣೆಯೊಳಗಿಟ್ಟು ಮುತ್ತಿನ ತುರಾಯಿ ನೆತ್ತಿಯೊಳು ಧರಿಸಿ ||
ತೆತ್ತಿಸಿದ ಮಣಿಗಳಾಭರಣ ತಳೆದೆವ್ವನವ
ವೆತ್ತ ತನುವಿನ ಕಾಂತಿ ವಿಟಜನ ಶಿರೋಮಣಿಯು
ಚಿತ್ತಜನ ನಿಳಯಕೈವ ರೂಪದಿಂದಾ ಪುರಕೆ ಬಂದನತಿ ಸಂಭ್ರಮದೊಳು ||೩೧||

ಇಂದುಧರಮಹನಂದಿ ಮನವ ನೋಡುವೆನೆಂದು
ನಂದಿಗ್ರಾಮಕ್ಕಿಂದು ಬಂದಪನಿದರ ವಾರ್ತೆ
ಚಂದದಿಂದಂಗನೆಗೆ ಪೇಳುವೆನೆನುತ್ತೆ ರವಿಪೋದಪನೆನಲ್ಕೆಯವರ ||
ಸಿಂಧುವಿನೊಳಿಳಿಯುದಯಾಚಲಕೆ ಚಂದ್ರನುರೆ
ಬಂದ ಬೆಳ್ದಿಂಗಳಂ ಪಸರಿಸಿತದರ ಭವಿಯೊ
ಳೊಂದಿ ನಾರದ ನಂದಿಗಳು ಹಸ್ತಮಂ ಪಿಡಿಯೆ ವಾರಾಂಗನಾ ವೀಥಿಯೊಳ್ ||೩೨||

ಬರವರಲಿ ಕಿಕ್ಕೆಲದಿ ಮಂದಿರದ ಹರ್ಮ್ಯೆಯೊಳು
ವರವಿಟರನುದೆಂದ್ರಿಯ ವ್ಯಾಪಾರಂ ಮರೆದು
ಬರೆದಿರುವ ಚಿತ್ರರಚನೆಯ ತೆರದಿಯವೆ ಹಳಚದಾಗ ನಿಟ್ಟುಸುತಿರಲು ||
ಬರದೊಳಾ ವಿಟರೂಪ ಶಿವನಂದಿ ನಾರದರ
ಕರವಪಿಡಿದವರ ನೋಡೆಂದು ತೋರುತೆ ಮತ್ತೆ
ಸರಸರನೆ ಮಹನಂದಿಯಳ ಗೃಹಕೆ ನಡೆತಂದರೆಲೆ ಭದ್ರಸೇನ ಕೇಳ ||೩೩||

ಬರಲು ಕಂಡಾ ಮಹನಂದಿ ನಮಿಸುತಲಿ ಕರೆದು
ಕರವ ಪಿಡಿದೊಳಗೊಯ್ದು ಮಂಚದೊಳ್ಕುಳ್ಳಿರಿಸಿ
ಪರಿಚಯವನು ಮಾಡಲೆಳಸುತಿಹ ವಿಟಚರನ ಮನವರಿದು ಕರದೊಳಿರುವ ||
ವರಕಂಕಣವ ಬೇಡಲೆನ್ನೊಡನೆಯನುದಿನವ
ದಿರುವಂತೆ ವಚನವಿತ್ತಡೆ ಕೊಡುವನೆನೆ ವಿಟನೆ
ವಾರನಾರಿಯರಧರ್ಮವೆವೊಬ್ಬ ವಿಟನೊಂದಿಯಿರುವದಿದು ದಿವಸಕ್ರಯಂ ||೩೪||

ಇರುವೆನಾ ವಂಚನೆಯದಿಲ್ಲದಿರೆ ವ್ರತವೆನಗೆ
ನಿರವಿಸಿದವಾಜ್ಞೆಯೊಳು ವಿಟನೆ ಪುಸಿಯಾಗದೊಳು
ಪರರ ಸ್ವಪ್ನದೊಳಾದೊಡಂ ನೆನೆಯದೇಕಮನದಿಂದೆ ವರ್ತಿಪೆನಗಲದೆ |
ಕರವನಿತ್ತಪೆನುಸಿದು ಪೋಪೆ ವಿಘ್ನವ ಬಾರ
ದಿರವಿನೊಳ್ನಡೆವೆದಿಟವೆಂದೊಪ್ಪುಗೊಳೆ ಚರನು
ಕರಣ ನಿಶ್ಚಯವರಿದು ಕಂಕಣವನಿತ್ತು ಮತ್ತನ್ನಿಷ್ಟಲಿಂಗ ಪ್ರಾಣ ||೩೫||

ಎಂದರಿದು ಗುಪ್ತದೊಳಗಿಡುಯೆಂದು ಬೋಧಿಸುತೆ
ಸುಂದರಿಯೊಳೊಂದು ಗೂಡುತ್ತೆರಡು ದಿನ ಸುಖದೊ
ಳೊಂದಿ ಮೂರನೆಯ ದಿನಕೊಂದು ವಿಘ್ನವನೆನದನಿಂದುಮುಖಿವಚನವರಿವೆ ||
ನೆಂದು ಸಂದಿಲ್ಲದಿಹ ಮಾಳಿಗೆಯ ಸೌಧದೊಳ
ಗೊಂದು ಕಿಂಡಿಯುಂಟು ಮಾಡಲ್ಕದುವೆ ಕಿಚ್ಚೆದ್ದು
ಕುಂದದಾ ಮಂದಿರವ ಮುಸುಕಿ ಭುಗಿ ಭುಗಿಲೆಂದು ಛಿಟಿಲೆಂದು ದಹಿಸುತಿರಲು ||೩೬||

ಎಚ್ಚರಾಗುತಲೆದ್ದು ಕೋಳಿಕಡಿಯಂ ಬಿಚ್ಚಿ
ಚಚ್ಚರದಿಗುಳಿದೆಗದುಕದ ತೆರೆದವತಗುಳಿ
ಸಚ್ಚಿದಾನಂದ ವಿಟಚರನಗೊಂಡುಂ ಪೊರಗೆ ಬರಲುರಿಯ ಪೆಚ್ಚಿ ಗೃಹವು ||
ಗಚ್ಚೊಡೆದು ಬೀಳುತಿರಲೆಚ್ಚರಿಸಿದದನು ಲಿಂಗ
ಹುಚ್ಚಳಾಗುತ ನೀರ ಹೊಯ್ದಿವುರಿಯಾರಿಸುತ
ಬಿಚ್ಚಿ ನೋಡಲು ಲಿಂಗ ಕರಿಕವಂದಿರೆ ವಿಟನು ಕೆಟ್ಟನಯ್ಯೊ ಲಿಂಗವ ||೩೭||

ಸುಟ್ಟುದಿನ್ನೇನ ಮಾಡುವೆನ್ನ ಜನ್ಮವಿದು
ಭ್ರಷ್ಟವಾಯಿತು ವ್ರತವ ಕೆಟ್ಟು ಹೋಯಿತು ಗತಿಯ
ನಷ್ಟವಾಯಿತುವುಳಿದುದೆಂತಗ್ನಿಕಾಷ್ಟವನು ಮಾಡಿಸದರೊಳು ಪ್ರಾಣವ ||
ಬಿಟ್ಟನದ ಕಂಡೀತನಿಷ್ಟಲಿಂಗ ಪ್ರಾಣ
ಕೊಟ್ಟನೊ ವಚನವನಿವನ ಬಿಟ್ಟುಳಿವುದನುಚಿತವು
ಶ್ರೇಷ್ಟಿಯೊಳಗಿದ್ದೇನು ಫಲವೆನ್ನುತಗ್ನಿಯೊಳು ಮಗ್ನವಾಗುವೆನೆನ್ನಲು ||೩೮||

ಬಂಧುಗಳು ಕೇಳೆಟ್ಟಿ ಬಂದು ಸುರಿದರು ಸಮಗೆ
ಹೊಂದಿಕೊಂಡಿರುವ ವಿಟನೊರ್ವನೆ ಸೂಳೆಯೊಳ
ಗೊಂದರಗಳಿಗೆಯಿರ್ದರಿತ್ತುದಂ ಕೇಳಸಲ್ಲದು ಬಾಳಿಯೆ ನಿನಗೇನೆ ||
ಇಂದುಧರನೆಂತು ಮೆಚ್ಚುವನಿನ್ನುತಗ್ನಿಯೊಳು
ಸುಂದರಿಯು ಬೀಳಲಾಕ್ಷಣ ಶಂಕರನು ಮೆಚ್ಚಿ
ಬಂದು ನಿಜರೂಪದಿಂದುಮೆ ಗಣಪ ಗುಹ ನಂದಿ ಪ್ರಮಥಗಣಯಕ್ಷರ ||೩೯||

ವೃಂದ ಪೂಮಳೆಗರೆಯೆ ತಂದ ಪುಷ್ಪಕದೊಳಗೆ
ಸುಂದರಾಂಗಿಯನಿಟ್ಟು ಕೈಲಾಸಪುರಕೊಯ್ದು
ಬಂಧುಗಳು ಗ್ರಾಮಜನಕ್ಕೆಯ್ದಿದಶ್ಚರ್ಯದು ಕೀರ್ತಿಸಲು ಕೋಳಿಕಪಿಯು ||
ಹೊಂದಿ ವಿಪಿನದೊಳಿರ್ದು ಕೆಲದಿನ ಸಾಯಲವ

ಬಂಧುರ ಸುರುದ್ರಾಕ್ಷಧಾರಣ ಫಲದಿ ನಿಮ್ಮ
ಸುಂದರರದ ಗರ್ಭದೊಳು ಜನಿಸಿ ಪೂರ್ವಜ್ಞಾನದಿಂದ ರತ್ನಾಭರಣವ ||೪೦||

ಉಳಿದು ರುದ್ರಾಕ್ಷಿ ಧರಿಸುವರು ಸಾಯುಜ್ಯ ಪದ
ಎಳೆಗಿದಶ್ಚರ್ಯವೆನೆ ಪಡೆವರಿದು ಕೇಳೆಂದು
ಸತಿಪರಾಶರ ಭದ್ರಸೇನಂಗೆ ಪೇಳಿ ಮತ್ತೊಂದುಂಟು ಪೇಳ್ವಡದನು ||
ಕೇಳಿದಾಕ್ಷಣ ಕ್ಲೇಶ ಶರಧಿಯೊಳಗಾಳುವಿರಿ
ಬಾಳಲಿ ಲಿಖಿತವ ತೊಡೆವರಾರು ಜಗದೊಳಗಿದನು
ನಾಳಿನೊಳತಿ ದುಃಖವೀಗತಿ ಪೇಳ್ವುದನುಚಿತವಿದೆಂದು ಸುಮ್ಮನೆಯಿರಲವಂ ||೪೧||

ಧರಣಿಪತಿ ಭದ್ರಸೇನಂ ಮಂತ್ರಿಯುಭಯ ರತಿ
ಕರವ ಮುಗಿವ್ರತಲದನು ಪೇಳ್ವುದೆಂದಾಗ್ರಹದಿ
ವಿರದೆ ವಿಜ್ಞಾಪನಂಗೆಯ್ಯಲಂತಾಯ್ತೆಂದು ಪೇಳಿದನದರ ಪರಿಯ ||
ಸಿರಿ ಸಂಪತ್ತುವಿದ್ದೇನು ಫಲ ನೃಪತಿ
ಧರೆಯೊಳಾಯುಷ್ಯವುಳ್ಳವನು ಸುಖವ ಭೋಗಿಸುವ
ಪರಿಯಲಿವರುಭಯರೆಳ್ದಿನಕೆ ಮೃತವಪ್ಪರಿದು ತಪ್ಪದು ವಿಧಾತೃ ಲಿಖಿತ ||೪೨||

ಎಂದು ಮಾತ್ರದಿಮುಭಯರುಂ ನೆಲಕೆ ಬಿದ್ದುರುಳಿ
ಹೊಂದಿ ದುಃಖದೊಳಿದಕುಯಪಾದಾವುದುಮಿರ್ದು
ದೆಂದು ಪೇಳಿದೊಳೆಷ್ಟು ವೆಚ್ಚವಾರಡು ಮಾಡುವೆವುಯೆಂದು ಬಿನ್ನೈಸಲು ||
ಚಂದದಿಂದಾಗ ಪೇಳಿದ ಚತುರ್ದಶ ವಿದ್ಯ
ಬಂಧುರದೊಳಿವವರೊಳಗೆ ಮುಖ್ಯ ವೇದಗಳು
ಸಂದಿರುವವೇಕಾದಶರುದ್ರವದರೊಳಗೆ ಪಂಚಾಕ್ಷರೀ ಮಂತ್ರವು ||೪೩||

ಅದರೊಳಗೆ ಶಿವವರ್ಣವೆಂದುಕ್ತಿಸುವ
ದದು ಶಿವೋಕ್ತಾಗಮವುವದರಿಂದೆ ರುದ್ರವಿದು
ಆದರದಿ ನಿತ್ಯದಶಸಹಸ್ರ ಪಠಿಸಲು ಸಪ್ತದಿನಕದರ ಕಂಟಕವನು ||
ಪೋದಪುದೆನಲ್ಕೇಳಿ ತತ್ ಕ್ಷಣದಿ ಭೂಪನಸಿ
ಮೇದಿನಿಯೊಳಿರುವ ದಶಸಹಸ್ರ ವಿಪ್ರರ ತರಿಸಿ
ಬೋಧಿಸಿದ ಪರಿಕರವನೊದವಿಸಲು ಮುನಿತಾನೆಯಂ ಚಾರ್ಯನಾಗಿಯದರ ||೪೪||

ಗ್ರ : ವಿದ್ಯಾಸುಶೃತಿ ರುತ್ಕೃಷ್ಟ
ತತ್ರೈಕಾದಶ ನಿಶೃತಿ :

ತತ್ರಪಂಚಾಕ್ಷರೀ ತಸ್ಯಾಂ
ಶಿವ ಇತ್ಯದಕ್ಷರ ದ್ವಯಂ ||೧||

ವಿಧಿಯ ಚೆನ್ನಾಗಿಯೆಸಗಿದರು ದಶವಿದಕುಂಭ
ಸದಮಲ ಸುನಿರ್ಮಲೋದಕ ತುಂಬಿಯದರೊಳಗೆ
ಹುದುಗಿದರತುಳದಶ ಪಲ್ಲವಗಳವಕೆ ಪೂಜಿಸಿದರಷ್ಟಕ್ರಮದೊಳು ||
ಮೋದದಿಂದಾಗ ಶ್ರೀರುದ್ರ ಪಠಿಸಲು ಸಪ್ತ
ವಾದಿನದೊಳವರ ಪ್ರಾಣವ ಪೋಗೆ ಮುನಿವರನು
ಸದಯದಿಂದಾಗ ರುದ್ರಾಭಿಷೇಕನವರ ಮೇಲೆ ಪ್ರೋಕ್ಷಿಸಲು ಪ್ರಾಣ ||೪೫||

ಬಂದವಾಗಲೆ ಮಿದದ್ಭೂತವೆಂದು ನುತಿಸಲತಿ
ಸುಂದರ ಸುಧರ್ಮತಾರಕರುಭಯರಿಗೆ ಆದ
ಚಂದವೃತ್ತಾಂತವನು ಕೇಳಲವರುಂ ಪೇಳ್ದರಂತೆನಲ್ಕಾಲ ಪುರುಷಂ ||
ಬಂದು ಬಂಧನಗೊಳಿಸಿ ಹೊಯ್ದು ಸಮಯದಿ ನಾಲ್ಕ
ರೊಂದು ಗೂಡುತ್ತಿಂದುಧರನ ದೂತರುದಯದಿ
ಕಂದು ಕಂಧರನಾಜ್ಞೆವಿಲ್ಲದಲೆ ನೀನವರತಂದ ಕಾರಣವೇಸಿದು ||೪೬||

ಎಂದವನೀಕ್ಷಿಸಿ ಶೀಲದೊಳೊಯ್ದು ರತ್ತಂ ಎಮ್ಮ
ಚಂದದಿಂ ಪೊಗಿರೆಂದ ಪುಣೆಯನೀಯ್ಯೆನಾ
ವ್ ಬಂದೆವತ್ತೆನಾಯ್ತೊ ತಿಳಿಯೆದೆಂಬನಿತರೊಳ ನಾರದ ಋಷಿ ಬಂದನು ||
ಬಂದನಾರದ ಋಷಿಗೆ ವಂದನಂಗೈದು ಶಿವ
ಮಂದಿರದ ವೃತ್ತಾಂತವೆನೆನಲ್ಕಿನ್ನಮುಭಯ
ಬಂಧುರದ ಪುತ್ರರೆ ಮನೊಯಾಗ ಶಿವದೊತರಿವರ ಸೆಳೆಯುತ್ತೀ ಕಡೆ ||೪೭||

ಕಳುಹುತ್ತವನ ಶಿವಸಭೆಗೆ ಹೊಯ್ದು ಸನ್ನಿಧಿಯೊ
ಯೊಳೊಲಿದು ನಿಲ್ಲಿಸಲೀಶ ಕೇಳ್ದನೆಲೆ ಪ್ರೀತಿಪತಿ
ಮುಳಿದವರನೊಯ್ದುಡಾಜ್ಞೆಯ ಕೊಟ್ಟದಾರ್ನಿವಗೆಪ್ಪತ್ತು ಸಾವಿರ ವರ್ಷವು ||
ಅಳತೆ ಆಯುಷ್ಯವವರಿಗೆ ಸಿದ್ಧವಾಗಿಹುದು
ಅಳಿಕಾಕ್ಷಿಮಣಿಧಾರಕರ ವಿಚಾರಿಸದೆ ನೀ
ಸೆಳೆದೊಯ್ಡೆ ದೂರ್ತತ್ವವಿನಿತ್ಯಾಕೆನಲು ಚಿತ್ರಗುಪ್ತರಂ ಕರೆಸುತಾಗ ||೪೮||

ನಿಮ್ಮ ಶಿವಡಿಯಗಣಿತವೇನಿಹುದು ಪೇಳಿರೆನೆ
ಗಮ್ಮನೀವರೆಗೆ ದ್ವಾದಶಾಬ್ದದೊಳು ಕುತ್ತವಿಹು

ಹಮ್ಮಾವಿಸಿಯದರಿಂದೆ ಪಿಡಿದೆವಲ್ಲದೆಯವರ ಆಯು ದಶಸಹಸ್ರವಿಹುದು ||
ತಮ್ಮಾಜ್ಞೆಯಂತೆ ನಡೆವುದೆ ಸಹಜವೆಂದೆನಲು
ಸುಮ್ಮನವರಂತಿಡಿಸಿದಿರ್‍ದೈವರು ಶ್ರೀರುದ್ರ
ನೆಮ್ಮಿ ಪರಿಸದರವಭಿಷೇಕ ಜಲವ ಪ್ರೋಕ್ಷಿಸಲು ಕುತ್ತ ಪರಿಹರವಾದುದು ||೪೯||

ಶಿವಚಿನ್ಹವುಳ್ಳವರ ಪಿಡಿಯಲಾಗದು ನೀವು
ಭವಹರನೆನಲ್ಕೆ ಕೃಪೆದೋರಿಯಭಯವನಿತ್ತು
ಭವವೆಂತುಟಂತುಮಾಗಲಿಯೀಗ ಪಿಡಿದವಪರಾಧ ಕ್ಷಮಿಪುದು ಕರುಣದಿಂ ||
ಭವಿಗಳನೆ ಶಿಕ್ಷಿಸುದೆನಲ್ತಮ್ಮವಾಜ್ಞೆಯನು
ತವಕದಿಂದರಸಿಗಪುಣೆಯೀಯೆ ನಮಿಸುತವ
ರವದೊಳಂ ತನ್ನ ಪುರಿಗೈದನತ್ತಂ ಯಿತ್ತನಾಂ ಬಂದೆಕೇಳ್ ನೃಪಾಲ ||೫೦||

ಎಂದು ನಾರದಮುನಿಯು ಭದ್ರ ಸೇನಂಗೊರೆಯ
ಲಂದು ಕೇಳುತ ವಿಭವದಿಂದವರ ಸತ್ಕರಿಸಿ
ಬಂಧುರದೊಳಾರುದ್ರನಾರಾಧನೆಯ ಮಾಡಿದ ದಾನಧರ್ಮಗಳೀವುತೆ ||
ಬಂದ ಋಷಿಗಳಿಗೆ ಬಹುಮಾನವನು ಮಾಡುತ್ತೆ
ಚಂದದಿಂದೆಮ್ಮ ವಂಶೋದ್ಧಾರವನು ಮಾಡಿ
ಬಂಧನವ ಬಿಡಿಸಿದಿರಿಯೆಂದ ಪರೀಶರರಿಗಂದು ನುತಿಸುತೆ ನಮಿಸುತೆ ||೫೧||

ನಾರದ ಪರಾಶರರಿಗರ್ಘ್ಯಗಾಣಿಕೆಯಿತ್ತು
ಭರದೊಳವರಂ ಕಳುಹಿ ಸುಖದಿಂದ ರಾಜಪದ
ವಿರದೆ ಭೋಗಿಸಲವರ ಪುತ್ರರೀರ್ವರು ದಶಸಹಸ್ರಾಯು ಪೂರ್ಣವಪ್ಪ ||
ಪರಿಯಂತ ರುದ್ರಾಕ್ಷಿಯಾಭರಣಗಳನೊಲಿದು
ಧರಿಸಲಂತ್ಯದೊಳು ರುದ್ರ ಪದಮಂ ಪಡೆದ
ರುರೆ ರುದ್ರ ನಯನ ಮಹಿಮೆಯ ಪೇಳ್ವಡರಿದು ಕೇಳ್ ಕರಿಬಸವ ಯತಿವರ್ಯನೆ ||೫೨||

ಎಂದು ಕನಕಾದ್ರಿ ಮಠಕಧಿಪ ಕಿಡಿಗಣ್ಣೊಡೆಯ
ರಂದು ಪೇಳಲ್ಕೇಳಿ ಸಂತಸದಿ ಚರಣಕವ
ರೊಂದಿಸುತೆ ಮುಂದೆ ಪಂಚಾಕ್ಷರಿ ಮಹತ್ವನೆನಗಿಂದು ಪೇಳುವದಾರ್ಯನೆ ||
ಎಂದು ನಮಿಸಲ್ಕಾಗಲಿಂದುಧರ ರೂಪ ಗುರು
ಚಂದದಿಂ ಪಂಚಾಕ್ಷರಿಯ ಮಹಿಮೆ ಮುದದಿಂದೆ
ಮುಂದೆನಾಂ ಪೇಳ್ವೆನೆಂದಾಚಾರ್ಯ ಪುಂಗವ ನಿರೂಪಿಸಿದ ಕರಿಬಸವ ದೇವಗೆ ||೫೩||

ಮರಳ ಸಿದ್ಧಾಚಾರ್ಯ ಕಾಮಿದೇವಾಚಾರ್ಯ
ವರಪಂಡಿತಾಚಾರ್ಯ ಗುರುವು ವಿಶ್ವಾಚಾರ್ಯ
ರುರೆ ಮಧ್ಯವದನ ಸಂಜಾತ ರೇಣುಕದೇವನುದರಭವ ಘನಲಿಂಗನು ||
ಹರರೂಪ ರುದ್ರಮುನಿ ಕರಜಾ ಮಹಂತಯತಿ
ಚರಣ ಸಂಭವಗುರು ಪರಂಪರೆಯೊಳುದ್ಭವಿಸಿ
ದರರೆ ವಲದಿಯಪುರದ ಹಿರೆಮಠಾಧಿಪ ಪಟ್ಟಾಚರವರ್ಯ ಮಹಂತನುಸುರ್ದ ||೫೪||

ಅಂತು ಸಂಧಿ-೭ಕ್ಕಂ ಪದ-೫೪ ಕ್ಕಂ ಮಂಗಳ ಮಹಾ ||

ಎಂಟು

ಸಂಧಿ

ಪಲ್ಲವ : ಶ್ರೀ ಪರಮ ಗುರುವರನು ಮರಿ ಕರಿಬಸವರಾಜ
ಗಾಪರತರ ಮಹೇಶನಾಮ ಪಂಚಾಕ್ಷರಿಯ
ನುಪಮಿಸಲು ಬಾರದಿಹ ಮಹಿಮೆ ಪೇಳಿದರಿದನು ಸಜ್ಜನರು ಕೇಳ್ವುದೊಲಿದು ||

ಕಮಲಭವ ಮೂರ್ಧ್ನಿಲವಾಣಿ ಶಿವಗಣಶ್ರೇಣಿ
ವಿಮಲ ಗಂಗಾಭಂಗ ಮೌಲಿ ಸಜ್ಜನ ಪಾಲಿ
ರಮೆಯಿರಸ ಹೇಮಾದರೇಂದ್ರ ನಿರ್ಜರವೃಂದ ವಿನಮಿತ ಪದಾರವಿಂದ ||
ಕಮಲ ನಿರ್ಮಲ ಮೂಲಧೀದಿತಿ ಚಾಪಾಲೋಲ
ಸುಮನ ಶರವನದಾವದಾವ ಭಕ್ತ ಸುಜೀವ
ಸೋಮಜಯ ಸಾಮಗಾನ ಪ್ರೇಮ ಮನ್ಮನೊಪ್ಸಿತದಾತ ಪಾರಿಜಾತ ||೧||

ಕಂದಕೇಳ್ ನೀನೀಗ ಪಂಚಾಕ್ಷರಿ ಮಹಿಮೆ
ವೃಂದ ಪೇಳುವಡಸಾಧ್ಯಂ ಪನ್ನಗಾಪತಿಗೆ
ಸ್ಕಂದವರ್ಗಜ ನಿನ್ನ ದೆಸೆಯಿಂದಲಾಪನೀತ ಪೇಳ್ವೆನಾಲಿಸು ಪ್ರೇಮದಿಂ ||
ಯೆಂದಾರರೇನುಯಿಲ್ಲದ ಪರಬ್ರಹ್ಮದೊಳು
ಬಂಧುರದೊಳೋಂಕಾರವಾಯ್ತುದರೊಳಂ ಪಂಚ
ಸುಂದರದ ಮನುವಾಯಿತದರೊಳು ಶೃತಿಸ್ಮೃತಿ ಪುರಾಣೇತಿಹಾಸಂಗಳು ||೨||

ಚಂದವಾಗಿಯೆ ಚತುರ್ದಶ ವಿದ್ಯಗಳು ಜನಿಸಿ
ಅಂದವಾಗಿಹ ಸಪ್ತಕೋಟಿ ಮಹ ಮಂತ್ರಗಳು

ಬಂಧುರದ ದೇಶ ಭಾಷೆಗಳಾದವರಿಂದೆ ಮಂತ್ರಮಾತೆಯದೆನಿಪುದು ||
ಹೆಂದದಾನಂದದಿಂ ಸದ್ಗುರುವಿನಿಂ ಪಡೆದು
ಕುಂದದದು ಜಪಿಸೆ ಬ್ರಹ್ಮಹತ್ಯಾದಿ ದೋಷಗಳೂ
ಹೊಂದಲಮ್ಮವು ಬ್ರಹ್ಮರಾಕ್ಷಸ ಪಿಶಾಚಿಗಳು ಸ್ಮರಣ ಮಾತ್ರದಿ ವಿನಾಶಂ ||೩||

ಪಂಚಬ್ರಹ್ಮಸ್ವರೂಪ ಪಂಚಾಕ್ಷರಿ ಮಂತ್ರ
ಪಂಚಸಾದಾಖ್ಯವಾ ಪಂಚತತ್ವ ವಿಲೋಪ
ಪಂಚಮಹಪಾತಕ ವಿನಾಶ ಮುಕ್ತಿಯ ಕೋಶ ಪಂಚಪಾಶ ವಿನಾಶವು ||
ಪಂಚಲಿಂಗ ಸ್ವರೂಪ ಪಂಚಚಕ್ರ ನಿವಾಸ
ವಂಚನೆಯದಿಲ್ಲದೀ ಮಂತ್ರ ಜಪಿಸಿದೊಡವನ
ಸಂಚಿತರ ಕರ್ಮವಳಿದು ಚಿತ ಸುಭಕ್ತಿಯಿಂ ಪಂಚಮುಖನವನಪ್ಪನು ||೪||

ಈ ಮಂತ್ರವನೆ ಜಪಿಸೆ ಸರ್ವಸಾಮರ್ಥ್ಯವಂ
ರಾಮಣೀಯಕವಾಗಿ ಪಡೆದ ಗೌತಮ ಗಾರ್ಘ್ಯ
ನೇಮದಿಂದಾವಾಮದೇವವಜಹರಿ ಮುಖ್ಯ ದೇವದಾನವರೊಲವಿನಿಂ ||
ರಾಮಪಂಚಾಕ್ಷರೀ ಮಂತ್ರ ಸ್ಮರಣೆಯ ಮಾಡಿ
ಕಾಮಿತಾರ್ಥವ ಪಡೆದರಿತಿಹಾಸವನು ಪೇಳ್ವೆ
ಪ್ರೇಮದಿಂ ಕೇಳ್ವುದೆಂದಾ ಕೆಂಡಗಣ್ಣೊಡೆಯರೀ ಯತಿವರೆಗೆ ಪೇಳ್ದರು ||೫||

ಪರಮ ಸಾನಂದ ಯೋಗೀಂದ್ರನೊಮ್ಮೆಯು ಯಮನ
ನಿರಯಗಳ ನೋಡುವೆನೆನುತ್ತೆ ಪೋಗಲ್ಕರನು
ಚರಣಕೊಂದಿಸಿ ಕರವ ಮುಗಿದು ಬಸವರ ಮೇಲೆ ಭಾಗಿರಥಿಯೊಲಿದು ಬಂದ ||
ತೆರನಾಯಿತೆಲೆ ಮುನಿಪ ಬಂದ ಕಾರಣವೇನು
ನಿರವಿಸುವದೆನಲು ನಿನ್ನಯ ನಿರಯ ಪರಿಕರವ
ನರಿದು ನೋಡುವಡೆಂದು ಬಂದನೆನೆಯೆದೆಯೊಡೆದುಯೇನಾದಪುದೊಯೆನುತ್ತೆ ||೬||

ಕವಿವಕತ್ತಲೆಯೊಳಿದುಮುದಯರವಿ ಬರ್ಪಂತೆ
ತವೆ ಹಿಮವನೋಡಿಸಲುವನ್ನಿಗಿರಿ ಬರ್ಪಂತೆ
ತವಕದಿಂದುರಗ ವೃಶ್ಚಿಕ ವಿಷವನಿಳಿಸುವೊಡೆ ಗರುಡಮಾಂತ್ರಿಕ ಬರ್ಪವೊಲ್ ||
ನವದುರಿತಗಿರಿ ಸೀಳುವಡೆಯಶನಿ ಬರ್ಪಂತೆ
ಭವಶರಧಿದಾಟಿಸಲು ತರಣಿ ತಾ ಬರ್ಪಂತೆ
ಶವಡಿಗೆ ಪರಮ ಸಂಜೀವನಂ ಬರ್ಪಂತೆ ಸಾನಂದ ಋಷಿ ಬಂದನು ||೭||

ಬಂದವರನುಪಚರಿಸದಿರ್ದಡೆಯಧರ್ಮವದು
ಬಂದಬಳಿಕಾಗದತಿ ಬಿಡುವುದುಂಟೆಯೆಂದು
ಸಂದ ಪೌರಾತನರ ವಚನವುಂಟದು ಕಾರಣಾದುದಾಗಲಿಯೆನುತ್ತೆ ||
ಕಂದಿಕುಂದುತೆ ಮುಖಮನಂಗಳು ಬಾಹ್ಯದೊಳು
ತಂದೆ ಬಾರೆಂದವರ ಕರವಿಡಿದು ನಡೆದವರ
ನೊಂದೊಂದು ಚಿತ್ರಮಂ ತೋರುತ್ತೆ ನಡೆತಂದನೇನಂಬೆನದ್ಭುತವಸು ||೮||

ಕಡಿವ ಚುಚ್ಚುವ ಕೊರೆವ ಸೆಳೆವ ಕುಕ್ಕುವ ತುಳಿವ
ಬಡವಿ ಬಗ್ಗಿಸುವ ಕಾಯ್ದೆಣ್ಣೆಯ ಕಟಾಹದೊಳು
ಕೆಡುವ ಕುದಿಸುವ ಕಾಯ್ದು ಮರಳ ಮೇಲೊರಳಿಸುವ ಕಾಯ್ದು ಬೊಂಬೆಯನಪ್ಪುವ ||
ಸುಡುವ ನೇತ್ರವ ತೆಗೆವ ಕರ್ಣಘ್ರಾಣವ ಕೊಯ್ವು
ತಡೆಯದಾಗಾತ್ರ ದಸ್ತಿಗಳನಾಯುತ್ತಿರುವ
ಕಡೆಗೆ ನರಕದ ಕೂಪದೊಳಗೆ ಬೀಳಿಸುತವರ ಪರಿಪರಿಯ ಕಷ್ಟವ ಒಡಿವ ||೯||

ಹಿರೆಕಿರಿಯ ನಾಯಕನರಕ ಕೂಪ ಹೊಕ್ಕರಣೆ
ಕೆರೆತೊರೆನದಂ ಷುಡುವ ಗುಂಡ ಕೊಂಡಗಳೆನಿಪ
ಶರಧಿಮೊದಲಹ ನಿರಯಗಳ ಗಣನೆ ಪೇಳುವಡಸಾಧ್ಯ ವರಿಯಲ್ಕೆನಿಸುವ ||
ಪರಿಪರಿಯ ನರಕಕೊಂಡಗಳೊಳಾ ಪ್ರಾಣಿಗಳು
ಯಿರದೆ ಮುಳುಗುತ್ತೆ ತೇಲುತಿಹಲಿರುವ ಕಷ್ಟಗಳ
ತೆರನರಿದು ನೋಡಲಾರದೆ ಕಳವಳಂಗೊಂಡು ಶಿವಶಿವಾಯೆಂದು ನುಡಿಯೆ ||೧೦||

ಪಂಚಾಕ್ಷರಿ ಮಂತ್ರವನುಚ್ಚರಿಸಿದಾಕ್ಷಣವೆ
ಸಂಚಿತವನಳಿದವರ ಕರ್ಮಕ್ಷಯವಾಗಿನಾ
ಮುಂಚು ತಾ ಮುಂಚೆನುತೆ ನಿರಯದೊಳು ಮುಳುಗುತಿಹ ಸಕಲ ಪ್ರಾಣಿಗಳು ರವದಿಂ ||
ವಂಚನೆಯದಿಲ್ಲದವರಿವರೆನ್ನದಲೆ ಸರ್ವ
ರಂ ಚಿತದೊಳಂ ಮೇಲೆ ಬಂದು ಮುನಿಚರಣಕವ
ರ್ಹಂಚಿಕೆಯ ತಿಳಿದು ಸಾಷ್ಟಾಂಗವೆರಗಲ್ಮೆದೆಯ ಬಿದ್ದಂತೆ ತೋರುತಿರಲು ||೧೧||

ಕಾಲನಿದ ನೋಡಿ ಧೈರ್ಯವಗುಂದಿ ನನ್ನ ಪುರ
ಪಾಳ ಮಾಡಲ್ಕೈದನೆಂದು ದುಃಖಿಸುತಿರಲು
ಗೋಳಿಡುವ ನರಕ ಪ್ರಾಣಿಗಳಿಲ್ಲರುದ್ಧರಿಸಿ ಕನಕಾದ್ರಿಗವರ ಕಳುಹೆ ||
ಪಂಚಾಕ್ಷರಿಯ ಮಂತ್ರವ ನುಡಿವುತ್ತೆ ಪೊದರಿದ

ಕೇಳಿದದರಿಂದೆಲ್ಲ ದೋಷ ಪರಿಹಾರವಾಗಿ
ಏಳಿಗೆಯ ಗಣಪದಕೆ ಸಲ್ಲಿದರೆನಲ್ತಾವೆ ವಿಶ್ವಾಸದಿಂ ಜಪಿಸಲು ||೧೨||

ಆಗದಿಹ ಫಲಮುಂಟೆ ಪಂಚಾಕ್ಷರಿಯೆ ಜೀವ
ವಾಗಿ ಜಪಿಸಲ್ಕವರು ಶಿವನೆ ತಾವಾಗುವರು
ರಾಗದಿಂ ಕೇಳೆಂಬು ಕೆಂಡಗಣ್ಣಾರ್ಯರತಿ ಕರುಣದಿಂದೊರೆದರೊಲಿದು ||
ಮಿಗೆ ಕರಿಬಸವ ಯತಿಯೆ ಮತ್ತೆ ಕೇಳೆಲೆಮಗನೆ
ಸೊಗಸುತಿಹ ಪಂಚಷಡ್ದೆಸೆಯೊಳು ರಂಜಿಸುವ
ವಗುಮಿಗೆ ಶಿಖಾಮಣಿಯು ಎಂಬವೋಲ್ ಸಂಭ್ರಮದಿಯೊಪ್ಪುತಿಹುದೇನೆಂಬೆನು ||೧೩||

ಚೋಳ ಮಂಡಲದರಸು ಸತ್ಯೇಂದ್ರ ಚೋಳನವ
ನಾಳುತಿರೆ ಸತ್ಯಧರ್ಮ ಸದ್ಗುಣಗಳೊಳಿಂ
ದೇಳಿಗೆಯ ಸತಿಸುತಾದ್ಯಾಮಾತ್ಯ ಮಂಡಲಿಕ ಮಕುಟವರ್ಧನ ಮಾನ್ಯರು ||
ಸಾಲುಸಾಲಾಗಿರುವ ಕರಣಿಕರು ಕವಿವೃಂದ
ಮೇಲಾದ ಕವಿಗಮಕಿ ವಾದಿ ವಾಗ್ಮಿಗಳಿಂದ
ಶೀಲ ಸಂಪನ್ನ ಸಾವಂತ ಮಾವುತರಾವುತರು ರಥಿಕರ ದೌವ್ವಾರಿಕ ||೧೪||

ಕರಿತುರಗ ರಥಪದಾತ್ಯಾಳಿಯ ಪರಾಕ್ರಮದಿ
ಧರೆಯ ಪಾಲಿಸುತಿರ್ದರತುಳ ಸಂಪತ್ತಿನಿಂ
ವರಕುಮಾರಕ ಮಂತ್ರ ಲಕ್ಷನುಯೆನಿಪ್ಪ ಸತ್ಪುತ್ರನಿರುತಿರೆ ಸತ್ಯದಿಂದೆ ||
ಪರಮ ಪಂಚಾಕ್ಷರಿಯ ಮಂತ್ರನಿಷ್ಠನು ಶಿಷ್ಟ
ಹಿರೆ ಪ್ರಧಾನನ ಪುತ್ರ ಮಿತವಚನರುಭಯರುಂ
ವುರುತರೋನ್ನತ ಮಿತ್ರಭಾವಮಂ ಬಲಿದಿರಲು ಸಲೆ ಸಿಂಧುದೇಶದಿಂದ ||೧೫||

ತುರಗಗಳು ಬಡಲವನು ಸತ್ಯೇಂದ್ರ ಚೋಳನಲೆ
ಪರಿಕಿಸುತೆಯದರೊಳುತ್ತಮವಾದ ದಿವ್ಯಾಶ್ವ
ವೆರಡು ವಿಕ್ರಯಗೊಂಡು ಲಾಯದೊಳ್ ಬಂಧಿಸಿದಲೊಂದು ದಿನ ಮಂತ್ರ ಲಕ್ಷ ||
ನಿರದೆ ವೈಹಾಳಿಯಂ ಪೋಗಲೆಂದಾ ತುರಗ
ತರಿಸಲಾ ಮಿತವಚನ ಹೊಸಗುದುರೆಗಳ ಮೇಲೆ
ಯೇರುವದಸಾಧ್ಯವೆಲೆ ತಿಳಿಯದಲೆ ಕುಳಿತರೇನಹುದೊ ಹೊಲ್ಲವದಾಗಲು ||೧೬||

ಕೊಂದವರ ಕೊಲ್ಲಬೇಕೆಂಬ ಬಿರುದುಂಟು ಸ
ತ್ಯೇಂದ್ರನಿಗೆ ಪುತ್ರನಾದರು ಬಿಡನು ನಿಃಕರುಣೆ

ಕುಂದಬರ್ಪುದು ನಮ್ಮಗಾದರುಂ ಬೇಡೆನಲು ಸುಮ್ಮನೇತಕೆ ಬರ್ಪುದು
ಮಂದಿಯಿಲ್ಲದ ಸ್ಥಾನದಲ್ಲಿತಿರುಹಲ್ಕೇನು
ಬಂದಪುದು ತಾಯ್ಕೈದುಯೇರಲಾ ಮಂತ್ರಿಸುತ
ಬಂದು ವಿಧಿಮುಂಗೊಳಲ್ಕೆನಿತು ಪೇಳಿದರು ಪ್ರತಿಬಾರದದು ಮಾಳ್ಪುದೇನು ||೧೭||

ಕಾಲಕ್ಕೆ ಸರಿಯಾಗಿಯಾಗುವುದು ಕಾರ್ಯವದು
ಮೇಲಿನವರಿಂದಾದರುಂ ಮೀರಬಾರದದು
ಶೂಲಧರನ ನಿರೂಪವಿರ್ದಂತೆಯಾಗುವುದ ತಪ್ಪಿಸಲಾರಿಂದಲು ||
ನೆಲದೊಳಾಗದಿದೆಂದು ನಿರ್ಧರಿಸಿವಾರುವದ
ಮೇಲೇರುತರುಭಯರುಂ ಚತುರ್ಬಲ ಸಹಿತ
ಲೋಲ ವೈಹಾಳಿ ಚೆನ್ನಾಗಿ ಮಾಡುತೆ ತಿರುಗಿ ಬರುತಿರುವ ಸಮಯದೊಳಗೆ ||೧೮||

ಕುಳಿತಿರುವ ತುರಗವದು ಬೆರದಿಯದರೊಳಗೊರ್ವ
ಸುಳಿಯಲಾ ಬಡವಿಮಗ ಶಂಕರನೆನಿಪ್ಪವನ
ತುಳಿಯಲವನಳಿಯಳಿವ ಕಳವಳಿಸುತಲಿ ಮನೆಗೆ ಪೋದರಿತ್ತಂ ಬಡವಿಯು ||
ಬಾಲನಾ ಮಿತವಚನ ಉಳಿತ ತುರಗವ ತುಳಿಯ
ಲಳಿದನೆಂಬುವ ವಾರ್ತೆ ಕೇಳಿಯಲ್ಲಿಗೆ ಪೋಗಿ
ಗೋಳಿಡುತಮೃತ ಪುತ್ರನಂ ಕರದೊಳಗೆ ಪಿಡಿದು ರಾಜಸಭೆಗೈದೆ ಪೋಗಿ ||೧೯||

ಸತ್ಯೇಂದ್ರ ಚೋಳ ಮಹರಾಜ ನೋಡಿಕೇಡ
ಸಾಜದಿಂದಾಡುತಿಹ ಮಗನ ನಿಮ್ಮಯ ಮಂತ್ರಿ
ವಾಜಿ ತುಳಿಸಲು ಮೃತ್ಯುವಾದ ನಿವನೆನಗೊರ್ವ ಪುತ್ರ ವಿಷಯವದಿರುತಿರೆ ||
ಮಾಜದುಸುರ್ವೆನು ಪರರಿಗಗ್ಗರಣೆಯಡಕುತಲಿ
ವಾಜಿಯಿಂದೋರ್ವ ಮಗನಂ ಪಿಡಿದು ಬಾಳುವೆಯ
ಮೋಜಿನಿಂ ಮಾಡುತಿರ್ದಪೆ ನಿಮ್ಮಾಶ್ರಯದೊಳಿಂದಿಂತುವಾದ ಬಳಿಕ ||೨೦||

ಎಂತು ಜೀವಿಪೆನಿನ್ನು ನಿಮ್ಮಂತರಂಗದೊಳು
ಸ್ವಂತವಿಂತಹ ಕಾರ್ಯವಾದ ಬಳಿಕಂ ಜನರು
ಎಂತು ಬಾಳುವರಿನಿತು ದಿನ ಧರ್ಮದಿಂ ಪಾಲಿಸಿದಿಂ ಪೃಥ್ವಿಯನೆನುತಲಿ ||
ಚಿಂತೆಯಿಂದೆದೆ ಬಾಯಿ ಬಡಿವುತ್ತೆ ದುಃಖಿಸಲು
ಪಂಥದಿಂದ ಸತ್ಯೇಂದ್ರ ಚೋಳನತಿ ಕೋಪದಿ ಸ
ಮಂತು ತನ್ನಯ ಪುತ್ರ ಮಂತ್ರಲಕ್ಷನಿಗಾಗ ಕರೆಸಿ ಕೇಳಿದ ತೆರನನು ||೨೧||

ಇಂತನುಚಿತದ ಕಾರ್ಯ ಮಾಡಿದಪರೇ ಕಂದ
ಸ್ವಂತ ನಾವಿನಿತು ದಿನ ಮಾಡಿರುವ ಬಾಳುವೆಯು
ಅಂತರಂಗದೊಳು ತಿಳಿಯಲ್ ವ್ಯರ್ಥವಾಯಿತಿದಕೆಂತು ಮಾಡಲ್ಬೇಹುದು ||
ಕಂತುಹರನೆಂತು ಮೆಚ್ಚುವನಿಂತು ದುರ್ಗುಣಕೆ
ಸ್ವಾಂತದೊಳು ತಿಳಿದು ನೋಡಲೆ ಪುತ್ರಧರ್ಮವಿದ
ನೆಂತಾಗುವದು ರಾಜನೀತಿಯಂತಪ್ಪುದಿದು ದುರ್ಗತಿಗೆ ಕಾರಣದಲ ||೨೨||

ಶಿಷ್ಟ ಪ್ರಜರಂ ರಕ್ಷಿಸುವದೊಲಿದು ಕರುಣದಲಿ
ದುಷ್ಟರತಿ ಶೀಘ್ರದೊಳು ಶಿಕ್ಷಿಪುದು ಕೋಪದಿಂ
ಸ್ಪಷ್ಟದಿಂದೀ ಧರ್ಮಪರರಾದ ರಾಜರಿಗೆಯಿಹಪರದಿ ಸೌಖ್ಯಮಕ್ಕು ||
ಶ್ರೇಷ್ಠರಂ ಕಷ್ಟ ಬಡಿಸಲ್ಕವರ ತಾಪವದೆ
ಶ್ರೇಷ್ಠಯೊಳ್ವನ್ಹಿರೂಪದಿ ವಂಶಕಾಷ್ಟವನು
ಸುಟ್ಟುವಲ್ಲಿಂದಷ್ಟರಿಂದೆ ಮಾಣದೆ ಜನಜನ್ಮದೊಳು ಕಾಡುತಿಹುದು ||೨೩||

ಗ್ರ || ಪ್ರಜಾನಾಂ ರಕ್ಷಣಂ ನಮ್ಯ
ಗ್ದುಷ್ಟಾನಾಂ ನಿಗ್ರಹಂ ತಥಾ
ಏಷರಾಜ್ಞಃ ಪರೋಧರ್ಮ
ಪರತ್ರೇಹ ಚ ಶರ್ಮಣೆ ||೧||

ಪ್ರಜಾಪೀಡನಾದಾರುಭ್ಯ
ಸಮುದ್ಭೂತೋಹುತಾಶನಃ
ರಾಜಂಕುಲಂ ಬಲಂ ಪ್ರಾಣಾ
ಸ್ಧಗ್ಧ್ವಾಪಿನನಿ ವರ್ತತೆ ||೨||

ಇಂತಲ್ಲದೆಂತ ಪ್ರಾಣಿಗಳಾದರವರಿಗತಿ
ಸಂತರೊಲಿದುಂ ನೋಯಿಸರು ಸರ್ವಜೀವದಯ
ವಂತರೆಂದುಂ ಶಾಸ್ತ್ರಸೂಕ್ತಿ ಸಾರುತಲಿಹುದು ಹಿಂಸಪರಮೋಧರ್ಮವು ||
ಸ್ವಾಂತದೊಳಗಿದನರಿದು ಆಚರಿಸಿದೊಡೆ ಶಿವನ
ಪಂಥದೊರಕುವದಲ್ಲದೊಡೆ ನರಕವಪ್ಪುದಿದು
ಶಾಂತಸಜ್ಜನ ಸದಾಚಾರ ಸನ್ಮಾರ್ಗಿಗಳುಯಿದನು ಬಿಡದಾಚರಿಪರು ||೨೪||

ಎಂದು ಈ ಪರಿಯಿಂದೆ ಕಂದನಿಗೆ ನೀತಿಯನು
ತಂದೆ ಪೇಳಲ್ಕವನು ಕೇಳಿ ಮುದದಿಂದಲತಿ

ಸುಂದರನುಯಿಂತೆಂದ ನೆಲೆತಾತ ನೀತಿಯನು ತಾವು ಪೇಳಿದುದೆ ದಿಟವು ||
ಕುಂದದೀ ನೀತಿಗಳ ಹೊಂದಿಯಾಚರಿಸುವೆನು
ಬಂದಿದುಂದಕಾಲಕ್ಕೆ ಸರಿಯಾಗಿ ನಾನು ಬೇ
ಕೆಂದು ಮಾಡಿದುದಿಲ್ಲವಿಲ್ಲದಿರ್ದಡು ದೋಷ ಹೊಂದುವದು ಸಹಜವಿದಕೆ ||೨೫||

ಮಿತವಚನನೆನಿತು ಪೇಳಿದರು ನಾಂ ಕೇಳದಲೆ
ಗತಿ ಮುಂದಕಿಟ್ಟ ಫಲ ನಾನುಣುವುದೆ ಸಹಜ
ಯಾತಕಾತನಿಗೆ ತಲೆಛೇದಿಸುವಡಪ್ಪಣೆಯ ನಾನೆ ಪೋಪೆನು ಮುದದೊಳು ||
ತಾತನೇಯೆನೆ ಆದಡಾಯ್ತು ನೀಂ ಪೋಗೆನಲು
ಮಾತೆಗೆ ನಮಸ್ಕರಿಸಿ ಬರ್ಪೆನೆಂದವಮನೆಗೆ
ಖ್ಯಾತಿಯಿಂ ಪೋಗಿ ಜನನಿಗೆ ವಾರ್ತೆಯಂ ಪೇಳಿನಾಂ ಪೋಪೆನೆಂದು ನಮಿಸ ||೨೬||

ಮಾತೆ ಬಹುದುಃಖದಿಂ ಮಗನ ಕೊರಳಿಗೆ ಬಿದ್ದು
ಯಾತಕೆನ್ನಯ ಜಠರದೊಳಗೆ ಜನಿಸಿದೆ ಮಗನೆ
ಖ್ಯಾತಿಯಿಂ ಬಂಜಿಯಾಗುವುದೊಳಿತು ದೇವರೀ ಫಲವನಿತ್ತು ನಿಷ್ಕಾರಣಂ ||
ಪಾತಕದ ಕಾರ್ಯ ನೀವೇತಕಿದ ಮಾಡಿದಿರಿ
ಜಾತ ಮಗನಾದರುಂ ಬಿಡದಿಹ ಬಿರುದಮುಂಟು
ನೀತಿಯುಡುಗದೆ ಪೋಗು ಬೇಗ ಭೂಪತಿಯಾಜ್ಞ ಮೀರದೆಲೆ ಸಾತಿಶಯದಿ ||೨೭||

ಇಂತೆನಲು ನಮಿಸ ಪೋಗುವ ಸಮಯದೊಳಗಲ್ಲಿ
ಕಂತುಮರ್ದನ ರೂಪ ಮುನಿ ಪುರೋಹಿತ ಚರನು
ಅಂತಕಾಂತಕನನರ್ಚಿಸಿ ಪೋಗಬಹುದೆನಲು ಅಂತಾಯ್ತೆಂದು ತಿಳಿದು ||
ಸಂತರೋಚಿಸುವ ಕಾರ್ಯವೆಂತೆನಲು ಶತಕಾರ್ಯ
ಮುಂತೆಯಿರ್ದರು ಬಿಟ್ಟು ಸಂತೃಪ್ತಿಯಾಗೆನಲು
ನಿಂತಭರದೊಳೆ ತೃಪ್ತಿಯಾಗಿ ಪೋಗುವದುಚಿತವಂತಲ್ಲದೊಮ್ಮೆಯೂರ್ಗೆ ||೨೮||

ಪೋಗುವ ಸಮಯದೊಳಗೆ ಸ್ನಾನ ಮಾಡುವದೆನಲು
ನೀಗುವುದುಚಿತವಲ್ಲ ಸಹಸ್ರ ಕಾರ್ಯಗಳಿರ್ದ
ರೊಗುಮಿಗೆಯ ಭಿಕ್ಷುಕರು ಯಾಚಿಸಲು ಲಕ್ಷಕಾರ್ಯವದಿರ್ದರುಂ ವರ್ಜಿಸಿ ||
ಆಗವರಿಗಿತ್ತು ಪೋಗುವುದುಚಿತವರ್ಚನೆಯು
ಸಾಗಿಸುವದೆನಲು ಕೋಟ್ಯಾಂಶ ಕಾರ್ಯಗಳಿರಲು
ರಾಗದಿಂ ಲಿಂಗಾರ್ಚನೆಯ ಮಾಡಿ ಪೋಗುವದೆ ಸಹಜವೆಂದಿವ ತಿಳಿವುತೆ ||೨೯||

ಸ್ನಾನವಂ ಮಾಡಿ ಲಿಂಗಾರ್ಚನೆಯ ತೀರಿಸುತೆ
ತಾನು ಹೊರಡಲ್ಕಾ ಪುರೋಹಿತನು ಪೇಳಿದನು
ಕಾನನದೊಳವ ಶಿರಶ್ಛೇದನ ಮಾಳ್ಪಾಗ ಪಂಚಾಕ್ಷರಿ ಮಂತ್ರವು ||
ಆನನದೊಳಂ ನುಡಿಯೆ ಪುಷ್ಪ ಮಾಲೆಯೆದಾಗಿ
ಹಾನಿಗೊಳಿಸದೆ ಖಡ್ಗಕೊರಳೊಳಗಿರುವುದಾಗಿ
ಮಾನನಿಧಿ ಸತ್ಯೇಂದ್ರ ಚೋಳನ ಬಿರುದು ಭಂಗಮಾಳ್ಪಂದು ಮತವಲ್ಲ ||೩೦||

ಶಿರವ ಭೇದಿಸಿದ ಬಳಿಕಾಮಂತ್ರ ನುಡಿವುತಿರು
ಪರಮಾತ್ಮನೊಲಿವ ತಾತನ ವಾಕ್ಯ ಗೆಲಿವುದಿದು
ಚಿರಮೆಂದು ತಿಳಿವುದೆನುತಲಿ ಕಳುಹಲಿನಿತರೊಳು ಬಾರನೇಕೆಂದು ಭೂಪ||
ಕರಿಯೆ ಕಳುಹಿದನು ಸಂಧಾಯಿಯಂಬವನಾಗ
ತ್ವರಿತದಿಂ ಬಹುದೆಂದು ಕರಕೊಂಡು ದೊರೆಯೆಡಗೆ
ಬರಲಿವನ ಶಿರವ ಭೇದಿಸಿ ಬರುವದೆಂದು ಸಂಧಾಯಿಯಂ ಕಳುಹಲಿವನ ||೩೧||

ಶಿರವ ಭೇದಿಸುವೆಡೆಗೆ ಕರಕೊಂಡು ಪೋಗಿವನ
ಶಿರವ ಭೇದಿಸಲಾಗ ನುಡಿವುತಿಹ ಮಂತ್ರಸಹ
ಕರದೊಳಗೆ ಮಸ್ತಕವ ಪಿಡಿಸುತ್ತೆ ಭೂಪನೆಡೆಗಂ ಪೋಗಿ ತೋರಲಾಗಿ ||
ವರಮಂತ್ರವನು ನುಡಿವುದಿದು ನೋಡಿಯೆಚ್ಚರಿಯಾಗಿ
ಭರದೊಳೀ ಶಿರವ ನೀನೆಂತು ಭೇದಿಸಿದೆಯೆನೆ
ಕರದೊಳಗೆ ತನ್ನ ಜುಟ್ಟವ ಪಿಡಿದು ಖಂಡಿಸಲ್ಕದರ ಸರಿ ಕುಳಿತು ಮಂತ್ರ ||೩೨||

ನುಡಿವುತಿರಲೀವಾರ್ತೆ ಕೇಳಿ ಮಿತವಚನಧರೆ
ಯೊಡೆಯನಣುಗಂ ನನ್ನ ಕೊಲೆಕೊಂಡನೆನಲೀಗ
ತಡೆವುದನುಚಿತವೆಂದು ತನ್ನ ಮಸ್ತಕ ಕೊರೆಯಲದು ಕೇಳಿ ನೃಪತಿ ಬೇಗ ||
ಸಡಗರದೊಳಾ ಶಿರವ ತರಿಸಿ ವರಸದಿಗಿಡಲು
ಗಡಗಡನೆ ನುಡಿವುತಿಹ ಮಂತ್ರದುಚ್ಚರ ಕೇಳಿ
ಮೃಡಮೂರ್ತಿ ಜಂಗಮನು ತನ್ನ ಶಿರಭೇದಿಸಲ್ಕರು ನೋಡಿ ಭೂಮಿಪಾಲ ||೩೩||

ವರಮಂತ್ರಲಕ್ಷ ಮಿತವಚನ ಸಂಧಾಯಿ ಚರ
ನಿರದೆ ಶಂಕರನ ಮುಖವೈದರೊಳು ಶಿವಮಂತ್ರ
ವುರುತರದೊಳು ವುಲಿವುತಿರೆ ಕಲಶದಂತಿರಿಸೀಶನಿವನೆಂದು ಭಾಪಿಸುತ್ತೆ ||
ಪರಮನೈತರಲಿವಗೆ ದಕ್ಷಿಣೆಯ ಕೊಡುವೆನೆನು

ತರರೆ ತನ್ನಯ ಕಂಠ ಛೇದಿಸಲಿದನು ನೋಡಿ
ತಿರುಕೊಳವಿ ನಾಚಿಯಯ್ಯಯ್ಯೊನಿದನೇನು ನೋಡುವೆ ಭಕ್ತದ್ರೋಹವೆನುತೆ ||೩೪||

ಮೃಡನೆಯೇನಿದು ಪರಾಕ್ರಮವುಯೆನ್ನಯ ಸುತನು
ಮಡಿದನೆಂದೆನಿತಿನಿತು ಮಸ್ತಕವರಿದವೆಂದು
ತಡೆಯದೀ ದ್ರೋಹವೆನಗಂ ಬಿಡುವುದೇ ಜನ್ಮಜನ್ಮದೊಳಗಡೆಯಾಯಿತು ||
ಸುಡುಸುಡೀ ಜನ್ಮಪಾತಕವಾದ ಬಳಿಕಿನ್ನು
ಪೊಡವಿಯೊಳಗಿಹುದೇನು ಫಲವೆಂದು ತನ್ನಶಿರ
ಕಡಿದಳಾಕ್ಷಣದಮೃತವತಿವಿದನು ಕೇಳಿನಿಬರಳಿದ ಬಳಿಕಾನಿಹುದಿದು ||೩೫||

ಮತವಲ್ಲವೆಂದು ಖಡ್ಗವ ಕೊಂಡು ಕರದೊಳಗೆ
ಖತಿಯಿಂದೆ ಕೊರಳಿಗ್ಹೊಂದಿಸಿ ಗರಿಗರಿಲ್ಲೆಂದು
ರತಿಯಿಂದೆ ಕೊರೆಯುತಿರೆ ಮೂಲೋಕ ಪತಿ ಮಹದೇವಂ ಮೆಚ್ಚುತೆ ನಿಜವನು ||
ಸತಿಸಹಿತ ವೃಷಭ ಗಂಗಾಚಂದ್ರ ಗಣಪ ಗುಹ
ಸುತವೀರನಂದಿ ಭೃಂಗಿಯು ಮುಖ್ಯಗಣವೃಂದ
ಯತಿಪನತಿ ಚರಣ ಬಂದೆಳೆದು ಹಿತೆಯೆ ಸೈರಿಸೆನುತೆ ಕರವನು ಪಿಡಿವುತೆ ||೩೬||

ನಿಮ್ಮ ನೈಷ್ಟಿಯಸೆನಿತು ವರ್ಣಿಸುವೆ ಬಡವಿಸುತ
ಗಮ್ಮನಳಿದನೆನುತ್ತಲನಿಬರೆಲ್ಲರು ಕಂಠ
ಸುಮ್ಮನರಿದಿರಿ ಲಕ್ಷವಿನಿತಿಲ್ಲದಂತೆ ನಿಮ್ಮಯ ಧೈರ್ಯವೆನಿತಿರುವವೊ ||
ಒಮ್ಮನದೊಳೀ ಕಾರ್ಯ ಮಾಡಿದಿರಿ ನೋಡುವಡೆ
ಎಮ್ಮ ಮನವಾಗದಿದು ಪರಮವಶ್ಚರ್ಯವಿದ
ನಿಮ್ಮವೀಪ್ಸಿತವೇನು ಪೇಳುವದು ವರಘಳಿಗೆ ವಾಲಸ್ಯವಿಲ್ಲದೀವೆ ||೩೭||

ಎಂದಮಾತ್ರದಿವ ಮೃತಮತಿ ಚರಣದೊಳ್ಬಿರ್ದು
ಯಿಂದುಧರನೇಯೆಮ್ಮ ಮನದಿಷ್ಟವೀವಡತಿ
ಸುಂದರ ಸುಶಂಕರನೆ ಮೊದಲಾದ ವರಪ್ರಾಣವಿತ್ತು ಪೊರೆವುದೆಯೆನಲು ||
ಕುಂದದಾ ದೇಹ ತ್ಯಾಗವನಾದರುಂ ಮುಖವು
ಬಂಧುರದ ಮಂತ್ರವಿದ ನುಡಿವುದತಿಶಯವೆಂದು
ಹೆಂದದಾನಂದದಿಂದವರನೆಲ್ಲರ ಪ್ರಾಣವಿರದಿತ್ತುಯೆಬ್ಬಿಸಲ್ಕೆ ||೩೮||

ಅವರೆಲ್ಲರುಂ ಗುರುವಿನಡಿಗಳಿಗೆ ನಮಿಸಲತಿ
ಭವಹರನು ವ್ಯೋಮಯಾನದೊಳು ಕುಳ್ಳಿರಿಸವರ

ತವೆ ಪರಮ ಕೈಲಾಸಪುರಕಣ್ಬುರಂತೂರ್ಯ ತ್ರಿತಯದೊಳಗೆ ಕೊಂಡೊಯ್ದು ||
ದಿವಿಯೊಳಮರರು ಭೇರಿ ಧಾಣ್ ಧಾಣ್ಣೊಯೆನುತೆ
ನವ ಪುಷ್ಪ ಮಳೆಗರೆಯಲೋಂಕಾರ ವಾದಿಯಹ
ಶಿವಸುಪಂಚಾಕ್ಷರವ ನುಡಿವುತ್ತೆ ಪೋದರವರೆಲೆ ಕರಿಬಸವ ಯತಿವರ ||೩೯||

ಮರುಳಸಿದ್ಧಾಚಾರ್ಯ ರಾಮಿದೇವಾಚಾರ್ಯ
ವರಪಂಡಿತಾಚಾರ್ಯ ಗುರುವು ವಿಶ್ವಾಚಾರ್ಯ
ರುರೆ ಮಧ್ಯವರನ ಸಂಜಾತ ರೇಣುಕ ದೇವನುದರಭವ ರುದ್ರಮುನಿಯ ||
ಕರದೊಳು ರುದ್ರವ ಮಹಂತಾಚಾರ್ಯ ಚರಣಜನಿ
ಗುರುಪರಂಪರೆಯೊಳುದ್ಭವಿಪ ವಲಧಿಹಿರೆಮಠದ
ಚರಪಟ್ಟವರ್ಯನುರೆ ಗುರುಮಹಂತನು ಪೇಳ್ದಂ ಗುರುಕೃಪೆ ಬಲತ್ಕಾರದಿಂ ||೪೦||

ಅಂತು ಸಂದಿ - ಲಕ್ಕಂ, ಪರ ೫೪೩ಕ್ಕಂ ಮಂಗಳ ಮಹಾ ||

ಒಂಬತ್ತು

ಸಂಧಿ

ಪಲ್ಲವಿ : ಪರಮ ಪಾದೋದಕ ಮಹತ್ವ ಕರಿಬಸವಯತಿ
ವರಗೆ ಪೇಳ್ದರು ಕನಕಗಿರಿ ಮಠದ ಗುರುವರ್ಯ
ಚರ ಚಕ್ರವರ್ತಿ ಕಿಡಿಗಣ್ಣೊಡೆಯರದು ವೀರಶೈವರಾಲಿಪುದು ||

ಹೇಮದರಿಬೃದ್ಧರ್ಮ ಜಾನ್ಹವಿ ಜಟಾಪಟಲ
ಸೋಮಧರ ಭೀಮಜಂಭಾರಿ ನತಪದ ಪದ್ಮ
ರಾಮಘನವಾರಿ ಭೃದ್ಭೂತ ಜಂಝುವಾತ ಭಕ್ತಜನ ಪಾರಿಜಾತ ||
ಸಾಮಜದನುಜವ ಜಿನವಾಸಶಮನ ವಿನಾಶ
ಸಾಮಗಳ ಶೀಲಾಂಗ ದೃಕ್ಪಾದ ಪಂಕಜವಿ
ರಾಮ ವೃಷಭಾರೂಢ ರೋಮಜಾದ್ರಿ ಪ್ರಣುತ ಮನ್ಮನೋಭಿಷ್ಟದಾತ ||೧||

ಎಲೆ ಮಗನೆ ಕೇಳು ಪಾದೋದಕ ಮಹಿಮೆಯಿನ್ನು
ಜಲದಿಂದೆ ಗುರುಪಾದ ಪ್ರಕ್ಷಾಲನಂಗೈದು
ಸಲೆವಾರಿ ಗಂಧಾಕ್ಷತಾದಿಯಿಂದರ್ಚಿಸುತವಂಗುಷ್ಟದ್ವಯದ ಮೇಲೆ ||
ಜಲವ ಮಂತ್ರೋಕ್ತದಿಂ ಕ್ರಮವರಿದುಯೆರೆಯಲದು
ನಲವಿನಿಂದಾಚಾರ್ಯರುಂ ಸೇವಿಸಿದ ಬಳಿಕ
ಸುಲಭದಿಂ ಸೇವಿಸಲಿಷ್ಟಪದ ಸಿದ್ಧಿದೊರಕುವುದು ಮುಕ್ತಿಪದವು ||೨||

ಪಾಕಾರವೆನಲು ಪ್ರಾಕಟ ಫಲಪ್ರಾಪ್ತಿಯದು
ದೋಕಾರ ಪರಮದೋಷ ಪ್ರನಾಶನವದುವೆ

ದಾಕಾರವೆನಲು ದಹಿಸುವುದು ತಾಪವ್ರಜ ದುಃಖವದು ಪರಿಹಾರವು ||
ಕಾಕಾರವೆನಲು ಕರ್ಮಪ್ರತತಿ ನಾಶವನ
ಲೋಕದೊಳಗಿದು ಪರಮವಿಶ್ವಾಸದಿಂ ಪದೋ
ದಕವೆಂದು ನುತಿಸಲವನತಿಶಯ ಸುಖವನೊಂದಿ ನಾಕಲೋಕದೊಳಿರ್ಪನು ||೩||

ಪಾದೋದಕವೆನಲು ಬ್ರಹ್ಮಹತ್ಯ ವಿನಾಶ
ಪಾದೋದಕವ ನುತಿಸೆ ಬ್ರಹ್ಮರಾಕ್ಷಸ ಪೋಪ್ರ
ದಾದಿಯಲಿ ಪಾದೋದಕವ ನೀಡಿ ಪ್ರಾಣಪದ ಪಡೆದರಿತಿಹಾಸ ಪೇಳ್ಕೆ ||
ಮೇದಿನಿಯೊಳತ್ಯಧಿಕವೆನಿಪ ಶ್ರೀಗುರುಕೃಪೆಯ
ಸಾಧಿಸುತೆ ವೀರಶೈವಾಚಾರ ದುರ್ಗವತಿ
ಭೇದಿಸಿ ಚತುರ್ದಶ ಸುವಿದ್ಯಗಳ ನೆಲೆಯರಿದು ಪಾರಮಾರ್ಥವನರಿವುತೆ ||೪||

ಭಾವಭವಹರ ಭಕ್ತಿಮದವಿದಂತಾವಳಂ
ಕೋವಿದ ಪ್ರಬಲ ಬಲಿದೇವಿಯರ ವ್ಯೋಮಾರ್ಯ
ಪಾದನಾತ್ಮಕ ಪಾಶದಳನನಘ ಸಂಹ್ವರ ಕಳಾವಿಧ ಪ್ರವಿಮಲಾರ್ಯ ||
ಜೀವಭಾವವವೆಳ್ಳನಿತಮಾದೊಡಂ ಯಿಲ್ಲ
ದಾವಗಂ ಗುರುಲಿಂಗಜಂಗಮವೆ ಸಪ್ರಾಣ
ಭಾವಿ ಭವತ್ಯಾಗಿ ಶಿವಯೋಗಿ ಸುವಿರಾಗಿ ಗುಣತ್ಯಾಗಿ ಮಾಯಾವಿಯೋಗಿ ||೫||

ಅತಿಶಯ ಚತುರ್ವೇದ ಪಾರಂಗತಾತುಳಿತ
ಯುತ ಧರ್ಮ ಸನ್ಮಾರ್ಗ ವಿತ್ರಸ್ತ ಬಹುಪಲಕ
ನುತಪವಿತ್ರ ಚರಿತ್ರನುತ್ತಮ ಸುಭಕ್ತಿಯುತ ಚಿತ್ತ ಸುಜ್ಞಾನವಿತ್ತ ||
ಕ್ಷಿತಿಪ ಸತ್ಕರ ಮೃಗಜಲಾನಲಾನಿಲವುರಗ
ವಿತತ ವೃಶ್ಚಿಕ ವ್ಯಾಘ್ರ ಗಜ ಸಿಂಹ ಶರಭ ಭಯ
ಪ್ರತತಿಮರ್ದನನಸಮ ವೀರ ಪ್ರತಿದೋರದತಿ ಶಾಪಾನುಗ್ರಹ ಸಮರ್ಥ ||೬||

ರಕ್ಷಿತಾರ್ಯ ಪ್ರಕಟ ಪಂಚಾಕ್ಷರಿ ಮಂತ್ರ ಪಕ್ಷ ಕರುಣಾಕಟಾಕ್ಷ ಲೋಲನತಿ
ಸುಕ್ಷೇಮ ಧರ್ಮಾರ್ಥಕಾಮ ಮೋಕ್ಷ ಪ್ರದೀಪಿತ ಮಾರ್ಗ ಸಂಸ್ಥಾಪಿತ ||
ಸಕ್ಷಮಾನ್ವಿತ ಸಮುನ್ನತ ಮಹಿತಸಿತ ಕೀರ್ತಿ
ಕುಕ್ಷಿ ಜನಕಂ ಚರಣ ಸೂಕ್ಷ್ಮ ಸ್ಮರಣವರ್ತಿ
ನಕ್ಷತ್ರರಾಜ ಪ್ರಭಾಮಯಾಂಕಿತ ಶಾಂತಿ ದುರ್ಗುಣ ಸಮಗ್ರಹಂತಿ ||೭||

ನಮಿತ ಜನ ಕಲ್ಪಾವನೀಜ ಶಿವಸುಖಭಾಜ
ದಮಿತದುಷ್ಟ ಪ್ರಬಲ ಮಾಜ ಜ್ಞಾನ ಸುತೇಜ

ನಮಿತ ಜನಮೃತ್ಯು ಪ್ರಹರಣ ಪುನರುದ್ಯತಾಯುವ್ಯ ಪ್ರದಾಯಿಕರುಣ ||
ಅಮಿತವೀರ ವ್ರತ ನಿಯುಕ್ತ ಸದ್ಗುರುಭಕ್ತ
ಶಮದಮಾನ್ವಿತ ಶಿವಮತ ಸ್ಥಾಪನಾಸಕ್ತ
ಪ್ರಮುದಿತಾತ್ಮಕನೆ ಸರ್ವಜನ ಕೀರ್ತಿಸಲು ವರ್ತಿಸುತಲಿರ್ದನನೀಶಂ ||೮||

ಒಂದು ದಿನ ನೆರೆವೊರೊಳಿರ್ದೋರ್ವರಾಜಸುತ
ಬಂಧುರದೊಳಂ ಮದುವೆಯಾಗಿ ಸಂಭ್ರಮದಿಂದೆ
ಇಂದುಮುಖಿ ಸಹ ರಥದೊಳಂ ಕುಳಿತು ತಮ್ಮಾರ್ಗೆ ಪೋಗುತಿರಲಾರದೆಯೊಳು ||
ಕಂದು ಕಂಧರ ಭಕ್ತವೋಮನಾರಾಧ್ಯರುರೆ
ಸುಂದರದ ಪುಷ್ಪಗಳನೆತ್ತುತಿರಲಾಗವರ್ಗೆ
ತಂದೆಜೋಹಾರೆಂದು ಹೊಡವಡಲ್ಕವರು ನೋಡಿಯೂ ನೋಡದಂತೆ ಕುಸುಮ ||೯||

ಎತ್ತುತ್ತಿರ್ದನು ತ್ರಿಕಾಲ ಜ್ಞಾನ ನಿಧಿನಿತ್ಯ
ಸತ್ಯವಲ್ಪಾಯುಷ್ಯವವನಿಗಿಹುದದನರಿದು
ಮಿಥ್ಯವಾಶೀರ್ವಚನವೀಯದಿರಲವನಂದು ಮನದೊಳಗೆ ನಾ ನಮಿಸಲು ||
ಯೆತ್ತಲಾದರು ಹರಸಲೊಲ್ಲ ಸತಿಯಪಹಾಸ್ಯ
ಚಿತ್ತಳಾದಪಳೆಂದು ಲಜ್ಜೆಯಿಂ ನೋಡಿದರೆ
ಮತ್ತೆ ನಮಿಸುವೆನೆನುತೆ ಕರಗಳಂ ಮುಗಿದು ಜೋಹಾರೆಂದು ನುಡಿಯಲವನು ||೧೦||

ಅನಘಚಿತ್ತನು ಬಾಯ್ದೆರೆಯದಿರೆ ನೋಡಿ ನೃಪ
ಘನಗರ್ವಿಯಂದಾಗ ಬಂಡಿಯೆನಿಳಿದು ಪೋಗಿ
ವಿನಯದಿಂ ಜೋಹಾರೆನುತ್ತೆ ನಮಿಸಲ್ಕೆಯು ಪರಸದಿರೆ ಕೋಪದಿಂದ ||
ಯಿನಿಸು ಲಜ್ಜೆಯುಮಿನಿತು ಭಕ್ತಿ ಸಂಯುತನಾಗಿ
ಮುನಿಪಗೆಂದನುಸೀಶನಭ್ಯುದಯ ಸೀಕರರು ನೀ
ವನುಪಮಾರ್ಯರು ಭಕ್ತಿರತರು ಧರಣೀ ಸುರರುಹರ ವೇಷಧರರು ದುರಿತ ||೧೧||

ಹರರು ಚಿದ್ವರರುಹಿರೆಯರೆಗಳುತ್ತಮ ಸದಯ
ಪರರು ಪೂಜ್ಯರು ಪರಮ ಮಾಹೇಶ್ವರರುಗಳೆಂ
ದರಿದು ನಮಿಸಲ್ಪರಸಲೊಲ್ಲದೆಲೆ ಸುಮ್ಮನಿಹುದಿದು ಪುರುಷತನವೆ ಘನವೆ ||
ಗರುವಿಕೆಯ ಗುಣವೆ ಗಾಂಭೀರತೆಯ ಸನ್ಮಾರ್ಗ
ದಿರವೆ ಪೆಂಪೇಯದಲ್ಲದೆ ವಿನಿರ್ಮಳ ಮೂರ್ತಿ
ಕರುಣಾವಲೋಕನ ಮಹತ್ವತೆ ವಿಶೇಷದಹಜ್ಞಾನ ಗೌರವ ವೇಷವು ||೧೨||

ಈ ವಿನುತ ಸಿತಕೀರ್ತಿ ಸದ್ಭಾವ ಶುದ್ಧತೆಯು
ಯೀ ವಿಭುದ ಸನ್ಮಾನ ಯೀ ಪ್ರಸಿದ್ಧತೆ ನಿಮಗೆ
ಅವಿರತಮಿಹವುಯೆಂಬಹಂಕಾರದಿಂ ನುಡಿಯದಿಹವಂದವೇ ಯತಿವರ ||
ನೀವು ಪರಸದಿರಲ್ಕೆ ಕುಂದಹುದೆ ದೀರ್ಘಾಯು
ಭಾವಿಸಲ್ಪರಸಿದೊಡೆ ಪೆಚ್ಚುವುದೆ ಮೃತ್ಯುವರ
ನೀವು ಪೇಳ್ದಂತೆ ಕೇಳುವುದೆ ವಾಸಿಯನೆ ನಿಮಗೆ ವಜಲಿಪಿಯವ ನೃತವಹುದೆ ||೧೩||

ಧರಣಿತಳದೊಳು ತಾನು ಮುನ್ನೆಸಗಿದ ಕರ್ಮ
ಮರಳಿ ತೊಡಿಯಲ್ಪಂಕುರಹ ಗರ್ಭವಾದೊಡಂ
ಅರಿದೆನಲ್ನರರಪದಗೇನಾವರಿಯದಿದನುವಾವೆಡೆಯೊಳಾದರು ದಿಟಂ ||
ಪರಿಕಿಸಲ್ ಪೃಥ್ವಿಗೋರ್ವರೆ ಗುರುಗಳಿರೆ ಹಿರೆ ನೀ
ವರಿಯಲೀಪರಿ ಕೃತ್ರಿಮಗಳಿರ್ದೊಡಂ ನಿಮಗೆ
ಶರಣು ಬರ್ಪರೆ ಮನ್ನಿಪರೆ ನಾವು ನಮಿಸಲ್ಕೆ ಸುಮ್ಮನಿರ್ಪುದುಮಾರ್ಗವೆ ||೧೪||

ಹರಿಸಲಾಗದೊಡೆ ಹರಸಿದೊಡೆ ನಿಮ್ಮ ವರನಕೆ
ತೋರಗೊಂಬರೆ ನಿಮ್ಮ ಹಿರೆತನವು ನಿಮಗಿರಲಿ
ಹರಸಲ್ಕೆ ಮತ್ತ ಬುಧರಿಲ್ಲವೆ ಧರೆಯೊಳೆನೆ ಮಾಡಿರಲು ಮೊರೆದೆಗೆವೆ ||
ಕಾರಣವದೇನೆನುತೆ ಮಹಿಮೆ ನುಡಿದಂ ಸ್ಮರಿಸಿ
ಯರರೆ ನಾಳಿನ ದಿವಸ ಮಧ್ಯರಾತ್ರಿಲಿ ನಿನಗೆ
ಮರಣವಪ್ಪುದವಸ್ಯ ನೃಪತಿಯೇಯಲ್ಪಜೀವಿಗಳ ಪರಸಲ್ಕುಚಿತವೆ ||೧೫||

ಅರಿಯದಿರ್ದೊಡೆಯದನು ಎಂತಾದರೇನುತವೇ
ಗರಿದ ಬಳಿಕೆಂತು ಪರಸಲ್ಪಹುದು ಪರಸಿದೊಡೆ
ನರರಿಗದು ಫಲಿಸಲಹುದಿಲ್ಲದೇರ್ದೊಡೆ ಭಕ್ತರೆಯ ನುಡಿವರು ತಿಳಿಯದೆ ||
ಚಿರದಯಾಮತಿಯಿಂದೆ ಪರಸಲ್ಕೆ ದೀರ್ಘಾಯು
ಕರುಣಿಸಲು ಬೆರೆದು ನಿಮಿತ್ಯನೆನ್ನಯ ಬಾಯ್ಗೆ
ಹರಕೆಬಾರದು ನಿನ್ನ ಪೂರ್ವ ಪ್ರಾರಬ್ಧಮೆಂತಿರುವದೊ ತಿಳಿಯದೆನಮಗೆ ||೧೬||

ಮರಣವಪ್ಪುದು ನಾಳೆತಪ್ಪದದು ಪೋಗೆನಲು
ಧರಣಿಪಂ ಕೋಪಿಸುತನೆಂದ ವ್ಯೋಮಾರಾಧ್ಯ
ಗರರೆಕಾಮನಹರಿಯು ತಜ್ಜಲಂಧರನಜನುತಮ್ಮಶಿರಕಾಯ್ಕೊಂಡರೆ ||
ಸ್ಮರಜಲಂಧರವಜ ಶಿರಂಗಜಾಸುರರಿವರ

ಹರನು ಕೊಂದನವಸ್ಯ ಮುಳಿದೊಡಂ ಕೊಲ್ಬನವ
ಕರುಣಿಸಿದದೊಡಂ ಕಾಯ್ಬುಹರನಲ್ಲದೆ ಮತ್ತೆವಳಿದ ನರರಿಂದ ಬಹುದೆ ||೧೭||

ಮಲಹರನ ಲಾಂಛನವ ಧರಿಸಿ ಚರಿಸಿದಡೇನು
ನೆಲದೊಳೆಲ್ಲಾ ಜನರು ನಮಿಸಲವ ಪುರಹರನೆ
ಕಲಹವೇತಕೆ ನೀವು ಕೇಳೀದಂದದೊಳು ನಾ ನಾಳೆ ಸತ್ತರೆ ದಿಟನದು ||
ಪೇಳಬೇಕಿನ್ನು ನೀನು ನನ್ನಿಯುಳ್ಳವನೆಂದು
ನಾಳೆ ತಿಳಿಯಲಬಹುದುವೋ ಹೋಯೆನುತೇಚುನ್ನ
ಮಾಳುತವೆನ್ನಪನಾತ ತನ್ನ ಪುರಕಂ ಪೋಗಿ ಅರಮನೆಯೊಳರಸಿಯೊಡನೆ ||೧೮||

ಸ್ಮರಸುಖವ ಪಡೆದು ಮರದೊರಗಲ್ಕೆ ರಾತ್ರಿಯೊಳು
ವುರಗನೊಂದುಂ ಬಂದು ಕಚ್ಚಿ ವೊಡಮರಳಲೊಡ
ನೆರಡು ಕಡೆ ವಿಷವಲ್ಗಳೆರಡೆರಡು ನಟ್ಟ ವಿಷ ಬಿಟ್ಟು ಭೋರ್ಗರೆವುತಿರಲು ||
ವರಸತಿಯನಿತರೊಳಗೆ ನಿದ್ರೆ ತಿಳಿದೆದ್ದುರಗ
ಕರವ ಪಿಡಿದಿರೆ ರಕ್ತ ಸೋರುತಿಹ ಬಗೆಯೆಂದು
ಅದರೆ ವಿಪರೀತವಿದನೇನೆಂದು ನಡುನಡುಗಿ ಹಾಯತ್ತೊರಲುತಿರಲು ||೧೯||

ನಿಡುಧ್ವನಿಯೊಳದಂ ಕೇಳಿ ಪತಿಯೆದ್ದೊಡನಿರಕ್ತ
ತಡೆಯದದು ಕರದಿಂದೆ ಸುರಿವುದನುರಗ ನೋಡಿ
ಪೊಡವಿಯೊಡೆಯನಯಧೆಯನೊಡೆದು ಪವ್ವನಹಾರಿ ಮೂರ್ಛೆಯಗಳ್ಕೆ ಪ್ರಾಣ ||
ಸಿಡಿದು ಪೋಗಲ್ಕಾಗ ಬಂದು ಬಳಗವು ನೆಂಟ
ರೊಡನೆ ಪಡದವರು ಪರಿಜನರು ಪುರಜನರು ಬೇಗ
ವೋಡಿ ಬಂದವರೆದೆ ಮುಖಂಗಳಂ ತಾಡಿಸಿಕೊಳ್ಳುತ್ತೆ ದುಃಖವನೆಸಗಲು ||೨೦||

ಮತ್ತೆ ಗಾರುಡ ಮಂತ್ರ ಸಿದ್ಧನೊರ್ವನು ಬಂದು
ಸತ್ತವನ ನೋಡಿ ಮರುಗುತ್ತಕಟವೀ ಸರ್ಪ
ವೆತ್ತಣಿಂದೈತಂದು ಕಚ್ಚಿತ್ತು ಹರಹರಾ ಕಾಲವದು ತುಂಬಿತ ಹಹಾ ||
ಎತ್ತನೋಡಿದಡತ್ತ ಜೊಮ್ಮೆಂದು ಮಕ್ಷುಕವ
ಮುತ್ತಿಕೊಂಡಿಹವ ಕಾಲದ ಮರಣವಾದಡಿದ
ನೆತ್ತಲಾದರು ಮಂತ್ರಯೋಗದಿಂ ಬಹುಯಿತ್ನವ ಮಾಡಿವನನೆಬ್ಬಿಸುತಿದೆ ||೨೧||

ಕಾಲಮೃತ್ಯುವೆ ವೈದ್ಯ ಬಳಿಕಾವ ಯತ್ನವದು
ಮೇಲೆ ನಡೆಯದು ಮರಣಕೊಯ್ವುವಿಲ್ಲವು ತಿಳಿಯೆ

ಲೀಲೆಯೊಳಜಾಚ್ಯುತರಿಗರಿದೆನಲ್ಕೀ ನೆಲದೊಳಾವ ಬಲ್ಲಿದನಿಂದಲೂ ||
ಪಾಲಿಸುವದಾಗದೆನೆ ಮಾತಾಪಿತರು ಮುಖ್ಯ
ಘೀಳಿಟ್ಟಳುತ್ತಿರಲ್ಕನಿತರೊಳಗಾ ಸತಿಯು
ಫಾಲನೇತ್ರನ ರೂಪುವ್ಯೋಮನೇಯನು ನಿನ್ನ ಪೇಳಿದಂತಾಯಿತಕಟ ||೨೨||

ಎಂದು ದುಃಖಿಸಲಾಗ ಮಾತಾಪಿತರು ಕೇಳಿ
ಇಂದುಮುಖಿಯಿಂದದರ ವೃತ್ತಾಂತವೆಲ್ಲವನು
ಚಂದವಾಗೆದನಾಲಿಸುತ್ತಿದರ ಭಯವು ನಮಗೇಕೆಂದು ಹೆಣನಕೊಂಡು ||
ಕಂದು ಕಂಧರರೂಪ ವ್ಯೋಮನಾರಾಧ್ಯರೆ
ಗಂದು ಪೋಗುಸುತ್ತೆ ತಂದಿಹ ಶವವ ಮುಂದೆಸೆಗೆ
ಹೊಂದಿಸುತೆ ಸಾಷ್ಟಾಂಗವವೆರಗಿ ನುತಿಸುತಿರ್ದರೇನೆಂಬೆನದ್ಭುತವ ||೨೩||

ತಂದೆ ಚಿತ್ತೈಸಯ್ಯ ನಿಮ್ಮ ಭೃತ್ಯನು ಚರಣ
ಹೊಂದಿಕೊಂಡಿಹನವನವನ ಕುಂದದಲೆ ಕರುಣರಸ
ಸಿಂಧುಸಜ್ಜನವ್ಯೂಹ ಬಂಧು ಶರಣಾಗತರಿಗಿಂದುಧರ ರೂಪಕಾಯ್ಯೆ ||
ಮಂದಮತಿ ದುರ್ಗುಣ ದುರಾಚಾರಿ ದುರ್ವೆಸನಿ
ನಿಂದಕಂ ನಿರ್ದಯಂ ಕ್ರೂರಜಾರಂ ಪೂರ
ಹೊಂದಿಕಾಮಕ್ರೋಧ ಮದಮತ್ಸರವಿಮೋಹ ಪಾಪಸಮೂಹವು ||೨೪||

ಹೊಂದಿಕೊಂಡಿರ್ದಹನು ದುರ್ಗುಣವ ನೋಡದೆಲೆ
ಯಿಂದು ಕಾಯ್ದುದು ನಿನ್ನೆ ನಿಮ್ಮ ಪರಕೆಯವಿಲ್ಲ
ದಂದದಿಂದೀಗಳೆ ಚಂದವಾಯಿತು ತಪ್ಪುವುದೆ ನಿಮ್ಮ ವಾಕ್ಯವದನು ||
ಇಂದು ಧರರೂಪ ಸೂನೃತ ವಾಕ್ಯ ಜ್ಞಾನನಿಧಿ
ಬಂಧುರ ಸುಭಕ್ತರ ಸಹಾಯ ಮಹಿಮಾವರ್ಯ
ಸುಂದರ ಶರಣ ಸ್ವಾಂತಶಯ್ಯ ಕರುಣಿಸಿ ಜೀಯ ಮೂಲೋಕದಯ್ಯ ಭವ್ಯ ||೨೫||

ಸಮುದಿತ ಸರಾಗಣ್ಯ ಪುಣ್ಯ ಶರಣವರೇಣ್ಯ
ಸುಮನಸ ರವಿಮುಖಿ ಸುಶರಣ್ಯ ಗತ ತಾರುಣ್ಯ
ನಮಿತಭವಶರಧಿಗೆ ತರಣ್ಯನುತ ಕಾರ್ಪಣ್ಯಗತ ಚಿದಾರಣ್ಯಹಿರಣ್ಯ ||೨೬||

ಪೊಡವಿಯೊಡೆಯನುತಮ್ಮ ಕೃಪೆಯ ಪಡೆಯದೆ ಬರಿಯ
ಕಡು ಕ್ಷಿಹೆಳಕಾಲ ವಹ್ನಿಯ ಆಹುತಿಗೆ ಪ್ರಾಣ
ತಡೆಯದಿತ್ತನು ಚರಣಕ್ಕೊಡವಡದೆ ಕೆಡುವದಿದು ಲೋಸವಲ್ಲದೆ ಪ್ರಭುವರೆ ||

ಬಿಡದೆ ಜೋಹರಜೋಹರೆನುತ ತಮ್ಮಡಿಗಳಿಗೆ
ಪೊಡಮಡುತಲಿರ್ದನಲ್ಲಾ ಸ್ವಾಮಿ ಕರುಣಿಸುವ
ದೊಡೆಯ ಶರಣಾಗತರ ಬಿಡದೆ ರಕ್ಷಿಸು ಬಿರುದು ಮರಿಯದೀಗಲ್ ಪಾಲಿಸು ||೨೭||

ಮುಸುಡಿಚೌಡಯ್ಯಗಳಿಗೊಸೆದು ನಮಿಸಲು ಬಾಲೆ
ಅಸವಸದೊಳವಳಗಾಶೀರ್ವಚನಮುಮನೀಯೆ
ಮೋಸಿನಿಂ ಮರುದಿವಸ ಪ್ರಾಣ ಪ್ರಯಾಣವಾಗಲ್ಕವಳ ತಂದೆ ಬಂದು ||
ಲೇಸಿನಿಂದಾಗ ಸಾಷ್ಟಾಂಗವೆರಗುತೆ ನಿನ್ನೆ
ಪಾಶರಹಿತವೆ ನಿಮ್ಮ ಪರಕೆಗೊಂಡವಳೀಗ
ಅಸುಗಳೆದಳಿದು ನಿಮ್ಮ ಪರಕೆಗತಿಕುಂದಹುದು ಪಾಲಿಪುದು ದೇವಯೆನುತೆ ||೨೮||

ಪೊಡವಿಯೊಳಗುರುಳುತಿಹ ಪ್ರಾಣಿಯಂ ನೋಡವರು
ಕಡುಗರುಣದಿಂದವರಿಗಭಯವಿತ್ತಾಕೆಯ ಸು
ಸಡಗರದೊಳಿತ್ತು ಮಹಿಮೆಯ ಮೆರೆದ ಮೃಡಮೂರ್ತಿ ಅಸುಗಳೆವಳಿಗೆ ಪರಕೆಯ ||
ತಡೆಯದಾನ್ಯಾಕೆ ವಿತ್ತಪನೆಂದು ಸಂಕಲ್ಪ
ಕಿಡೆಯಾದನೇ ಮರಳಿ ಕೊಡಲಿಲ್ಲವೇ ಪ್ರಾಣ
ವೊಡೆಯನೆ ನಿಮ್ಮಡಿಯ ಪಿಡಿದವರ ಬಿಡುಪದಿದು ಧರ್ಮವೆ ಕೃಪಾಬ್ಧಿಯೆನುತ ||೨೯||

ಪ್ರಾರ್ಥಿಸುತ್ತಂ ಪ್ರಾಣದಾನವ ಕೊಡುವದೆನುತ್ತೆ
ವರ್ತಿಸುತ್ತಂ ಕೃಪಾಕಟಾಕ್ಷ ಸಮರ್ಥತೆಯ
ಅರ್ತಿಸುತಮಿಪ್ಪವರ ನೋಡಿ ದಯದಿಂದ ಭಯವೀಯದಿರೆ ಕುಂದಹುದಲ ||
ಆರ್ತನಾಥನ ಸಖನ ಭಕ್ತಿಯ ಮಹತ್ವಕಿದು
ಸಾರ್ಥಕಾಗದು ಶರಣು ಹೊಕ್ಕವರ ಕೃಪೆಯಿಂದೆ
ತುರ್ತು ಕಾಯ್ವುದು ವೊಡೆಯೆನಟ್ಟಿದದಕಂ ನಾನು ಹಿಮ್ಮೆಟ್ಟಿದೆಡೆ ಮೆಚ್ಚನು ||೩೦||

ಎಂದು ತಮ್ಮೊಳು ತಿಳಿದು ಗುರುಲಿಂಗ ಜಂಗಮವ
ಬಂಧುರದೊಳಂ ಬಿಜಯಂಗೈಸಿ ಗದ್ದುಗೆಯಿಕ್ಕಿ
ಚಂದದಿಂದವರ ಮೂರ್ತವಗೊಳಿಸಿ ಸಾಷ್ಟಾಂಗದಿಂ ನಮಿಸಿ ಚರಣದೊಳೆದು ||
ತಂದು ಜಲಗಂಧಾಕ್ಷತಾದ್ಯಷ್ಟವಸ್ತುವನು
ಯೆಂದರಾಗಂ ಚಾಂಗುಚಾಂಗು ಬಲಬಲರೆಂದು
ದುಂದುಭಿ ಮಹಾವಾದ್ಯದಬ್ಬರವದಿಕ್ತಟವಂತು ತುಂಬಿಹೊರಸೂಸುತ್ತಿರಲು ||೩೧||

ಕುಂಭವನು ತುಂಬಿ ತತ್ಪಾದೋದಕವನದಕೆ
ಯಿಂಬಿನಿಂದಷ್ಟವಿದದಿಂದರ್ಚಿಸುತ ಬೇಗ

ಕುಂಬಿನೀಶನ ಶವವ ಭಕ್ತಿ ಮಾಹೇಶ್ವರ ನಿರೂಪದಿಂ ಪ್ರಕ್ಷಾಲಿಸಿ ||
ಶಂಭುಸ್ಮರಣೆಯೊಳಾಗ ಭಸ್ಮ ಲೇಪನಗೈದು
ಹಂಬಲಿಸಿದಾ ತ್ರಿಪುಂಡ್ರ ಭಾಳದೋದ್ಧರಿಸಿ
ಶಂಭುಮಂತ್ರವ ಕರ್ಣದೊಳ್ಬೋದಿಸುತ ಕುಂಭ ತೀರ್ಥವನೆರೆದು ಮುಖದಲಿ ||೩೨||

ಅಸಮ ಶಿವಭಕ್ತಾಗ್ರಗಣ್ಯ ವ್ಯೋಮಾರಾಧ್ಯ
ಭಸಿತ ಮಂತ್ರದ್ರಾಜಸುತನ ವದನದೊಳಿರಿಸಿ
ಸಸಿನೆ ಕರುಣಾ ಸಮಗ್ರದೊಳೆಸೆದು ನೋಡುತ್ತ ತದ್ಗಣ ಸಮರ್ಪಿತವಹ ||
ಕುಸುಮ ಮಾಲೆಗಳಂಗದೊಳ್ ಧರಿಸಿ ನಸುನಗುತ
ಪಶುಪತಿಯ ಸ್ಮರಣ ಮಾತ್ರದೊಳವನ ಕರವಿಡಿದು
ಶಿಶುವೆಯೇಳೇಳೆನಲ್ಕೆದ್ದು ಮೈಮುರಿವುತ್ತೆ ವ್ಯೋಮ ಪ್ರಭುವರನಡಿಗಳ ||೩೩||

ಅತಿಶಯದೊಳಷ್ಟಾಂಗದಿಂ ನಮಿಸಿ ಕೃತಸುಕೃತ
ಗತಕಾಲ ಮೃತ್ಯು ಭಯನತಿಶಯೋತ್ಸವ ಚಿತ್ತ
ನುತಿಸುತ ಸಹಸ್ರ ಲಕ್ಷ ಕೋಟಿವಗಣಿತದೊಳಂ ಕರವ ಮುಗಿದು ನಿಂದು ||
ಪತಿತ ಪಾವನ ಪಾರ್ವತೀನಾಥ ಪ್ರತಿರೂಪ
ಶತದೊಳೊದ್ಭವ ಕಮಲನಾಥೇಂದ್ರ ಮುಖ್ಯಮರ
ನತ ಪದಾಂಭೋಜವಿಧಿ ದುರ್ಲಿಖಿತ ದೂತಪಾಪ ವ್ರಾತವಿಗತ ತಾಪ ||೩೪||

ಎಂದು ಬಹುಪರಿಯಿಂದೆ ನುತಿಸುತೆ ಭೂಪತಿಯನು
ನಂದು ನೋಡಲ್ ಕೃಪಾಸಿಂಧು ತದ್ರಾಜ ಪಿತ
ಬಂದು ಸನ್ನಿಧಿಯಲ್ಲಿ ನಿಂದು ಸಜ್ಜನವೃಂದ ಬಂಧು ಮತ್ರಾಣಕಿಂದು ||
ಇಂದು ಧರರೂಪನೈತಂದು ಯೆನ್ನಯ ವಿಪದ
ನೆಂದು ಬಾಡಬನೆನಿಸಿದೆಲೆ ತಂದೆ ನನ್ನ ಮನೆ
ಗಿಂದು ದೀವಿಗೆ ನಂದಿ ಪೋಗಿರ್ದುದಂ ಮರಳಿ ತಂದೆ ನಿನ್ನಿಂದ ತಂದೆ ||೩೫||

ಎನಗೆ ಬೇರುಂಟೆಯೆನ್ನಯ ಕುಟುಂಬವನೆಲ್ಲ
ವಿನಯದಿಂ ನೆಂಟರಿಷ್ಟರು ಬಂಧು ಬಳಗ ತತಿ
ಮನುಮಥಾರಿಯ ಭಕ್ತರೆನಿಸಿ ಪೊರೆವುದು ಭಕ್ತವತ್ಸಲವನಾಥ ಬಂಧು ||
ಧನದ ಸಖ ತದ್ರೂಪನೆಂದು ವಿಜ್ಞಾಪನವ
ಮನವಿಡಿದು ಮಾಡಲ್ ದಯಾಸಿಂಧು ವ್ಯೋಮವಿಭು
ಸನಯದಿಂದಂ ತಾಯಿತೆಂದೊಡಂಬಷ್ಟಾಗಮ ಪ್ರಯುಕ್ತಿಯೊಳು ದೀಕ್ಷಾ ||೩೬||

ಕ್ರಮಯುಕ್ತದಿಂ ಯಥಾಸಾಂಗದಿಂದೆಸಗುತ್ತೆ
ವಿಮತಿಷ್ಟಲಿಂಗಯುತರಂ ಮಾಡಿಪೊರೆದರಿದು
ವಿಮದು ಸದ್ಭಕ್ತ ಮಾಹೇಶ್ವರ ಗಣಂ ನೋಡಿದಶ್ಚರ್ಯವೆನುತ ಪಾಡಿ ||
ಶಮನ ದುರ್ಮದ ನಾಶಯತಿ ರಾಜಹಂಸನಿಗೆ
ಸುಮನ ಶರಗರ್ವಾದ್ರಿಪವಿ ಶರಣ ಕ್ಲೇಶಹರ
ರಮೆಯಾಣ್ಮನತ ಮೃತ್ಯು ದೌಂಷ್ಟ್ರ ಕ್ರೋಧೋತ್ಪಾಟನ ಕ್ಷಮಾನ್ವಿತ ಕೃತ್ಯವೆ ||೩೭||

ಘೋರಕಾಲ ಭುಜಂಗ ದುರ್ವಿಷ ವಿನಾಶವೃಷ
ವರಗಮನನಾಕಾರಭವ ದೂರ ಸುಖಸಾರ
ಗುರುಭಕ್ತ ಸುವಿರಕ್ತ ವರಮುಕ್ತ ಭವಿತ್ಯಕ್ತವವಿರತ ವಿನಾಶಯುಕ್ತ ||
ವರಭಸಿತ ರುದ್ರಾಕ್ಷಲಂಕಾರಸಮಸೂರ
ಹರಶೇಷವ ವಿರತಸ್ವೀಕಾರವ ವಿಕಾರ
ಕ್ರೂರ ದುರ್ಗುಣ ದುರಾಚಾರ ಪ್ರಹರಣಜಿತ ಸಂಸಾರತರ ಗಭೀರ ||೩೮||

ಇಂತುಕೊಂಡಾಡುತ್ತಲಹ ಗಣಂಗಳಿಗಾಗ
ಸಂತನಾವ್ಯೋಮನಾರ್ಯನು ನಮಿಸಿಯೆನ್ನ ನೀ
ವಿಂತು ನುತಿಸುವರೆ ಕಿಂಕರ ನಾನು ಶಂಖಿಸದೆ ಲೆಂಕಮಗನು ||
ಕಂತುಹರ ರೂಪನಿಮ್ಮಯ ಕೃಪೆಯ ಬಲದಿಂದೆ
ಯೆಂತಸಾಧ್ಯವನಾದೊಡಂ ಸಾಧ್ಯವಹುದು ಕೇ
ಳಿಂತೀಕಾರ್ಯವನು ಮಾಡಲೆನ್ನ ಶಕ್ಯವೇಯೆಂದು ಸಾಷ್ಟಾಂಗದಿಂ ನಮಿಸಲು ||೩೯||

ಗಣಕುಲ ಸಮೂಹರುತ್ತಾಪನಂಗೈದವರ್ಗೆ
ಮಣಿದು ಸದ್ಭಾವದಿಂದೆ ವರಶಿರ ವಿಡಿದೆತ್ತಿ
ಫಣಿಯೊಳಂ ಫಣೆಯಿಟ್ಟು ಮುಂಡಾಡಿ ಕೊಂಡಾಡಿ ಅನ್ಯೋನ್ಯಪ್ರಿಯ ವಿನಯದಿಂ ||
ಗಣಿಸಲುವಶಕ್ಯವಹ ಹರುಷದಿಂ ವ್ಯೋಮ ಪ್ರಭು
ಗಣೆಯರದೆ ಭಲರೆ ಭಾಪುರೆ ಜೀಯ ಶಿವಕಾರ್ಯ
ತಣಿಯದತಿ ನಿಯತಿಯಿಂದೆಸಗುತಿಹ ಸಾನಂದಮೂರ್ತಿ ದಿಗ್ದಂತ್ಯಮೂರ್ತಿ ||೪೦||
ಈ ಮಹಾವೀರತ್ವ ಯೀವಿದ್ಯಾ ವಿನಯಗುಣ
ಯೀ ಮಹತ್ವತೆ ಯೀ ಸುಧೀರತ್ವ ಮಜಲಮನ
ಯೀ ಮಧುರ ಮೃದುವಚನ ಸಾಮರ್ಥ್ಯವೀಸತ್ವ ಸೂನೃತ ಸುವಾಕ್ಯ ಶೀಲ ||
ಭೂಮಿಯೊಳ್ ಶರಣಾಗತರ ವಿಪದ ಸಂಹರಿಸಿ
ಕಾಮಿತಾರ್ಥವನಿತ್ತು ಪಾಲಿಪ ಕೃಪಾಬ್ಧಿ ವರ
ಸೋಮ ನೇಮ ಕಪರ್ದ ರೂಪವಿಂತಹ ಮಹಿಮೆ ಕೇಳ್ದರಿಯೆವೀ ಲೋಕದಿ ||೪೧||

ಎಂದು ಮಾಹೇಶ್ವರರ ನಿಕರವಾನಂದದಿಂ
ಸಂದು ನುತಿಸುತ್ತಿರಲು ನೃಪನಂದನಗೆ ಪ್ರಾಣ
ಬಂಧುರದ ಪಾದೋದಕವನೆರೆದು ಪ್ರಾಣಪದವೊಂದಿತ್ತು ಮಹಿಮೆ ಮೆರೆದು ||
ಇಂದುಧರನ ಪರಾವತಾರ ವ್ಯೋಮ ಪ್ರಭುವ
ನಂದದಿಂ ಲಿಂಗಾರ್ಚನೆಯನೆಸಗಿ ಗುರುಪಾದ
ದ್ವಂದ್ವವನು ಮನದಲ್ಲಿ ಸ್ಮರಿಸುತ್ತನಂತ ಮಹಿಮೆಯ ಮೆರೆವುತಿರ್ದನೀಶಂ ||೪೨||

ಪಾದೋದಕದ ಮಹಿಮೆಯಿಂತಿರುವುದೆಲೆ ವತ್ಸ
ಸಾಧು ಕರಿಬಸವ ಯತಿವರನೆ ನೀ ಕೇಳೆಂದು
ಬೋಧಿಸಿದರೊಲಿದು ಕಿಡಿಗಣ್ಣೊಡೆಯರೀ ಕಥೆಯ ಬರೆದೋದಿ ವಿಸ್ತರಿಸುವ ||
ಸದುಭಕುತಿಯಿಂದಾಲಿಸುವ ಪರಮ ಶಿವಭಕ್ತ
ರುದರದೀಪ್ಸಿತ ವ್ಯೋಮನಾರಾಧ್ಯ ಕರುಣದಲಿ
ವೊದಗುವುದವರು ಕ್ಷೇಮದಿಂದ ಬಾಳುತ್ತಿಹರು ಭೂತಳಾಗ್ರದೊಳು ಮುದದಿ ||೪೩||

ಮರುಳಸಿದ್ಧಾಚಾರ್ಯ ರಾಮಿದೇವಾಚಾರ್ಯ
ವರಪಂಡಿತಾಚಾರ್ಯ ಗುರುವು ವಿಶ್ವಾಚಾರ್ಯ
ರುರೆ ಮಧ್ಯವದನ ಸಂಜಾತ ರೇಣುಕ ದೇವರುದರ ಭವರುದ್ರಮುನಿಯ ||
ಕರದೊಳುದ್ಭವ ಮಹಂತಾಚಾರ್ಯ ಚರಣಜನಿ
ಗುರುಪರಂಪರೆಯ ಜನ್ಮನಿ ವಲದಿ ಹಿರೆಮಠದ
ಚರಪಟ್ಟವರ್ಯನುರೆ ಗುರುಮಹಂತನು ಪೇಳ್ದ ಗುರುಕೃಪೆ ಬಲತ್ಕಾರದಿಂ ||೪೪||

ಅಂತು ಸಂಧಿ - ೯ಕ್ಕಂ ಪದ ೫೮೩ಕ್ಕಂ ಮಂಗಳ ಮಹಾ

ಹತ್ತು

ಸಂಧಿ

ಪಲ್ಲವಿ : ಶ್ರೀಮದವಿರಳಗುರುಗಳಾದ ಶೇಷಮಹಿಮೆಯನು
ಸ್ವಾಮಿ ಕರಿಬಸವ ಮುನಿವರೆಗೆ ಪೇಳಿದರಿದನು
ಆಮಹಿತ ಶ್ರೀ ವೀರಶೈವ ಭಕ್ತರು ಪ್ರೇಮದಿಂದಾಲಿಪುದು ಸಂತಪ ||

ಶ್ರೀ ಪರಮ ಪಾವನ ಗಿರೀಶ ಗಾಂಗೇಯ ತಾತ
ಪಾಪ ಪರಿಹರ ಪಾರ್ವತೀನಾಥ ಗಣ ಯೂಥ
ತಾಪತ್ರಯ ವಿದೂರ ಸೋಪಾದಿ ಸಂಸಾರ ವಾಸದಹ ವೈಶ್ವಾನರ ||
ಕೋಪದಕ್ಷ ವಿಲೋಪ ಶ್ರೀಪತಿಯ ಸಮರೋಪ
ಗೋಪಶಿರ ಕನಕಗರ್ಭಾಚ್ಯುತೇಂದ್ರಂ ಸುರ
ತಾಪಸ ವಿನತ ಪರಸು ಪಂಕೇಜವನ್ಹಿ ಶಶಿಮಿತ್ರಾಕ್ಷ ಜಯಶಂಕರ ||೧||

ಇನ್ನು ಕೇಳೆಲೆ ಮಗನೆ ಶೇಷಮಹಿಮೆಯನೊರೆವೆ
ಸನ್ನುತಾಮಳ ಶುದ್ಧಸಿದ್ಧ ಪ್ರಸಿದ್ಧವೆಂ
ದುನ್ನತಾಚಾರ್ಯ ಶಿವಚರ ಶೇಷವೆಂದೊರೆವದಾ ಸಕಲ ಶಾಸ್ತ್ರಂಗಳು ||
ನನ್ನಿಯಿಂದಾ ಪ್ರಸಾದವಶುದ್ಧ ಮತಿಯಿಂದ
ದನ್ನು ಸೇವಿಸಲಿಷ್ಟಪದ ಸಿದ್ಧಿಯಂತ್ಯದೊಳ
ಗುನ್ನತವದಾದ ಸಾಯುಜ್ಯಮಂ ಸಮನಿಪುದು ತತ್ವಸಾರ ಮಹಿಮೆಯ ||೨||

ಪೇಳುವಡಸಾಧ್ಯ ಫಣಿಪತಿಗೆಂದೊಡೆನ್ನಳವೆ
ತಿಳಿದನಿತ ನಿನ್ನ ದೆಸೆಯಿಂದೊರೆವ ಶೇಷವದು
ತಿಳಿಯಲು ಪರಬ್ರಹ್ಮ ರೂಪವೆಯದಾಗಿಹುದು ಲೋಕರೆದು ಸಂಜೀವನಂ ||

ಪಲವು ಮಾತವದೇತಕೆ ಮಿಶ್ರಾರ್ಪಣದ
ವಿವರಘಳಿಲನದು ತಿಳಿದಾದ ಲಿಂಗದ ಪದಾ
ರ್ಥವದು ನಲವಿಂದಾವಾವ ಲಿಂಗಗಳಿಗೆಂದರಿದು ಅರ್ಪಿಸಲು ಬಲ್ಲ ಶರಣ ||೩||

ಭುವಿಯೊಳಗ ಕಲ್ಪಗಾತ್ರಂ ಕರಣ ಭಾವವೆಂ
ದವಿರತಂತ್ರಿ ವಿಧದೊಳ್ ಷಟ್ತ್ರಿಂಶ ಭೇದವಿಹ
ವವರಂದವನು ಅರಿಯ ಬಲ್ಲೊಡಾತನೆ ಶರಣವರಿಯದಿರ್ದೊಡೆ ನರನವಂ ||
ಶಿವಶೇಷವೆನ್ನಲದು ದುರಿತಕಾನನ ವಹ್ನಿ
ತವೆರುಜೆಯ ಗಿರಿ ವಜ್ರದಂಡ ದುಃಖಾಭ್ರಕದು
ಪವಮಾನ ಭವಗಜ ಮೃಗೇಂದ್ರ ದುಷ್ಕರ್ಮ ಕುಜಮೂಲ ಕುದ್ದಾಲವೆನಿಪ ||೪||

ಶೇಷವದು ಸವಿದು ಶಿವನೊಲುಮೆ ಪಡೆದಿಹ ಶರಣ
ರಾಶಯವ ಪೇಳ್ವೆನಾಲಿಸು ಏಕ ಚಿತ್ತದಿಂ
ಭಾಸುರೋತ್ತಮ ಬಿಬ್ಬಿ ಬೀಚಯ್ಯನೆಂದಿಪ ಶರಣಗೊಬ್ಬಗೊಳಿರಲು ||
ಪೂಶರನ ವೈರಿಯೋರ್ವನೆ ದೈವಲೋಕದೊಳು
ಪಾಶದೊಳು ಬಿದ್ದುರುಳುತಿಹ ಶಾಪಗತರೆಲ್ಲ
ಘಾಸದೈಯ್ವವನೇಕೆ ಭಜಿಪೆನೆಂದವ ತ್ಯಜಿಸಿ ಶಿವನ ಪೂಜಿಸುತಿರ್ದನು ||೫||

ಶಿವನೆ ದೈವಂ ಶಿವನಭಕ್ತರೆ ಕುಲಿಜರಂ
ದೋದಿಯುಸುರುತ್ತಿರುವ ಶಾಸ್ತ್ರಮುಂಟದರಿಂದೆ
ಭಾವಿಸಲ್ಕೀಶ ಭಕ್ತರೆ ಘನವವರ ಶೇಷಸೇವಿಸುದ್ಧರಿಪೆನೆಂದು ||
ಆವಗಂ ಶಿವಭಕ್ತರೆಸಗುವಾರಾಧನೆಗೆ
ಕಾವಹರ ಭಕ್ತನಾ ಬಿಬ್ಬಿ ಬಾಚಯ್ಯನುರೆ
ಭಾವಜಾಂತಕ ಭಕ್ತರಡಿರಕ್ಷೆ ಕೊರವುತ್ತೆ ಪಲವು ಭೂಷಣಗಳೆಸಗಿ ||೬||

ಶಿರಕರ್ಣ ಕರಕಂಠವೆದೆನೊಸಲು ಕಟಿಗಳೊಳು
ಧರಿಸುತ್ತೆ ಸಿತಭಸಿತವಂಗದೊಳು ಪೂಸುತ್ತೆ
ಭರದೊಳು ಲಲಾಟಾದಿ ಸ್ಥಾನಂಗಳೊಳ್ ತ್ರಿಪುಂಡ್ರವಧಾರಣಂಗೈಯ್ವುತೆ ||
ಮರದ ಬಂಡಿಗೆರೆಡು ವೃಷಭಗಳ ಜೋಡಿಸುತೆ
ನೀರಿನಿಂದವನೆಲ್ಲ ತೊಳೆದು ಶುದ್ಧಂಗೈಯ್ದು
ಕೊರಳೊಳಗೆ ಘಂಟೆ ಗೆಜ್ಜೆಯು ಕೋಡಣಸು ಜಾರಿ ಮುಂತಾದ ಭೂಷಣಗಳ ||೭||

ತೊಡಿಸಿ ಸಾವರ್ಣ ಬಟ್ಟೆಯ ಝೂಲಲಂಕರಿಸಿ
ತಡೆಯದಾ ಪಾದಂಗಳೊಳಂದುಗೆಗಳಿಟ್ಟ

ಮುಡಿಗಳಿಗೆ ಬಾಸಿಂಗನಳವಡಿಸಿ ರುದ್ರಾಕ್ಷಿಯಾಭರಣಗಳನು ಧರಿಸಿ ||
ಸಡಗರದೊಳಂ ಪತಾಕೆಗಳ ರಥಕವನಿರಿಸಿ
ವೊಡೆಯಣ ತೊಟ್ಟಿಲಕೆ ತೋರಣವ ಬಂಧಿಸುತೆ
ಮೃಡ ಮಹಾದೇವ ಶಂಕರನೆ ಜಯಜಯವೆಂದು ಘೋಷಘೋ ಚಾಂಗುಬಲರೇ ||೮||

ಎಂಬವರ ಮೊರೆವುತ್ತೆ ಕೇಳಿಕೆಗಳೊರೆವುತ್ತೆ
ಶಂಭು ಶರಣಗಳ ಮನದೊಳಗೆ ನೆನವುತಲುಬ್ಬಿ
ಹಂಬಲಿಸಲಾ ಭಕ್ತ ಮಂದಿರಕೆ ಪೋಗುತ್ತವರ್ಗೆ ಶರಣಾರ್ಥಿಯೆಂದು ||
ಕುಂಬಿನಿಯೊಳಷ್ಟಾಂಗದಿಂ ನಮಿಸಿ ನುತಿಸುತ್ತೆ
ಕಂಬನಿ ಕಟಾಕ್ಷದೊಳೊಗುತ್ತೆ ಹರುಷಾಶ್ರುಮಂ
ಬಿಂಬಿಸುತ ಮನದೊಳಗವರ ಕೃಪಾಬ್ಧಿಯೊಳು ತಾಂ ಮುಳುಗುತೇಳುತೆ ನೈಜದಿಂ ||೯||

ಅವರಲಿಂಗಾರ್ಪಿತವ ತೀರಿದ ಬಳಿಕಲುಳಿದ
ಭವಹರ ಪ್ರಸಾದವನು ಹೆಡಗಿ ಹೆಡಗಿಯ ತುಂಬಿ
ರವದಿಂದೆ ರಥದೊಳಗೆ ಗುಡಿಸಿ ಮಡಿವಸ್ತ್ರವನುಯಾಚ್ಛಾದಿಸುತೆ ಮುದದೊಳು ||
ಕವಿವ ಸಂಭ್ರಮದಿಂದಲುಘೆ ವುಘೆಯೆನುತಿದರ
ಭವಿಗಳಾರುಂ ಬಾರದಿರಿಯೆಂದು ಝುಂಕಿಸುತೆ
ತವಕದಿಂದಗ್ರಹಾರವ ಪೊಗುತೆ ತಮ್ಮ ಮನೆಯೊಳು ನಿಜಕುಂಭ ಸಹದಿ ||೧೦||

ಲಿಂಗಾರ್ಪಿತವನೆಸಗುತೀ ಪರಿಯೊಳನುದಿನವ
ಭಂಗನಿರುತಿರೆ ಬಾರಬರು ನೋಡಿ ಮತ್ಸರದಿ
ಮಂದನಿವ ಚೌಡಯ್ಯ ಲಿಂಗಿಗಳುಚ್ಛಿಷ್ಟವದು ವರಪ್ರಸಾದವನೆನುತ್ತೆ ||
ತಂಗಳನ್ನವ ತಂದು ತಿನ್ನುತಿಹ ಚಾಂಡಾಳ
ನಂಗವಿಸಿ ನಮ್ಮಗ್ರಹಾರವನು ಭ್ರಷ್ಟಿಸಿದ
ಭಂಗಿಸುವ ದಿವಸನೆಂಬಾಳೋಚನೆಯೊಳಿರಲ್ಕೊಂದು ದಿನ ಹಿರೆ ಭಕ್ತರ ||೧೧||

ಓಣೆಯೊಳಗೋರ್ವಲ ಶಿವಭಕ್ತ ಲಿಂಗಾಂಗಿಯವ
ಗಾಣ ಪತ್ಯಾರಾಧನೆಯನೆಸಗಿಹುದ ನೋಡಿ
ಮಾಣದಲ್ಲಿಗೆಯಂದಿನಂದದೊಳು ಬಿಬ್ಬಿ ಬಾಚರಸನತಿ ಸಂಭ್ರಮದೊಳು ||
ಹೂಣೆಯವನಿಲ್ಲದಾ ರಥವ ಸಂವರಿಸುತಾ
ತಾಣಕ್ಕುಘೆ ವುಘೆ ಚಾಂಗುಬಲವೆನ್ನುತಲಿ
ಲಾಣೆಪತಿಶಿರ ಸಕಲ ಪಾಣೆಯೆನ್ನೆಸವುತ್ತವರ ಮನೆಗೆ ಪೋಗಿ ನಮಿಸಿ ||೧೨||

ಗಣಶೇಷವನು ಮೊಗೆಮೊಗೆದು ತುಂಬಿಬಂಡಿಯೊಳ
ಗಣಿಯೆರದೆ ಪರಮಸಂಭ್ರಮದಿಂದೆ ಬಾಸಣಿಸಿ
ಕುಣಿಕುಣಿದು ಪಾಡುತಾಡುತಲದನುವೂರೊಳಗೆ ತರುತಿರಲ್ಕಾಗ ದ್ವಿಜರು ||
ವಾಣಿಗಳೊಳಳವಡಿಸಿದಡಿಗಳವರೊಗ್ಗಿನಲಿ
ಮಾಣದಾಗಲೆ ಸಮ್ಮುಖದಿ ನಿಂದೆಲೇ ಶ್ವಪಚ
ರೋಣಿಯಲಿವರುಚ್ಛಿಷ್ಟ ಪ್ರಸಾದವದೆಂದು ಸಂಭ್ರಮದೊಳಂ ತರುತಿಹೆ ||೧೩||

ಅನವರತ ಕೇಳುವೆವು ನಿಮ್ಮ ದುರ್ನಡತೆಯಿದ
ನನುಭವಕೆ ಬಂದಿತಿದು ಭ್ರಷ್ಟ ಬಾರದಿರು
ಅನುಮಾನವೇಕಿದಕೆ ಹೋ ಹೋ ನಿಲ್ಲೆನುತಾಗ ಕೈಯೆತ್ತಿ ಕೂಗುತ್ತಲೆ ||
ಜನವಿರುದ್ಧಂ ನಿಮ್ಮ ಪರಿವರ್ತನವಪಾರ
ಸನುಮತವೆ ಲೋಕದೊಳಗನುಮಾನಿಪುದು ವೇದ
ದನುವರಿಯುತ್ತಿದ್ದೆ ಭವಿ ಶುದ್ಧ ಲೋಕವಿರುದ್ಧಯೆಂದೆನಿಪ ನೀತಿಯರಿಗು ||೧೪||

ಅಳುಕದಿಂ ದೋಷಕ್ಕೆ ಜನರಿಗಾದೊಡೆ ಸ್ವಲ್ಪ
ಕಳವಳದಿಲ್ಲ ಮನಸಿಗೆಯಿನಿತು ಸಂಭ್ರಮವ
ತಳುವಿಲ್ಲದೆಸಗಲಿದು ಮದುವೆಯುತ್ಸವವೊರಿಪ್ಪ ಜಯವೋ ದಾಳಿಡುವ ಬಗೆಯೊ ||
ಕಾಳಗಕೆ ಪೋಗುವಿರ್ಯೋಧಾಳಿಡುವ ಬಗೆಯೊಯಿದು
ತಿಳಿಯದ್ಯಾಕಿನಿತಿನಿತು ಬೊಬ್ಬಾಟದೊರ್ತನವು
ಶೂಲಿಭಕ್ತನು ಸತ್ತನೋ ಕೇಳಿಕೆಗಳು ವಾದ್ಯಧ್ವನಿಯಬ್ಬರವಿದು ||೧೫||

ಸಡಗರಂಗಳು ಬರಿಯ ಠಕ್ಕಿನ ವಿಡಂಬನದ
ಗಡಬಡಂಗಳು ಚಾಗುಪೂತು ಭಲರೆಂಬ ಧ್ವನಿ
ಕೊಡವಿ ಹಳವಿಗೆ ಜಯಜಯಧ್ವಾನ ಹೆಬ್ಬರೆಯು ಕಾಳಿಕರಣೆಯು ಜಾಗಟೆ ||
ಉಡುಗದೂದುವ ಶಂಖಘಂಟೆ ಕಿನ್ನರಿ ಧ್ವನಿಗ
ಳೊಡನೆ ಚಾರಮರಾಯನಂತೆ ಭೋರೆನೆ ಭರದಿ
ಮೃಡನಕೈಲಾಸಕ್ಕೆಯೀಗಲೆಲ್ಲರು ನೀವು ಬಡಬಡನೆ ಪೋಗುತಿಹರೊ ||೧೬||

ಇಂತು ಭಯವುಳಿದಗ್ರಹಾರವೆನ್ನದೆ ನೀವು
ದೆಂತು ವುರವಣಿಸಿ ಬಂಡಿಯೊಳು ತುಂಬುತದ
ಪಂಥವೆ ಕುಲಹೀನರಧಮರೆಂಜಲವೆನ್ನದಿಂತು ತರುವಿದುಮತವಿದೊ ||
ಮುಂತೆಹೇಸದ ಗುಡಿಸಿ ಪೋಗಬಹುದೆ ನಿಮಗಂತರವೆ

ನಂತು ವಸ್ತ್ರವ ಮುಚ್ಚಿ ಗಹನವಂ ಮಾಡಿತದ
ನಂತರವೆ ಬೆರತೆದನು ತರುವುದುಚಿತನೆ ಜಾತಿವಂತರಿಗೆ ಭ್ರಷ್ಟನಡೆಯು ||೧೭||

ಪಿಡಿದು ನೋಡಿದರೋಳರಸಲ್ಕೊಂದು ಮಾದಡೆಯು
ಪಡೆಯಬಹುದೆ ವಿಶೇಷವನನಾಚಾರವಿದು
ಬಿಡು ಬಿಡ್ಯಾತರದ ಮಾತಿದಡಿಗಡಿಗೆ ಕೂಗುತಿದೆ ಮೃಡನಾದೊಡಂ ಮೆಚ್ಚನು ||
ಪೊಡವಿಗಚ್ಚರಿ ನಿಮ್ಮ ಭಕ್ತಿ ನಡತೆಯದೆಮಗೆ
ತಡೆಯದೆವೊಡಂಬಡಿಕೆಯಾಗದಿದಕಂಜುವೆವೆ
ನಡೆಹಿರೆತನವ ಕೆಡಿಸಿಕೊಳದೆ ಹೂರಮಡುವೊಗಳಿರಲು ಬ್ಯಾಡೆನಲು ಕೇಳಿ ||೧೮||

ಗಾರುನುಡಿಗಳದೇಕೆ ನುಡಿವಿರೆಲೆ ಬಡಮತಿಯ
ನರರೆ ಮೂದಲಿಸಿ ಚೀರುತ ನಿಃಕರಿಪುದೆಮಗೆ
ಮೀರಿನುಡಿಯಲು ನಿಮ್ಮ ಪವಣೆ ಶಿವಭಕ್ತರ್ಗೆ ದೂರುವದು ಮತವೆ ನಿಮಗೆ ||
ಗೋರೆಗಳಿರ್ಯಾ ನೀವು ಸರಿಯೆ ಲಿಂಗೈಕ್ಯರಿಗೆ
ತೂರಿ ಕಳೆವುದೆ ನಿಮ್ಮನೀ ಘಳಿಗೆಯೊಳು ನೋಡು
ಹಾರಿ ಹೋಗುವ ಹೊಳ್ಳಗಳಿರ್ಯ ನಮ್ಮೊಳಗೀಗ ಬೇಗ ಮಾಡದಿಂ ನೀವು ||೧೯||

ಸೊಕ್ಕಲಾಗದು ಶಿವನಭಕ್ತರೆದುರಿಗೆ ನೀವು
ಮಿಕ್ಕ ನುಡಿಯಲ್ತಕ್ಕುದಲ್ಲ ನಿಮ್ಮಯ ಬಾಯ್ಗೆ
ತಕ್ಕ ತುತ್ತವ ಕೊಳ್ಳಿರಭಿಮಾನ ಕೆಡಿಸಿಕೊಳದಾವೆತ್ತ ನೀವೆತ್ತಲು ||
ಬೆಕ್ಕಸದ ನುಡಿಯ ನೀವಾಡುವಿರಿ ನುಡಿಗಳನು
ಅಕ್ಕುವೆವೆ ನಿಮಗೆ ನಿಮ್ಮೊರೊಳಿರುವುದು ಸಾಕು
ಸಿಕ್ಕುವರೆ ಹರಭಕ್ತರಾರಿಗಾದರು ನಮ್ಮ ನಿಮಗೆ ಕಾರಣವದೇನು ||೨೦||

ಕುಂಜರಾಸುರವೈರಿ ಪರಮ ಪ್ರಸಾದವನು
ಯೆಂಜಲೆಂಬರಿ ಪಾಪಕಂಜದಲೆ ರೂಕ್ಷಕರ
ಭಂಜಿಸುತ ಯಮನರಕ ಪುಂಜದೊಳ್ ರವಿಶಶಿಗಳಿರುವನಕ ಪತನವಹಿರಿ ||
ಕಂಜನಾಭನೆ ದೇವನೆಂದು ವಚಿಸುತ ವ್ಯಾಸ
ರಂಜಿಸುವ ತೋಳ್ಗಳೆರಡನು ಕಳೆದುಕೊಳನೆ ತಾ
ನಂಜುಗೊರಳನ ಸೊಮ್ಮಿದಾವುದಾದರು ಬಿಡದು ನಿಂದಿಸಿದ ಪ್ರಾಣಿಗಳಿಗೆ ||೨೧||

ಹರನ ಭಕ್ತರು ಮುನಿದೊಡಂ ನೀವಿದಕೆಯೊತು
ತರಹರಿಸಲಾಪ ಬಲುಮೆಯದುಂಟೆ ಬಡಪಾರ್ವ

ರರರೆನೆನದರಿಗಮೃತ ದೂಷಸಿದವರಿಗೆ ಮಹಾಪ್ರಳಯಾಗ್ನಿ ರೂಪವಹುದು ||
ಅರಿಯಲಾ ಬೇಗೆಯೊಳಗ್ಹೊಗುವ ಮಿಡತೆಯತೆರದಿ
ವುರಿದು ಪೋಗುವಿರಲ್ಲದೆ ವುಳಿದಿಹರೆ ನೀವು
ಚರಪ್ರಸಾದಕೆ ತಿರಸ್ಕರಿಸಿ ನುಡಿದೊಡೆ ನರಕ ತಪ್ಪುದಿದು ತಿಳಿಸತ್ಯವು ||೨೨||

ಗರ್ಭದಲಿ ನೀವೆಂಬಿರಾಗಮನ ಕಾರ್ಯವದು
ಸಬ್ಬರಿಗೆ ತಿಳಿಯಲಾಪುದೆ ವಬ್ಬವೆನ್ನವಾ
ವೆಬ್ಬೆಟ್ಟುವೆವು ನಿಮುಷ ಮಾತ್ರದೊಳು ಬಡಪಾರ್ವರಂ ಕೊಲುವುದೊಂದು ಘನವೆ ||
ಕೊಬ್ಬಿದಿರಿ ನೀವೆನಲು ಕೇಳಿ ಕೋಪದಿ ಸರ್ವ
ರುಬ್ಬು ತಮ್ಮಬ್ಬಸವಗೊಂಡು ಪಾರ್ವರುಮಿರದೆ
ಬಿಬ್ಬಿಬಾಚಯ್ಯಂಗಳೊಡನೆ ಯಿಂತೆಂದರಾಗ್ರಹಿಸಿ ನಿಷ್ಠುರವಚನವ ||೨೩||

ಬೋಳು ಗೊರವರು ಹಲವರೆಂಜಲಂತಂದಿದನು
ಹೇಳುವಿರಿದರ ಘನವ ಚೇಳು ಕರಡಿಯೊ ಹುಲಿಯೊ
ಹೇಳಿಗೆಯೊಳಿರುವ ಸರ್ಪವೊ ಗಜವೊ ಹರಿಯೋ ಶರಭವೊ ತಾನು ಭೇರುಂಡವೊ ||
ಕಾಳ ಕೊಟವೊ ಸಿಡಿಲು ಕಾಡ್ಗಿಚ್ಚೊ ಕಡಲುರಿಯೊ
ಕಾಳನೊ ಮಹಾಮಾರಿಯೊ ಯಿದಕ್ಕಂಜುವೆವೆ
ಹೇಳುವಿರಿದನು ಭಯಂಕರವಾಗಿಯುಂಟೇ ನಾವರಿದಿಹುದೇ ಬರಿದೆ ನೀ ||೨೪||

ವಾಮನಾರ್ಯರು ಮಂಚಿ ದಾಮೋದರಂ ಕೃಷ್ಣ
ರಾಮಭಟ್ಟರು ಕೂಚಿ ನಾರಾಯಣಾದಿ ಬಲ
ರಾಮಪಂಡಿತ ವಿಷ್ಣು ಕೇಶವಂ ವೈಕುಂಠ ಮಾಧವ ಗೋವಿಂದರು ||
ಸಾಮವೇದಿಯು ಅಚ್ಯುತಂ ಜನಾರ್ಧನ ಹರಿಯು
ಹೋಮ ಭಾಸ್ಕರ ವಾಸುದೇವ ಪಿತಾಂಬರ ಸು
ಕಾಮನೋಪಾಧ್ಯ ನರಸಿಂಹ ಶ್ರೀಧರನಂತರಧರವನಂ ಮುಕುಂದ ||೨೫||

ಮಿಗಿಲು ಧೋತ್ರವು ಮಡಿಯು ದರ್ಭೆಸಂಬಳಿಗಳ
ಬೇಗನೊಂದೆಡೆಯಲ್ಲಿ ಮಡಗಿಯಟ್ಟೆಯಗೊಂಡು
ಕೂಗುತ್ತಿಡಿ ಹಿಡಿ ಬಂಡಿಯೆಂದುಯೆತ್ತಿನ ಕೊರಳ ಜತ್ತಿಗೆಗಳನು ಬಿಚ್ಚುತೆ ||
ಹಾಗೆ ಸರ್ವರು ಸುತ್ತಲುಂ ಮುತ್ತಿಕುನಿಕಿಲವ
ನಾಗಮರಿವುತ ತೋರಣಂ ಪರಿದು ಕೇತನವ
ಸಾಗಿ ಮುರಿವುತಲಿತ್ತೆಲವರಬರಲೀ ಸದಿರಿಯೆಂದು ಸಂದಣಿಸುತಿರಲು ||೨೬||

ನೋಡಿಬಾಚಯ್ಯಗಳು ವೋಡುಗಳಿರ್ಯಾ ನೀವು
ನೋಡಲಾಪರೆ ನೋಡಬನ್ನಿ ನೀವೀಗೆನುತೆ
ಗಾಢನಾಚ್ಛಾದಿಸಿದ ವಸ್ತ್ರವನು ತೆಗೆದು ಸಿದ್ಧಪ್ರಸಾದವನು ಪಿಡಿದು ||
ವೋಡಿರೆಲೆ ಕಲ್ಪಾಂತದಹನ ಬರುತಿದೆಯೆಂದು
ರೂಢಿಸಿದ ತತ್ಪ್ರಸಾದವ ಮೊಗೆಮೊಗೆದುಯುತ್ತೆ
ಸಿಡಿಲೊ ಮಿಂಚೊ ಗಗನಮಣಿಯೊ ಕೆಂಡವೊ ವುರಿಯೊ ಯೆನಲದು ಪ್ರಕಾಶಿಸುತಿರೆ ||೨೭||

ಭೂಸುರರಿದ ನೋಡಿ ಭಯಂಗೊಳಲ್ಪುರದ ಕಡೆ
ವಶವಲ್ಲದಿಹ ಪ್ರಸಾದವ ಚೆಲ್ಲಲೊಡನೆ ತಾ
ಮಸಗುತ್ತೆ ಛಿಳಿ ಛಿಳಿಲೆನೆ ಛಿಟಿಲ್ಛುಗಿಲೆನುತೆ ನೆಗೆದು ವುರಿಯದು ಸುತ್ತ ||
ಯಶ ದಿಸ್ಪುಟದ ಭಯಂಕರ ನಿಟಿಲ ನೇತ್ರದಿಂ
ಭಸಕನುದ್ಭವಿಸಿದನಗ್ನಿಯ ತ್ರಿಪುರದ ಸುಡುವಂತೆ
ಯೆಸಕವಾಗಿಹ ಪುರದೊಳಿರುವ ವಿಪ್ರರ ಸದನಗಳ ಸುಟ್ಟು ಕರಿಯೊಂದಲು ||೨೮||

ಗುಡ್ಡ ಹರಿಭ್ರಷ್ಟನಾಲಯವುರಿದು ಪೋಯಿತ್ತು
ದೊಡ್ಡ ರಾಮಾಚಾರಿಗಳ ಸದನ ವುರಿಯಿತ್ತು
ಹೆಡ್ಡ ದಾಮೋದರನ ಗೇಹ ದಹನವಾಯ್ತು ವಿಷ್ಣುವಿನ ಮನೆ ಸುಟ್ಟಿತು ||
ದೊಡ್ಡ ಹೊಟ್ಟೆಯ ಮಾಧವನ ಗೃಹವು ದಹಿಸಿತ್ತು
ಅಡ್ಡಿಗಾಲ್ಕೆತಯನ ಭವನ ದಹನವದಾಯ್ತು
ಗಡ್ಡದಾದಿತ್ಯ ನರಹರಿ ಮುಖ್ಯ ವೇಷ್ಮಗಳನೆ ಧೂಳಿಪಟವಾದವು ||೨೯||

ಹೊಟ್ಟೆಯಚ್ಯುತನಾಲಯವ ಹೊಟ್ಟಿಕೊಂಡಿತದು
ಸುಟ್ಟವಾ ಭಾಸ್ಕರನ ಮನೆಯಾಗ್ನಿ ಕರಗೃಹವು
ಪಟ್ಟವರ್ಧನ ನಾರಸಿಂಹನರಮನೆ ಕೊಟ್ಟಿಗೆಗಳೊಪ್ಪು ದಹಿಸಿದವು ||
ಕೆಟ್ಟವರಿಯಮಭಟ್ಟವಪ್ಪಣಂಗಳದಿಷ್ಟ್ಯ
ಕಟ್ಟುರಿದವಾಗಮ ಮಂದಿರವನಾಗ
ಭ್ರಷ್ಟಚಾರವು ಯಜ್ಞಕರ್ಮ ಬಾಗೆಗಳವರಮನೆ ಕಿಚ್ಚು ಮುಸುಕಿತಮಮ ||೩೦||

ಆಗಮಿಕರಮನೆಯು ಕರಿಕರಕವಾಯಿತ್ತು
ಆಗ ಸನ್ಯಾಸಿಗಳ ಮಠವ ಬೇಯಿತ್ತಕಟ
ಸೊಗಸೊಗೆವ ಸೋಮಯಾಜಿಯ ಸದನ ವಿಧೂಮ ಧಾಮವಾಯ್ತೆನಿತು ಪೇಳ್ವೆ ||
ಹಾಗೆ ವಿಷ್ಣು ಸ್ವಾಮಿಗಳ ಮಂಟಪವ ಬೇಯಿ

ತಾಗಲಾ ಸಾಮವೇದಿಯ ನಿಕೇತನವುಸಿ
ತೊಲುಗೆಯ ಮಧ್ವಭಟ್ಟನ ಮನೆಯು ದಳ್ಳುರಿಗೆ ನಿರ್ನಾಮವಾಯಿತಯೊ ||೩೧||

ಇಂತು ಶಿವದೂಷಕರ ಗೃಹಗಳನು ದಹಿಸಿದವ
ನಂತ ಶಿವಭಕ್ತರ ಮಂದಿರದ ಕಡೆಯೊಂದು ಕಿಡಿ
ಯೆಂತಾದೊಡಂ ಯಿಲ್ಲದಿರಲದಂ ನೋಡಿ ಯತಿಯರಾಶ್ಚರ್ಯರಾಗುತ್ತಲೆ ||
ಸಂತತಾನಂದದಿಂ ಸರ್ವಭಕ್ತರು ಪ್ರೀತಿ
ವಂತರಾಗುತ್ತುಬ್ಬಿ ಪಾಡುತಾಡುತಲಿರಲು
ಕುಂತವೆಸೆಯಲಿ ಚುಚ್ಚಿದಂತಾಗೆ ಬಾಡಬರು ನಿಂತು ಬೊಬ್ಬಿಡುತಲಾಗ ||೩೨||

ಭೀತಿಯುತ ಹೃದಯರಾಗುತ್ತಿ ಕೆಳಬರುವೋಡ
ಲಾತಿಶಯದಿಂ ಕೆಲಬರಾ ಮನೆಯೊಳಗೆ ಸಿಕ್ಕು
ಘಾತವಾಯ್ತೆಂದವರು ಮಿಡುಕಿ ಸತ್ತರು ಮಿಕ್ಕ ಪ್ರಾಣಿಗಳು ಶಿವಲಿಂಗದ ||
ಖ್ಯಾತಿ ದೇಗುಲಗಳನು ಹೊಕ್ಕು ಬದುಕಿದರುಳಿದ
ನೀತಿ ಹೀನರು ತಲೆಕರಂಕಾಲ ಮೈಗಳನು
ಯಾತನೆಯೊಳಂ ದಹಿಸಿ ಕೊಂಡರು ವಿಶೇಷ ತಮ್ಮಯ ಗಡ್ಡ ಮೀಸೆಗಳನು ||೩೩||

ಉರಿವುತಿರೆ ತಾಳಲಾರದೆ ಗಡಿಗೆ ಭಾಷೆಯೊಳ
ಗಿರದೆ ಮುಳುಗಿದರುಟ್ಟ ಸೀರೆಗಳುರಿಯಲಕಟ
ಪಾರದುಃಖದಿಂ ಕೆಟ್ಟೆವೆನುತೆ ದೈನ್ಯಬಟ್ಟು ಮಾಹೇಶ್ವರರ ಚರಣಕೆ ||
ಶರಣುಗೈದುಳಿದವರು ಸುಟ್ಟು ಕಳೆಯದ ಮುನ್ನ
ಶರಣರ ಗೃಹವನೊಂದಿ ಬದುಕುವರು ಮಟ್ಟಿಯನು
ವರಸಿ ಭಸಿತವನಿಟ್ಟುಕೊಂಬುವರು ವುರಿಯಿಂದಲು ಪ್ರಲಾಪಿಸುತಲೋಡುತೆ ||೩೪||

ಬಿಬ್ಬಿ ಬಾಚಯ್ಯಗಳ ಪಿಂದಿರ್ದು ಬದುಕುವರು
ಹಬ್ಬಿ ಸುಡುತಿಹ ಕಿಚ್ಚುವಿಂದೆ ಬೆದಬೆದನೆ ಬೆಂ
ದಬ್ಬರಿಸುತರ್ಧ ಮಡಿದೀಪ್ರಕಾರದೊಳುಳಿದರರ್ಧ ನಡೆಗೆಟ್ಟು ನೆಲಕೆ ||
ಉಬ್ಬಸವಿಡುತ್ತೆ ಮರವಟ್ಟು ಬಿದ್ದರು ಸರ್ವ
ರೊಬ್ಬರೊಬ್ಬರು ತೊಗೆಯ ಚನ್ನಪ್ಪ ಮಂಡಿಗೆಯ
ನಿಬ್ಬರದ ವಸುದೇವ ವೇದಾಂತಿ ಕೃಷ್ಣಪ್ಪ ಪೌರಾಣಿ ಬಲಭದ್ರನು ||೩೫||

ಹೆಗಲ ವಿಟ್ಟಣಂಗಳು ಋಗ್ವೇದಿಗಳು ಸಿಂಗ
ಲಲಿತ ರವಿ ಪ್ರಡಿಪಾಸಿ ಜಕ್ಕಣ್ಣುರೋಹಿತರು

ನಲೆಸಾಯಿ ದೇವಗಳು ಮಲ್ಲಿಭಟ್ಟರು ಕೃಷ್ಣಭಟ್ಟರು ಜೀವನ ಭಟ್ಟರು ||
ಸುಲಲಿತ ಸುಕೇಶವನು ಶ್ರೀ ವಲ್ಲಭನು ಬ್ರಹ್ಮ
ಫಲಿತ ಪಂಡಿತರು ಗೋಪಾಲ ಭಟ್ಟರುಗಳುರೆ
ನಲವಿನಿಂ ಮೆಳ್ಳಗಣ್ಣಾಲ್ಲಾಳಗಾಥದೊಳ್ಗೊಟ್ಟಿ ಕೂಟಿಗಳ ಮೊದಲು ||೩೬||

ಗೊಬ್ಬೂರೊಳಿರುವ ಹೆಬ್ಬಾರುವರು ಬಸವಳಿದು
ಸಬ್ಬರುಂ ನಿಮ್ಮ ಭಕ್ತರೆ ಗತಿಯೆನುತ್ತೆ ನುಡಿ
ದೊಬ್ಬರೊಬ್ಬರು ನಿಮ್ಮ ಧರ್ಮದ ಕವಿಲಿಯಮ್ಮ ಕಾಯ್ವುದೆಂದೆನುತೆ ನಮಿಸಿ ||
ಅಬ್ಬರಿಸುತಳುತ ದೆಸೆದೆಸೆಗೆ ಬಾಯ್ಬಿಡುತಾಗ
ತಬ್ಬಿಬ್ಬಿನಿಂ ನಿಮ್ಮ ಪಾರ್ವರು ನಾವೆನುತ್ತೆ ಸಲೆ
ವುಬ್ಬಿನಿಂ ನಿಮ್ಮ ಚರಣಕೆ ಮೊರೆಯ ಬಿದ್ದೆವೆಮಗಿನ್ನು ಕಾಯ್ವುದು ಕೃಪಾಬ್ಧಿ ||೩೭||

ದೀನರುಗಳಂ ಪುಣ್ಯ ವಿಹೀನರುಗಳಂ ವಿಗತ
ಮಾನರುಗಳಂ ಖಳರ ಭ್ರಷ್ಟರತಿಯವಗುಣಾ
ಹೀನರುಗಳಂದಷ್ಟ ಮಾನವರು ಅತಿಕಷ್ಟ ಮಾನಸರನಿಂದ ಪರರ ||
ಜ್ಞಾನಹೀನರಧಮನಪಗತ ಕ್ರಿಯಾಸಾರ
ತಾನಮಾನದನರಿಯದ ಜ್ಞಾನಿಗಳಧರ್ಮ
ಹೀನರುಗಳಂ ಪರಮದುರಿತ ಕಾರ್ಯರನಲ್ಪ ಭಾಗ್ಯರನು ಕಾಯ್ದುದೊಲಿದು ||೩೮||

ಎಂದು ಬಹುಪರಿಯಿಂದ ತಮ್ಮ ದೂಷಿಸಿಕೊಳುತೆ
ನೊಂದು ನುತಿಸುತ್ತಲಷ್ಟಾಂಗದಿಂ ನಮಿಸುತಲಿ
ಇಂದು ಧರನರೂಪ ನಮ್ಮವಗುಣ ನೋಡದಲೆಯಿಂದುದ್ಧರಿಸುವುದೆನ್ನುತೆ ||
ಚಂದದಿಂ ಜನಮೇಜಯಂ ಕರುಣದಿಂದಿತ್ತ
ಬಂಧುರದಗ್ರಹಾರವನಿಂದು ನಿಮ್ಮಿಂದ
ಸುಂದರದೊಳು ಪುನಹ ರಚಿಸಿತ್ತು ಧಾರೆಯರೆದೆಮ್ಮ ಪಾಲಿಪುದುಯೆಂದು ||೩೯||

ಅಡ್ಡ ಬಿದ್ದೇಳದಿರೆ ನೋಡುತ್ತೆ ಕರುಣದಿಂ
ದಡ್ಡ ದ್ವಿಜರರಿಯದಲೆ ಅಧರ್ಮಕಾರ್ಯವನೆಸಗಿ
ಯಡ್ಡರಾಗೀಗವೊಕಿ ಹೊಕ್ಕು ತೃಣಕಚ್ಚಿದ ಬಳಿಕ್ಕಿವರ್ಗೆ ಮಾಳ್ಪದೇನು ||
ಲಡ್ಡ ಮನುಜರಗೂಡ ಗೊಡ್ಡಾಟವೇತಕ್ಕೆ
ಗಿಡ್ಡಮರುಗಳೆ ತಾಳವೃಕ್ಷಕ್ಕೆ ಸರಿಯಾಗುವುದೆ
ದಡ್ಡ ಜನರ ನುಡಿಗಳಿಗೆ ಕೋಪವಂ ತಾಳಲಾಗದೆಂದೆನುತ ತಿಳಿದು ||೪೦||

ಮರುಳ ಮನುಜರೆ ನೋಡಿರೆಂದೆನುತೆ ದಯದಿಂದೆ
ಕರಯುಗವನೊಡ್ಡಿ ಝಗ ಝಗಿಸುತಲಿಹ ಕಾಲಾಗ್ನಿ
ಸರಿಯಾಗಿ ಸುರುತಲಿಹ ತತ್ಪ್ರಸಾದವನು ಆಹ್ವಾನಿಸಲು ಪೂರ್ವದಂತೆ ||
ವರಶೇಷ ರೂಪದಿಂ ಬರಲು ತದ್ವಿಜರಗೃಹ
ಪರಮ ಸುಂದರರೊಳೆಂದಿನ ತೆರದಿಯೊಪ್ಪಿದವು
ಮರಣವೈದಿಹ ಜನ ಸಜೀವಮಾಗಿರೆ ನೋಡಿಯಾಶ್ಚರ್ಯಚಿತ್ತರಾಗಿ ||೪೧||

ವರ ವಿಪ್ರಉನ್ನತರಾಗಿ ನುತಿಸುತ್ತಿರಲು
ಪರಮ ಬಾಚರಸ ಹರುಷದಿನಭಯದನಿತ್ತವರ್ಗೆ
ಕರುಣಿಸಿದನೆಲೆ ಕರಿಬಸವನ ಪುತ್ರನೇ ಕೇಳು ಗುರುಕರುಣ ಪಡೆದವರಿಗೆ ||
ಶರೀರವೆಯಷ್ಟಾವರ್ಣವಾಗಿಹುದು ಕೇಳು
ಅರಿಯಲಾ ನಾಸಿಕದೊಳಂ ಶೇಷ ಜಿಹ್ವೆಯೊಳು
ಚರಣಜಲ ನೇತ್ರದೊಳು ರುದ್ರಾಕ್ಷಿ ತ್ವಕ್ಕಿನೊಳು ಭಶಿತ ಶ್ರೋತ್ರದೊಳು ಮಂತ್ರ ||೪೨||

ಹೃದಯದೊಳ್ಗುರು ಬ್ರಹ್ಮ ರಂಧ್ರದಲ್ಲಿಯೆ ಲಿಂಗ
ಮುದದೊಳು ಶಿಖಿಯಲ್ಲಿ ಜಂಗಮವು ಸಂಬಂಧ
ಪದುಳದೊಳ್ಪಶ್ಚಿಮವೆಸರ್ವ ಮೂಲವದಿಹುದು ತಿಳಿವುದಷ್ಟಾವರ್ಣವು ||
ವಿಧಿಯ ಪೇಳುವೆ ನಿರ್ಗುಣಷ್ಟಾವರ್ಣಭೇದ
ಅದು ತಿಳಿದೊಡವನೆ ನಿರ್ಗುಣಯೋಗಿಯೆನಿಪಸದ
ತದಭಿನವ ಸುಜ್ಞಾನ ಜನಿಸಬಾತನೆ ಶಿವನು ಸಂಶಯವಿಲ್ಲವಿದಕೆ ||೪೩||

ಮನುಜನಲ್ಲದ ಗುರುವು ಶಿಲೆಯಲ್ಲದಿಹಲಿಂಗ
ಸನುಮತದ ನರನಲ್ಲದಿಹ ಚರನು ಭಸ್ಮನಂ
ತಾನಲ್ಲದಿಹ ಭೂತಿವೃಕ್ಷ ಬೀಜವಿಲ್ಲದ ವಿರಳ ಸುರುದ್ರಾಕ್ಷಿಯು ||
ವಿನುತ ವರ್ಣಗಳಿಲ್ಲದಂತ ಮಂತ್ರ ಸಲಿಲಯಂ
ತಾನಲ್ಲದಿಹ ಚರಣವಾರಿ ವಶನವ ನಲ್ಲ
ದನಘ ಸುಪ್ರಸಾದವಿದಬಲ್ಲಾತನೆ ಪರಮ ಸದ್ಗುರು ಯತಿ ಶ್ರೇಷ್ಟನು ||೪೪||

ಅರುವೆ ಗುರು ಅರುವೆ ಗುರುವೆಂದು ತಿಳಿವುದೆ ಲಿಂಗ
ವರಿದು ವಾನಂದಿಸುವದದುವೆ ಜಂಗಮವಿದರ
ವರಪ್ರಕಾಶವೆ ಭೂತಿಜ್ಞಾನಾಗ್ನಿ ಹರನಯನ ಮೊದಲ ಮಾತವೆ ಮಂತ್ರವು ||
ಗುರುಕರುಣವದುವೆ ಗುರುಚರಣ ಜಲ ನಿಜವಾದ

ಪರತರ ಪರಂಜ್ಯೋತಿ ನಿತ್ಯ ನಿಷ್ಕಳ ವಿಮಲ
ಪರಿಪೂರ್ಣ ಬ್ರಹ್ಮದಿರವರುವೆ ತಾನೆಂದು ತಿಳಿದಿರುವೆ ವರಸುಪ್ರಸಾದ ||೪೫||

ಇಂತು ಅಷ್ಟಾವರ್ಣಭೇದಮುಂಟರು ತಿಳಿಸ
ಮಂತು ಲಿಂಗಾಂಗೈಕ್ಯ ಸುಗುಣ ಸುಜ್ಞಾನವನು
ಭ್ರಾಂತಳಿದು ತಿಳಿಯಬಹುದೆಂತೆನಲದರ ವಿಧಿಯ ಮುಂತ ವರದಿಂದೆ ನಿನಗೆ ||
ಸಂತಸದೊಳಂ ಪೇಳ್ವೆನೆಂದು ಕಿಡಿಗಣ್ಣೊಡೆಯ
ರಂತು ಸದ್ಗುಣನಂತ ಕರಿಬಸವಯತಿ ವರಗೆ
ಪಂಥವಿಡಿರದನೀ ಮಹಂತಶೇಷದ ಮಹಿಮೆ ಬರದೋದಿ ಹೇಳಿದವರ್ಗಿ ||೪೬||

ಸಂತಸದೊಳೇಕ ಚಿತ್ತದೊಳಾಲಿಸುವ ಭಕ್ತಿ
ವಂತರಿಗೆ ಕಂತುಹರನೊಲಿದವರ ಮನದಿಷ್ಟ
ವಂತು ಕರುಣಿಸುವನಿದು ದಿಟ ಸತ್ಯಸತ್ಯವೆಂದಾಢ್ಯರರಿದುಂ ಮುದದೊಳು ||
ಇಂತಿದಿಲ್ಲಿಗೆ ದಶಮಸಂಧಿಯಾದವು ವಿಮಳ
ಗ್ರಂಥವು ಕೆಲವದಿಹವು ಪದಗಳ ಸುಶಂಕೆಯದು
ಸಂತರಾಲಿಪುದಾರು ನೂರು ಮೇಲ್ಯೆವತ್ತೈದಿರುವವಿದು ಸತ್ಯವು ||೪೭||

ಮರಳ ಸಿದ್ಧಾಚಾರ್ಯ ರಾಮದೇವಾಚಾರ್ಯ
ವರಪಂಡಿತಾಚಾರ್ಯಗುರುವು ವಿಶ್ವಚಾರ್ಯ
ರುರೆ ಮಧ್ಯವದನ ಸಂಜಾತ ರೇಣುಕದೇವನುದರಭವ ರುದ್ರಮುನಿಯ ||
ಕರದೊಳುದ್ಭವ ಮಹಂತಾಚಾರ್ಯ ಚರಣಜನಿ
ಗುರುಪಂಪರೆಯ ಜನ್ಮನಿ ವಲದಿ ಹಿರೆಮಠದ
ಚರಪಟ್ಟವರ್ಯನುರೆ ಗುರುಮಹಂತನು ಪೇಳ್ದ ಗುರುಕೃಪೆ ಬಲತ್ಕಾರದಿಂ ||೪೮||

ಅಂತು ಸಂಧಿ- ೧೦ಕ್ಕಂ ಪದ ೬೬೫ಕ್ಕಂ ಮಂಗಳ ಮಹಾ

ಹನ್ನೊಂದು

ಸಂಧಿ

ಪಲ್ಲವಿ : ಸಗುಣಬೋಧೆಯನೊಲಿದು ಕೆಂಡಗಣ್ಣಾರ್ಯರುರೆ
ಅಘಹರನು ಕರಿಯಬಸವರಸರಿಗೆ ಪೇಳ್ದರದ
ಬಗೆವಡೆದು ಪರಮವಭ್ಯಾಸಿಗಳು ಕೇಳ್ವುದುಚಿತವದೇಕಚಿತ್ತದಿಂದ ||

ಕನಕ ಭೃದ್ಧದಿಧರ್ಮಕರಧೃತ ಕುರಂಗವರ
ಸನಕ ಸುಸನಂದನ ಸನತ್ಸುಜಾದ್ಯಖಿಲ ಮುನಿ
ಮನುನತ ತಪದಾಂಬೋಜ ಕುಮುದ ಭಾಂದವ ಮಿತ್ರವೀತಿ ಹೋತ್ರವಿಲೋಚನೆ ||
ಘನಮಹಿಮ ವಿಧುಕಲಾ ವೇಷ್ಟನ ಜಟಾಪಟಲ
ಮನಸಿಜ ವಿಕಾರ ಮಹಿ ಭೃತ್ಪ್ರತೀಜನ ವಜ್ರ
ವಿನಮಿತರ ಮನದಿಷ್ಟವೀವ ಭವದದ ದಾವಮೇನ ಕಾತ್ಮಜಧವಜಯ ||೧||

ಪರಮಶ್ರೀ ಗುರು ಸಚ್ಚಿದಾನಂದ ಮೂರ್ತಿತವ
ಚರಣಕೊಂದಿಸಿ ಬಿನ್ನಪವ ಮಾಳ್ಪೆನೆಂತೆನಲು
ಮೂರು ವಿಧದಷ್ಟಾವರಣ ಕರುಣದಿಂ ಪೇಳೀಪುದ್ಧರಿಸಿದಿರಿಯೆನ್ನನು ||
ಗುರುವರ್ಯ ವಿನ್ನೆನಗುದಾಸೀನವಿಲ್ಲದಲೆ
ದರಸುಗುಣ ಸಾಧನೆಯ ಪೇಳಿ ಪಾಲಿಪುದೆಂದು
ಶಿರಕರವೆದೆಯು ಚರಣ ಭುಜಗಳೆಂಬಿವ ಧರೆಯನೊಂದಿ ಸಾಷ್ಟಾಂಗವೆರಸಿ ||೨||

ಯತಿಮಗನೆ ಕೇಳು ಭೂಸಲಿಲವನಲಂವನಿಲ
ವಿಲಸಿಕಾಶವಾತ್ಮಗಳಿರುವ ಗುರುಮುಖದಿ

ಯಳಿದಿವರ ಪೂರ್ವಾಶ್ರಯುವ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣವು ||
ಸುಲಲಿತ ಶರಣವೈಕ್ಯವೆಂಬ ಷಟ್ ಸ್ಥಲಗಳವು
ನೆಲೆಯರಿಯಲೊಡಲೊಳಗಿರುತ್ತಿರಂ ವಿವರ ಬಗೆಯ
ಸುಲಭದೊಳೆ ಪೇಳ್ವೆನಾಲಿಸು ನಾಸಿಕಂ ಜಿಹ್ವ ನೇತ್ರತ್ವಕ್ ಶ್ರೋತ್ರಹೃದಯ ||೩||

ಎನಿಪ ಸ್ಥಾನಂಗಳಿವರಾದಿಯನು ಪೇಳ್ವೆನದ
ಯೇನುಯಿಲ್ಲದ ಶೂನ್ಯ ಬ್ರಹ್ಮರೊಳ್ಸಚ್ಚಿತ್ತು
ಮಾನಿತಾನಂದ ನಿತ್ಯಂ ಪೂರ್ಣವೆಂಬನಿವೆ ಪಂಚಲಕ್ಷಣವ ತೋರೆ ||
ಮಾನನಿಧಿಯೆ ಕೇಳು ಆ ಪಂಚ ಲಕ್ಷಣವೆ
ನೂನವಿಲ್ಲದೆ ಪಂಚಬ್ರಹ್ಮ ಸ್ವರೂಪವೆ
ಸ್ವಾನುಭಾವದೊಳು ಸದ್ಯೋಜಾತ ವಾಮದೇವ ಘೋರ ತತ್ಪುರುಷವು ||೪||

ಮಂಗಲೀಶಾನ್ಯವೆಂದೆನಿಪ್ಪೈ ಮೊಗವೆ ಮತ್ತೆ
ಲಿಂಗಂಗಳೆನಿಸಿ ವಾಚಾರಾದಿ ಶೇಷಾಂತ್ಯ
ತುಂಗಲಿಂಗಗಳೇವೆ ಪಂಚಸಾದಾಖ್ಯ ಚಕ್ರಂ ವರ್ಣಶಕ್ತಿ ಭಕ್ತಿ ||
ಪುಂಗವ ಪ್ರಣವನಾದ ಕೃತಿಯು ಹಸ್ತತನು
ಸಿಂಗರದವಾತ್ಮವು ಪದಾರ್ಥ ಪ್ರಸಾದಕಲೆ
ರಂಗವಹ ಪೂಜಕಾಧಿಕ ದೈವಸಾಜ್ಞಹರಿವೇದ ಮುಖವೆಂದೆನಿಸುವ ||೫||

ಕೀಲಗಳನರಿವುದುತ್ತಮ ಸಂಗ ಪೂರ್ವದತಿ
ಹೇಳತೀ ಸತಿ ಸದ್ಗುಣಂ ಸದಾಚಾರ ರೆಲೆ
ಬಾಳನೇತ್ರನ ಚರಣ ವಿಶ್ವಾಸಮಂತರಂಗದ ಶೌಚ ಬಹಿರಂಗದ ||
ಲೀಲೆಯ ಶುಚಿಯವೆಂಬವಿರಬಹುದಿಲ್ಲದಲೆ
ಶೂಲಿಯಾರ್ಚನೆ ಧ್ಯಾನಜ್ಞಾನ ವ್ರತಂಗಳಿವ
ಮೂಲಿಷ್ಟಲಿಂಗಧಾರಣವೆಂಬ ಪಂಚಯೋಗಂಗಳಿವಳ್ತಿಲ್ಗೆಯಲಹುದು ||

ಗ್ರ || ಶಿವಧ್ಯಾನ ಶಿವಜ್ಞಾನ
ಶಿವಪೂಜಾ ಶಿವವ್ರತಾ
ಶಿವಲಿಂಗ ಧಾರಣಶ್ಚೇತಿ
ಶಿವಯೋಗಃ ಪ್ರಕೀರ್ತಿತಃ ||೧||

ವಿರತಿ ಸುವಿಚಾರ ನಿಸ್ಸಂಗತ್ವ ಸುಖದಿಚ್ಛೆ
ವರವಾಸನ ಕ್ಷಯ ವಿತೂರ್ಯ ತೂರ್ಯಾತೀತ

ವಿರದಿವೇ ಸಪ್ತಭೂಮಿಕೆಗಳೆನಿಪವುವಿವನು ಪೂರ್ವದಲೆ ತನಗಿಹುದನು ||
ಪರಮ ಸಾಧಕರಿಗತ್ಯಂತ ಪ್ರೀತಿಯದಹುದು
ತರವರಿಯಲಿವರೊಳಗೆ ರಾಗಿಯು ವಿರಾಗಿಯಂ
ದೊರೆವದಿವರೊಳು ರಾಗಿಯೆಂತೆನಲು ಸಂಸಾರವೇ - ಸುಖವದಲ್ಲದಿತರ ||೭||

ಮುಕ್ತಿಯೆನಲೇನದರೊಳುಂಟು ಪಾಳ್ಮನೆಯೊಳಗೆ
ವಕ್ತಿಸಲು ದೀವಿಗೆಯ ಹಚ್ಚಿದ ತೆರವನು ಫಲ
ವ್ಯಕ್ತಕಾಷ್ಠಾವ ನಿದ್ರತನ ಪರಿಯೊಳಿಹುದಲ್ಲಿ ಸುಖವದೇನಿಹುದದೊಲ್ಲೆ ||
ಶಕ್ತಿವಿಡಿದಷ್ಟ ಭೋಗಗಳಿವೇ ಭಯಪರಿ
ತ್ಯಕ್ತ ಸಂಸಾರಿಗಳಿದರ ಸುಖವದೇನೆಂದು
ಸೂಕ್ತಿಯೊಳು ಜನಿಸಿರುವ ಮೌಕ್ತಿಕದ ತೆರನಂತೆ ಮೋಕ್ಷಕಾಂಕ್ಷಿತ ವಿರಾಗಿ ||೮||

ಎಂತೀವೆಯನಧಿಕಾರವಧಿಕಾರ ಭೇದಗಳೂ
ಪಂಥ ವಿಡಿದಾಚರಿಸುವವನೆಯಧೀಕಾರನಹ
ಮುಂತಿನ್ನು ಪೇಳ್ವೆನಾಲಿಸು ಸಂತರಧಿಕಾರ ಭೇದಗಳವೆಂತೆನಲು ||
ಅಂತರಂಗದೊಳು ತಿಳಿವುದು ಕರ್ಮಿ ಮುಮುಕ್ಷು
ಸಂತತಭ್ಯಾಸಿಯನುಭವಿಯು ಆರೂಢರೆಂ
ದಿಂತಿರುವರಿವ ಕೊಳಾ ಕರ್ಮಿ ಮೂಢತ್ವದಿಂ ಜಾತಿ ಮಾತ್ರದಾ ವಿಧಿಗಳ ||೯||

ಬಿಡದೆಯಾಚರಿಸುತ ಶತಜನ್ಮದಿಂ ಮುಕ್ತಿ
ವಡೆವಾತನೆ ಕರ್ಮಿಯೆನಿಸುವನಿವನು ಮತ್ತೆ
ಸಡಗರದೊಳಾ ಜಗತ್ಸತ್ಯವೆಂದುಂ ತಿಳಿದು ಬಾಹ್ಯಕರ್ಮದೊಳು ನಿಷ್ಟ ||
ವಿಡಿದಾಚರಿಸಿ ಮೂರು ಜನ್ಮದಿಂ ಸದ್ಗತಿಯ
ವಡೆವಾತನೆ ಮುಮುಕ್ಷುವನೆನಿಸಿ ಕೊಳುವನವ
ತಡೆಯದೀ ಜಗವು ಪುಸಿ ಸ್ವಪ್ನದಂತೆಂದು ತಿಳಿದಂತರಂಗದೊಳು ಯೋಗ ||೧೦||

ದಂದವನು ತಿಳಿದುಯಭ್ಯಾಸಿಸುತೆ ಜನ್ಮದ್ವಯ
ದಿಂದ ಕೈವಲ್ಯ ಪಡೆವಾತನಭ್ಯಾಸಿಯುವ
ಸಂದ ವ್ಯವಹಾರವನೆಲ್ಲವನುಪೇಕ್ಷಿಸಿ ವಿವೇಕದಿ ಪರೋಕ್ಷ ಜ್ಞಾನವ ||
ಚಂದವಾಗಿಯೆ ತಿಳಿವುತೇಕ ಜನ್ಮ ಮುಕ್ತಿ
ಬಂಧುರದೊಳಂ ಪಡೆದನನುಭವಿಯೆ ನಿಸುತಿಹನು
ಬಂದ ಸಂಸೃತಿ ವಿಕೃತಿ ತೊರೆದ ಪರೋಕ್ಷದರು ತಿಳಿದು ಸದ್ಯೋನ್ಮುಕ್ತಿಯ ||೧೧||

ಪಡೆದಾತನಾರೂಢನೆನಿಸುತಿಹನಿವ ಮತ್ತೆ
ಸಡಗರದ ಜನವೆಂಬ ಕಮಲ ವಲ್ಲರಿ ಮೂಲ
ತಡೆಯದಿದುಯೆಂತಿಹುದೊ ನಾನುದಾರೆಂಬರಿವ ತಿಳಿಯಲೋಸುಗ ಗುರುವಿನ ||
ಅಡಿವಿಡಿದು ಕರುಣಮಂ ಪಡೆದು ಮೋಕ್ಷಂಬಡೆವ
ತಡವಿಲ್ಲದೀತಂ ವಿವೇಕಿಯೆನಿಸ್ಪುವನಿವನು
ಜಡದೇಹವಿದನು ಪುಸಿಯೆಂದರಿದು ವಿಷಯ ಸುಖಭೋಗಗಳ ತ್ಯಜಿಸಿ ಪರಮ ||೧೨||

ಗುರುಚರಣರನು ಹೊಂದಿ ಕೈವಲ್ಯಮಂ ಪಡೆವ
ನುರುವಿರತನವಸು ಮತ್ತೋರ್ವಗುರು ಶಿಷ್ಯನಿಗೆ
ಅರಿವ ಪೇಳುತ್ತಿರುವ ಸಮಯದೊಳು ಮತ್ತೋರ್ವ ಬಂದದನು ಕೇಳಿ ಮುದದಿ ||
ಚರಣಕೆರಗುತಲರಿವ ತಿಳಿದು ಮೋಕ್ಷಂಬಡೆವ
ವರದೈವಗತಿಯೆಂದು ಮೂವ್ವರಧಿಕಾರಿಗಳು
ಬರಿಯವಾಕ್ ಬ್ರಹ್ಮವ ನುಡಿದು ನಾಮಜ್ಞಾನಿಗಳುಯೆಂಬವರ್ಗೆ ಮೋಕ್ಷವಹುದೆ ||೧೩||

ಸಾಧನ ಚತುಷ್ಟಯಗಳಿರುವವಾ ಸಾಧನೆಯ
ಸಾಧಿಸಿದವನೆ ಶ್ರೇಯ ಪಡೆದನವವೆಂತೆನಲು
ಶೋಧಿಸಲ್ನಿತ್ಯಾವನಿತ್ಯ ವಸ್ತು ವಿವೇಕವಿಹ ಪರದ ಭೋಗ ವಿರತಿ ||
ಅದರೊಳಂ ಕೇಳ್ಸಮಾಧಿ ಷಟ್ ಸಂಪತ್ತಿ
ಭೇದಿಸಲ್ಕಾ ಮುಮುಕ್ಷತ್ವವೆನಲೀ ಪರಿಯ
ಸಾಧನಗಳಿರುವವವು ಸಾಧಿಸಿದವನೆ ನಿತ್ಯಮುಕ್ತನಾಗುವನಿದು ದಿಟಂ ||೧೪||

ಇನ್ನು ಗುರುಲಕ್ಷಣವ ಪೇಳ್ವೆನಾಲಿಸು ವಿಧಿತ
ನನ್ನಿವೇದಾಂತ ಶಾಸ್ತ್ರದೊಳು ನೈಷ್ಟಿಯ ಒಲಿದು
ತನ್ನ ಚರಣಕ್ಕೆ ಶರಣಾಗತರಿಗಂ ಮರಳಿ ಸಂಶಯವಂಕುರಿಸದಂತೆ ||
ಮನ್ನಣೆಯ ತತ್ವವನು ಬೋಧಿಸುತವಜ್ಞಾನ
ಭಿನ್ನವಾಗುವ ತೆರನ ಮಾಳ್ಪವನೆ ಸದ್ಗುರುವು
ಸನ್ನುತಾಮಳ ಪರಮಗುರು ಸೇವೆಯಾದೊಡಂ ನಾಲ್ಕು ಪ್ರಕಾರವಿಹವು ||೧೫||

ಅಪ್ತಾಂಗ ಸ್ಥಾನ ಸದ್ಭಾವವೆಂಬಿವೆ ನಾಲ್ಕು
ಗುಪ್ತವಾಗಿರುವ ಗುರುವಿನ ಚರಣಮಂ ಸಾರ್ದು
ಕ್ಷಿಪ್ತಫಲಕುಸುಮ ಕರದಿಂದೆ ಸಾಷ್ಟಾಂಗದಿಂ ನಮಿಸಿ ಸದ್ಗುರುನಾಥನೆ ||
ಸುಪ್ತವಾಗಿಹ ಜೀವ ಮರವಿಯಂ ಪರಿಹರಿಸಿ

ತಪ್ತವೋಹಃ ಪಿಂಡದಂತೆ ಮಲಿನವ ತೆಗೆದು
ದೀಪ್ತಿಸುವ ಜ್ಞಾನ ಪ್ರಕಾಶಗೆಯ್ದುದ್ಧರಿಸು ಸ್ವಾಮಿಯೆಂದಷ್ಟಮಂತ್ರ ||೧೬||

ನುಡಿವುತ್ತೆ ಚೈತನ್ಯ ಶಾಶ್ವತಂ ನಿತ್ಯವಿದು
ಸಡಗರದಿ ಬಿನ್ನವಿಪುದೇ ಶಿಷ್ಯನುಪಸನ್ನ
ತಡೆಯದಾ ಶಿಷ್ಯನಧಿಕಾರವ ಪರೀಕ್ಷಿಸುತೆ ಬಾರೆಂದು ಕರೆದು ಕರವ ||
ವಡಿಯೆ ಶಿಷ್ಯನ ಮಸ್ತಕದೊಳಿಟ್ಟು ಮಂತ್ರಲಯ
ಗಡಗಡನೆ ಹಟರಾಜ ಶಿವಯೋಗವೆಂಬವೆ ವಿಧಿಸಿ
ತಡವಿಲ್ಲದೀ ಪಂಚಯೋಗಗಳ ಬೋಧಿಸುತಲಿವಕಂಗವಾಗಿರುತಿಹ ||೧೭||

ಯಮನಿಯಮ ವಾಸ ಸಪ್ರಾಣ ಪ್ರತ್ಯಾಹಾರ
ರಾಮವಹ ಧ್ಯಾನ ಧಾರಣ ಸಮಾಧಿಗಳೆನಿಪ
ವಾಮವಷ್ಟಾಂಗ ಯೋಗಗಳಿವರ ಭೇದವನು ಪೇಳ್ವೆನಾಲಿಸು ಪುತ್ರನೆ ||
ಸೋಮಧರರೂಪ ಶಿವಮಂತ್ರವದು ಗಾತ್ರದೊಳು
ನೇಮದಿಂದಂಗುಷ್ಟ ಮೊದಲು ಶಿರ ಕಡೆಯಾಗಿ
ತಾಮಸ ರಹಿತ ಮೂರು ಮೂರು ಆರಾರು ಪ್ರಣವಗಳಿಹುವ ತಿಳಿವುದಿದನು ||೧೮||

ಆಧಾರವಾದಿ ನವಚಕ್ರಗಳಿಹವುಮೆಲೆ
ಶೋಧಿಸಲ್ಕಣು ಚಕ್ರವೆಂದೊಂದಿರುವದವರ
ಭೇದವನು ಪೇಳ್ವಡಾಧಾರದಿಗಳಿಗೆದಳಕುಳವರ್ಣ ಶಕ್ತಿ ಭಕ್ತಿ ||
ಮೊದಲಾದ ದ್ವಿಶತಷೋಡಶ ಸಕೀಲಗಳಿಹವು
ಅದರ ಮರ್ಮವ ತಿಳಿವುದದರೊಳಗೆ ಹೃದಯದೊಳು
ವಿಧಿತದಿಂದೂರ್ಧ್ವದಳ ನಾಲ್ಕಧೋದಳವೆಂಟರಿಂದೆ ಶುಭ್ರಕಾರದಿಂ ||೧೯||

ಯಶಮತಿಹದಳಗಳಣಿಮಾದಿ ಭೂತಿಗಳದರೊ
ಳೀಶನಿರುತಿಹ ಬೀಜಕೋಶ ಮೂಲ ಪ್ರಣವ
ಸೂಸದಿಹವರುವೆನಾಳಿಂದ್ರ ಕಾಷ್ಟವೆ ಮೊದಲು ಪತ್ರಗಳೊಳಾ ಜೀವನು ||
ಸಸಿನೆ ಚರಿಸಲು ಪೂರ್ವದಳದಿ ಭಕ್ತಿಯುವಗ್ನಿ
ದಿಶದಿಕ್ಷುಧೆಯನುಮಲ್ಲಿ ಕೋಪನೈರುತಿದಳದಿ
ಹಸನಾಗಿರುವ ಸತ್ಯವರುಣನೋಳ್ಸುಪ್ತಿ ವಾಯುವ್ಯನೊಳು ಗಮನಮಕ್ಕು ||೨೦||

ಧನದನೊಳ್ಧರ್ಮಶೀಲಂ ಯೀಶನೊಳ್ವಿಷಯ
ಮನದಿಂದೆ ಕೇಳ್ಮಧ್ಯದೆಸಳಿನೊಳಗಾನಂದ

ಯಿನಿತನುಭವಗಳಿಹವು ಜಾಗರಣದೊಳ್ವಿಶ್ವ ಜೀವನೆಗಿಸುತ್ತಲಿಹನು ||
ತನುವದಕೆ ಸ್ಥೂಲಸಾತ್ವಿಕ ಗುಣದಿ ವರ್ತಿಸುವ
ದನುವರಿಯಲಾ ಜೀವಹಂಸ ಕೇಸರಕಿಳಿಯೆ
ಮನವೊಂದರಿಂದೆ ತಜ್ಞಾಗ್ರವಾಸನೆ ವಿಡಿದುತ್ತೈಜಸವೆಸರಿನಿಂದಲೆ ||೨೧||

ಕನಸ ಕಾಂಬನು ಲಿಂಗತನು ರಜೋಗುಣವಿಡಿದು
ಮಿನುಗುವಾ ಕರ್ಣಿಕಾಸ್ಪದವಾಗಲಾ ಜೀವ
ಘನ ಪ್ರಾಜ್ಞ ನಾಮಕರಣ ದೇಹ ತಮವಿಡಿದು ಸುಪ್ರಿಯೊದಗುತ್ತಿರ್ಪುದು ||
ಸಮಮತದೊಳಿವಕೆ ಸ್ಥಾನಂ ನೇತ್ರಕಂಠವೆದೆ
ಗನುಕೂಲಮಾಗಿ ಜಪಿಸುತ್ತಿರುವ ಮಂತ್ರವದು
ಮಾನಸೋ ಪಾಂಶುವಾಚಕವಿದಂ ತ್ರಿವಿಧ ಪ್ರಕಾರವಾಗಿರುವವರ ||೨೨||

ಫಲವದೆಂತೆನಲನಂತಂ ಸಹಸ್ರವದೇಕ
ಸುಲಲಿತದ ಮೋಕ್ಷ ಪರಲೋಕ ಪದವಿಯುಯಿಹದ
ಲೋಲ ಭೋಗಂಗಳಂ ದೊರಕುವವು ಕಾಮ್ಯನಿಃಕಾಮ್ಯವೆಂದೆರಡು ತೆರದಿ ||
ಸಲೆನ್ಯಾಸ ಋಷಿಚಂದವಧಿದೈವ ಕೀಲಕವೆ
ಮೂಲವಾಚಾರವೆಂದೆರಡು ಮೂರಾರೆಂಟು
ಸುಲಲಿತದ ಮಂತ್ರವು ಜಪಿಸುತಿರ್ದಡೆ ಮೋಕ್ಷವಹುದಿದೆ ಮಂತ್ರಯೋಗ ||೨೩||

ವಿಲಯಯೋಗ ವಿಧಿಯದೆಂತೆನಲು ಖೇಚರಿಯು
ಲಲಿತ ಭೂಚರಿಗಾಚರಿಯು ಷಣ್ಮುಖಿಯು ಮತ್ತೆ
ಸುಲಭ ಶಾಂಭವಿನ ಗೋಚರಿಗಳೆಂಬೀ ಮುದ್ರೆವಿಡಿದಂತರಂಗದೊಳಗೆ ||
ಸಲೆ ನಿರೀಕ್ಷಿಸಲು ಪೀತಶ್ವೇತ ಮಾಂಜಿಷ್ಟ
ಕಲಿತ ಹಂತಕ ಪೋತ ಮಾಣಿಕ್ಯ ಜ್ಯೋತಿಗಳು
ಮಲಹರಾತ್ಮಕ ಮಹಾಜ್ಯೋತಿವಗಣಿತ ಪವಳ ಬಳ್ಳಿ ಮಿಂಚಿನ ಮಾಲೆಯು ||೨೪||

ಮಿಸುನಿರವೆ ರನ್ನದೀವಿಗೆ ತಾರಕಾಜಾಲ
ಸಸಿನೆರವಿ ಶಶಿಶಿಖಿವನಂತ ಕೋಟಿ ಪ್ರಭೆಯು
ಹಸನಾಗಿರುವ ತಾರಕಂ ದಂಡಕಾಕಾರ ಮೊದಲಾದವಾಕೃತಿಗಳು ||
ದಶನಾದಗಳ್ ಶರಧಿ ಮೇಘ ನಿರ್ಜರ ಭೇರಿ
ವಾಸ ಕಿಂಕಿಣಿ ಮುರುಜೆ ಕಹಳೆ ಘಂಟೆಯು ಶಂಖ
ಮಸಗುವ ಪ್ರಕಾಶದಿಂದೊಪ್ಪುತಿಹ ಮೂಲಮಂತ್ರ ಭ್ರಮರ ಮುಂತಾದವು ||೨೫||

ತಾರಕ ಬ್ರಹ್ಮ ನಾದಬ್ರಹ್ಮಗಳತಿಗಳೆದು
ಸಾರ ಜ್ಯೋತಿರ್ಮಯ ಸುಲಿಂಗಂಗಳೊಳಗೆತಾ
ಸೇರಿ ಮನನುಲೀಯೆ ಮಾಡಿದೊಡದೇ ವಿಲಯಯೋಗವೆಂದು ತಿಳಿವುದು ||
ಮೂರನೆಯ ಯೋಗವನೆ ನಾಸಾಗ್ರಾದೊಳ್ಸುಳಿವ
ಮಾರುತನರೇಚಕ ಪೂರಕ ಕುಂಭಕಗಳೆಂಬ
ಮೂರು ಸಾಧನಗಳಿಂದಿಳಿಸೇರಿಸುವ ನಿಲ್ಲಿಸುವ ಕ್ರಮವ ತಿಳಿಯದೊಲವಿಂ ||೨೬||

ಪನ್ನೆರಡು ಲಘುವರ್ಣಗಳನುಚ್ಚರಿಸುವ ಸಮಯ
ವನ್ನು ಮಾತ್ರೆಯವೆನಿಪವಾ ಮಾತ್ರೆ ದ್ವಾರದಶಗ
ಳನ್ನುವಾಗುವವರಿಗು ಮಾಳ್ಪುದೆ ಕನಿಷ್ಟವೆಂದೆನಿಪುದಿಪ್ಪತ್ತು ನಾಲ್ಕು ||
ನನ್ನಿಯಿಂದಾಗಲದು ಮಧ್ಯಮವೆನಿಪುದಷ್ಟೆ
ಮನ್ನಣೆಯ ಮೂವತ್ತರಾರಾಗಲುತ್ತಮವು
ಪನ್ನತಿಕೆಯಿಂ ಪ್ರಾಣವಾಯುವ ತಡೆವುದದನೆ ಹಟಯೋಗವೆನಿಪುದೊಲದಿನಿಂ ||೨೭||

ಅರಿವಿನಿಂದೊಳಹೊರಗ ಮಧ್ಯವೆನಿಸುವವು ಮೂರು
ವರಲಕ್ಷವಂತರಂ ಬಾಹ್ಯ ಮಧ್ಯೆವದೆನಿಪ
ದಿರವಿನಿಂದರಿದು ತತ್ವನುಮಾನ ಸವೃತ್ತಿ ಕರಿಗೊಂಡು ನಿಲ್ಲದೊಡನೆ ||
ಅರಿಯಲದು ರಾಜಯೋಗವದೆನಿಪುದೆಲೆಮಗನೆ
ಪರಮನರ್ಚನೆಯವನು ಸಂಧಾನ ಭಕ್ತಿವ್ರತ
ನಿರುತ ವಿದ್ಯಗಳೆಂಬವೈದರಿಂ ಬೆರಸಿರಲು ಶಿವಯೋಗವೆಂದೆನಿಪುದು ||೨೮||

ಇಂತಿವೆ ಪಂಚಯೋಗಗಳಿವಕೆಯಂಗವಹ
ವಂತವಷ್ಟಾಂಗ ಯೋಗಗಳವರ ಭೇದವ ಸ
ಮಂತು ಪೇಳ್ವುವೆ ಕೇಳ್ವುದೆಲೆ ಮಗನೆ ಕರಿಬಸವ ಯಮವೆನಲು ದ್ವಾದಶಗುಣ ||
ವಂತೆನಲಹಿಂಸೆ ಸತ್ಯಂ ಕ್ಷಮಾಘಾಸ್ತೇಯ
ಮುಂತೆ ಬಾಲಬ್ರಹ್ಮಚರ್ಯ ಧೃತಿದಯ ವರ್ಜೆ
ಯಂತೆ ಪ್ರತ್ಯಾಹಾರ ಸಂಸ್ಮತಿ ಬ್ರಹ್ಮಚರ್ಯತರ ಬಹಿರ್ ಶೌಚವ ||೨೯||

ಇನ್ನು ಪೇಳುವೆ ಕೇಳು ನಿಯಮ ದಶವಿಧ ಭೇದ
ನನ್ನಿಯಿಂ ಜಪತಪಂ ಪರುಷವಾಸ್ತಿಕ ದಾನ
ಮನ್ನಣೆಯ ಮೌನ ನಿಸ್ಪೃಹಭಕ್ತಿ ವೈರಾಗ್ಯಜ್ಞಾನಂಗಳಿವೆ ದಶವಿಧ ||
ಸನ್ನುತಾಮಳ ವಾಸನದ ಬಗೆಯ ಪೇಳುವೆನು

ಉನ್ನತದ ಸಿದ್ಧಿ ಪದ್ಮಾಸನಂ ವೀರಾಸ
ನನ್ನು ಸ್ವಸ್ತಿಕ ಮಯೂರಾಸನಂ ಗೋಮುಖ ಕುಕ್ಕುಟಂ ಸಿಂಹಾಸನಂ ||೩೦||

ವಿಮಲ ಭದ್ರಾಸನ ಸುಖಾಸನವೆ ಮೊದಲಾದ
ಕ್ರಮವ ತಿಳಿಯಲ್ಕೆಯೆಂಭತ್ತೆಂಟು ಆಸನವು
ಸುಮನದಿಂ ಮಾಡಲ್ಕೆರುಜಗಳಳಿವವು ಮತ್ತೆಯೋಗಗಳಿಗಿವೆ ಮುಖ್ಯವು ||
ರಾಮ ಪ್ರಾಣಾಯಾಮವೆಂತೆನಲದಂ ಪೇಳ್ವೆ
ಸೋಮಧರ ಸ್ಮರಣೆಯೊಳಗಿಡೆ ಪಿಂಗಳೆಗಳೊಳು
ರಾಮಣೀಯಕ ಹಂಸ ಮಂತ್ರವುಚ್ಚರಿಸುವಧೋಕುಂಡಲಿಯು ಕ್ರಮದೊಳು ||೩೧||

ಉಸಿರಿಳಿವ ಸಮಯದೊಳಗಹಕಾರ ನುಡಿವುತಿಹು
ದುಸಿರೇರುವಲ್ಲಿಯೆ ಸಕಾರವನುಚ್ಚರಿಸುವುದು
ಸಸಿನೆ ಸುಷುಮ್ನೆಯೊಳು ಸೊನ್ನೆ ಸಂಯುತವಾಗಿ ಹಂಸವೆಂದುಚ್ಚರಿಪುದು ||
ಹಸನಾಗಿ ಆಸನವನಿಕ್ಕಿ ಮೂಲಾಧಾರ
ವಾಸವಾಯುವನೆತ್ತಿ ಕುಂಭಕವನೆಸಗಲದು
ನಾಸಿಕಾಗ್ರದಿ ಸುಳಿವ ಹಂಸಮಂತ್ರವನಳಿಯಲೋಂಕಾರ ರೂಪವಹುದು ||೩೨||

ನಿಲಿಪುದಾ ನಾಭಿ ಹೃದಯಂ ಕಂಠ ಭ್ರೂಮಧ್ಯ
ನಲಿವುತಲ್ಲಿಯೆ ದೃಢೀಕರಿಸಲು ಕನಿಷ್ಟವದು
ಸಲೆ ಮಧ್ಯವೋತ್ತಮೋತ್ತಮವೆನಿಪವಾ ಮಾತ್ರೆ ದ್ವಾದಶ ಚತುರ್ವಿಂಶತಿ ||
ತಿಳಿಯಲದು ಷಟ್‌ತ್ರಿಂಶ ಕ್ರಮದೊಳರಿವುದು ಮತ್ತೆ
ಒಲಿದು ನೇಮವದು ಪ್ರಾಣವೆನಿಪಕ್ಕರವ ಮೂರು
ತಿಳಿನಾಭಿ ಕಂದವೇ ಮನೆಯಾಗಿಯಡೆಯಾಡುತಿಹುದದಂ ಪೇಳ್ವೆನೊಲದಿಂ ||೩೩||

ನಾಸಾಗ್ರದೊಳ್ಸುಳಿವ ಮರುತನವನೊಳಪೊಕ್ಕು
ಸೂಸದಿರಲದೆಯ ಪಾನವದೆನಿಪುದಾ ವಾಯು
ಸಸಿನೆ ಪೊರಮಡಲು ಪ್ರಾಣವದೆನಿಪುದೆಡದಲ್ಲಿ ಹೂರಿಸಲು ಬಲದಕಡೆಗೆ ||
ಮೋಸವಿಲ್ಲದೆ ಬಿಡುವುದದು ಬಲದಿ ಹೂರಿಸಲು
ಶಶಿಯ ನಾಳದೊಳು ಬಿಡುವುದುದ ಕುಂಭದಿ ತಡೆವು
ದೊಸೆದು ಪದಿನಾಲ್ಕು ದಿನವಿದರಂತೆ ರಚಿಸಲ್ಕೆ ಸೌಖ್ಯ ಸಂಪದವಪ್ಪುದು ||೩೪||

ಒಂದು ಮಾಸಕ್ಕೆ ಪೂರ್ವದ ದೋಷವಳಿವುತಿಹು
ದಂದದಿಂದೆಸಗುವದು ಯೋಗಿಗಳಿದನು ಬಿಡದೆ

ಚಂದವಾಗಿದರಿಂದೆ ಮತಿಶುದ್ಧವಪ್ಪುದಾ ನಿಜಬೋಧ ದೃಢವಪ್ಪುದು ||
ಬಂಧುರದಿ ಕೇಳ್ಮಗನೆ ಏಸು ನಿರೋಧನವದಿದು
ಮುಂದಿನ್ನು ಕೇಳು ಪ್ರತ್ಯಾಹಾರ ಲಕ್ಷಣವು
ಕಂದಮೂಲಾದಿ ಸಲ ಜಲಪತ್ರ ಮೃತ್ತಿಕಾಹಾರ ಗೊಂಬುವುದುತ್ತಮವು ||೩೫||

ಇದನಾಗದಿರ್ದೊಡೊಪ್ಪುತ್ತು ಮಿತಿಯಶನ
ವದುಪದುಳದಿಂದೇಕ ಭುಕ್ತಂಕದನ್ನವ ಬಿಡುವು
ದೊದವಿ ರಾಜಾನ್ನಗೊಂಬುದು ಸರ್ವಕಾರ್ಯಗಳು ಮಿತಿಯಿಂದೆ ವರ್ತಿಸಲಿದು ||
ಮುದದಿಂದೆ ಪ್ರತ್ಯಾಹಾರವದೆನಿಪುದಿನ್ನು ಕೇಳ್
ಸದಯದಿಂದಂತರಂಗದೊಳು ಶಿವರೂಪವನು
ಎದುರಿನೊಳು ತಂದದನು ಧ್ಯಾನಿಸಲದಂ ಧ್ಯಾನಯೋಗವೆಂದೆನಿಪುದೊಲವಿಂ ||೩೬||

ಧಾರಣವೆನಲ್ಕೆ ತತ್ ಶಿವಮೂರ್ತಿಯಂ ಮನದಿ
ಧರಿಸಿ ನಿಶ್ಚಲ ಮನದಿ ಮನದೊಳಿರಲದೆ ಧಾರಣವು
ಪರಮನೊಳು ಮಾನಸವ ಲೀನವಾಗಲ್ಕದು ಸಮಾಧಿಯೆಂದೆನಿಸುತಿರ್ಕು ||
ಶರಧಿಯೊಳ್ ಲವಣಮುಳಿಗೆದು ಶರಧಿಯಪ್ಪಂತೆ
ಕರಕವದು ಕರಗಿ ನೀರಪ್ಪಂದದಿಂ ಮನವು
ಬೆರಸಿ ನಿಜದೊಳುಲ ನಿಜವೆಯಾಗುವುದಿದನು ಪೇಳಿದಂದದೊಳಗಭ್ಯಾಸವು ||೩೭||

ಚಂದವಾಗಿಯೆ ಪರಮ ವಿಶ್ವಾಸವುಂ ಮಾಡಿ
ದ್ವಂದ್ವವನಳಿದು ಜೀವ ಶಿವನೊಳ್ಳೈಕ್ಯವ ಮಾಡ
ಲಿಂದುಧರನೇ ನೀನೆಯಪ್ಪೆ ಸುಖದಿಂದಿರ್ಪೆ ಕೇಳ್ಕರಿಬಸವ ಯತಿವರ ||
ಎಂದು ಬಹುಚಂದದಿಂ ಕಂದನಿಗೆ ಬೋಧಿಸುತೆ
ಬಂಧುರದೊಳಾಶೀರ್ವಚನವಿತ್ತು ಕರುಣಿಸಿದ
ರಂದು ಕರಿಬಸವ ಯತಿವರ್ಯ ಸಾಷ್ಟಾಂಗದಿಂ ನಮಿಸಿ ನುತಿಸಿದರೊಲವಿಂ ||೩೮||

ಇಂದುಧರನೇ ಯೆನ್ನಮೇಲಣ ಕರುಣದಿಂದ
ಬಂದೆ ನೀನು ಗುರುರೂಪಮಂ ಧರಿಸಿ ಲೋಕಕ್ಕೆ
ಯಿಂದುಯೆನಗಷ್ಟಾವರಣ ಸಗುಣಷ್ಟಾಂಗ ಬೋಧೆಯನು ಪೇಳ್ದೆರೊಲಿದು ||
ಕುಂದದಾ ಬೋಧೆಯನು ಕೇಳಿಯೆನ್ನ ಜ್ಞಾನ
ಚಂದ್ರಗೆಟ್ಟಾನಂದವನು ಸಮನಿಸಿತು ಭೇಗ
ಬಂಧನವಳಿಯಿತೆನ್ನಯ ನಿಮ್ಮಯುಪಕೃತಿಯದೆಷ್ಟಿದೆಯೆಂದು ಪೇಳ್ಗೆಗುರುವೆ ||೩೯|

ಎನ್ನುತತಿಶಯದಿಂದ ಭಿನ್ನವಿಲ್ಲದೆ ನುತಿಸಿ
ನನ್ನಿಯಿಂದಾಚಾರ್ಯ ಪದನಿಷ್ಠೆಯಿಂ ಲಿಂಗ
ವನು ಪೂಜಿಸುತಷ್ಟವಿಧದಿಂದ ಗುರುಚರಣ ಸೇವೆಯನು ಮಾಡುತೊಲವಿಂ ||
ಸನ್ನುತಾಮಳವಷ್ಟಯೋಗದಭ್ಯಾಸವನು
ಚೆನ್ನವಾಗಿಯೆ ಮಾಡುತಾನಂದದಿಂದವರು
ಪನ್ನತಿಕೆ ಸುಖಸಂಕಥಾ ವಿನೋದದಿದೊಳಿರ್ದರೀ ಕಥೆಯ ಕೇಳ್ವುದೊಲವಿಂ ||೪೦||
ಮರುಳಸಿದ್ಧಾಚಾರ್ಯ ರಾಮದೇವಾಚಾರ್ಯ
ವರಪಂಡಿತಾಚಾರ್ಯ ಗುರುವು ವಿಶ್ವಾಚಾರ್ಯ
ರುರೆ ಮಧ್ಯವದನ ಸಂಜಾತ ರೇಣುಕಾದೇವನುದರ ಭವರುದ್ರಮುನಿಯ ||
ಕರದೊಳುದ್ಭವ ಮಹಂತಾಚಾರ್ಯಚರಣಜನಿ
ಗುರುಪರಂಪರೆಯ ಜನ್ಮನಿವಲದಿಹಿರೆಮಠದ
ಚರಪಟ್ಟವರ್ಯನುರೆ ಗುರುಮಹಂತನು ಪೇಳ್ದ ಗುರುಕೃಪೆ ಬಲತ್ಕಾರದಿಂ ||೪೧||

ಅಂತು ಸಂಧಿ - ೧೧ಕ್ಕಂ, ಪದ-೭೦೬ಕ್ಕಂ ಮಂಗಳ ಮಹಾ||

ಹನ್ನೆರಡು

ಸಂಧಿ

||ಪಲ್ಲವಿ || ಕರಿಬಸವನೊಂದು ದಿನ ಗುರುಚರಣಕೊಂದಿಸುತೆ
ಚರಿಸಲಾಜ್ಞೆಯಿಗೊಂಡು ಹೊರಡುತಲ್ಲಂ ಪಳ್ಳಿ
ವೀರಾರ್ಯನಿಂ ನಿರ್ಗುಣಬೋಧಯಂ ಪಡೆದು ಐರೋಡಿಗೆಗೆ ಬಂದರು ||

ರುಕ್ಮಾವರ್ತಿ ವರಪ್ರಗ್ಭೂಷಾಸುರ
ಭುಗ್ವಾತಾಶನ ರಾಡ್ವಲಯಂಪುರ
ಧಗ್ನೇತ್ರಾಗ್ನಿ ಸುರಾಸುರಮಣಿಮಕುಟಾನ್ವಿತ ಚರಣಭವ ||
ದಿಶ್ಚೇಲಾಂಬರ ದೀರ್ಘ ಜಟಾಶಿರ
ದಿಗ್ಧಿಶಾನುತಮದ್ವದನಾಂಬುಜ
ರುಗ್ವೀಠ ಸ್ಥಿತವಾಗ್ಲಹರಿಯನಗೀ ವಿಮಲಾತ್ಮಯಜಯ ||ಪರಿವರ್ಧಿನಿ|| ||೧||

ಕರಿವೃಷಭ ಯತಿವರ್ಯ ಪದಿನಾರು ವತ್ಸರವು
ಪರಮವಿಶ್ವಾಸದಿಂ ಗುರುಸೇವೆಯ ಮಾಡು
ತರರೆ ಯೋಗಾಭ್ಯಾಸವನು ನಿಶ್ಚಲದ ಮನದಿರಚಿಸುತಿರ್ದರು ಹರುಷದಿಂ ||
ಗುರುವರನ ಚರಣಕೊಂದಿನ ನಮಿಸಿ ಕೇಳಿದರು
ವಿರತರಾದ ಬಳಿಕ್ಕೆ ಕೆಲವು ದಿನ ದೇಶವನು
ಚರಿಸಬೇಹುದು ಗುರುವೆಯೆನಗಪ್ಪಣೆಯನೀಯಬೇಹುದೆಂದಡ್ಡ ಬೀಳೆ ||೨||

ಗುರು ಕೆಂಡಗಣ್ಣೊಡೆಯರುರು ಕರುಣದಿಂ ನೋಡಿ
ಕರಿಬಸವ ಯತಿವರ್ಯಂನಿನ್ನ ಮನವಿರ್ದಂತೆ

ಚರಿಸಬೇಹುದು ಮಗನೆ ನಿಸ್ಪೃಹ ವಿರತಿಸುಗುಣ ಸುಜ್ಞಾನ ವ್ರತಗಳಿಂ ||
ಶರಣ ವಿಜಯ ಜಿತೇಂದ್ರಿ ಸದ್ವರ್ತನಗಳಿಂದ
ಮರೆಯದಭ್ಯಾಸವನು ಮಾಡತುತ್ಸವದಿಂದೆ
ಮರಳಿ ಬಹುದೆನ್ನುತಾಶೀರ್ವಚನವಿತ್ತು ಕೃಪೆಯಿಂ ನಿರೂಪವನೀಯಲು ||೩||

ಹರುಷದಿಂ ಕರಿಬಸವ ಗುರುಗಳಿಗೆ ನಮಿಸುತ್ತ
ಭರದೊಳಾ ಶಂಭುಲಿಂಗನ ಬೆಟ್ಟಕಂ ಪೋಗಿ
ಚಿರಕಾಲದಲ್ಲಿ ಯೋಗಾಭ್ಯಾಸವನು ಮಾಡುತಲ್ಲಿಂದ ಹೊರಟು ಧರೆಯೊ ||
ಳಿರುವ ಕ್ಷೇತ್ರಗಳೆಲ್ಲ ಸಂಚರಿಸುತಂ ಯೋಗಿ
ವರದರ್ಶನ ಜ್ಞಾನ ಭಾಷಣಗಳನೆಸಗುತ್ತೆ
ಪರಮ ಸಂತೋಷದಿಂದಿರಲು ಯೋಗಾಭ್ಯಾಸ ಪೂರ್ಣವಾಗಲ್ಕಿದರೊಳು ||೪||

ಏನಿರುವದಿದನಾದೊಡಂ ಮಿಥ್ಯಯಹುದಾಗಿ
ಸ್ವಾನುಭವದೊಳರಿಯೆ ಯದೃಶ್ಯ ತನ್ನಸ್ಯ
ಸಾನುರಾಗದಿ ಶಾಸ್ತ್ರದೊಳ್ ಪೇಳ್ವೇಳ್ಳುತಿಹುದಾಗಿ ವ್ಯರ್ಥಕಷ್ಟವದೆನುತಲಿ ||
ಮನದೊಳಗೆ ತಿಳಿದು ನಿಜಬೋಧೆಯಂ ಬಲ್ಲವರ
ಘನಗುರುಗಳವಲ್ಲಿಹರೊಯೆಂದು ವರಸುತ್ತೆ
ಪರಿಪರಿಯ ದೇಶದೊಳಗಿರುವ ಜ್ಞಾನಿಗಳೊಡನೆ ಸಂಭಾಷಣೆಯನೆಸಗುತೆ ||೫||

ಬರವರಲ್ಕಾಂಧ್ರ ದೇಶದೊಳು ಶೋಭಿಸುತಿರುವ
ಪರಮವಲ್ಲಂಪಳ್ಳಿಯೆಂಬ ಗ್ರಾಮದೊಳೆಸೆವ
ಹಿರೆಮಠಾಧಿಪ ಭಕ್ತಿ ವೈರಾಗ್ಯ ಸುಜ್ಞಾನ ಸದ್ಗುಣನುದಾರಪರನು ||
ವೀರಶೈವಾಚಾರ ಶರಧಿ ವರ್ಧನ ಪೂರ್ಣ
ಕೈರವಸು ಬಂಧುವಾನಂದಾತ್ಮರಾಮಮುನಿ
ವರದಯಾರಸ ಪೂರ್ಣನೂರ್ಜಿತಭಿರಾಮ ಕಾಮವಿಧುರನುತ್ತಮ ಗುರು ||೬||

ವೀರ ಶಿವಯೋಗಿಗಳೆನಿಪ್ಪ ನಾಮದೊಳಿರಲು
ಕರಿವೃಷಭವರ್ಯರದನರಿದು ಸನ್ನಿಧಿಗೈದಿ
ಕರದೊಳುತ್ತಮ ಪತ್ರಪುಷ್ಪ ಫಲ ಸಹವಾಗಿ ನಿಂದಿರಲ್ಕವರು ಕೆಲವ ||
ವರಯೋಗಿಗಳಿಗೆ ತತ್ವಾನುಭಾವವನೊರೆವ
ತರಿದೆನಲ್ಕಿದದೊಳಿರಲಾ ಸಮಯದೊಳಗಿವರು
ಯಿರಲು ಬಹುದಿಲ್ಲಿ ಪೂರ್ಣಜ್ಞಾನವೆನುತರಿದು ಸಾಷ್ಟಾಂಗದಿಂ ನಮಿಸುತೆ ||೭||

ಫಲಕುಸುಮಗಳ ಸನ್ನಿಧಿಯೊಳಿಟ್ಟುವಷ್ಟವಿಧ
ಲಲಿತ ಮಂತ್ರವನು ಚೈತನ್ಯ ಶಾಶ್ವತವೆಂದು
ನಲವಿನಿಂದುಚ್ಚರಿಸಿ ಗುರುವೆಯೆನ್ನಯ ಶಿರದೊಳಭಯ ಹಸ್ತವನಿಟ್ಟೊಡೆ ||
ನಲವಿನಿಂದೆದ್ದು ವಿಜ್ಞಾಪನವ ಮಾಳ್ಪನೆನೆ
ನೆಲೆಯರಿದಿವರು ಪೂರ್ಣಾವಧಿಕಾರರಹರೆಂದು
ತಿಳಿದುವುದೊಳಗರ ಶಿರದೊಳ್ಹಸ್ತವನಿಟ್ಟು ಕರುಣದಿಂ ಬರುವುದೆಂದು ||೮||

ಕರೆಯಲಾಕ್ಷಣವೆದ್ದು ಮತ್ತೊಮ್ಮೆ ನಮಿಸಲ್ಕೆ
ಗುರುಲಿಂಗರುಭಯರಿಗೆ ಸಲ್ಲಿದವು ಸಾಷ್ಟಾಂಗ
ಚರಣದೊಳ್ಹಣೆಯಿಟ್ಟು ನಮಿಸಲ್ಕೆ ಜಂಗಮಕೆ ಸಲ್ಲಿತಿದು ಹಸ್ತಮುಗಿದು ||
ದೂರವಲ್ಲದೆವತಿಸಮೀರವಲ್ಲದೆ ಮಧ್ಯ
ದಿರವರಿದು ನಿಂದು ವಿಜ್ಞಾಪನವನು ಮಾಡಿದರು
ಗುರುವೆಯದೃಸ್ಯ ತನ್ನಸ್ಯವೆಂದು ದುಶ್ರುತಿಯು ಕಾಣ್ಬುದೆಲ್ಲವು ಮಿಥ್ಯವು ||೯||

ಮಿಥ್ಯವಿದು ಸತ್ಯವೆಂಬಂತೆ ತೋರುತಲಿಹುದು
ಸತ್ಯವಾದಲ್ಲಿಯೆಂತಿಹುದುದರ ನೆಲೆಯೆನಗೆ
ತಥ್ಯವಾಗಿಯೋ ಪೇಳ್ವುದಲಸದೆ ಗುರೋತ್ತಮನೆ ಸತ್ಯದೊಳು ಮಿಥ್ಯವೆಂತು ||
ತೃಪ್ತಿಯಾಯಿತುಯಿದನು ರಚಿಸಿದವರಾರು ಮ
ತ್ತತಿಶಯದೊಳಂ ಬಹಳ ಬಂಧುರದಿ ತೋರ್ಪುದಿದ
ನತಿಶಯಿಸಿ ಪೇಳ್ವುದೊಲವಿಂ ಸಕಲಜ್ಞಾನಿಗಳಿಗೋತು ವಿಜ್ಞಾಪನವನು ||೧೦||

ಮಾಡುತ್ತಲೇ ಬಂದೆನಿದರ ಮೂಲವದಾರು
ನುಡಿಯರದು ಕಾರಣದಿ ತಮ್ಮಡಿಗಳರಸುತಲಿ
ಮೃಡಮೂರ್ತಿಯೇ ಬಂದೆ ಬಿಡದೆವುದ್ಧರಿಸುವದುಯೆನ್ನ ಗುಣಗಳ ನೋಡದೆ ||
ತಡವಾದರೆನ್ನಸುವನುಳಿಯದದು ಕಾರಣದಿ
ಬಡವರಿಗೆ ಬಹುಕರುಣ ಮಾಳ್ಪ ಬಿರುದುಂಟದನು
ಬಿಡದೆ ಕಾಯ್ವುದು ತಂದೆ ಸುಡುಸುಡೀಭವ ದುಃಖ ಜನ್ಮ ಜನ್ಮಾಂತರದೊಳು ||೧೧||

ಬಿಡದೆ ಕಾಡುತ್ತಿರುವದಾಗಿಯಜ್ಞಾನ ತಮ
ವೋಡಿಸುವ ಸುಜ್ಞಾನ ಸೂರ್ಯ ಕರುಣಾಸಿಂಧು
ಕಾಡದೆನ್ನನು ಕೃಪಾಕಡೆಗಣ್ಣಿನ್ನಿಂ ನೋಡಿ ಕಡೆ ಹಾಯು ಭವಸಿಂಧುವ ||
ಕಡುಜಾಣರಿಗೆ ಜ್ಞಾನ ಮಾರ್ಗ ತೋರುವುದರಿದೆ

ಜಡಮತಿಯವರ ಜಾಡ್ಯವಳಿದು ಮೃಡನಡಿಗಳನು
ಸಡಗರದಿ ತೋರುವದಸಾಧ್ಯವಿದು ಸರ್ವರಿಗೆ ನಿಮಗಲ್ಲದಿತರರಳವೆ ||೧೨||

ಎಂದು ವಿಜ್ಞಾಪನವ ಮಾಡಲಾನಂದದಿಂ
ಕಂದನಿಗೆ ಕರವಿಡಿದು ಮೋಹದಿಂ ಮುದ್ದಾಡಿ
ಸುಂದರನೆ ನಿನ್ನಂದದೊಳ್ ಲೋಕದೊಳಗಾರು ಜ್ಞಾನಕಿಚ್ಛೈಪರುಂಟೆ ||
ಯಿಂದು ಮಾಡಿದ ಪ್ರಶ್ನೆಯಿಂದವಾಯಿತು ಮನಕೆ
ಚಂದದಿಂ ಪೇಳುವೆನು ಕೇಳು ನೀನದರಿಂದೆ
ಬಂಧನವ ಪರಿದು ನಿಜಮಂದಿರವ ದೊರಕಿ ಸುಖದಿಂದಿರುವೆ ನಿಜವಾಗಿಯೆ ||೧೩||

ಮೂಲ ಬ್ರಹ್ಮದೊಳೇನುಯಿಲ್ಲದೇಕವಾಗಿ
ಲೋಲದಿಂದಿರಲದು ನಿಮಿತ್ಯವೊಂದಿಲ್ಲದಲೆ
ಲೀಲೆಯನಹಂಬ್ರಹ್ಮಯೆಂಬ ಸ್ಫೂರ್ತಿಯುಯುದಯವಾಯಿತದೆ ಮೂಲಮಾಯ ||
ಬಾಲನೆ ಕೇಳದನೆ ಶಿವಶಕ್ತಿಯೆಂದುಭಯ
ಲಾಲಿತದೊಳಂ ತೋರ್ದವರಿಂದೆ ಜಗಜೀವ
ಸ್ಥೂಲ ಸೂಕ್ಷ್ಮಂ ಕಾರಣಂ ಮಹಾಕಾರಣವೆ ಮೊದಲಾಗಿ ಸೃಷ್ಟಿಯಾಯ್ತು ||೧೪||

ಸೃಷ್ಟಿಕ್ರಮವನಾದೊಡೆರಡು ತೆರದಿಂದಿಹವು
ಸೃಷ್ಟಿಕ್ರಮ ಸೃಷ್ಟಿಯುಪಗತ ಸೃಷ್ಟಿಯೆಂದಿಹವು
ಸೃಷ್ಟಿ ಮೊದಲಾದರೆಲ್ಲರನೊಂದರಿಂದೊಂದು ಜನಿಸಲದೆ ಕ್ರಮಸೃಷ್ಟಿಯು ||
ಶ್ರೇಷ್ಠ ಶರಧಿಯೊಳೊಂದೆ ಕಾಲದೊಳ್ಬುದ್ಬುದವ
ಸಿಷ್ಟ ತೆರೆನೊರೆ ಲವಣ ಮೌಕ್ತಿಕ ಮೊದಲು ತಾವೆ
ಗಟ್ಟಿಯಾಗಿಯೆ ತೋರುವಂತೊಂದೆ ವೇಳೆಯೊಳು ಜನಿಸಿಯುಗಪ ಸೃಷ್ಟಿಯು ||೧೫||

ಇಂತು ಜನಿಸಿದವೆಂತೆನಲು ಬಂಜೆಪುತ್ರರಂ
ತಂತು ನಿಜದೊಳು ತೋರ್ಕೆ ಘಟಿಸಿದವಿದೆಂಬ ತೆರ
ನಂತೆನಲು ಸ್ವಗತ ಸ್ವಜಾತಿಯು ವಿಜಾತಿ ಭೇದಗಳಿಲ್ಲವಾತ್ಮನೊಳಗೆ ||
ಪಂಥವರಿಯಲ್ ಜಗವಿದಿಂದ್ರ ಜಾಲದ ನೆಗಳ್ಕೆ
ಯಂತೆ ಗುಣಫಣಿಯಂತೆ ಸ್ಥಾಣು ತಸ್ಕರನಂತೆ
ಮುಂತಿಲ್ಲದಿಂತೀಗ ತೋರುತಿರ್ಪ ಜನಕ್ಕೆನತತ್ರವೆಂಬ ಶೃತಿಯೋ ||೧೬||

ಇರುವದಾಧಾರಾದಿ ಸೂತ್ರಮುಂಟದರಿಂದ
ಲರಿ ಮಿಥ್ಯ ದೃಷ್ಟಿಯಂದ ದಿನರಿವುದರಿ ಕೊಳು

ವರುಹಿ ಕೊಡುತಿರ್ಪುದದು ಕರಣಕಾರ್ಯವ ಮಿಥ್ಯವರಿ ಜ್ಞಾತೃಜ್ಞಾನಜ್ಞೇಯ ||
ಪರದೊಳಿವನಾಸ್ತಿಯಂದರುಹಿಪವು ಶೃತಿಸೂತ್ರ
ಮರವೆಯಿಲ್ಲವು ನಿಜದೊಳರುವೆಯಂಗವದಾಗಿ
ಅರಿವು ಮರವೆಗಳೆರಡು ಮಿಥ್ಯ ನಿಜವಾಗಿರುವ ವುಳುಮೆಯೇ ಪರಬೊಮ್ಮವು ||೧೭||

ಮನೆಯೊಳಿರುತಿಹ ಸಕಲದ್ರವ್ಯದ ತೆಗೆಯಲಲ್ಲಿ
ತನಯನೇವುಳಿದಿಹುದು ವುಳುಮೆಯೆನಿಸುವದದರ
ಘನಯಭ್ರವೆಂಬುಪಾಧಿ ನಾಮಾವಳಿಯಲ್ಕೆವುಳಿದಿಹುದೆ ಪರಬೊಮ್ಮವು ||
ಮಿನುಗುವ ಪರಬೊಮ್ಮದಿರವ ತಿಳಿವಡಸಾಧ್ಯ
ಮನುಮುನಿ ಸುರಾಸುರಾದಿಗಳಿಗೆನೆಯುಳಿದಿರುವ
ಮಾನವರ ಪವಣೆ ಶೃತಿತತಿ ನೇತಿನೇತಿಯೆಂದುದರಿಂದಲತಿಶಯೆವದು ||೧೮||

ವರಸಚ್ಚಿದಾನಂದ ನಿತ್ಯ ಪರಿಪೂರ್ಣ ಘನ
ನಿರುಪಮ ನಿರಾಲಂಬ ನಿರ್ದ್ವಂದ್ವ ನಿರುಪಾಧಿ
ನಿಪೇಕ್ಷೆ ನಿರ್ಲಕ್ಷ ನಿರ್ಮಾಯ ನಿರ್ಗುಣ ನಿರಾಮಯ ನಿರಂಜನ ನಿಜ ||
ಅರಿಯಲವನೆ ಬ್ರಹ್ಮ ಅರಿಯದಿರ್ದೊಡೆ ನರನು
ಆರುವೆ ನಿಜಮೋಕ್ಷಕಾರಣವರುವೆ ಪರಬೊಮ್ಮ
ವರುವುತಿಹ ತಾನೆಯಲ್ಲದೆ ಮತ್ತೆ ಬೇರುಂಟೆವರುವಿನೊಳುಮೆಯು ನಿಜವದು ||೧೯||

ನೀನೆ ಪರಬೊಮ್ಮವಲ್ಲದೆ ಮರೆದು ನರನೆಂದು
ಮನದ ಕಲ್ಪನೆಯಿಂದಲರಿವೆ ತನುಮನ ಮಿಥ್ಯ
ಘನ ಪರಂಜೋತಿಯೇ ನೀನಹೆ ಮರೆದು ಕರಣವೇಧನೆನುತಿರುವ ಪರಿಯು ||
ವನದೊಳಿರುವ ಹರಿಮರಿಯು ಶ್ವಾನಸಂಗದಿ ತಾನು
ಶುನಕನೆನುತಿರುವಬಗೆ ಮನದುಪಾಧಿಯೊಳೊಂದಿ
ತನುಕರಣ ಜೀವಜಗನಾನು ನಂದೆನಿಪವಭಿಮಾನವದು ಮಿಥ್ಯವರಿಯೈ ||೨೦||

ದಶಮ ಪುರುಷರ ತೆರದಿವಸಮನಿಜವದು ತಾನೆ
ಹೊಸದಿರ್ದು ನಿಜವು ತಾನೆಲ್ಲಿಹುದೊಯೆಂದರಸು
ಹೊಸ ಹೊಸದವಜ್ಞಾನ ಪಶುಗಳಿವರೆಂದರಿವುದರರೆಯಿತರ ಪದಾರ್ಥವ ||
ಮೋಸದಿಂ ಕಳೆದು ಕೊಳಲುಂಟು ತನ್ನನು ತಾನೆ
ಸಸಿನೆ ಕಳೆಯಲಹುದೆ ಬಂಜೆಯುದರದೊಳ್ಳೆದ
ರಾಸುರದಿ ಜನಿಸಿದೆವುವದರೊಳಗೆ ವಂತ್ಯದೊಳು ಜನಿಸಿದವ ನಾನೆನುತಲಿ ||೨೧||

ಪೇಳುತಿರ್ಪವನಮತೆವನ್ಯ ನಿಂದಾತ್ಮ ಸ್ತುತಿ
ಹೇಳಲೇನಾ ಪರಪದಾರ್ಥ ಮೇಲಣಕಾಂಕ್ಷೆ
ಏಳಿದಿರುವ ಬಹುಮಾನ್ಯರುನ್ನಾಮಯೀ ಸಕಲ ನೀಚರಿಗೆ ಸರಿಯದಾಗಿ ||
ತಿಳಿಯಲೊಂದೇ ದಕ್ಷಿಣವ ನೀವುದುಚಿತವೆ
ಯೆಲೆ ಭಕ್ತನೇಯೆನ್ನುತ್ತಿರುವ ಭಿಕ್ಷುಕನಂತೆ
ಸುಲಲಿತಂ ಪಂಚಪಾಂಡವರು ಮಂಚದ ಕಾಳ್ಗಳಂದದಿಂ ಮೂವರೆಂದು ||೨೨||

ಎರಡು ಅಂಗುಲಿಗಳನು ಮುಂದಿಹಗೆ ತೋರ್ಪಂತೆ
ಪರವಸ್ತುವದು ಪರೋಕ್ಷ ಬ್ರಹ್ಮವದು ತಾನೆ
ನರನು ದೃಶ್ಯನುವಜ್ಞ ನಾನಿರುವೆ ನನಗದೆಂತುಂ ತಿಳಿವುದೆನ್ನುತಿರುವಾಗ ||
ಅರುವೆ ನಿಜವೆಂದು ತಿಳಿಯದೆ ಮತ್ತದೆಂತಿಹುದೊ
ವರಿಯವೆನುತಿಹ ನರರ ಮಾಳ್ಕೆಯಂ ನೀನದನು
ವರಿಯದಿರು ನೀನೆ ಪರಬೊಮ್ಮದಿರುತಿಹೆ ಮಗನೆ ಮಿಥ್ಯವಲ್ಲಿದು ಸತ್ಯವು ||೨೩||

ಇದುವೆ ಮನು ಮುನಿಗಳನುಭವವಿಹುದು ತಿಳಿವುದಿದು
ಸದಮಲ ಬ್ರಹ್ಮವಲ್ಲರೆ ಮಿಕ್ಕ ಜಗಜೀವ
ವಿಧಿತದಿಂದಲ್ಲವೆಂಬುದೆ ಸಹಜಶೃತಿ ಸಿದ್ಧವನು ಮಾನವಿಲ್ಲವಿದಕೆ ||
ಅದುವಿದೆನ್ನಿಸಿಕೊಳ್ಳದಿಹ ನಿಜವೆಂದು ತಾನು
ಅದುವೆ ತಾನೆಂದರಿದರುವೆ ಮಿತ್ಯವೆಂದರಿವು
ದಿದುವೆ ತೂರ್ಯಾತೀತದಿದೆ ಪರಬ್ರಹ್ಮವಿದೆ ನಿಜ ನಿರಂಜನ ಪದವಿದೆ ||೨೪||

ಇಂತು ನಿಜಬೋಧೆಯನು ವಂಚನೆಯದಿಲ್ಲದಲೆ
ಸಂತಶ್ರೀ ಗುರುಕರುಣದಿಂ ಪೇಳಲೊಡನೆ ತಾ
ನಂತು ಕರಿಬಸವ ಯತಿವರ್ಯರಾಲಿಸುತಾಗಲಾನಂದವೀ ಜಗದೊಳು ||
ಅಂತವಿಲ್ಲದೆ ತುಂಬಿ ಸೂಸುತೆ ಕಟಾಕ್ಷದೊಳ
ನಂತ ಬಾಷ್ಪೋದಕಗಳುದುರೆ ರೋಮೋದ್ಗಮನ
ಸಂತತಾದೇಹದೊಳಗುಣ್ಮೆ ಕಂಠದ ನರವ ಬಿಗಿಯಲಾನಂದದಿಂದ ||೨೫||

ಗುರುವೆ ಕಲ್ಪದ ತರುವೆ ಸಜ್ಜನ ಮನೋಹರವೆ
ಗುರುವೆ ಶಾಶ್ವತದಿರವೆ ಸುಜ್ಞಾನ ಸುಖಕರವೆ
ಗುರುವೆ ಶರಣಾಗತರವಜ್ಞಾನ ತಮದೂತ ನೂರ ಸುಜ್ಞಾನಸಾರ ||
ಗುರುವೆ ಚಿಂತಾಮಣಿಯೆ ಗುರುಕುಲ ಶಿಖಾಮಣಿಯೆ

ಗುರುವೆ ವಜ್ರದ ಖಣಿಯೆ ಸುರಚಿರನು ಗುಣಮಣಿಯೆ
ಗುರುಭವಾಂಬುಧಿ ತರಣಿ ತತ್ವಬೋಧಿಯ ಸರಣಿ ಸುಜ್ಞಾನ ಮಣಿಯ ಭರಣಿ ||೨೬||

ಗುರುವೆಯೆನ್ನಜ್ಞಾನ ಕಳೆವ ನಿರ್ಮಲ ಬೋಧೆ
ವರದೆನ್ನ ಪೂರ್ಣ ಪರಬ್ರಹ್ಮಮಾಡಿದಿರೀ ಭವ
ಪರಮ ಪಾವನಶೀಲ ತಾವೆಸಗಿದುಪಕೃತಿಯೆನಿತು ಬಣ್ಣಿಪೆನು ಗುರುವೆ ||
ಶರೀರ ವಿಷ ಪರಿಯಂತ ಚರಣಸೇವೆಯ ಮಾಳ್ಪ
ದಿರದೆ ಪಾಲಿಪುದೆನುತೆ ಸಾಷ್ಟಾಂಗದಿಂ ನಮಿಸಿ
ಗುರುಪೂಜೆಯವನೆಸಗುತಾರಾಧನೆಯ ರಚಿಸಿ ಗುರುದಕ್ಷಿಣವ ಸಲ್ಲಿಸಿ ||೨೭||

ಗುರುವೆಯನಗಪ್ಪಣೆಯನೀಯ ಬೇಹುದೆನುತ್ತೆ
ಕರವ ಮುಗಿದಿರಲವರ ನೋಡಿ ಕರುಣದಿ ಪರಸಿ
ಶಿರದೊಳ್ಹಿಸ್ತವನಿಟ್ಟು ಫಲವನುಡಿಯಲಿಕೊಟ್ಟು ಪೇಳ್ದ ಪರತರಬೋಧೆಯ ||
ಮರೆಯದಿರುವರುವಿನುಳುಮೆಯೆ ನಿಜವದೆಂಬರಿವು
ಕರಿಗೊಂಡು ಮೇಲೆ ಮೇಲೆರಗಿ ಬರುತಿಹ ಕಾರಣ
ವರಕಲ್ಪನೆಗಳುಡುಗಿ ಸ್ಥಿರದಿಂದೆ ಬಾಳನ್ನುತಪ್ಪಿ ಮುಂಡಾಡಿ ಮುದದಿ ||೨೮||

ಗುರು ನಿರೂಪವ ಕುಡಲು ಪರಮ ಹರುಷದಿ ನಮಿಸಿ
ವರದ ಶ್ರೀಹರಿಯೆ ಮೊದಲಾದ ಸುಕ್ಷೇತ್ರಗಳ
ಚರಿಸಿ ಕಲ್ಯಾಣ ಪಟ್ಟಣಕೈದಿ ರುದ್ರಮುನಿ ಗವಿಯೊಳಗ ಕೆಲವು ದಿನವು ||
ಯಿರುತಿರಲ್ಕಲ್ಲಿಯ ಪಠಾಣನೋರ್ವನು ಮತ್ತೆ
ವರಭಕ್ತ ಶರಣಪ್ಪನೆಂದೋರ್ವರುಭಯರುಂ
ಚರಣಕ್ಕೆರಗುತೆ ಮೋಕ್ಷಕಾಂಕ್ಷದಿ ಮುಮುಕ್ಷುಗಳು ಬಿನ್ನಪಂಗೆಯ್ಯಲವರ ||೨೯||

ಅಧಿಕಾರವನು ತಿಳಿದು ಯೋಗ್ಯರೆಂದರಹವರ್ಗೆ
ಬೋಧಿಸುತೆ ಸಗುಣ ನಿರ್ಗುಣ ನಿಜದ ನಿಲುಕಡೆಯ
ಹಾದಿಯನು ನಿಜಮೋಕ್ಷದಾದಿಯ ವಿಚಾರ ಪರಿಶೋಧಿಸುತೆ ದಯದಿಂದಲು ||
ಭಾದಿಪ ಭವದ ಭಾದೆ ನೀಗಿಸುತೆ ಸಂಕಲ್ಪ
ದಾದಿ ಬೇರವ ಕಡಿದುವಜ್ಞಾನ ಶಿರಗಡಿದು
ಮೋದದಿಂದಾಹಾರಿ ಶೇಷನ್ಯಾಯದ ತೆರದಿ ಸರ್ವಕಲ್ಪನೆಗಳೊರಸಿ ||೩೦||

ಎಲೆಲೆ ಪುತ್ರರೆ ನಿಮ್ಮ ಗಾತ್ರ ಮೊದಲಾದವರ
ನೆಲೆಯ ತಿಳಿಯದೇನಂದು ನಾನೆಂಬ ಬಗೆಯಿಂದ

ಸಿಲುಕಿ ಬಲೆಯೊಳು ನಾನುದಾರೆಂಬರಿವ ತಿಳಿಯದದೆ ದೃಢೀಕರಿಸಿದಂತೆ ||
ಮೂಲಬ್ರಹ್ಮವು ನೀನೆಯೆಂಬುದದು ಕರಿಗೊಂಡು
ಲೀಲೆಯೊಳಗರಿದರಿವ ಕರಗಿದುಳುಮೆಯನುಳಿದು
ಬಾಲನಂತಿರೆ ಬಿನದಿಯಾಗಿರೆಂದುಂ ಪರಸಿಯವರ ಮನಗಳನುದಣಿಸಿ ||೩೧||

ಉದ್ಧರಿಸಿ ಮತ್ತೆ ಬಂದವರ ಭವವನು ಕೆಡಿಸಿ
ಬದ್ಧವಜ್ಞಾನ ನೆಲೆಗೆಡಿಸಿ ವಿದ್ಯಗಳರಸಿ
ಶುದ್ಧ ಜ್ಞಾನದ ನೆಲೆ ತಿಳಿಸಿ ಕಲ್ಪನೆ ಹರಿಸಿ ಮೂರು ಕರ್ಮವನುಸರಿಸಿ ||
ಯಿದ್ದ ನಿಜಸಿದ್ಧಿಯ ಸುಬುದ್ಧಿಯನು ತಿದ್ದಿ ದು
ರ್ಬುದ್ಧಿಯನು ಗುದ್ದಿ ದುಷ್ಕರ್ಮ ದುರ್ಮಾರ್ಗಗಳ
ನೊದ್ದು ಕರುಣಾ ಶರಧಿಯೊಳಗದ್ದಿ ಸರ್ವರಂ ಮಾಡುತಲಿ ನಿಜದ ಮುದ್ದಿ ||೩೨||

ಇಂತು ಸರ್ವರನು ಪಾವನ ಮಾಡುತಾನಂದ
ದಿಂತುತಿಪರಿಷ್ಟವನು ಸಲಿಸಿ ಕರ್ಮವ ಹರಿಸಿ
ಸಂತತಾನಂದದಿಂ ಸಾನಂದಮುನಿವರನು ನರಕದೊಳಿರುವ ಜಂತುವ ||
ಯೆಂತು ತೆಗೆದನದಂತೆ ಕಂತು ಹರ ರೂಪಗುರು
ಶಾಂತ ಶ್ರೀಕರಿವೃಷಭ ಸಕಲ ಭಕ್ತರ ಮನದ
ಭ್ರಾಂತಿಯಳಿವುತೆ ಜ್ಞಾನ ಪಂಥವನು ತೋರುತ್ತೆ ಕಾಂತಾರನೆನಿಸುತ್ತೆ ||೩೩||

ತಿಂಗಳಂ ಸೂಡಿದನ ರೂಪ ಕರಿವೃಷಭಾರ್ಯ
ಪಿಂಗಳಾಕ್ಷನ ಗಣಾರಾಧನೆಯನೆಸಗಲ್ಕೆ
ಮಂಗಳಾಹ್ವಯಪುರದ ಭಕ್ತಮಾಹೇಶ್ವರರ ಕರೆಸಿ ಪೇಳಲ್ಕಾಗಲು ||
ಹೆಂಗಾಯಿತೆಂದವರು ಸರ್ವಸಂಗ್ರಹಗೈದು
ಸಿಂಗರಿಸಿ ಪಟ್ಟಣವ ಗುಡಿತೋರಣಂ ಕಟ್ಟಿ
ಲಂಗವಿಸಿ ಕೆಲವು ಬಡಭಕ್ತರಾಗಲೆ ಬಂದು ನಮಿಸಿನಮ್ಮಯ ಪುತ್ರರ ||೩೪||

ಪರಿಣಯನವಿಲ್ಲದಲೆ ಕುಳಿತಿಹರುವಿದರೊಳಗೆ
ಕರುಣದಿಂದ ಧರ್ಮಲಗ್ನವ ಮಾಡಿ ಪುಣ್ಯವನು
ಯಿರದೆ ಪಡೆವುದದೆಮ್ಮ ದಾರಿದ್ರ ಪರಿಹರಿಸಿ ಪೊರೆವುದೆಂದಿರಲಾಗ ||
ಭರದೊಳಂತಾಯ್ತೆಂದು ಲಗ್ನಮಂಡಪ ರಚಿಸಿ
ಪರಿಪರಿಯ ವಸ್ತ್ರವಾಭರಣಗಳ ತರಿಸುತ್ತೆ
ಪರಮ ಮುತ್ತೈದೆಯರ ಕರೆಸಿಯೆಣ್ಣೆಯತರಿಸಿ ಮದುವಳಿಗರಂಬರಿಸುತೆ ||೩೫||

ಬಣ್ಣಬಿಳಿದವನುಡಿಸಿ ತೊಡಿಸಿಯೆಣ್ಣೆಯ ಮೂಡಿಸಿ
ಸಣ್ಣ ಮಕ್ಕಳಿಗೆ ಕೋರೂಟವುರೊಳಗುಣಿಸೆ
ತಣ್ಣಗಾಗಲೆ ನಂದಿಕಾರ್ಯವನು ರಚಿಸವರ ಮೀಸಿ ಗುಗ್ಗಳವ ಮೆರೆಸಿ ||
ಮಣ್ಣ ತುಂಬಿದ ಹಸಿಯ ಗಟ್ಟಿಯೊಳು ಕುಳ್ಳಿರಿಸಿ
ಹೆಣ್ಣು ಮಕ್ಕಳು ಶೋಭನವ ಪಾಡುತಿರಲಾಗ
ಕಣ್ಣ ಮೂರುಳ್ಳನ ಸುಭಕ್ತರೆಲ್ಲರ ಮತದಿ ಐರದಾಳೀಯ ಬಂಧಿಸಿ ||೩೬||

ವಾದ್ಯದಬ್ಬರದೊಳಗೆ ಭಕ್ತ ಮಾಹೇಶ್ವರರು
ವಿದ್ಯವನು ಬಲ್ಲವರು ಮಂಗಳಾಷ್ಟಕ ಪಠಿಸೆ
ಸದ್ಯದೊಳೆ ಸರ್ವರಕ್ಷತೆಯಿಡಲ್ಯಂದ ಜನಕಾಗ ಕ್ರಮುಕವನು ಕೊಡಿಸಿ ||
ಗದ್ಯಪದ್ಯಗಳ ನುಡಿವುತ್ತಿರುವ ಭಿಕ್ಷುಕರಿ
ಗಾದ್ಯರಾಗಲೆ ದಕ್ಷಿಣೆಯನೀಯಲದರೊಳಗೆ
ವೇದ್ಯರಾರಾಧನೆಯ ಮಾಡುತಿರೆ ಮೆರವಣಿಗೆ ಮಾಡಿದರು ಸಂಭ್ರಮದೊಳು ||೩೭||

ಎಲ್ಲಾ ಗಣಂಗಳಿಗೆ ದಕ್ಷಿಣೆಯನೀವುತ್ತೆ
ಬಲ್ಲಿದ ಮಹಾ ಕರಿವೃಷಭರತ್ಸುತ್ಸಹದಿ ಭಕ್ತ
x x x x x x x x x x x x x x x x x ||
ರೆಲ್ಲರಿಗೆ ಆಶೀರ್ವಾದವನಿತ್ತುಯೀ ಪುಣ್ಯ
x x x x x x x x x x x x x x x
ವೆಲ್ಲ ನಿಮಗಕ್ಕೆಂದು ನುಡಿದವರ ಕಡೆಯಿಂದಲಪ್ಪಣೆ ತೆಗೆದುಕೊಂಡು ||೩೮||

ಬಡಭಕ್ತರಿಗೆ ಶಿವನುವಲಿವನೆಂದು ಪರಸಿ
ತಡೆಯದೆಲ್ಲರು ಧನಿಕರಾದರವರಿತ್ತ ಕಡೆ
ಸಡಗರದೊಳಂ ಕರಿಯ ವೃಷಭಾರ್ಯ ಪಶ್ಚಿಮ ದಿಶಕ್ಕಾಗನಡಿವುತಿರೆ ||
ಅಡಿಗೆರಗಿ ನಮ್ಮ ಮನೆಗೊಡಗೊಂಡು ಪೋಗುತ್ತೆ
ಬಡಬಡನೆ ಪಾದಾರ್ಚನೆಯ ಮಾಡಿ ನೀಡುತಿಹ
ಮೃಡಭಕ್ತರವರ ಭಕ್ತಿಯ ಸಲಿಸಿಕೊಳುತವರಿಗಾಶೀರ್ವಚನ ವೀವುತ್ತೆ ||೩೯||

ಬರಬರಲು ಕಾಳಲಿಂಗಪ್ಪನೆಂಬುವ ಭಕ್ತ
ಗುರುವನರಸುತ ಬರಲಿಕಿವರ ದರ್ಶನವಾಗೆ
ವರಪುಣ್ಯವೊದಗಿತೆಂದುಬ್ಬಿ ಸಾಷ್ಟಾಂಗದಿಂ ನಮಿಸಿ ಹಸ್ತವ ಜೋಡಿಸಿ ||
ಗುರುವೆಯೆನ್ನಧಿಕಾರ ನೋಡದಲೆ ಭವದುಃಖ

ಪರಿಹರಿಸಿ ನಿಜಮೋಕ್ಷವಿತ್ತು ಪಾಲಿಪುದೆಂದು
ಚರಣವಿಡಿದೇಳದಿರಲಭಯಹಸ್ತವ ಶಿರದೊಳಿಟ್ಟು ಕರುಣಂಗೈದರು ||೪೦||

ಸುಜನ ಶಿರಮಣಿ ಶಿಷ್ಯನನು ನೋಡಿ ದಯದಿಂದೆ
ಗಜಿಬಿಜಿಯವಜ್ಞಾನ ದೋಷವನು ಪರಿಹರಿಸಿ
ನಿಜವ ಬೋಧಿಸಿ ಮನದ ಮೈಲಿಗೆಯ ತೆಗೆಯಲವ ತನ್ನಿರವನರಿದು ಗುರುವ ||
ಭಜಿಸುತಿರೆ ಪರಮಾನುರಾಗದಿಂದ್ಧರುಷದಲಿ
ಮಜಭಾಪು ಪೂತುವೆನೆ ಮಗನೆ ನಿನ್ನಧಿಕಾರ
ಸಾಜದಿಂ ಜಗದೊಳಿನ್ನಾರಿಗಾದರು ಬರ್ಪುದೆ ನಿಜಾಂಶವೆ ನೀನಹೆ ||೪೧||

ಎಂದವನನಪ್ಪಿ ಮುಂಡಾಡಿಯಪ್ಪಣೆಗೊಂಡು
ಚಂದದಿಂದಲ್ಲಿಂ ದೇಶ ಸಂಚರಿಸುತ್ತೆ
ಬಂದರ್‍ರೈರೊಡಗಿಯದೆಂಬ ಗ್ರಾಮಕ್ಕರನ ಮಂದಿರಕೆ ಸಿದ್ಧರಾಮ ||
ಬಂದ ತೆರದಿಂ ತೆಲಗ ಮಾದಪ್ಪನೆಂಬವನ
ಸುಂದರದ ಸದನದೊಳಗಿಂದುಧರ ರೂಪರಿವ
ರಂದವನ ಭಕ್ತಿಯಿಂ ಲಿಂಗಾರ್ಪಿತಂಗೈದು ಮಡಕೈದ ತತ್ಪೂರ್ವದೊಳ್ ||೪೨||

ಮರುಳಸಿದ್ಧಾಚಾರ್ಯ ರಾಮದೇವಾಚಾರ್ಯ
ವರಪಂಡಿತಾಚಾರ್ಯ ಗುರುವು ವಿಶ್ವಾಚಾರ್ಯ
ರುರೆ ಮಧ್ಯವದನ ಸಂಜಾತ ರೇಣುಕಾ ದೇವರುದರಭವ ರುದ್ರಮುನಿಯ ||
ಕರದೊಳುದ್ಭವ ಮಹಂತಾಚಾರ್ಯ ಚರಣಜನಿ
ಗುರುಪರಂಪರೆಯ ಜನ್ಮನಿ ವಲದಿ ಹಿರೆಮಠದ
ಚರಪಟ್ಟವರ್ಯನುರೆ ಗುರುಮಹಂತನು ಪೇಳ್ದ ಗುರುಕೃಪೆ ಬಲಾತ್ಕಾರದಿಂ ||೪೩||

ಅಂತು ಸಂಧಿ-೧೨ಕ್ಕಂ, ಪದ ೭೪೪ಕ್ಕಂ ಮಂಗಳ ಮಹಾ ||

ಹದಿಮೂರು

ಸಂಧಿ

||ಪಲ್ಲವಿ || ಪರಮ ವಲಧಿಯನಿರ್ಗದೊಳಗಿರುವ ಸಲಗರದ
ಹಿರೆಮಠದ ಶಿವಲಿಂಗ ದೇವಗುರುಗಳನರಸು
ತೈರೊಡಗಿವಳಗಿರಲ್ಕಲ್ಲಿಗವರೈತಂದು ನಿಜಬೋಧಯನು ಪೇಳ್ದರು ||

ಸುರನದೀ ಧರಗರಳ ಕಂಕಪಾಲಧೃತ
ಹರಿಯಜ ದಿವಿಜನಾಥ ನಿರ್ಜರಾರ್ಚಿತ ಚರಣ
ಗಿರಿಧನು ಗಿರಿಜನಾಥ ಗುಹತಾತ ಗಣಯೂಥ ಸನ್ಮಾನ ಜನ ಪುನೀತ ||
ದುರಿತವಾರಿದ್ಧಿ ಬಾಡ ಬಾಲಾಸುರ ಶೀಕ್ಷ
ವರದಕರಭಾನು ವಿಧುರೇಕ್ಷಣ ಕುರಂಗಕರ
ಪುರಹರ ನಿರಾಮಯ ನಿರಾಕಾರ ನಿರ್ದ್ವಂದ್ವ ನಿಸ್ಸೀಮ ನಿರುಪಮ ಜಯ ||೧||

ಮೆರೆವವೈವತ್ತಾರು ದೇಶದೊಳಗಧಿಕವಹ
ತುರುಷ್ಕವಿಷಯ ಪ್ರವೀರರ ಘಣಿಯತಿಲಕವೆನೆ
ವರವಲದಿ ತಾಲೂಕ ತತ್ತಾರ ಸಲಗರವೆನಿಪ್ಪ ಕಿರುವಳ್ಳಿಯದರೊಳ್ ||
ಹಿರೆಮಠಾಧಿಪ ಸಿದ್ಧಬಸವ ಬಸವಮ್ಮಗಳ
ಪರಮ ಜಠರವೆನಿಪ್ಪ ಶರಧಿಯೊಳಗುದಯಿದ
ವುರುಶುಕ್ತಿಕೆಯೊಳಿರುವ ಮೌಕ್ತಿಕಗಳೆನೆ ಪುಣ್ಯದೊಬ್ಬುಳಿಯೆ ರೂಪುಗೊಂಡು ||೨||

ಉದಯಿಸಿದರೇನೆಂಬೆ ಚಿತ್ತರಣಿ ಶಶಿಗಳೆನೆ
ಸದಮಲ ಬ್ರಹ್ಮಸ್ವರೂಪ ಜ್ಞಾನ ಕಲಾಪ

ಮದನ ಕಲೆ ನೀಕರಿಪ ರೂಪ ಜ್ಞಾನ ಸುದೀಪ ಪಂಚಾಕ್ಷರಿ ರೂಪರು ||
ಬುಧವಿನುತ ಪಾತ್ರ ಸತ್ಪಾತ್ರ ಜನಸನ್ಮಿತ್ರ
ವಿಧು ಶೇಖರನ ಭಕ್ತಿಯುಕ್ತ ದುರ್ಗುಣ ತ್ಯಕ್ತ
ಸಾಧು ಸತ್ಪುರುಷ ಸುಜ್ಞಾನ ಜನಸಂಪ್ರೀತ ಲಿಂಗಾರ್ಚನಾ ಪುನೀತ ||೩||

ಗುರುಲಿಂಗ ಜಂಗಮಾರ್ಚನಾಸಕ್ತ ವಿಧಿಯುಕ್ತ
ವರಸದ್ಗುಣಾನೀಕ ಯುಕ್ತ ಸದ್ಗುರು ಭಕ್ತ
ಪರಮದಾಸೋಹ ಸಂಯುಕ್ತ ದುರ್ಜನ ಸಂಗ ಮುಕ್ತ ವಿಷಯಾ ವಿರಕ್ತ ||
ವೀರಶೈವಾಚಾರ ಚರಿತ ಶಿವಸುಖಭರಿತ
ಪಾರಮಾರ್ಥ ಸುಶಾಸ್ತ್ರ ಪ್ರೀತನಿತ್ಯ ಪುನೀತ
ವೀರಮಾಹೇಶ್ವರ ಶ್ರೇಷ್ಠ ಶಿವಲಿಂಗಯೋಗಿಗಳನುಜ ಚನ್ನಬಸವ ||೪||

ಶಿವಲಿಂಗ ದೇವರರ್ಧಾಂಗಿ ಸಜ್ಜನ ಸಂಗಿ
ತವೆ ದುರ್ಗುಣಾನುವರ್ತನ ಭಂಗಿ ನಿಸ್ಸಂಗಿ
ಭವದಿಷ್ಟ ಲಿಂಗಾರ್ಚನಾ ಲಿಂಗಿ ಭವಭಂಗಿ ಸದ್ಗುಣಾನ್ವಿತವರಂಗಿ ||
ಅವಾಗಲುಂ ತನ್ನ ವಲ್ಲಭನ ಸೇವೆಯೇ
ಜೀವವಾಞ್ಞಾಪರ ಪತಿವ್ರತಾ ಚಾರಯುತೆ
ಭಾವಜಾಂತಕನೆಯೆನ್ನಯ ಭರ್ತನೆಂದು ಭಾವಿಸುತೆ ಲಿಂಬೆವ್ವನಿರಲು ||೫||

ಅಗ್ರಜಾನುಜರುಭಯರುಂ ಸಕಲವಿದ್ಯದೊಳ
ಗಗ್ರವೆನಿಸುತ್ತಿರಲ್ಕೊಂದು ದಿನ ತಮ್ಮೊಳಗೆ
ಶೀಘ್ರದೊಳು ತಿಳಿದು ಸತ್ಕುಲ ಜಾತ ವೀರ ಮಾಹೇಶ್ವರ ಶ್ರೇಷ್ಠರಾದ ||
ರಗ್ರವೇಯಿದರಿಂದಲೇನು ಫಲ ನರರೊಳಗು
ದಗ್ರರೂಪವೆಯಲಂಕಾರವೀ ರೂಪಕ್ಕೆ
ನಿಗ್ರಹೇಂದ್ರಿಯ ವಿಷಯ ಬಲ್ಲಿದ ಮಹಾಸದ್ಗುಣಂಗಳಿರಲದೆ ಭೂಷಣಂ ||೬||

ಪರಮ ಸದ್ಗುಣಗಳಿಗೆ ಜ್ಞಾನವದಲಂಕಾರ
ವರಜ್ಞಾನಕಾಭರಣ ಕ್ಷಮೆಯೆಂದು ಪೇಳುತಿಹ
ರಿರದೆ ಶಾಸ್ತ್ರಜ್ಞ ರೀತಿ ನೀತಿಯದು ಕಾರಣ ಮಜ್ಞಾನವಿಲ್ಲದ ಜನ್ಮವು ||
ನೆರೆನಿರರ್ಥಕ ಸಕಲ ಜನ್ಮದೊಳು ನರಜನ್ಮ
ವರಿಯೆ ಶ್ರೇಷ್ಠವುವಿದರೊಳುಂಟು ಸರ್ವಜ್ಞಾನ
ವಿರಲಿದೇಕ ಕಾಲದೊಳಗರಿವು ತಿಳಿದರೆ ಮುಕ್ತಿವರರಹೆವು ಗಾಳಿಯಿರುವ ||೭||

ಪರಿಯಂತ ತೂರಿಕೊಂಬುದು ರಾಸಿ ಹೈನವಿರೆ
ಬರುವ ಹಬ್ಬಗಳು ಮಾಳ್ಪುದುಯೆಂಬ ಗಾದಿಯಿದೆ
ಗುರುಗಳಿಲ್ಲದೆ ಜ್ಞಾನದಿರವು ತಿಳಿಯದಂದುಂ ಸಾಧು ಸತ್ಪುರುಷಗಳ ||
ಚರಣ ಸನ್ನಿಧಿಯಾಗಿ ಕೇಳಲವರುಂ ಸದ್ಗುಣ
ವರ ಬೋಧೆಯನೆ ಪೇಳಲದ ಕೆಲವಕಾಲ ಮನ
ಸ್ಥಿರವಾಗಿಯಭ್ಯಾಸ ಪರರಾಗಿ ವಿರತ ಗುಣನಿರತರಾಗಿರ್ದರವರು ||೮||

ಅಶನ ವಸನವ ತೊರೆದು ಪಶುಪತಿಯಧ್ಯಾಸದೊಳು
ಸಸಿನೆ ಮನೆಯೊಳಗಿರುವ ಧನ ಧಾನ್ಯ ವಸನಗಳು
ಖುಷಿಯಿಂದ ಬಂದವರಿಗಸನ ವಸ್ತ್ರವನಿತ್ತ ಸವೆಯಲ್ಪಿತಾ ಮಾತ್ರರು ||
ಘುಸಣೆಯಾತಕ್ಕೆವನ ಸಂಸರ್ಗ ಬೇಕೆಂದು
ಹೊಸದು ನಮಗಿದು ಪ್ರಪಂಚದ ಮಾಡಗುಡದೆಂದು
ಮಸಗು ತುಳಿದಿರುವ ಗುಪ್ತ ದ್ರವ್ಯವನುಕೊಂಡು ಬೋರಗಾವಿಗೆ ಪೋದರು ||೯||

ಅನುಜಸಹರವರಲ್ಲಿಗೈದಿ ಶಾಲೆಯ ನೀಡಲು
ಮನುಜನಾಥನು ನಾನ ಸಾಯ್ಬನೆಂಬವ ಮೆಚ್ಚಿ
ಧನಧಾನ್ಯ ವಸ್ತ್ರವಾಹನ ಮಠದ ವೃತ್ತಿಯನಿತ್ತು ರಕ್ಷಿಸುರ್ತಿದದನು ||
ಅನಘ ಶಿವಲಿಂಗಾರ್ಯರತ್ತ ಸಲಗರ ಮಠದಿ
ಮನುಮಠದಾರಿಯ ನೆನವುತ್ತಲ್ಲಿ ಶಾಂಡಿಲ್ಯಸಗ
ದನುವಿಲಡಿಯೊಳಗಿರ್ದು ಸುತ್ತ ಬಿತ್ತಿಯ ಬಲಿಸಿ ಗವಿಯಂದವೆಸಗಿಯದರೊಳ್ ||೧೦||

ಜಪತಪ ಸಮಾಧಿಯಿಂ ನವಮಾಸವಭ್ಯಾಸ
ಗುಪ್ತಿತದಿಂ ಮಾಡುತ್ತಲಿಂಬರಸ ಪ್ರಾಸಿಸುತೆ
ವಪರಮಿತ ಕಷ್ಟದಿಂ ವ್ರೀಹಿತೃಣ ವಾಸಿನೊಳ್ಮಲಗಿಂತು ತುಂಬೆಯೊಳು ಜಲವ ||
ನಾ ಪರಮಶಿವಯೋಗಿ ಪಾನಗೆಯಲ್ಕೆಸತಿ
ತಾ ಪತಿವ್ರತೆ ಸುಗುಣವ್ರಾತ ಲಿಂಬಾದೇವಿ
ಆ ಪತಿಯ ವ್ರತದಂತೆ ಪಾಲಿಸಲದನು ನೋಡಿ ಕರುಣದಿಂ ತವರಮನೆಗೆ ||೧೧||

ಪೋಗಬೇಹುದೆಂದು ನಮ್ಮ ಸಂಗದಿಂದತಿ ಕಷ್ಟ
ಬೇಗೆ ಬಡುತಿರ್ಪುದೇಂ ಕಾರಣವೆನಲ್ಕೇಳಿ
ಸಿಗಬಹುದೆ ಸ್ವಾಮಿ ತಮ್ಮ ಚರಣವನಗಲಿ ಜೀವಿಪೆನೆ ಲೋಕದೊಳಗೆ ||
ಯೀಗ ತಮ್ಮಯ ಸುಖವೆನ್ನ ಸುಖವಲ್ಲವೆಯ

ದೀಗಲೀ ಸೌಭಾಗ್ಯ ಬಿಟ್ಟು ಕಳೆಯುವುದುಂಟೆ
ರಾಗದಿಂ ತವೆ ಚಲನೆ ಸೇವೆಯ ಸುಖವದೆನಗೆ ಪ್ರಾಪ್ತಿಸಿದ ಪುಣ್ಯವೆನಿಸಿತೊ ||೧೨||

ಎಂದು ಸಂತೋಷದಿಂ ಸಾಷ್ಟಾಂಗದಿಂ ನಮಿಸಿ
ಬಂಧುರಾನಂದದಿಂ ಶಿವಲಿಂಗ ಯೋಗಿಗಳು
ಬಂದೆತ್ತಿಕೊಂಡು ಮುಂಡಾಡಿ ಗಾಢಾಲಿಂಗನಂಗೈದಿರೆಂದು ಪೇಳಿ ||
ಮುಂದೆ ಯೋಗಾಭ್ಯಾಸ ಮಾಡುತೆ ಕೆಲವು ದಿನವು
ಸಂಧಿಯಿದರೊಳಗಾವ ಫಲಮುಂಟು ತಿಳಿದೊಡಿದ
ನೊಂದುದಿನ ಕಾಣ್ಬುದೆಲ್ಲವು ಮಿಥ್ಯವಲ್ಲವದರಿಂದ ನಿಜದೊರಕದೆಂದು ||೧೩||

ತಮ್ಮೊಳಗೆ ತಿಳಿದು ನಿಜಪೇಳ್ವ ಗುರುಯೆಲ್ಲಿಹನೊ
ಗಮ್ಮನವರಿರ್ದೆಡೆಗೆ ಸಾರ್ದು ಮುಕ್ತಿಯ ಸುಖವ
ನೆಮ್ಮುವೆನೆನುತ್ತೆ ವೇಶ್ಮವತ್ಯಜಿಸಿ ದೇಶ ಭಾಗದೊಳು ಸಂಚರಿಸುತಾಗ ||
ಸುಮ್ಮನೈರೋಡಗಿಯ ಪುರದ ಪೂದೋಟದೊಳಗೆ
ವೊಮ್ಮನದೊಳೀಶಾರ್ಚನೆನಂಗೆಯ್ಯುತಿರಲಾಗ
ಬೊಮ್ಮತಾನೇ ಕೃಪೆಯಗೆಯ್ದಂದದೊಳ್ಪುರದ ಸದ್ಭಕ್ತರಿವರ ನೋಡಿ ||೧೪||

ನಮಿಸುತಾವೂರ ಪೆಸರೇನೆಲ್ಲಿಗೈದ ಪಿರಿ
ಸ್ವಾಮಿಯನೆ ಸಲಗರದ ಶಿವಲಿಂಗದೇವರನು
ತಾಮಹಾ ನಿಜತತ್ವ ಬಲ್ಲ ಗುರುಗಳನರಸುತಿಲ್ಲಿಗೈ ತಂದೆವೆನಲು ||
ಸೋಮಧರ ಭಕ್ತರಾಲಿಸುತ ವರಗುರುತವನು
ನೇಮದಿಂ ಪಿಡಿದು ನಿಮ್ಮಯ ಪಿತೃವಿಲ್ಲಿ ಸಲೆ
ರಾಮಣೀಯಕವಾಗಿ ಪಾಠಶಾಲೆಯೊಳು ಕೆಲದಿನ ಬಾಲರೋದಿಸಿದರು ||೧೫||

ನೀವಾದರಿಲ್ಲದೊಡಂ ದೊಡ್ಡಮಾರ್ಗವಿದು
ಪಾವನಾತ್ಮರು ತಾವೆದಾರಾದರುಂ ಬರುವ
ರಾವದೇಶಕೆ ಪೋಪಿರಿಲ್ಲೆ ಪಠಣಾ ಮಂದಿರವನಿಕ್ಕೆಯಿರುವದೆನಲು ||
ಸಾವಧಾನದೊಳಂತರಂಗದೊಳು ತಿಳಿದರುಂ
ಭಾವಿಸುತೆ ಸದ್ಭಕ್ತರೋಚನವನು ಬಂದಿತಿದು
ಯೀವರ್ಷ ಪೂರ್ಣವಿಲ್ಲದ್ದು ನೋಡಲಿಕ್ಕಾರು ಬಾರದಿರೆ ಪೋಪೆನೆಂದು ||೧೬||

ನಿಯಮಿಸುತಲವರಿಗಾಯ್ತೆಂದು ಪೇಳಲವ
ನಯದಿಂದ ಸಿಂಗಾರಿ ರಾಚಪ್ಪನೆಂಬುವನು

ಭಯಭಕುತಿಯಿಂದೆ ತನ್ನಯ ಮನೆಗೆ ಕರೆದೊಯ್ದು ಲಿಂಗಾರ್ಪಿತವನೆಸಗಿಸಿ ||
ನಯದಿಂದ ನೂರಾರು ಹುಡುಗರಿಗೆ ತಂದವರು
ಯೀಯಲಾನಂದದಿಂದೋದಿಸನೆ ಸುಖದಿಂದೆ
ರಾಯಶಿವಲಿಂಗದೇವರು ಮಿರ್ದು ಬಾಲರಿಗೆ ಪೇಳಿದರಂತೆನಲು ||೧೭||

ದಾರಾದರುಂ ಸಾಧು ಸತ್ಪುರುಷರಿಲ್ಲಿವರ
ಲರಿದವರ ಕರೆತಂದೆನಗೆ ದರ್ಶನವದೊಳ್ಪು
ದರಿಯಿರೆನಲಂತಾಯಿತಂದೆವರು ಬಂದವರ ಕರೆತಂದು ತೋರಿಸುತಿರೆ ||
ಕರಿಬಸವರಾಯರೊಂದು ದಿನ ಚರಿಸುತ್ತೆ
ಯ್ಯೆರೊಡಗಿಯ ಗ್ರಾಮದವ ಸದ್ಭಕ್ತನಹ
ವರ ತೆಲಗ ಮಾದಪ್ಪನೆಂಬವನ ಮನೆಗೆ ಲಿಂಗಾರ್ಪಿತಕೆ ಪೋಗಲವನು ||೧೮||

ಬರುವುದೆಲೆ ಸ್ವಾಮಿಯೆಂದುಂ ನಮಿಸಿ ಗರ್ದುಗೆಯ
ನಿರಿಸಿ ಸ್ನಾನವ ಮಾಡಿಸಿವರು ಲಿಂಗಾರ್ಚನೆಯ
ಭರದೊಳೆಸಗಲ್ಕವರ ಲಿಂಗಾರ್ಪಿತವ ಮಾಡಿಸುವದೆಂದು ಸತಿಗೆ ಪೇಳಿ ||
ವರಪುತ್ರನೆಯಿವರ ಪಂಕ್ತಿಯೊಳಗುಂಡು ನೀ
ನಿರದೆ ಸಾಲೆಗೆ ಪೋಪುದೆಂದು ಪೇಳುತ ಹೊಲಕೆ
ಸರಸರನೆ ಪೋಗಲವರಿವರು ತೃಪ್ತಿಯಗೈಸಿ ಕಳುಹಲವರುಂ ಮುದರೊಳು ||೧೯||

ಮಠಕೆ ಪೋಗಲ್ಕಿತ್ತಲಾ ಹುಡುಗ ಬರಲವನ
ನಟಿಸುತೆಲ್ಲಿಗೆಯಿನಿತು ವೇಳೆ ಪೋಗಿರ್ದೆಯೆನ
ಘಟವೃದ್ಧ ಚರನೋರ್ವನಮ್ಮ ಮನೆಯರ್ಪಿತಕೆ ಬಂದಿರ್ದರವರೆ ದೆಶೆಯಿಂ ||
ತಟತಟನೆಯವರ ಪಾದಾರ್ಚನೆಯ ಮಾಡುತ್ತೆ
ದಿಟದಿಂದವರ ಪಂಕ್ತಿಯೊಳು ಕುಳಿತು ವುಂಡೆನದ
ಸಟೆಯಲ್ಲ ಸ್ವಾಮಿನಾ ಮತ್ತಾವ ಕಡೆ ಪೋದುದಿಲ್ಲವೆಂದೆನುತೆ ಪೇಳೆ ||೨೦||

ಅವರು ತಾವಲ್ಲಿಹರು ಕರತಂದೆಯಾದಂದು
ಶಿವಲಿಂಗದೇವರವನಿಗೆ ಪೇಳಬಹುದೆಂದು
ತವೆಮಠಕೆ ಪೋಗಿಯವರಿಗೆ ನಮಸ್ಕರಿಸಿ ನಮ್ಮಯ ಸಾಲಿಯಯ್ಯನವರು ||
ತವ ಚರಣಮಂ ಬಯಸಿಹರು ಸ್ವಾಮಿ ಬರುವದೆನ
ಲವರು ಅಂತಾಯ್ತೆಂದು ಬರಲಿವರ್ಗೆ ಆಸನವ
ಭವಿಕದಿಂ ಪಾಸುತ್ತಲವರು ಕುಳ್ಳಿರಲವರ್ಗೆ ಸಾಷ್ಟಾಂಗದಿಂ ನಮಿಸುತೆ ||೨೧||

ಎಲೆಸ್ವಾಮಿ ತಮ್ಮ ದೇಶವದಾವುದುದಾವಸ್ಥಲ
ಸುಲಲಿತ ಮಠವದಾನಲ್ಲಿಹುದು ಸಮಯವದು
ಪೇಳಿರೆನೆ ಮೈಸೂರು ವಿಷಯ ಕನಕಾದ್ರಿ ಪುರಕೆಂಪಿನ ಸಮಯವಿರುವುದು ||
ಬಾಲನಾಗಿರ್ದದು ಸುಗುಣ ಬೋಧೆಯನರುಗ
ಳೊವಿದನುಗ್ರಹಿಸಿದ ಬಳಿಕಲ್ಲು ಪದಿನಾರು
ಲಲಿತವತ್ಸರವಾಗೆ ಗುರುಗಳಪ್ಪಣೆಗೊಂಡು ಸಕಲದೇಶವ ಚರಿಸುತೆ ||೨೨||

ಪುರವಾಂಧ್ರ ಜನಪದದೊಳೆಸೆವ ವಲ್ಲಂಪಳ್ಳಿ
ಹಿರೆಮಠದ ವೀರಣಾರ್ಯರುದಯದಿ ನಿರ್ಗುಣರ
ವರಬೋಧೆಯನು ಪೇಳ್ವರಲ್ಲಿಂದ ಸಂಚರಿಸುತಿಲ್ಲಿಗೆಂದೆ ಬಂದೆವೆನಲು ||
ಪರಮ ಶಿವಲಿಂಗಾರ್ಯರಿದ ಕೇಳಿ ಸಂತಸದಿ
ನಿರವಿಸುವದೆನಗೆ ನಿರ್ಗಣ ಬೋಧೆಯೆಂದೆನುತೆ
ಕರದೊಳಗೆ ಫಲಪುಷ್ಪವಿಡಿದು ಸಾಷ್ಟಾಂಗ ಪ್ರಣಮಿತರಾಗಿ ಭಿನ್ನವಿಸಿಲು ||೨೩||

ಎಲೆ ಮಗನೆ ತನುಮನಧನಂಗಳಿವ ಗುರುಗಳಿಗೆ
ನಲವಿನಿಂ ಸಲ್ಲಿಸುವದೊಂಚನೆಯಿಲ್ಲದಲೆ
ಫಲಿಸುವದು ನಿಜಮೋಕ್ಷ ಸಿದ್ಧಿಯನೆ ಅಂತಾಯಿತೆಂದು ತ್ರಿವಿಧ ಪದಾರ್ಥವ ||
ಸುಲಭದಿಂ ತವಚರಣಕ್ಕೊಪ್ಪಿಸಿದನೆಲೆ ದೇವ
ವೊಲವಿನಿಂ ಕರುಣೆಗೆಯ್ಯುದುಯೆನಗೆ ಭವಶರಧಿ
ಸಲೆ ದಾಟಿಸುವದೊಡೆಯನೇ ಬಡವನಾನಿಹೆನು ನನ್ನ ಗುಣಗಳ ನೋಡದೆ ||೨೪||

ಪರುಷವದು ಕಬ್ಬಿಣದ ಗುಣವನರಸುವುದುಂಟೆ
ತರಣಿಯುದಯಕೆ ತಮವನಿನಿತು ನಿಲ್ಲುವುದುಂಟೆ
ಪರಮತ್ತ್ವಣರಾಸಿಗಿನಿತುಂ ಕಿಡಿಯಸಾಲದೆ ಗುರುಕರುಣವಾದ ಬಳಿಕ ||
ಮರವಿ ದೋಷವನುಳಿವುದೇ ಸ್ವಾಮಿ ವಾಯಸವ
ವರಕನಕಗಿರಿ ಮುಟ್ಟಲುಳಿವುದೆ ಮೊದಲ ವರ್ಣ
ಭರದೊಳೆನ್ನಯ ಭವ ದುಃಖವನು ಪರಿಹರಿಸು ಕಾಯ್ಯುದೆಂದೆರಗಲಾಗ ||೨೫||

ಕಂದ ಕೇಳಿದನೊರೆವೆ ತನುಮನ ಧನಂಗಳಿವ
ಚಂದದಿಂ ಗುರುಗಳಿಗೆ ಸಲ್ಲಿಸಿದ ಬಳಿಕಿನ್ನು
ಮುಂದೆಯೇನುಳಿದಿಹುದು ನೀನುದಾರಾವನೆಲೆ ತಿಳಿವುತಿರ್ಪುದದಾವುದು ||
ಅಂದವಾಗಿಹ ತನುವದೆನಲು ನಾಲ್ಕಿರುತಿಹವು

ಸುಂದರದ ಸ್ಥೂಲ ಸೂಕ್ಷ್ಮಂ ಕಾರಣವು ಮತ್ತೆ
ಬಂಧುರ ಮಹಾಕಾರಣಂಗಳೆಂಬವಿವರೊಳಗೆ ಭೂತಾತ್ಮವದೆಸ್ಥೂಲವು ||೨೬||

ಕರಣ ಪಂಚಕವೆ ಸೂಕ್ಷ್ಮಂ ವಾಯುದಶಕವವು
ಕಾಣವೆನಿಪವಂಗ ಮೂಲಹಂಕೃತಿ ತಾನೆ
ವರಮಹಾಕಾರಣವಿದೇ ಮೂಲ ಮಾಯ ಪ್ರಥಮ ಧ್ಯಾಸ ಕಲ್ಪಿತವಿದೆ ||
ಪರ ಪರತರ ಸಚ್ಚಿದಾನಂದ ನಿತ್ಯ ನಿಜ
ಪರಿಪೂರ್ಣ ಪರಬ್ರಹ್ಮವಿದೆ ಮೂಲವಿದರೊಳಗೆ
ಅರಿವು ಜನಿಸುತ್ತಿದೇ ಸ್ಫೂರ್ತಿಯಿದರಿಂದಲೀ ಸಕಲ ಬ್ರಹ್ಮಾಂಡವಾಯ್ತು ||೨೭||

ನಾನೆ ಬ್ರಹ್ಮನು ನಾನೆ ಶಿವಜೀವ ಕರಣೇಂದ್ರಿ
ನಾನೆ ತನುವೆಂಬ ಭಾವನೆ ಜನಿಸಿದುದರಿಂದೆ
ನಾನತ್ವವಾಯಿತಿದನೇಕಮೇವ ಬ್ರಹ್ಮದನ್ವಯವೆನಿಪ್ಪ ಶೃತಿಯು ||
ತಾನಿರ್ಪುದಾಗಿ ಮಿಥ್ಯಕಲ್ಪನೆಗಳಿಂದ
ಹಾನಿವೃದ್ಧಿಯು ಜನನ ಮರಣ ಸುಖ ದುಃಖಗಳು
ತನಗಾಗುತಿಹವೆಂದು ತಿಳಿವುದಿದು ಮರವೆ ನಿಜವರಿಯೆ ತನಗೊಂದಿಲ್ಲವು ||೨೮||

ಮರೆಯಲವ ಜೀವಾತ್ಮವರಿಯೆ ತಾ ಪರಮಾತ್ಮ
ಅರಿವು ಮರವೆಗಳೊಂದುಗುಂಟವಂತರನೆಂದು
ಅರಿತ ಮಹಸುಜ್ಞಾನ ಗುರುಗಳಿದ ಪೇಳವರು ಶೃತಿಸ್ಮೃತಿಗಳರಿದು ಮುದದಿ ||
ಅರಿವು ತಾನೆ ಪರತರ ಬ್ರಹ್ಮವೆಂದು ತಿಳಿ
ಅರಿವಿನೊಳುಮುವೆ ಘಟಿಸದು ತರಣಿ ಕುದುರೆಗಳಿ
ಗಿರದ ಕತ್ತಲೆಯಂತೆ ಸಕಲ ನಿಃಕಲ ತತ್ವದ ತಿಳಿವುತೆಹೆ ನೀನೆ ನಿಜವು ||೨೯||

ಕಾಣುತಿಹ ಜಗಜೀವ ದೇಹವೆಂಬವು ಮಿಥ್ಯ
ಕಾಣದರ್ಪರಿವದೇ ಬ್ರಹ್ಮವೆಂಬುದು ತೂರ್ಯ
ಮೇಣರಿವದಡಗಿದುಳುಮೆಯೆ ತೂರ್ಯಾತೀತವದು ಅರಿವುತಿಹುದದುವೆ ಪುಸಿಯ ||
ಸ್ಥಾಣು ತಸ್ಕರನ ತೆರದಿಂ ಕಾಣುತಿಹುದ್ಯೆ ಸ
ಜಾಣರಿದು ತಿಳಿದು ನೋಡಿದೊಡಾವುದಿಲ್ಲ ದಿಟ
ವೂಣೆಯವ ನುಡಿವುದಿದು ಮಾಣುಕಾಣದೆ ಮಾಳ್ಪ ಶುನಕನಂದ ದೊಳಪ್ಪುದು ||೩೦||

ಬ್ರಹ್ಮದ ವಿವರ್ತವೆಂದೆನಿಸದೀ ಜಗವನಿದು
ಬ್ರಹ್ಮದಿಂದಾದ ಕಾರ್ಯವದೆನಿಸರೀ ಜಗವು

ಬ್ರಹ್ಮರ ವಿಲಕ್ಷಣವರೆನಲಿಲ್ಲ ಬ್ರಹ್ಮಸ್ತವೆನಿಸಿದರು ಪುಸಿದೋರ್ಕೆಯು ||
ಬ್ರಹ್ಮ ವಿದ್ಯಕೆ ಸಾಕ್ಷಿ ವೃಷ್ಟಾಂತ ವಿಲ್ಲವಿದು
ಬ್ರಹ್ಮವಿದು ಭಾವಿಸುವೊಡದು ಭಾವಮೀರಿಹುದು
ಬ್ರಹ್ಮವದು ತಾನೆಯೆಂದಿ ರ್ಪುದಲ್ಲದೆಯೊಂದೆಯೆಂಬುದುದದಿಲ್ಲವಾಗಿ ||೩೧||

ಎಂದುಯಿಲ್ಲದ ಜಗವನಿಂದಿರುವದೆಂದೆನುವ
ದಂದವಿಲ್ಲದೆ ಪೋಪುದಿದು ನನ್ನ ತಿಳಿದೊಡದು
ದಂದುಗವದ್ಯಾಕದಕೆ ತಿಳಿಯೆ ಸಾಕ್ಷಿಯದೆನಿಪೆ ಸುಂದರನೆ ಕೇಳು ಮುದದಿ ||
ಸಂದಿರುವ ಜಗವನಿದು ದಿಟವೆಂದು ಬಗೆಯಲವ
ಕಂದನೇ ಕೇಳು ಜೀವಾತ್ಮನೆನಿಸುವನವನು
ಬಂಧುರದ ಜಗವಿದನು ಪುಸಿಯೆಂದು ತಿಳಿವಾತ ನಂತರಾತ್ಮನೆನಿಪವನು ||೩೨||

ಪುಸಿರ್ದಿರವೆನಿಪ್ಪವೆರೆಡು ಭಾವಗಳು ತೋರದಿರೆ
ಸಸಿನೆ ಭಾವಾತೀತ ಪರಮಾತ್ಮನೆನಿಪವನ
ವೊಸದಿರುವ ವೃತ್ತಿಕೆಯೊಳಲ್ಲದಿಹದೇವತ್ವದುಳ್ಳದೆಂದೆನಿಪ ತೆರದಿ ||
ಹೆಸರಿಗಿಲ್ಲದ ತ್ರಿಜಗವದ್ವೈತವಾತ್ಮನೊಳು
ಸುಸರದಿಂದುಳ್ಳಂತೆ ತೋರ್ಪುದರಿಯಲ್ಕದನು
ಯೆಸದಿರುದದುಂಟಿ ನೀನಿರೆ ವಿಚಾರಿಸಬಹುದು ಏಕಾತ್ಮ ನೀನೆನಿಜವು ||೩೩||

ಜಗವಿಲ್ಲದವರಿಂದೆ ಜಗವ ಕಾಣ್ಬವನುಂಟೆ
ಜಗವಕಂಡವನಿರ್ದೊಡಿದುವೆ ಪುಸಿಯೆಂದು ಸುರ್ವ
ಬಗೆಯದೋರದದಾಗಿ ಪೇಳ್ವುದೆಲ್ಲವು ಮಿಥ್ಯ ಕೇಳ್ವುದೆಲ್ಲಿಹುದು ತಿಳಿಯೆ ||
ಮಿಗೆಯಿರುವ ಶರಧಿಯೊಳಗಿಲ್ಲದಿಹ ತೆರೆನೊರೆಗ
ಳೊನುಮಿಗೆಯೊಳೆಲ್ಲಕ್ಕೆ ಮೂಲವೆನಿಸಿದ ತೆರದಿ
ಸೊಗಿಸಿನಿಂದುಳ್ಳಾತ್ಮನೊಳಗಿಲ್ಲದಿಹ ಜೀವರೆಲ್ಲರ್ಗೆ ಮೂಲವೆನಿಕು ||೩೪||

ನೀನೆ ನಿಜವಿಹ ತೋರ್ಪವೆಲ್ಲ ಮಿಥ್ಯರು ತಿಳಿಯೆ
ಸಾನುರಾಗದೊಳರಿದರಿದು ಪುಸಿಯದಾಗಲದು
ನಾನು ನೀನೆಂದಿಲ್ಲದುಳುಮೆಯೆ ನಿಜವದನು ತಿಳಿಯೆ ತಿಳಿಸುವರಿಲ್ಲವು ||
ಸ್ವಾನುಭವದೊಳರಿವುದೆಲೆ ಮಗನೆ ನಿಜವನಿದೆ
ಹಾನಿಜನನಾದಿಗಳದೇನಿಲ್ಲವಿದು ಸತ್ಯ
ತಾನೆ ತಾನೆಂದರಿದು ಮೌನದಿಂದಿರು ನಿಜಾನಂದ ಪರಬೊಮ್ಮವೆ ನಿಜ ||೩೫||

ಎಂದು ಕರಿಬಸವಾರ್ಯ ಶಿವಲಿಂಗ ದೇವರಿಗೆ
ಬಂಧುರದೊಳಂ ನಿಜದ ಬೋಧೆ ಪೇಳಲ್ಕರಿದು
ಚಂದದಿಂದಾನಂದ ಬಾಷ್ಪೋದಕ ಕಟಾಕ್ಷದೊಳ್ಸುರಿಯೆ ರೋಮೋದ್ಗಮ ||
ಸುಂದರಾಂಗದೊಳು ತೋರಲ್ಕಂಡ ಶಿರಬಿಗಿಯ
ಲಂದೆದ್ದು ಮೈಯುಬ್ಬಿ ಸಾಷ್ಟಾಂಗದಿಂ ನಮಿಸಿ
ಇಂದುಧರ ರೂಪನೆನ್ನಯ ದಂದುಗವನಳಿದೆ ಮರವಿದೋಷವನು ಕಳೆದೆ ||೩೬||

ಇಲ್ಲದಿಹ ಭವದುಃಖದುಳ್ಳಂತೆ ಭಾವಿಸಿದೆ
ವುಳ್ಳ ಖಂಡದ್ವಯಾತ್ಮನೆ ತಾನೆಯೆಂಬರಿವ
ನಿಲ್ಲದಿರೆಯದನರುಹಿ ತೋರಿದೆ ಮಹಾಗುರುವೆಯೆನಿತು ಪೊಗಳಿದರು ಕಿರಿದೆ ||
ಸುಳ್ಳು ಮಾಯೆಯದನದನುಳ್ಳಂತೆ ತೋರಿತಿದು
ಯೆಳ್ಳಿನಿತದಾದರುಂ ಯಿಲ್ಲೆನಿಸಿತಿದು ನಿಮ್ಮ
ಬಲ್ಲಿದ ಮಹಾಕೃಪೆಯದೆಲ್ಲೆಲ್ಲಿ ನೋಡಿದರುಯಿಲ್ಲೆನಿಸದದು ಪೂರ್ಣವು ||೩೭||

ಇಂತು ಬಹುಪರಿಯಿಂದೆ ನುತಿಸಿ ಸಂತೋಷದಿಂ
ಕಂತುಹರ ರೂಪಶ್ರೀ ಗುರು ಕರಿಯ ಬಸವನು
ಸಂತ ಶಿವಲಿಂಗಾರ್ಯರವರ್ಗೆ ವಿಜ್ಞಾಪನಂಗೈದು ತಮ್ಮಯ ಸ್ಥಲಕ್ಕೆ ||
ಯೆಂತಾದೊಡಂ ಬರುವದೆನುತೆ ಕರೆದೊಯ್ದುಮನೆ
ಯಂತರಾಳದೊಳು ಕೆಲ ದಿವಸ ವಾಸವಗೈಸಿ
ಸಂತತಾನಂದದಿಂ ಪಾದಸೇವೆಗೆಯ್ಯುತನುಭವದ ಗೋಷ್ಟಿಯೊಳಗೇಂ ||೩೮||

ಹಗಲಿರುಳು ಲೀನವಾಗಿರ್ದು ತತ್ವದ ಶಾಸ್ತ್ರ
ಸೊಗಸಿನಿಂದೋದಿಯರ್ಥೈಸುತ್ತಲದರಿಂದ
ಗಗನವದು ತುಂಬಿ ಸೂಸುವ ಸಂಭ್ರಮಾನಂದವಾವರ್ಕದಿಂದೆಸೆಯಲು ||
ಮಿಗೆ ಗುರುಗಳಾಜ್ಞೆಗಳ ಗರ್ಜನೆಯ ಸಹಿಸುತ್ತೆ
ರಾಗದಿಂದಿರಲೊಂದು ದಿನ ಹಿರೆಯ ದುರ್ಗದವ
ರಾಗಭಕ್ತರು ಮಹೇಶ್ವರರು ಫಲಕರ್ಪೂರ ಸನ್ನಿಧಿಯೊಳಿಟ್ಟು ನಮಿಸಿ ||೩೯||

ಸ್ವಾಮಿಯೆಮ್ಮೂರ್ಗೆ ಬಂದುದ್ಧರಿಸುವದುಯೆನುತೆ
ಕಾಮದಿಂ ಬಿನ್ನಹಂಗೆಯ್ದು ಬಿಜಯಂಗೈಸಿ
ಸೋಮನೇಮಾ ಚೂಡ ರೂಪ ಶಿವಲಿಂಗಾರ್ಯದಿವರ ಸಹ ಪೋಗುತಲ್ಲಿ ||
ರಾಮಣೀಯಕ ಮಡಿವಳೇಶ ಚರಮೂರ್ತಿಗಳೂ

ರೋಮರೋಮವನುಬ್ಬ ತಮ್ಮ ಮಠದೊಳಗಿರಿಸಿ
ರಾಮವೆನೆ ಕೆಲವದಿನ ಲಿಂಗಾರ್ಚನೆಯೆನೆಸಗಿಸುತ್ತ ವೇದಾಂತ ಶಾಸ್ತ್ರ ||೪೦||

ಚಂದವಾಗಿಯೆ ಕೇಳುವದರಿಂದಪೇಕ್ಷವನು
ಮುಂದುಗೊಂಡಾ ಕರಿಯ ಬಸವ ಸದ್ಗುರುಗಳಿಗೆ
ಬಂದು ಸಾಷ್ಟಾಂಗದಿಂ ನಮಿಸಿಯೆನ್ನಯ ಭವವ ಭೇದಿಸುವದೆಂದು ಪೇಳೆ ||
ಬಂಧುರ ಮಹಾಸಗುಣ ನಿರ್ಗುಣ ಭೇದವನು
ಅಂದವಾಗಿಯೆ ತಿಳಿದುದಾನಂದದಿಂ ಭವದ
ಬಂಧನವನಳಿದು ಗುರುಚರಣದೊಳು ಬಿದ್ದುರುಳುತಿರಲಾಗ ಭಕ್ತರೊಲಿದು ||೪೧||

ಸಾಷ್ಟಾಂಗದಿಂ ನಮಿಸಿ ನಮ್ಮ ಭವ ದುಃಖದತಿ
ಕಷ್ಟವನು ಬಿಡಿಸೆಂದು ವಿಜ್ಞಾಪನಂಗೈಯೆ
ಶಿಷ್ಟ ತತ್ತ್ವೋಪದೇಶವಗೈದುಯುದ್ಧರಿಸಿ ಸ್ವಲ್ಪದಿನದಲ್ಲಿರುತ್ತೆ ||
ಶ್ರೇಷ್ಟ ಭಕ್ತರಯಿಷ್ಟವನು ಸಲಿಸಿ ಸಲಗರಕೆ
ತುಷ್ಟಿಯಿಂ ಬರಲು ಮತ್ತೈರೋಡಗಿಯ ಪುರಕೆ
ಸ್ಪಷ್ಟಪೋಗುವೆವೆನಲ್ಕಂತಾಯಿತೆಂದು ಶಿವಲಿಂಗದೇವರು ಗುರುಗಳ ||೪೨||

ಕರೆದೊಯ್ಯುವೀರಮಾಹೇಶ್ವರ ಗಣಾಚಾರಿ
ಪರಮ ಮಡಿವಳದೇವ ಬಂದೆರಗಿ ನಮ್ಮ ಮನೆ
ಗಿರದೆ ಬಿಜಯಂ ಮಾಡಿಯುದ್ಧರಿಪುದೆಂದೆನುತ ವಿಜ್ಞಾಪನವ ಮಾಡಲು ||
ಚರಣಸೇವೆಯು ನಮ್ಮಗಳ ಗರ್ಜನೆಯ ಬೇಗ
ಸೈರಿಸುವದುಂಟೆಯೆನೆ ತವ ಪಾದದಾಜ್ಞೆಯನು
ಭರದೊಳೆಂತಿರುವದಂತಿರುವೆ ಸ್ವಾಮಿಯೆ ತಾವು ಕರುಣಗೆಯ್ಯುದುಯೆಂದೆನೆ ||೪೩||

ಅಂತವರ ಮನೆಗೈದಿ ಸಂತಸದೊಳಂ ಪರಮ
ಶಾಂತಿಯಿಂ ಲಿಂಗಾರ್ಚನೆಯನೆಸಗುತಿರುತಿರಲು
ಸಂತಶಿವಲಿಂಗದೇವರು ಅವರ ರಕ್ಷಣೆಗೆ ಹಣವ ಕಳುಹುತಿರ್ದರು ||
ಯಿಂತು ಬಹುದಿನವಲ್ಲಿ ಸಂತಸದೊಳಿರಲವರ
ಪಂಥವನು ತಿಳಿದು ಮಡಿವಳ ದೇವನೊಂದು ದಿನ
ಅಂತಃಕರುಣ ಮಾಳ್ಪುದೆಂದೆರಗಿ ಮುಕ್ತಿಯನು ಪಡೆದು ಸುಖದಿಂದಿರ್ದರು ||೪೪||

ಒಂದು ದಿನವಾಗ್ರಾಮದ ಭಕ್ತನೋರ್ವನು ಬಂದು
ಯಿಂದುಧರರೂಪ ಕರಿಬಸವ ಯತಿವರ್ಯರಿಗೆ

ಹೆಂದದಾನಂದದಿಂ ಸಾಷ್ಟಾಂಗವೆರಗಿ ನಮ್ಮನೆಗೆ ಬಿನ್ನಹಕೆ ಬರುವುದು ||
ಯೆಂದು ಪೇಳಲ್ಕಿವರು ಅಂತಾಯಿತೆಂದವನ
ಮಂದಿರಕೆ ಪೋಗಿ ಗರ್ದುಗೆಯೊಳಗೆ ಕುಳಿತು ಮನ
ಬಂದೂರ್ಧ್ವದೃಷ್ಟಿಯಿಂದಿರಲಾಗ ಜಾತಕನು ಯೆಂದನೆಲೆಸ್ವಾಮಿ ನೀವು ||೪೫||

ಮೇಲೆ ನೋಡುವಿರೇಕೆ ವುಂಡಮನೆಗಳಗಳನು
ಲೀಲೆಯಿಂ ಗಣನೆಗೆಯ್ವರು ಗಣಂಗಳದೆಂದು
ಬಾಲವೃದ್ಧಾದ್ಯಖಿಲ ಮಾನವರು ನುಡಿವುತಿಹ ಗಾದಿವಚನಗಳಂತೆನೆ ||
ಎಲೆಲೆ ಮೂರ್ಖಾದಹಿಸಲದನೇಕೆ ನೋಳ್ಪೆನೆನೆ
ಶೂಲಿರೂಪಾಶ್ರಮವ ಹೊಂದುವದರೊಳಗವನ
ಮೂಲಗೃಹ ದಹನವಾಗಲ್ಕೆತಿಯ ವಾಕ್ಯವನು ಪುಸಿಯದಾಗುವುದೆಯೆನುತೆ ||೪೬||

ಸಕಲ ಸದ್ಭಕ್ತರತಿಶಯದಿಂ ನುತಿಸುತಿರಲು
ವಿಕಲನಾಗುತ್ತಲಾಭಕ್ತ ಬಂದಡಿಗೆರಗಿ
ಭಕುತಿಯಿಂದೆನ್ನಯಪರಾಧ ಕ್ಷಮಿಸುವದೆಂದು ಅಡ್ಡ ಬಿದ್ದೇಳದಿರಲು ||
ಮುಕುತಿ ಸ್ವರೂಪ ಕರಿಬಸವಾದ್ಯರುಂ ದಯದಿ
ಪ್ರಕಟದಿಂ ಭಯವಿತ್ತನು ಭವಸುಶಾಸ್ತ್ರವನು
ಚಕಚಕಿತದಿಂದೋದುತಾನಂದ ಸುಖಸಂಕಥಾ ವಿನೋದದೊಳಿರ್ವರು ||೪೭||

ಮರುಳಸಿದ್ಧಾಚಾರ್ಯ ರಾಮಿದೇವಾಚಾರ್ಯ
ವರಪಂಡಿತಾಚಾರ್ಯ ಗುರುವು ವಿಶ್ವಾಚಾರ್ಯ
ರುರೆ ಮಧ್ಯವದನ ಸಂಜಾತ ರೇವಣಸಿದ್ಧನುದರ ಭವರುದ್ರಮುನಿಯ ||
ಕರದೊಳುದ್ಭವ ಮಹಂತಾಚಾರ್ಯ ಚರಣಜನಿ
ಗುರುಪರಂಪರೆಯ ಜನ್ಮನಿ ವಲದಿ ಹಿರೆಮಠದ
ಚರಪಟ್ಟವರ್ಯನುರೆ ಗುರುಮಹಂತನು ಪೇಳ್ದ ಗುರುಕೃಪೆ ಬಲಾತ್ಕಾರದಿಂ ||೪೮||

ಅಂತು ಸಂಧಿ - ೧೩ಕ್ಕಂ, ಪದ ೭೯೭ಕ್ಕಂ ಮಂಗಳ ಮಹಾ

ಹದಿನಾಲ್ಕು

ಸಂಧಿ

||ಪಲ್ಲವ|| ಪರಮ ಶ್ರೀ ಗುರು ಕರಿಯಬಸವ ಲಿಂಗಾರ್ಯ
ರುರೆ ವಿರತ ಚರಪಟ್ಟ ವರ ನೃಪಹಸ್ತರುದೊರೆಗ
ಳರರೆ ನರನಾಥ ಸದ್ಭಕ್ತ ವಿತತಿಗೆ ಮುಕ್ತಿಮಾರ್ಗವನು ತೋರಿದರಲ ||

ವರಸಚ್ಚಿದಾನಂದ ನಿತ್ಯಪರಿಪೂರ್ಣಘನ
ತರ ಪರಮ ನಿರ್ಗುಣ ನಿರಾಕಾರ ನಿರ್ದ್ವಂದ್ವ
ನಿರುಪಮ ನಿರಾಧಾರ ನಿರಪೇಕ್ಷ ನಿರ್ಲಕ್ಷ ನಿರ್ಮಾಯ ನಿಷ್ಕಳಂಕ ||
ಪರಮ ಪರತರ ಪರಂಜೋತಿ ಪರಮಾನಂದ
ಪರಮಾತ್ಮ ಪುರವೈರಿ ಪಾರ್ವತಿನಾಥ ಗಣ
ವರ ನಮಿತ ಚರಣ ಪರಿಚರದುರಿತ ಹರಣ ಕರುಣಾಕರ ಶಂಕರ ಜಯ ||೧||

ಪರಮ ಶಿವಲಿಂಗಾರ್ಯರೊಗುಮಿಗೆಯ ಸಂಭ್ರಮದಿ
ಪಾರಮಾರ್ಥ ವಿಚಾರಪೂರ ಮಾನಸರಾಗಿ
ಸಾರವನುಭವಶಾಸ್ತ್ರ ಸಂಪಾದನೆಯ ಮಾಡಿ ಹಗಲಿರುಳದೆ ಕಾರ್ಯದೊಳ್
ನಿರತರಾಗುತ್ತಲದೆ ಪರಿಸಿಯರ್ಥೈಸುತ್ತೆ
ಪರರಿಗುಪದೇಶಿಸುತ ಪುಣ್ಯಮಾರ್ಗವಿದೆಂದು
ಅರಿದು ಪರರಿಗುಪಕಾರ ಮಾಳ್ಪುರುಚಿತವಿದೆಂದು ನೀತಿಶಾಸ್ತ್ರ ಪೇಳ್ವುದು ||೨||

ಎಂತೆಸಲ್ವ್ಯಾಸಮುನಿ ಪದಿನೆಂಟು ಪುರಾಣ
ಮುಂತೆ ಮಾಡಿದನದರೊಳೆರಡೆ ವಾಕ್ಯಗಳಿಹವು

ಗ್ರಂಥಾರ್ಥವನು ಪೇಳ್ವೆ ಪರೋಪಕಾರದಿಂ ಪುಣ್ಯಪರಪೀಡೆ ಪಾಪಂ ||
ಇಂತಲ್ಲದಾ ನದಿಗಳ್ಯೆದೆ ಪರಿವೃತ್ತಿಹವ
ನಂತಗೋವುಗಳು ಕ್ಷೀರಂ ಕರೆವುತಿಹ ವೃಕ್ಷ
ಸಂತತಿಗಳಾ ಛಾಯಪತ್ರ ಫಲಪುಷ್ಪಂಗಳಿರುವುತಿಹವಿದೆಯುಪಕೃತಿ ||೩||

ಗ್ರ || ಅಷ್ಟಾದಶ ಪುರಾಣೇಶು
ವ್ಯಾಸಸ್ಯ ವಚನದ್ವಯಂ
ಪರೋಪಕಾರಾಯ ಪುಣ್ಯಾಯ
ಪಾಪಾಯ ಪರಪೀಡನಂ ||೧||

ಗ್ರಂಥಾರ್ಥಸ್ಯ ದ್ರುವಕ್ಷ್ಯಾಮಿ
ಯಃಸಾರಃಕೋಟಿ ಗ್ರಂಥಬಿಃ
ಪರೋಪಕಾರಾಯ ಪುಣ್ಯಾಯ
ಪಾಪಾಯ ಪರಪೀಡನಂ ||೨||

ಪರೋಪಕಾರಾಯ ವದಂತಿ ನದ್ಯಃ
ಪರೋಪಕಾರಾಯ ದುಹಂತಿ ನಾದಃ
ಪರೋಪಕಾರಾಯ ಇಮೇಚವೃಕ್ಷಾ
ಪರೋಪಕಾರಾಯ ಯಿದಂ ಶರೀರಂ ||೩||

ಛಾಯಾಮನ್ಯಸ್ಯ ಕುರ್ವಂತಿ
ಸ್ವಯಂತಿಷ್ಟಂತಿ ಚಾತಪೇ
ಫಲಂತಿ ಚಪರಾರ್ಥೇಚ
ನಾತ್ಮಹೇ ತೋಮಹಿ ಕೃಮಃ ||೪||

ಮೂಲೆಭುಜಂಗಾಃ ಶಿಖರೆ ವಿಹಂಗಾಃ
ಶಾಚಿ ಪ್ರವಣ್ಯಾಃ ಕುಸುಮೇಷು ಭೃಂಗಾಃ
ಛಾಯಾಮತಂಗೆ ಚಂದನ ಚಾರುವೃಕ್ಷಂ
ಪರೋಪಕಾರಾಯ ಸತಾಂ ವಿಭೂತಯಃ ||೫||

ಧನಧಾನ್ಯ ವಸ್ತ್ರವಾಹನವಸ್ತು ನಿಚಯಗಳು
ಘನವಾದ ಷೋಡಶ ಮಹಾದಾನದೊಳಗಧಿಕ
ವಿನುತನ್ನ ದಾನಕೆ ಸಮಾನವಿಲ್ಲೆಂದು ಶೃತಿಶಾಸ್ತ್ರಗಳು ಪೇಳುತಿಹವು ||

ವಿನಯದಿಂದರೊಳಗೆ ವಿದ್ಯದಾನವಧಿಕ
ಮನುಮಥಾರಿಯು ನೆನೆವ ಪೇಳ್ವದದರೊಳಗಧಿಕ
ಸನುಮತದೊಳವರ ಭವಭಾದೆ ಪರಿಹರಿಸುವುದು ಅತ್ಯಧಿಕವಿದುಯೆನುತ್ತೆ ||೪||

ಗ್ರ || ಅನ್ನದಾನೋಸದೊನಾಸ್ತಿ
ದಿದ್ಯಾದಾನತತೊಧಿಕಂ
ಅನ್ನೇನ ಕ್ಷಣಿಕಂ ತೃಪ್ತಿ
ಯಾವಜ್ಜೀವಂತು ವಿದ್ಯಯಾ ||೬||

ಆದಿಯ ಮಹಾಗಣಂಗಳು ತಾವು ಪೋಗಿರುವ
ಹಾದಿಯನು ಸರ್ವರಿಗೆ ತೋರಬೇಹುದೆನುತ್ತೆ
ಶೋಧಿಸಿ ಸಕಲ ಶ್ರುತಿಗಳರ್ಥವ ತಿಳಿದು ತತ್ವಶಾಸ್ತ್ರವಿದು ರಚಿಸಿದರಲ ||
ಬೋಧಿಸುವ ಗುರುಗಳಾದರು ಮುಚ್ಚದೀ ಜ್ಞಾನ
ಸಾಧಕರಿಗನುಮಾನವಿಲ್ಲದಲೆ ಪೇಳುವುದು
ಸಾಧಿಸಿಕೊಡುವುದುಚಿತ ಸಾಂಪ್ರದಾಯವಿದು ಮರೆಮಾಡಿದರೆ ದೋಷ ||೫||

ಬರುವುದೆಂದಾ ನಿಜಗುಣಾಕ್ಯ ಶಿವಯೋಗಿಗಳು
ನಿರವಿಸಿದಕೊರಿದಾ ವಿವೇಕ ಚಿಂತಾಮಣಿಯೊ
ಳಿರದದನು ತಿಳಿವುದಾರಾದರೇನುವಿದಕ್ಕೆ ಜಾತಿ ಗೋತ್ರವನೋಡದೆ ||
ವಿರತಿ ಸದ್ಗುಣ ಸದಾಚಾರ ಸನ್ಮಾರ್ಗಗಳು
ವಿರಳವೆನೆಯಧಿಕಾರಿಯೆನಿಪ ಕಾರಣದಿಂದೆ
ಚರಣಕೆರಗಿದಿರಿಗೊಂಚನೆಯಿಲ್ಲದಾತತ್ವವನು ಬೋಧಿಪುದು ಮುದದೊಳು ||೬||

ಅಧಿಕಾರಿ ಶಿಷ್ಯನಾದರು ಗುರುಗಳೊಳು ಜ್ಞಾನ
ದಧಿಕಾರವನೆನೊದೊಳ್ಳುಳಿದು ಕಾರಣವಿಲ್ಲ
ವಿಧಿತದಿಂ ಪೂಜ್ಯ ಗುರುಗಳಿಗೆ ಕ್ರಿಯಾ ಸಹಿತ ಬ್ರಹ್ಮಜ್ಞಾನವನಿರುವುದು ||
ಸದಮಲ ಬ್ರಹ್ಮಜ್ಞಾನಕೆ ತನುಮನೋಧರ್ಮ
ದುದಯಂಗಳಿಲ್ಲತನುವಿರಹಿತನ ಚರಿತ್ರಾತ್ಮ
ನಾದ ಕಾರಣದೇಹ ಧರ್ಮ ನೋಡದೆ ಜ್ಞಾನಬೋಧೆ ಮಾಳ್ಪುದು ಗುರುಗಳು ||೭||

ವರಕ್ತಿಯೆಯದುಪದೇಶ ಮಾಳ್ಪುದಕೆ ಕುಲಗೋತ್ರ
ದಿರದನೊಳ್ಪುದು ನಿರ್ಗುಣ ಜ್ಞಾನ ಬೋಧಗದು
ಕಾರಣವದಿಲ್ಲ ಸರ್ವವು ಮವರಿಗಿರ್ದುಡವರ್ಪುಣ್ಯಕ್ಕೆ ಸರಿಯದುಂಟೆ ||

ಗುರುವರರಿದರ ಮರ್ಮ ತಿಳಿದಾಸೆಗೈಯ್ಯದಲೆ
ಪರತತ್ವವನು ಬೋಧಿಸಲ್ಕೆ ಜ್ಞಾನ ಪ್ರಕಾಶ
ಪರಕಲಿಸಿ ನಿಜಮೋಕ್ಷ ಸಮನಿಸುವದಿದು ತಥ್ಯವೆಂದು ಶಿವಲಿಂಗಾರ್ಯರು ||೮||

ತಿಳಿದು ಮೊರೆಹೊಕ್ಕವರನುಳಿಯದುಪದೇಶವನು
ತಿಳಿಸುತ್ತಿರಲ್ಕೀರ್ತಿ ಪಸರಿಸಿತು ಲೋಕದೊಳು
ಪಲವಾತ್ಮರಿದನರಿತು ದೇಶದೇಶಗಳಿಂದ ಬಂದು ಚರಣಕ್ಕೆರಗಲು ||
ಸುಲಲಿತದೊಳವರ ಜ್ಞಾನವನು ಪರಿಹರಿಸಿ
ಸಲೆಶಿವಜ್ಞಾನ ನೆಲೆಗೊಂಬಂದದೊಳ್ ಬೋಧೆ
ಫಲಿಸುವಂತರುಹಿ ನಿಜಮೋಕ್ಷ ಸುಖವಿತ್ತು ಸುಖದಿಂದಿರಲ್ಕೊಂದು ದಿನವು ||೯||

ವರಪನೋಳಿಯೊಳಿರುವ ಖಂಡಸ್ವಗುಳವೆಯಿವ
ನರಿದಿವರ ಕೀರ್ತಿಯಿಲ್ಲಿಗೆ ಬಂದು ಶರಣೆಂದು
ಶಿರವನುದರದೊಳಿಟ್ಟು ಸ್ವಾಮಿನಾಂ ಪೂರ್ಣಜ್ಞಾನವನುಳ್ಳ ಗುರುಗಳನು ||
ಅರಸಿದರದೆಲ್ಲ ದೊರಕದೆಯಿರಲ್ವಿಂತಿಯೊಳ
ಗಿರುವುದರೊಳಗೆ ತಮ್ಮ ಕೀರ್ತಿಯಂಗನೆಯು ಬಂದು
ಗುರುಸಾರ್ವಭೌಮರಿರುವರು ಕಿರೆಯವಳ್ಳಿಯೊಳಗೆ ನಗೆದಬ್ಬಿದರೆನುತಲಿ ||೧೦||

ಪೇಳಿದರದರ ಬಳಿವಿಡಿದು ನಾ ಬಂದನೆನೆ
ಸುಳಿವು ಪಾವನ ಮೂರ್ತಿಯೆನ್ನ ಭವಮೂಲವನು
ಅಳಿವುದೆಂದೆನುತೆ ಸಾಷ್ಟಾಂಗ ಪ್ರಣಮಿತನಾಗಿ ಬಿನ್ನವಿಸಲಾನಂದದಿಂ ||
ತಿಳುಹಿದರು ನಿಜತತ್ವ ಮೂಲವೆಲ್ಲವನವಗೆ
ಸಲೆ ಪೂರ್ಣದರಿವ ತಿಳುಹಲ್ಕವನು ಮೈಯುಬ್ಬಿ
ಗಳನರಗಳಂ ಬಿಗಿದು ರೋಮಕುಳಿಯೊಳಗೆ ನೀರ್ದುಂಬಿ ಸಂತೋಷದಿಂ ||೧೧||

ಗುರುಪದವ ನೂರ್ಮಡಿ ವಿಶೇಷವಾಗಲು ನುತಿಸಿ
ಕರುಣದಿಂದೆನ್ನಯ ಪುರಕೆ ಬಂದು ಕಾಯ್ಬುದೆನೆ
ಭರದೊಳಲ್ಲಿಗೆ ಪೋಗಿ ಕೆಲದಿನವಿರ್ದವನ ಭಕ್ತಿ ಸಲ್ಲಿಸಿಕೊಳ್ಳುತ್ತೆ ||
ಮರಳಿ ತಮ್ಮಯ ಸ್ಥಲಕೆ ಬಂದು ಲಿಂಗಾರ್ಚನೆಯ
ವಿರಚಿಸುತೆ ಬಂದಗಣಕುಲಕೆ ದಾಸೋಹವನು
ಪರುಟವಿಸುತಂ ವರುಷಕೊಮ್ಮೆ ಶಿವಯೋಗಕ್ಕೆ ಅಚಲೇರಿ ಬಸವನೆಡೆಯೊಳ್ ||೧೨||

ದೆಸೆದೆಸೆಯೊಳಿರುವ ಸಕಲ ಭಕ್ತ ಗಣಂಗ
ಳೊಸೆದು ಕರೆಸುತ್ತೆ ಶಿವಯೋಗ ರಾತ್ರಿಯೊಳವರ

ತೋಷದಿಂ ಜಲಗಂಧ ಪತ್ರ ಪುಷ್ಪಾಕ್ಷತೆ ಸುಧೂಪದೀಪುಪಹಾರವ ||
ಸಾಸಿಗರಿದಷ್ಟವಿಧ ಷೋಡಶುಪಚಾರಗಳಿ
ನೀಶಾರ್ಚನಂಗೈಸಿ ಬಹುವಾದ್ಯ ನಿನದದಿ ವಿ
ಶೇಷ ರಂಭಾ ಫಲಸು ಖರ್ಜುರ ದ್ರಾಕ್ಷ ಶರ್ಕರೆ ನಾರಿ ಕೇಳ ಮುಖ್ಯ ||೧೩||

ಫಲಾಹಾರವನು ಮಾಡಿಸುತೆ ವುದಯ ಪರಿಯಂತ
ನಲವಿನಿಂ ತತ್ವ ಶಾಸ್ತ್ರವನೋದಿ ಹೇಳುವರು
ಪಲವಾತ್ಮರುಂ ಬಸವ ಮೊದಲಾದ ಪೌರಾಣಗಳನೋದಿ ಹೇಳುತಿಹರು ||
ಕೆಲವು ಜನಗೊಲಿದು ಪರ ಪದ್ಯಗಳವಾಡುವರು
ಕೆಲಕೆಲವರುಂ ಗಣಂಗಳ ಸ್ತೋತ್ರ ಮಾಡುವರು
ಕೆಲವರುಪನ್ಯಾಸ ಪೂರ್ವಕವಾಗಿ ಜಪತಪ ಸಮಾಧಿಗಳನೆಸಗುತಿಹರು ||೧೪||

ಕೆಲವು ಸಾಧುಗಳು ವೀಣೆ ಮೃದಂಗ ತಾಳಸಹ
ನಲವಿನಿಂ ಗುರುಭಜನೆ ಮಾಡುತಿರ್ಪರು ಕೆಲವ
ರೊಲವಿನಿಂ ಮಲುಹಣ ಮಹಿಮ್ನ ಮುಂತಾದ ಪಂಚಸ್ತೋತ್ರಗಳ ಪಠಿಪರು ||
ಕೆಲವಾತ್ಮರಾನಂದರೊಳು ಲೀನವಾಗಿಹರು
ಕೆಲವಾತ್ಮರುಂ ಯೋಗಸಾಧನ ಮಾಡುವರು
ಕೆಲವರೆಲ್ಲಿಲ್ಲಿ ನಿಗಮಾಗಮಾವಳಿಗಳೋದುತಿರ್ಪರರ್ತಿಯಿಂದ ||೧೫||

ಇಂತುದಯ ಪರಿಯಂತ ಸಂತರೆಲ್ಲರು ನುತಿಸು
ತಂತರಂಗದೊಳು ಸದ್ಗುರು ಚರಣಧ್ಯಾನಿಸುತೆ
ಶಾಂತ ಶ್ರೀ ಗುರುಕರಿಯಬಸವರಸರ ಸಮಕ್ಷ ಸರ್ವರುಂ ಭಜಿಸುತಿರಲು ||
ಕಂತುಹರರೂಪ ಶಿವಲಿಂಗಾರ್ಯರಾಗಲೆ ಸ
ಮಂತು ನಾಲ್ಕಾರು ಪಾಯಸ ಕಟಾಹಗಳಿಡಿಸ
ನಂತ ಷಟ್ರುಚಿ ರಸ ರಸಾಯನ ಪದಾರ್ಥಗಳ ಬೇಸರಿಲ್ಲದೆ ಮಾಡಿಸಿ ||೧೬||

ಗುರುಚರಣಮಂ ಅಷ್ಟವಿಧದಿಂದ ಪೂಜಿಸುತ
ಗುರು ಪದೋದಕ ಸರ್ವರುಂ ಕ್ರಮೋಕ್ತದಿ ಸಲಿಸಿ
ಚರಸಮೂಹವ ಪಂಕ್ತಿಪಂಕ್ತಿಯಿಂ ಕುಳ್ಳಿರಿಸಿ ಮಾಡಿದ ಪದಾರ್ಥವೆಲ್ಲ ||
ತರಿತರಿಸ ಗಡಣೆಸುತ ವಂದುಳಿಯದಂತೆ ಸವೆ
ಶರಣಾರ್ತಿಯಿಂದು ಸಾಷ್ಟಾಂಗ ನಮಿಸಲ್ಕವರು
ಹರಹರಯೆನುತ್ತೆ ಭೋಜನದ ಸಂಕಲ್ಪವನು ಪಡಿಸಿ ಲಿಂಗಕ್ಕರ್ಪಿಸಿ ||೧೭||

ತುತ್ತುತುತ್ತುಗೆ ಬಸವ ಪ್ರಣವನುಚ್ಚರಿಸುತ್ತೆ
ಯೆತ್ತದಲೆ ಮಸ್ತಕವನು ಸರ್ವರುಣ್ಣುತ್ತಿರಲು
ಮತ್ತೆ ಮತ್ತೆಯು ಸಾಕುಸಾಕೆಂಬ ವೋಲ್ನೀಡಿಸುತ್ತೆ ತೃಪ್ತಿಯವಡಿಸುತೆ ||
ಸುತ್ತಿಸಿದ ವೀಳ್ಯವನು ಸಕಲ ಜನರಿಗೆ ಕೊಡಿಸಿ
ಯಿತ್ತು ದಕ್ಷಿಣ ನಮಸ್ಕರಿಸಿಂತು ನಾಲ್ಕು ದಿನ
ಚಿತ್ತಜಾಹರ ಗಣಾರಾಧನೆಯನೇಕ ಚಿತ್ತದೊಳು ರಚಿಸುತ್ತ ಬೇಗ ||೧೮||

ಸುತ್ತಲಿರುತಿಹ ಗ್ರಾಮಗಳಲಿರುವ ಜನರೆಲ್ಲ
ಮತ್ತೆ ಮತ್ತೆ ಬರುತ್ತಲುಣ್ಣುತಿಹರು ಸರ್ವಜನ
ಯೆತ್ತ ನೋಡಿದೊಡತ್ತ ಪರುಷಪರುಷೆಯದಾಗಿ ಬರುತಿಹರದೇನೆಂಬೆನು ||
ಮುತ್ತಿಬರುತಿಹ ನಂದಿಧ್ವಜ ಪತಾಕೆಗಳಿಂದ
ಹತ್ತು ದಿಕ್ಕಿನೊಳು ದರೆಗಳು ಬಾರಿಸುತಲಶ್ವ
ಹತ್ತಿ ಬರುತಿಹುದು ರೆಚಿಸಲಾದ ತೆರನಂತೆ ವರ್ಣಿಸುವಡಾಗದೆನಗೆ ||೧೯||

ಇಂತು ಬಹುಪರಿಯ ಸಂಭ್ರಮದಿಂದಲುತ್ಸವ
ಕಂತುಹರರೂಪ ಶ್ರೀ ಶಿವಲಿಂಗ ದೇವರುರೆ
ಸಂತಸದೊಳಂ ಪ್ರತಿಯವರ್ಷವರ್ಷಕೆ ಮಾಡುತಿರೆ ಕೀರ್ತಿ ಪಸರಿಸಿದುದು ||
ಯೆಂತೆನಲು ಸಂಪಿಗೆಯ ಪುಷ್ಪದ ಸುಗಂಧವನು
ಪಂಥವಿಡಿದ್ಹೋಗುತಿರುವವರ ಘ್ರಾಣಕೆ ವಾಯು
ಸಂತಲೆ ಖದಿರವನ ದೊಳಿರುವದೆನುತಲ ಪೇಳುವಂದದೊಳು ಕೀರ್ತಿಮುಸುಕೆ ||೨೦||

ಗ್ರ || ಯದ್ಯ ಪಿಖದಿರಾರಣ್ಯೆ
ಗುಪ್ತೋವಸತಿ ಚಂತಕೋವೃಕ್ಷಃ
ತದಪಿಚ ಪರಿಮಳಮತುಳಂ
ದಿಸಿದಿಸಿಕಥೆಯೆಲೆ ಸಮಿರಣಸ್ತಸ್ಯ ||೧||

ಅಂತಲ್ಲದಿನ್ನೊಂದು ಪರಿಯ ಪೇಳುವೆನದನು
ಯೆಂತೆನಲು ಕೇತಕಿಯ ಪುಷ್ಪದ ಸುಗಂಧವನು
ಮುಂತೆ ತುಂಬಿಗಳಿರುವ ಸ್ಥಾನಗಳಿಗಾಗಂಧತಾನೆ ಪೊಗುತಲವರನು ||
ಯಿಂತಿಲ್ಲದಿರುವುದು ವನಾಂತರಲ್ಲಿಗೆ ನೀವು
ಪಂಥವಿಡಿದೋರಂತೆ ಬರುವದೇನು ತವರ ಕರೆ
ವಂತೆ ಸಂತರ ಸದ್ಗುಣಾದಿಗಳು ತಾವೆಲೋಕದ ಜನರೆ ಪೆಳುತಿಹವು ||೨೧||

ಗ್ರ ‖ ಗುಣಾಃಕುರ್ವ ತಿದೂತತ್ವಂ
ದೂರೆಪಿವಸತಾಂಸತಾಂ
ಕೇತಕೀ ಗಂಧಮಾಘ್ರಾಯೆ
ಸ್ವಯಂಗಚ್ಛತೀ ಷಟ್ಪದ ‖೨‖

ಇಂತು ಬಹುದೇಶದೊಳಗಿರುವ ಸದ್ಭಕ್ತರುರೆ
ಶಾಂತಿಸತ್ಕೀರ್ತಿಯೆನು ಕೇಳಿ ಸಂತಸದಿಂದ
ಕಂತುಹರ ರೂಪಗುರು ತಿಲಕ ಶಿವಲಿಂಗಾರ್ಯರತುಳ ದರ್ಶನದ ದೆಸೆಯಿಂ ‖
ಸಂತತಾನಂದದೊಳು ಬಂದು ಸಮ್ಮುಖಗೊಂಡ
ನಂತ ಪರಿಯಲಿ ನುತಿಸಿ ಕರುಣಮಂ ಪಡೆಯುತ್ತೆ
ಪಂಥವಿಡಿದವರು ಪೋಗುತ್ತಿರಲ್ಕಿಂತವರು ಸುಖದೊಳಿರಲೊಂದು ದಿನವು ‖೨೨‖

ಹಿರೆಹಳ್ಳಿಯ ಭಕ್ತರತಿ ತಮ್ಮೊರ್ಗೆ ಕರದೊಯ್ದು
ವರ ಬೆಳ್ಳಿ ಬಸವಲಿಂಗಪ್ಪ ತಮ್ಮಯ ಮನೆಯೊ
ಳಿರಿಸಿಕೊಂಡಾ ತತ್ವದರಿವ ಕೇಳಲ್ಕವರು ಮಂತ್ರೋಪದೇಶ ಮೊದಲು ‖
ನಿರವಿಸುತೆ ಸಗುಣದಭ್ಯಾಸ ನಿರ್ಗುಣ ಕಡೆಯು
ಪರಪರಂಪರೆಯೊಳೆಲ್ಲವ ಬೋಧಿಸುತೆ ಮನಕೆ
ಸ್ಥಿರಗೊಳಿಸಿ ನಿಜಮೋಕ್ಷದಿತ್ತಿರಲ್ಕೆ ದೊರೆಯು ನಿಜಲಿಂಗರಾಯರೊಲಿದು ‖೨೩‖

ಒಂದು ದಿನ ಚರಣದರ್ಶನಕ್ಹೋಗಿ ನಮಿಸುತಲಿ
ಬಂಧುರದ ಪಾರಮಾರ್ಥದ ಶಾಸ್ತ್ರದ ವರಮುಖ
ದಿಂದ ಕೇಳಲ್ ಭ್ರಮರಗಂಧಕ್ಕೆ ಲುಬ್ಧವಾಗುವ ತೆರದಿ ಲೀನವಾಗಿ ‖
ಮಂದಿರಕೆ ಕರದೊಯ್ದು ವಿಜ್ಞಾಪನವ ಮಾಡಿ
ಯಿಂದುಧರ ರೂಪ ಕರುಣದಿ ಕಾಯ್ವುದೆನ್ನ ಭವ
ಬಂಧನವ ಬಿಡಿಸಿ ನಿಜಮಂದಿರವ ತೋರಿ ಶನಗಾದಿ ಗುರುವಾರ್ಯನೆಂದು ‖೨೪‖

ಸಾಷ್ಟಾಂಗದಿಂ ನಮಿಸಿ ತೆಂಗ ಖರ್ಜುರ ವಿಟ್ಟು
ನೈಷ್ಟಿಯಿಂ ತನುಮನ ಧನಂಗಳೆಲ್ಲವ ಕೊಟ್ಟು
ಶಿಷ್ಟ ತತ್ವವ ತಿಳುಹು ಕಷ್ಟವಾಗಬಾರದೆನಗಷ್ಟರಿಂದವೆ ಮೋಕ್ಷದ ‖
ಶ್ರೇಷ್ಠಪರವೆನಗಾಗಬಹುದೆಂದು ಬಿನ್ನಹವ
ಸ್ಪಷ್ಟದಿಂ ಮಾಡಲ್ಕೆ ಗುರುಗಳದ ಕೇಳಿರೆನು
ತುಷ್ಟರಾಗುತ ಮಗನೇ ಲೋಕದೊಳು ನಿನ್ನಂತೆ ಪ್ರಶ್ನೆ ಮಾಡುವ ಪಾಡರು ‖೨೫‖

ದೇವದಾನವ ಮಾನವಾದಿಗಳೊಳಿರಲುಂಟೆ
ಪಾವನವ ಕಷ್ಟವಿಲ್ಲದೆ ಅಂಗಬೇಕೆನಲು
ನಾವವಿಲ್ಲದೆ ನದಿಯ ದಾಟಬೇಕೆಂಬವನ ತೆರನಾಯಿತಿದಕೆ ಮೊದಲು ||
ಸಾವಧಾನದಿ ಕೇಳ್ ಜಯತ್ಪಾಲನಾ ಗುರುವಿ
ನಾವಗಂ ಕಂಡು ಕೃಪೆವಡೆದು ನಿಜತತ್ವವನು
ವೋವಿತಿಳಿವೆನೆನುತ್ತೆ ಲೋಕದೊಳು ಡಂಗುರವ ಸಾರಿಸಿ ಬಳಿಕೆಲವರು ||೨೬||

ಕೇಳ ತತ್ವಜ್ಞಾನಿಗಳು ವೋಳಿವೋಳಿಯಿಂ
ತಾಳಿ ಸಂತೋಷವನು ಬರವರವಿಕವಾಗಿವ
ಮೌಳಿಯವರಡಿಯೊಳಿಟ್ಟೆರಗಿ ಕುಳ್ಳಿರಿಸಿ ಕೊಳುತವರ್ಗೆ ಬಹುಮಾನ ಮಾಡಿ ||
ಅಳಿಕ ಲೋಚನ ರೂಪ ಸದ್ಗುಣಗಳೇಯೀಗ
ವಲಿದು ಅಶ್ವದ ಮೆಟ್ಟಿನೊಳು ಪದವನಿಟ್ಟ ಪರಿ
ಯೊಳು ಹತ್ತುವದರೊಳಗೆ ತತ್ವಬೋಧೆಯ ತಿಳುಹಬಲ್ಲರೆನಗುಪದೇಶವ ||೨೭||

ಕೊಡುವದೆನೆ ಪನ್ನೆರಡು ವರ್ಷಸಾಧನೆಯವನು
ಮಾಡಿದರೆ ಆಗುವುದು ನೇಮವಿಲ್ಲದರಿಂದೆ
ರೂಢಿಯೊಳಗಿನಿತರೊಳೆ ಆಗದೆನಲವರ್ಗೆಯಧಿಕಾರ ನಿಮಗಿಲ್ಲವೆಂದು ||
ಕಡಲೆಯೊಡೆವುದಕೇಳು ನೂರು ಜ್ಞಾನಿಗಳಲ್ಲಿ
ಬಿಡದೆ ಹಚ್ಚಿರಲು ಸುಮುಕುಂದ ಮುನಿಯದ ಕೇಳಿ
ಸಡಗರದೊಳಲ್ಲಿಗೈದಲ್ರಾಜಕರೆದೊಯ್ದು ಗದ್ದುಗೆಯೊಳಿರಿಸಿ ನಮಿಸಿ ||೨೮||

ಎಲೆರಾಜ ಸಪ್ತಶಕ ತತ್ವವಿಧರಂ ನೀನು
ಮುಳಿದು ಕಡಲೆಯನೊಡೆದು ಹಚ್ಚಿದೆನುನುತ್ತಿದನು
ಕೇಳಿಬಂಧೆನುಮವರ್ಗದೇಂ ಕಾರಣಂ ಪೇಳ್ವುದೆಂದೆನಲು ನರನಾಥನು ||
ತಾಳಿಸಂತೋಷವನು ಸ್ವಾಮಿನಾರುವನೇರು
ವೇಳೆಯೊಳೆನಗೆ ನಿಜದ ತತ್ವ ಬೋಧೆಯ ಮಾಳ್ಪ
ದೇಳಿಗೆಯೊಳೆನಲಾಗದೆನೆ ಕಡಲೆಯೊಡೆವುದಕೆ ಹಚ್ಚಿದನೆ ನಲ್ಗುರುಗಳು ||೨೯||

ಕೇಳಿಯವರಿಗೆ ಬಿಡುವದಾನು ಪೇಳುವೆನೆನಲು
ಮೌಳಿಬಾಗಿಸುತವರ ಬಂಧನವ ಬಿಡಲೊಡನೆ
ಕೇಳೆಲೆನೃಪಾಲ ತಿಳಿವಧಿಕಾರವಿರ್ದ ಬಳಿಕನಿತು ವೇಳ್ಯವದ್ಯಾತಕೆ ||
ಲೀಲೆಯೊಳ್ನಿಜ ನಿನ್ನ ಬಾಹ್ಯವಂತರವಿಹುದು

ಪಲವಾತ್ಮ ರೊಳ ಹೊರಗೆ ಪರಿಪೂರ್ಣವಾಗಿಹುದು
ಪಲವು ಬ್ರಹ್ಮಾಂಡಗಳ ತುಂಬಿಯುಳಿದಿಹುದದರ ಗಣನೆಯನು ಪೇಳ್ವಡರಿದು ||೩೦||

ಕಣ್ಣಮುಂದವೆ ಕಾಣುತಿಹುದು ಪರಬೊಮ್ಮವದ
ನಣ್ಣಗಳರಸಿ ಕಾಣರೆಂದು ಕೈವಲ್ಯದೊಳ
ಗ್ಧಣ್ಣಿಹರು ನಿಜಗುಣಾರಾಧ್ಯ ಶಿವಯೋಗಿಗಳು ತಿಳಿವಾತನಿಗೆ ದೂರವೆ ||
ಮಣ್ಣೊಳಿಹ ಮಾಣಿಕವ ಕಾಲೊಳಿರ್ದರುವದನು
ಕಣ್ಣ ಕಾಣದೆಯೆಡವಿ ಪೋಗುವ ನರನ ತೆರದಿ
ಕಣ್ಣ ಮೂರುಳ್ಳನ ಕರುಣವಿಲ್ಲದವರಿಗದು ಬಳಿಯೊಳಿರ್ದರು ತಿಳಿಯದು ||೩೧||

ಗೋವಿನ್ಹಾಲ್ಗೆಚ್ಚಲದ ಮೂಲದೊಳಿರಲ್ಕುಣಿ
ಸೇವಿಸದೆ ಕ್ಷೀರವದು ರಕ್ತನುಣ್ಣುತಿಹುದು
ಭಾವಿಸಲ್ಕಂಜದಳದಡಿಯೊಳಿಹ ದುರ್ದರವ ಹೊಂಡ ನೀರ್ಕುಡಿವ ತೆರದಿ ||
ತಾವೆ ನಿಜವೆಂದು ತಿಳಿಯದೆ ಮತ್ತೆಲ್ಲಿಹುದೋ
ಹೋವಿಯಮಗದು ತಿಳಿಯದೆಂದರಸುತಿಹರೈಸೆ
ನೀವು ತಿಳಿವುದುಯೆಂದು ನಿಜವನದು ಕರತಳಾಮಳಕದಂದದೊಳು ಪೇಳೆ ||೩೨||

ನರನಾಥನದು ಕೇಳಿ ಪರಮಸಂತೋಷದಿಂ
ಚರಣಕೆರಗುತಲಾನಂದಾಬ್ದಿಯೊಳ್ಮುಳುಗಿ
ಗುರುವರನನುತಿಸಿದನದರ ತೆರದಿ ನೀನುಡಿವೆ ಕೇಳ್ವುದೆಲೆ ಕಂದಾ ನಿನ್ನ ||
ಪರಮ ನಿಜದನುಭವವಿದೆಂದು ಶಿವಲಿಂಗಾರ್ಯ
ರುರೆ ದೊರೆಯುರಾಯ ನಿಜಲಿಂಗಾಖ್ಯರಿಗೆ ಮುದದಿ
ವರದರಂತೆಯನಲು ಯುಗಜುಗ ಜಗದರಂಜನೆಯದೇನುಯಿಲ್ಲದೆಯಿರುತಿರೆ ||೩೩||

ಸರಸಚ್ಚಿದಾನಂದ ನಿತ್ಯ ಪರಿಪೂರ್ಣ ನಿಜ
ನಿರತಿಶಯ ನಿಃಶೂನ್ಯ ನಿರುಪಾಲ ನಿರ್ದ್ವಂದ್ವ
ಪರಮಪಾವನ ನಿರ್ವಿಕಾರ ನಿಃಸಂಕಲ್ಪದಿಂದಿರುವದಾ ಬ್ರಹ್ಮವು ||
ಯಿರಲದರೊಳೇನಾನು ಕಾರಣವದಿಲ್ಲದಲೆ
ಅರಿವೆ ತನ್ನಂಗವಾಗಿರುವಾಗ ಉದ್ದೇಶದಿಂ
ಅರಿಯ ಅಹಂಬ್ರಹ್ಮನೆಂಬ ಚಿರಹಂಕಾರವದೆ ಮೂಲ ಮಾಯವೆನಿಕು ||೩೪||

ಅದರಿಂದ ಭೂವನ ಬ್ರಹ್ಮಾಂಡ ರಚನೆಯದಾಯ್ತು
ಅದು ತಿಳಿದರೊಂದಿಲ್ಲವೆನಿಸಿ ತೋರುತ್ತಿಹುದು

ಅದುಯಿದೆಯೆಂಬುವದೆರಡುಯಿಲ್ಲದಿಹ ಪರಬೊಮ್ಮವೆ ನಿಜವೆಂದು ತಿಳಿಯೈ ||
ವಿಧಿತದಿಂ ತತ್ವಮಸಿ ವಾಕ್ಯವೆಂಬುದ ತಿಳಿಯೆ
ಸದಮಲ ಬ್ರಹ್ಮವದು ತಾನೆ ನೀನೆಂದೆನಿಕು
ತುದಿಪದವದಿದು ಬೆಜವಡ ನ್ಯಾಯದಂತೆ ರಾಕ್ಷಸನೆ ದ್ವಿಜನಾದ ತೆರದಿ ||೩೫||

ತಾನೆ ನಿಜವಲ್ಲದನ್ಯವನೇನುಯಿಲ್ಲತಾ
ಮಾನವನೆನಿಪ್ಪ ಬಗೆಪುಸಿ ಖೂನವಿಲ್ಲದಲೆ
ಜನನ ಮರಣಾದಿಗಳು ತನಗಾಗುತಿಹವೆಂದು ಮರುಳುತನದಿಂದಲುಸುರ್ವೆ ||
ಮಾನಮೇಯಂ ಮಾತ್ರವೇನುಯಿಲ್ಲದ ನಿಜವು
ತಾನೆಯಲ್ಲದೆ ನಾನೆಯೆಂಬ ಬಗೆದೋರದದು
ಸ್ವಾನುಭಾವದೊಳರಿದು ಮೂಕ ಸಕ್ಕರೆ ತಿಂದ ತೆರದಿ ಮೌನದೊಳಿರುವದು ||೩೬||

ಅರಿವಿಲ್ಲ ಮರವೆಯಿಲ್ಲರಿವು ಮರವೆಗಳಿಲ್ಲ
ಮರೆಯಿಲ್ಲ ಮುರಿಯಿಲ್ಲದೊಂದು ಕುರುಹವದಿಲ್ಲ
ಕರೆಮರೆಗಳೇನಿಲ್ಲ ಸ್ಮರಿಸಲೋಸನೆಯಿಲ್ಲ ಬಚ್ಚಬರಿಯರುವೆ ನಿಜವು||
ಸರಿಯಲ್ಲ ಪರರಲ್ಲ ಅರಿಯಲದು ಸಂದಿಲ್ಲ
ಜರೆಯಿಲ್ಲ ಜನನ ಮರಣಗಳಿಲ್ಲ ಕುಂದಿಲ್ಲ
ಕೊರತಿಲ್ಲ ಹೆಚ್ಚಿಕೆಯ ಮೊದಲಲ್ಲವೆಂದೆಂದಿಗೆದುವೆ ಪರಿಪೂರ್ಣವಹುದು ||೩೭||

ಕಡೆಯಿಲ್ಲ ಮೊದಲಿಲ್ಲ ಮಧ್ಯೆ ಬಿಡುಗಡೆಯಿಲ್ಲ
ನಡೆಯಿಲ್ಲ ನುಡಿಯಿಲ್ಲ ಷಷ್ಠಾಂತರವೆಯಿಲ್ಲ
ತಡೆಯಿಲ್ಲ ನೆನವಿಲ್ಲವರುವಿನೆಚ್ಚರದೋರಲೆಡೆಯಿಲ್ಲ ಪರಿಪೂರ್ಣವು ||
ಸಡಗರದೊಳಿದು ರಹಸ್ಯಾರ್ಥವಿದು ತಿಳಿದಾತ
ಪೊಡವಿಯೊಳಗವನೆ ನಿಗುಣಯೋಗಿಯೆನಿಸುವನು
ಬಿಡದಿದನೆ ತನುವಿರುವ ಪರಿಯಂತ ಶ್ರವಣಮನನಂ ನಿಧಿಧ್ಯಾಸವಿರಲಿ ||೩೮||

ಬಳಸದಿರು ಬಾಹ್ಯದೊಳಗದ್ವೈತ ವರ್ತನೆಯು
ವಳಗೊಂದೆಯೆಂಬಭಾವರೊಡಗೂಡಿ ಸುಖ
ದೊಳು ನಿರಂತರವಿರುವುದೀ ಪ್ರಪಂಚದ ಕ್ಲೇಶವಾನಂದ ಕೆಡೆಗೊಡದಿರು ||
ತಿಳಿವಿದನ್ನುಳಿದುದೇನುಂಟೆಂದು ಕೇಳಲ್ಕೆ
ಬಳಿವಿಡಿದು ಚರಣ ಸೇವೆಯ ಮಾಳ್ಪುದಲ್ಲದಿ
ನ್ನುಳಿದಿರುವುದೇನುಂಟು ಸ್ವಾಮಿಯೆಂದಡಿಗೆರಗಲಾನಂದದಿಂ ಗುರುಗಳು ||೩೯||

ದೊರೆರಾಯ ನಿಜಲಿಂಗ ಶೆಟ್ಟಿಯು ಮುದದಿ ತಮ್ಮ
ಕರದಿಂದೆ ತೆಗೆದಪ್ಪಿ ಮುಂಡಾಡಿ ಮುದ್ದಿಸುತೆ
ಭರದಿಂದಲವರಿಗಾದ ಆನಂದವದು ವರ್ಣಿಸುವಡರಿದುರಗಪತಿಗೆ ||
ಶರೀರದೊಳ್ ರೋಮಗುಡಿಗಟ್ಟಲ್ಕಟಾಕ್ಷದೊಳು
ವರಬಾಷ್ಪಜಲಮೊಸರೆ ಕಂಧರನ ನರನ ಬಿಗಿಯೆ
ಸರಸರನೆ ನುಡಿಯು ತಡಬಡಿಸಲಾನಂದ ಮದ ತಲೆಗಡರಲೆದ್ದು ಕುಣಿದು ||೪೦||

ಮೃಡಮೂರ್ತಿ ಶಿವಲಿಂಗ ದೇವರಡಿಗಳಿಗಿರದೆ
ತಡಮಾಡದಲ್ಲಿ ಸಾಷ್ಟಾಂಗ ಪ್ರಣಮಿತರಾಗಿ
ಒಡೆಯನೆಯೆನ್ನ ಭವಜಡಬಾರವ ಸಂಹರಿಸಿ ಪೂರ್ಣಬ್ರಹ್ಮವ ಮಾಡಿದೊ||
ಪಡಿಯುಂಟೆ ಜಗದೊಳಗೆ ತವೆಕೃಪೆಯ ಬಲಕಿನ್ನು
ನುಡಿಮನಕೆ ಮೀರಿ ತೋರುತ್ತಿರುವ ಮಹಿಮೆಯಿದ
ಸಡಗರದಿ ವಾಙ್ಮನಗಳಿಂದ ನುತಿಸುವೆನೆಂದೊಡೆನ್ನಳದೆ ಗುರುವೆಯೆಂದು ||೪೧||

ಇಂತು ಬಹುಪತಿಯಿಂದ ನುತಿಸಿ ಸಂತಸದಿಂದ
ಕುಂತಿರಲ್ಕಮ್ಮ ಲಕ್ಷ್ಮಾದೇವಿ ಮಾತೆಯಹ
ಸಂತಶ್ರೀ ಪಾರ್ವತಿ ದೇವಿ ಸತಿಪತಿ ವ್ರತ ಬಸವಲಿಂಗಮ್ಮ ದೊರೆಗಳ್
ಕಂತುಹರ ರೂಪಶ್ರೀ ಶಿವಲಿಂಗದೇವರಿಗೆ
ಶಾಂತಿಯಿಂ ಬಂದೆರಗಿ ನಮ್ಮ ಪಾವನ ಮಾಳ್ಪ
ದಂತೆಯೆನಲಂತಾಯಿತೆಂದು ಮಂತ್ರೋಪದೇಶವನಿತ್ತರತಿಕರುಣದಿಂ ||೪೨||

ಬಸವಲಿಂಗಮ್ಮ ದೊರೆಸಾನಿ ಮತ್ತೆರಗುತ್ತೆ
ಸಸಿನೆಯೆನ್ನಯ ಮನವ ತೃಪ್ತಿಯಾಗದೆನಲ್ಕೆ
ಖುಷಿಯಿಂದ ನಿಜ ಬೋಧೆಯನು ಪೇಳಿ ಸಂತೋಷವನು ಮಾಡಿದರು ಮನಸಿಗೆ ||
ವಶವಲ್ಲದಿಹ ಗಣಾರಾಧನೆಯ ನೆರೆ ಮಾಡಿ
ಶಶಿಧರನ ರೂಪ ಗುರುಗಳಿಗುಡುಗೊರೆಯೆನಿತ್ತು
ಒಸೆದಪ್ಪಣೆಯನೀಯೆ ಸಾಬಾರಿ ಶಿವಲಿಂಗನೆಂಬ ಸದ್ಭಕ್ತ ಬಂದು ||೪೩||

ಚರಣಕೆರಗುತ ಬಿನ್ನಹವ ಮಾಡಿ ತಮ್ಮನೆಗಿ
ರದೆ ಕರದೊಯ್ದು ಸಾಷ್ಟಾಂಗ ಪ್ರಣಿಮಿತನಾಗಿ
ಭರದೊಳೆನ್ನಯ ಭವವ ಭೇದಿಸುವದೆಲೆ ಮಹಾಗುರುವೆಯೆಂದೆರಗಲಾಗ ||
ಹರುಷದಿಂ ಸಗುಣನಿರ್ಗುಣ ಭೇದವನು ಪೇಳಿ

ಮರವಿ ದೋಷವ ಕಳೆದು ಅರಿವೆ ನೀನೆಂದರುಹಿ
ಅರಿವಿನೊಳ್ಮರವೆ ಪುಗದರುವಿನುಳುಮೆಯೆ ನಿಜವದರಿದರುವೆ ಮಿಥ್ಯವೆಂದು ||೪೪||

ತಿಳಿವುದೆಲೆ ಮಗನೆಯೆಂದವನ ಸಂತೈಸುತ್ತೆ
ಪಲವು ಭಕ್ತರಿಗೆ ನೀತಿಕ್ರಿಯಾ ಸದ್ಗುಣವ
ಪೇಳುತೆಲ್ಲರಿಗಾಶೀರ್ವಾದಮುಮನೀಯಲದರೊಳನಿಡಗುಡಿಯಿಂದಲು ||
ಲೀಲೆಯೊಳ್ಗುರು ಪಾದಕೋರೆಯೆಂಬವ ಬಂದು
ಪಾಲಿಪುದು ಗುರುವೆ ನಮ್ಮೊರ್ಗೆ ಬಂದೆನ್ನುತಲೆ
ಲೋಲದಿಂ ನಮಿಸಿ ಕರದೊಯ್ದು ಸಂಭ್ರಮದಿಂದೆ ಮನೆಯೊಳಿರಿಸುತ್ತಲಡಿಗೆ ||೪೫||

ಸಾಷ್ಟಾಂಗವೆರಗಿ ನಮ್ಮಯ ಭವವ ನೀಗಿಸುವ
ದಿಷ್ಟವನು ಕೊಟ್ಟು ಪಾವನ ಮಾಳ್ಪುದೆನ್ನುತಲಿ
ನೈಷ್ಟೆಯಿಂ ವಿಜ್ಞಾಪನವ ಮಾಡಲದು ಕೇಳಿ ಭ್ರಷ್ಟಗುಣಗಳನು ಬಿಡಿಸಿ ||
ಶ್ರೇಷ್ಟವನು ತಿಳುಹಿ ಸಂತುಷ್ಟನಂ ಮಾಡ
ಲಷ್ಟರೊಳೆ ಸಿದ್ಧಮ್ಮ ಗುರು ಸಿದ್ಧನೀಲಮ್ಮ
ಶಿಷ್ಟ ಬಸವಪ್ಪನು ಬೆಳಂಬಿಗಿಯಿವರೆ ಮೊದಲು ಶರಣಾಗತರು ಮಾಗಲು ||೪೬||

ಕಷ್ಟ ದಾರಿದ್ರ ದೋಷವನೆಲ್ಲ ಪರಿಹರಿಸಿ
ಶಿಷ್ಟ ನಿಜ ತತ್ವೋಪದೇಶಗೈಯಲ್ಕವರು
ತುಷ್ಟರಾಗುತ ಚರಣಕೆರಗಲ್ಕನಿತರೊಳಗೆ ದೊರೆ ಭಾಪುರಾಯರೊಲಿದು ||
ನೈಷ್ಟೆಯಿಂ ಬಂದು ಚರಣಕ್ಕೆರಗಿ ಕರದೊಯ್ದು
ಶ್ರೇಷ್ಠ ಮನೆಯೊಳಗೆ ಲಿಂಗಾರ್ಚನೆಯಂ ಮಾಡಿಸುತ
ಸ್ಪಷ್ಟಚರತೀರ್ಥ ಪ್ರಸಾರಮುಭಯರುಗೊಂಡು ತೃಪ್ತಿಯಾಗುತ್ತ ಕುಳಿತು ||೪೭||

ರಾಜನೀತಿಯ ನೀತಿಶಾಸ್ತ್ರ ಷಟ್ ಸ್ಥಲಜ್ಞಾನ
ಭೋಜರಾಜನೆ ಮೊದಲು ರಾಜವೃತ್ತಾಂತವನು
ಮೋಜಿನಿಂ ಪೇಳಿಯವರ ಮನವ ಸಂತಸಮಾಡಲನಿತರೊಳೆ ಜಂಬಿಗವರು ||
ಓಜೆಯಿಂ ಸೊಳ್ಳೆ ಮಲ್ಲಪ್ಪನುಜ ಪಂಚಪ್ಪ
ಮಾಜದಾಗಲೆ ಬಂದು ಬಿನ್ನಹಂ ಮಾಡಿಯವರ
ರಾಜಿಯಿಂ ಕರದೊಯ್ದು ಮನೆಯೊಳಾಸನವಿಕ್ಕಿ ಕುಳ್ಳಿರಿಸಿ ಫಲವ ತಂದು ||೪೮||

ಮುಂದಿಟ್ಟು ಸಾಷ್ಟಾಂಗದಿ ತಮ್ಮ ಸತಿಯರ ಸಹ
ವಂದಿಸುತ ನಮ್ಮ ಮರೆವೆಯ ದೋಷವ ಕಳೆವುದೆನು

ತಂದು ವಿಜ್ಞಾಪನವ ಮಾಡಲಂತಾಯ್ತೆಂದು ವೇದಾಂತ ಶಾಸ್ತ್ರದಿರವ ||
ಚಂದವಾಗಿಯೆ ಶ್ರವಣ ಮನನ ನಿಧಿ ಧ್ಯಾಸವನು
ಬಂಧುರದೊಳಂ ಪಗಲಿರುಳೆ ಕುಳಿತ ಬೋಧಿಸುತೆ
ಅಂದವಾಗಿಹ ನಿಜವನರುಪಿ ಸಂಶಯ ಕಳೆದು ಸಂತುಷ್ಟರಂ ಮಾಡಲು ||೪೯||

ಅಷ್ಟರೊಳು ಧರಣಿಯ ಜವಳಿಯ ಚನ್ನಮಲ್ಲಪ್ಪ
ನಿಷ್ಟೆಯಿಂ ಬಂದು ಸಾಷ್ಟಾಂಗವೆರಗುತ ನಮ್ಮ
ಶಿಷ್ಟ ಗ್ರಾಮಕೆ ಬರವುದೆಂದು ಬಿನ್ನಹವ ಮಾಡಿ ಕರಕೊಂಡು ಹೋಗಿ ತಮ್ಮ
ಶ್ರೇಷ್ಟಮನೆಯೊಳಗಿರಿಸಿಕೊಂಡು ಲಿಂಗಾರ್ಚನೆಯ
ತುಷ್ಟರಾಗುವ ಹಾಗೆ ಮಾಡಿಸರ್ಪಿತಗೈಸಿ
ಕಷ್ಟಜನ್ಮದೊಳು ನಾಂ ಮರಳಿ ಪುಟ್ಟಿದ ಹಾಗೆ ಮಾಡಬೇಕೆಂದು ನುಡಿಸಿ ||೫೦||

ಜೀವಕರಣೇಂದ್ರಿ ಭೂತಾದಿ ಗುಣಗಳವೆಲ್ಲ
ಸಾವಧಾನದಿ ಕಳೆದು ಮೂಲಬ್ರಹ್ಮನ ತಿಳುಹಿ
ಆವಗಂ ನಿಜವ ನೀನೆಂಬ ಭಾವನೆಯ ಕರೆಗೊಂಡು ನಿಶ್ಚೈಸಿಕೊಟ್ಟ ||
ದಾವ ಸಂಕಲ್ಪಗಳು ಬಾರದ್ಧಾಂಗಳವಡಿಸಿ
ನೀವು ಸುಖದಿಂ ಭಕ್ತಿ ಮಾರ್ಗದಿಂದಿಹುದೆಂದು
ಪಾವನಾತ್ಮಕ ಪರಮ ಶಿವಲಿಂಗದೇವರುರೆ ಬೋಧಿಸಲ್ಕನಿತರೊಳೆ ||೫೧||

ಎಣ್ಣೆಗೂರ್ಜಸವಪ್ಪನೆಂಬ ಶರಣನು ಬಂದು
ಕಣ್ಣ ಮೂರುಳ್ಳನ ಸ್ವರೂಪ ಗುರುವಿಗೆ ನಮಿಸಿ
ಸಣ್ಣಾದ ನರಜನ್ಮವನು ನೀಗಿಸುತ ಬೇಗ ಶಿವನಡಿಗಳಂ ತೋರಿಸಿ ||
ತಣ್ಣಗಾಗಿರುವಂತೆ ಮಾಡೆಂದು ಬಿನ್ನವಿಸ
ಲಣ್ಣನೇ ನಿನ್ನೊಳಗೆ ಶಿವನಿಹನು ಬೇರೆಯಿಲ್ಲ
ಬಣ್ಣವಳಿಯದ ಮುನ್ನ ನೀನುದಾರೆಂಬ ಸವಿಚಾರವನು ತಿಳಿದು ನೋಡೆಂದು ||೫೨||

ಹಣ್ಣಕರದೊಳು ಪಿಡಿದು ವೃಕ್ಷನೇರು ತೆರದಿ
ಮಣ್ಣಗೊಂಬಿಯನಂತರದೊಳು ಕುಳಿತಾಡಿಸುವ
ವುಣ್ಣುವೆಯ ತಿಳಿ ಜೊನ್ನದಂತೆಸೆವಜ್ಞಾನ ಕಲೆದಾಂತ್ರದದು ಮುಟ್ಟಿ ತಿಳಿಯೈ ||
ಬಣ್ಣ ಬಾವಗಳಿಲ್ಲದಿಹ ನಿಜವ ನೀನೆಂದು
ತಿಣ್ಣ ಸುಜ್ಞಾನವನು ತಿಳುಹಲಾನಂದದಿಂ
ಕಣ್ಣೊಳಗೆ ನೀರ್ದುಂಬಿ ಪರಿವುತ್ತಿರಲ್ನೋಡಿ ಕರುಣದಿಂದಪ್ಪಿದರಲ ||೫೩||

ಬಳಿಕಲಾಪೂರ ಪ್ರಭುಸಾಂಬಾಜಿಯೆಂಬುವನು
ಲಲಿತವಾ ಕಾಸಿಬನೆ ವಿಪ್ರುರುಭಯರು ಬಂದು
ನಲವಿನಿಂ ಸಾಷ್ಟಾಂಗವೆರಗಿ ನಮ್ಮನುದ್ಧರಿಪುದೆನುತೆ ಬಿನ್ನವಿಸಲಾಗಿ ||
ಸುಲಭದಿಂದವರಿಗಷ್ಟಾಂಗ ಯೋಗಸ್ಥಿತಿಯ
ತಿಳುಹಲವರಷ್ಟರಿಂದವೆ ತೃಪ್ತಿಯಾಗದೊಡೆ
ಸುಲಲಿತದೊಳವರಿಗಾ ನಿರ್ಗುಣ ನಿಜಸ್ಥಿತಿಯ ಬೋಧಿಸಿಯವರ ಮನಸಿಗೆ ||೫೪||

ಸಂತೋಷ ಮಾಡಲ್ಕೆ ಸಾಂಬಾಜಿಯೆಂಬುವನು
ಸಂತತಾನಂದದಿಯಹರ್ನಿಶಿಯೊಳಾ ಶಾಸ್ತ್ರ
ಪಂತವ ತಿಳಿದುಯೋದಿಯರ್ಥೈಸಿ ನಿಜವದನು ಕರತಳಮಳಕದಂತೆ ||
ಕಂತು ಹರಶ್ರೀಗುರುವಿನಂತಕರುಣದಿಂದ
ಸಂತನೇ ತಾನಾದನು ವರ್ಣಿಸುವೊಡಾ
ನಂತಪತಿಗರಿದೆನಿಸಿತಬಲ ಗುರುಮಹಿಮೆಯನುಯಿವನಂತೆ ತಿಳಿವನಾವಂ ||೫೫||

ಅಷ್ಟರೊಳಗುಂಬರಗಿ ಭಕ್ತರು ನಲವಿನಿಂದ
ನಿಷ್ಟೆಯಿಂ ಬಂದೆರಗಿ ಬಿನ್ನಹವಮಾಡಿ ನಮ
ಗಿಷ್ಟವದೆ ಬರಬಹುದೆನುತ್ತೆ ತಮ್ಮಯ ಪುರಕೆ ಕರದೊಯ್ದರರ್ತಿಯಿಂದ ||
ಶ್ರೇಷ್ಠಮಹಜಾನಶೆಟ್ಟಿಯು ಕಾರಬಾರಿಗಳು
ಪುಷ್ಟಿಯಿಂ ದೈವದವರೆಲ್ಲ ಕರಣಿಕ ವೃಂದ
ಸ್ಪಷ್ಟಗುರುಭಕ್ತಿ ಪೂರ್ವಕವಾಗಿ ಬಂದೆರಗಿ ವೇದಾಂತ ಶಾಸ್ತ್ರವಿದನು ||೫೬||

ಕೇಳಬೇಕೆಂಬಪೇಕ್ಷವ ಮುಂದುವರಿವುತಿದೆ
ಕೇಳಬೇಕೆಂದು ವಿಜ್ಞಾಪನವ ಮಾಡಲ್ಕೆ
ತಾಳಿಸಂತೋಷವನು ಬೋಧಿಸಿದರೇನೆಂಬೆವಾಲಸ್ಯವಿನಿತಿಲ್ಲದೆ ||
ಮೌಳಿ ಬಾಗಿಸುತವರು ಆಲಿಸುತವರರೊಳಗೆ
ಕೆಲವು ಭಕ್ತರವನು ಗೃಹವಾದರವರ ಪೆಸ
ರೊಲವಿನಿಂ ಪೇಳ್ವೆ ವಿರೂಪಾಕ್ಷಪ್ಪ ವೀರಸಂಗಪ್ಪ ಮಾಶಾಳಕರರು ||೫೭||

ಚನ್ನಬಸವಪ್ಪ ಲಿಂಗಪ್ಪ ಯಾಳಾಪುರದ
ಮನ್ನಣೆಯ ಸಿದ್ಧರಾಮಪ್ಪ ಹತ್ತೆಯ ಮೊದಲು
ಬಿನ್ನರಿಸಿ ಮಂತ್ರೋಪದೇಶ ಲಯಯೋಗ ನಿರ್ಗುಣ ನಿಜವ ತಿಳಿದರೊಲಿದು ||
ಯಿನ್ನು ಬಲ್ಲಕಿಯ ಪುರದರಳಿ ಮುರಗೆಪ್ಪ ಬಂ

ದೆನ್ನಯ ಪುರಕೆ ಬಂದು ಪಾಲಿಪುದೆನುತೆ ಪೇಳೆ
ನನ್ನಿಯಿಂದಲ್ಲಿಗೆಯ್ದುತ್ತವರ ಮನವು ಸಂತೋಷವಾಗುವ ತೆರದೊಳು ||೫೮||

ಬೋಧಿಸಿದರಗ್ರಜಾನುಜರು ತೋಟಪ್ಪನವ
ರಾಧೀನವಾಗಿರುವರವರ್ಗೆ ನಿರ್ಗುಣ ನಿಜವ
ಸಾಧಿಸಿ ಕೊಡುತ್ತಲಲ್ಲಿಂದ ನಳದುರ್ಗಕ್ಕೆ ಬಂದರತಿ ಸಂತಸದೊಳು ||
ಮೇದಿನಿಯೊಳಧಿಕವೆಮದೆನಿಪ ಬ್ಯಾಡಗೆಯವರು
ಮೋದದಿಂ ಬಂದೆರಗಿ ಕರದೊಯ್ದು ಮನೆಯೊಳಗೆ
ಸಾದರದಿಂ ಲಿಂಗಾರ್ಚನೆಯಂ ಮಾಡಿಸುತ ಬೇಗ ಲಿಂಗಾರ್ಪಿತವೆನಸಗಿ ||೫೯||

ಮಡಿವಾಳ ಶೆಟ್ಟಿ ಬಾರೊಳೆ ಮಹಲಿಂಗಪ್ಪ
ತಡೆಯದಗ್ರಜನಾದ ಛತ್ರಪ್ಪ ಬ್ಯಾಡಗಿಯ
ಒಡನೆ ಮುಕ್ಕಣ್ಣ ಸುತ ಸಿದ್ದಪ್ಪ ಮೆಂಗ್ಶೆಟ್ಟಿಯು ಭಕ್ತದತಿ ಪ್ರೀತಿಯಿಂದ ||
ನುಡಿದರೆಲೆ ದೇವ ವೇದಾಂತ ಶಾಸ್ತ್ರವ ನಮಗೆ
ಸಡಗರದೊಳಂ ಪೇಳಿಯುದ್ಧರಿಪುದೆಂದೆನಲು ||
ಮೃಡಮೂರ್ತಿ ಶಿವಲಿಂಗ ದೇವರತಿಕರುಣದಿಂ ಶ್ರವಣಗೊಳಿಸಿದರು ಮುದದಿ ||೬೦||

ಹಗಲುರಾತ್ರಿಯು ಕೇಳುವುದರಿಂದಲಿಷ್ಟವನು
ಮಿಗಿಲಾಗಿ ತೋರುತಿರಲದನರಿದು ಮಂತ್ರಲಯ
ಯೋಗವನು ಬೋಧಿಸಲನಂತರದೊಳಂ ಮನವ ಮುಂದಕಿರುವುದನು ತಿಳಿದು ||
ಸೊಗಸಿನಿಂ ನಿಜತತ್ತ್ವವನುಗ್ರಹಿಸಲದು
ಬಗೆದು ಬಹುಸಂತೋಷವಾಗಿ ಚರಣಕ್ಕೆರಗ
ಲಘುಹರನು ಕೃಪೆಯಿಂದ ಪರಸಿದನು ಮರೆಯದಲೆ ಸ್ಮರಿಸುವುದೆನುತ್ತ ಪೇಳೆ ||೬೧||

ಪರಿಸಂತೋಷದಿಂದಿರಲ್ಕನಿತರೊಳು ನಂದಪುರ
ವರಪ್ರಭುವು ಸಿದ್ಧಬಸವಪ್ಪ ಸದ್ಭಕ್ತನವ
ನಿರದ ಬಂದಡಿಗೆರಗಿ ನಮ್ಮೂರ್ಗೆ ಬರುವದೆಂದತಿಶಯಾಗ್ರಹ ಮಾಡಲು ||
ಗುರುಗಳಲ್ಲಿಗೆ ಪೋಗಲತ್ಯುತ್ಸವದಿಗ್ರಹದೊ
ಳಿರಿಸಿ ಕೊಂಡಾನಂದದಿಂದ ಸತ್ಕರಿಸುತಲೆ
ವಿರತಿ ಸದ್ಗುಣ ಸದಾಚಾರ ಗುರುಭಕ್ತಿ ಮುಂದುವರಿವುತ್ತಲಿರಲು ||೬೨||

ಆಲಕ್ಷಣವ ನೋಡಿಯಧಿಕಾರಿಯಹನೆಂದು
ಬಾಲನೇ ಬಾರೆಂದು ಏಕಾಂತ ಸ್ಥಲಕವನ

ಲೀಲೆಯಿಂ ಕರದೊಯ್ದು ನಿಜ ನಿರೂಪಣ ಮಾಡಲಾನಂದದಿಂದಲವನು ||
ಶೂಲಿರೂಪನ ಚರಣಕೆರಗಿ ನನ್ನಯಭವದ
ಮೂಲವನು ಕೇಳ್ದಿರೆಲೆದೇವ ಭವದವದಾವ
ಕಾಲ ಕಾಲದಯಾಲವಲ ಭಕ್ತವಿಲೋಲಯೆಂದು ನುತಿಸುತ್ತಿರಲು ||೬೩||

ಅನಿತರೊಳಗಲ್ಲಿಯ ವಿರತ ಬಸವಲಿಂಗಾರ್ಯ
ರನುವಿನಿಂಬಂದೆರಗಿ ಮೂಲವಾವುದ ತಿಳಿಯೆ
ದೆನಗೆ ಕರುಣಿಸುವದೆನಲಗಣಿತ ಮಹಿಮನವರ್ಗೆ ಪದುಳದಿಂದವರ ನಿಜವ ||
ಮನುಮುನಿಗಳರಸಿ ಕಾಣದ ಪರಮ ಹರಿಪೂರ್ಣ
ಘನ ಹರ ಬ್ರಹ್ಮದಿರವನು ಬೋಧಿಸಿದರೊಲಿದು
ಸ್ವಾನುಭವದೊಳರಿದು ಅತಿಶಯಾನಂದಾಬ್ಧಿಯೊಳ್ಮುಳುಗಿ ತೇಲುತಿರಲು ||೬೪||

ಅಲ್ಲಿಂದವರಪ್ಪಣೆಯನುಗೊಂಡು ಶ್ರೀಗುರುವು
ಸಲ್ಲಲಿತ ಸಲಗರಕೆ ಬಂದು ಸುಖದಿಂದಿರಲು ||
ಅಲ್ಲಿ ಸ್ವಸ್ತ್ರೀಳೊಂದಿನ ಚರಣಕೆರಗುತ್ತಲೆನ್ನಭವ ಬಹು ದುಃಖವು
ನಿಲ್ಲದೆಬ್ಬಟ್ಟುವದು ಸ್ವಾಮಿಯೆನುತಲಿ ಚರಣ
ಬಲ್ಲಿದಪ್ಪರೊಳು ಪಿಡಿಯಲ್ಕರುಣದಿಂ ಸಲೆಯ
ಸೊಲ್ಲಕೇಳುತ್ತಲತ್ಯಾನಂದದಿಂದವರ್ಗೆ ನಿಜ ತತ್ತ್ವವನು ಬೋಧಿಸಿ ||೬೫||

ಕೇಳಿದಾಗಲೆ ಪೇಳಲೆನವರ ಸಂತೋಷ
ದೇಳಿಗೆಯ ವರ್ಣಿಸುವಡಸದಳವವರ ಮನವ
ಮೂಲಬ್ರಹ್ಮದೊಳು ಮುಳುಗುತ ತಿರುಗಿಬಾರದಿರಲನಿತರೊಳಗುಪಚರಿಸುತೆ ||
ಲೀಲೆಯೊಳಗೆಚ್ಚರಿಸುವದರೊಳಗನುಜ ತಾನು
ಲೋಲ ಮತಿಯೊಳಗಣ್ಣನವರ ಚರಣವ ಪಿಡಿದು
ಬಾಲನಹೆ ನಾನೆಂಬ ಭವದ ಮೂಲವ ಕೇಳ್ವುದೆಂದು ವಿಜ್ಞಾಪನವನು ||೬೬||

ಮಾಡಲಾನಂದದಿಂ ಪುಸಿಯ ಸಂಕಲ್ಪವಿದು
ನೋಡಿದಡೆ ರಜ್ಜು ಸರ್ಪನ ತೆರದಿ ಕಾಣುತಿದೆ
ಮೂಢಮತಿಯದರಿಗದಡೆ ಗಾಢವಜ್ಞಾನದಿಂದಿಹುದೆಂದು ತಿಳಿದರಷ್ಟೆ ||
ಆಡಲೆನಖಂಡವಹ ಪೂರ್ಣ ಬ್ರಹ್ಮವು ತಾನೆ
ಗೂಢವಾದರಿವಿದನು ತಿಳಿದ ಮಹಿಮಗೆ ಮರವೆ
ರೂಢಿಯೊಳದೆಲ್ಲಿಹುದು ತಿಳಿಯದಂದು ನಿಜಗುರುತ ತಿಳುಹಲತಿ ಸಂತಸದೊಳು ||೬೭||

ಮುಳುಗಿ ಮೂರ್ಛೆಯಗೊಂಡು ಪತನವಾಗಲ್ಕರಿದು
ತಳುವ ಮಾಡದೆಯೆಚ್ಚರಿಸಲೆದ್ದು ಗುರುಚರಣ
ದೊಳುಬಿದ್ದು ಹೊರಳ್ಯಾಡುತಿರೆ ನೋಡಿ ತೆಗದಪ್ಪಿ ಮುಂಡಾಡಿದರು ಮುದರೊಳು ||
ತಾಳಿಸಂತೋಷವನು ಸರ್ವರೊಡಗೂಡಿ ಸುಖ
ದೇಳಿಗೆಯೊಳಿರಲು ಮತ್ತೊಮ್ಮೆ ನಿರಗುಡಿ ಪುರಕೆ
ಲೋಲದಿಂ ಗುರುಕರಿಯ ಬಸವರಾಜರ ಸಹದಿ ಪೋಗಲಾಗಲಾವೂರ ದೊರೆಯು ||೬೮||

ಬಾಪು ಸಾಯ್ಬರು ಕರುಣಮಂ ಪಡೆಯಬೇಹುದೆನು
ತಾ ಪರಮ ಗುರುಗಳಿಗೆ ವಿಜ್ಞಾಪನವ ಮಾಡೆ
ತಾಪಸರು ಶ್ರೀಕರಿಯ ಬಸವಾರ್ಯರೊಲಿದವರ್ಗೆ ನಿಜತತ್ವದಿರವ ಪೇಳೆ ||
ಭೂಪ ಸಂತಸವಾಗಲತ್ತ ಬಹುದಿನಗುರುವ
ನೇಪರಿಯೊಳಿಂ ಪ್ರಾಪ್ತಿಯಾದಪರೆನುತ ಚಿಂತಿ
ಪ್ರಾಪ್ತಿಸಿರುತಿರಲೀಗಳ ವಿಕೃತಮಹಂತನಿವ ಪೂರ್ವದೊಳೆ ನೀರಗುಡಿಯೊಳು ||೬೯||

ದೊರೆ ಬಾಪುರಾಯರುರೆ ತಮ್ಮರಮನೆಯೊಳಿರಿಸಿ
ಪರಮ ಪ್ರೀತಿಯೊಳು ವೃಷಭಲಿಂಗಾರ್ಯರಿಂ ಮುದದಿ
ಕರಣಹಸುಗೆಯ ಮೊದಲು ತತ್ವಶಾಸ್ತ್ರವನೋದಿ ಹೇಳಿಸುತಿರಲ್ಕುಭಯರು ||
ಯಿರಲಿರಜ್ಞಾನ ಪ್ರಕಾಶವನು ನೋಡುತಲಿ
ಕರುಣವಾಗಲ್ಬೇಹುದೆಂದು ವಿಜ್ಞಾಪನವ
ವಿರಚಿಸುತೆ ಸಾಷ್ಟಾಂಗವೆರಗಿರಲು ದಯದಿಂದ ಸಗುಣನಿರ್ಗುಣ ಭೇದವ ||೭೦||

ಚೆನ್ನವಾಗಿಯೆ ಬೋಧಿಸಿದರು ಜೀವಸ್ಮಿಯಿದ
ನನ್ನಿಯಿಂ ಮಿಥ್ಯ ನೀನೆ ಸತ್ಯ ನಿಜವಿದುವೆ
ಯೆನ್ನುತಲಿ ಬ್ರಹ್ಮಸ್ಮಿಯೆಂಬರದಾರು ವನ್ಯತವೇನೆಂಬುದಿಲ್ಲದಿರವೆ ||
ಸನ್ನುತಾಮಳದುಳುಮೆಯೆ ನಿಜವೆದೆಂದು ತಿಳಿ
ಭಿನ್ನವಾಗಿರುವ ಜಗಜೀವವೆಲ್ಲವು ಪುಸಿಯು
ಯೆನ್ನು ಪೇಳುವದೇನದೇಕಮೇವಾ ದ್ವಿತೀಯಯೆಂಬ ಶೃತಿವಾಕ್ಯವಿಹುದು ||೭೧||

ವರತತ್ವಮಸಿಯೆಂಬ ವಾಕ್ಯವ ಪೇಳುವದೈಸೆ
ಸುರುಚಿರದೊಳದರರ್ಥ ನಿಜವೇ ನೀನೆಂಬುವದು
ಪರಬಿಲ್ಲದಿದನರಿವುದೆಂದು ವೇದಾಂತವನುಭವ ಮುಕುರದರ್ಥವದನು ||
ನಿರವಿಸಿ ಮನದ ಕಲ್ಪನೆಯ ಕಳೆದು ಸ್ವಾಂತವನು

ಸ್ಥಿರಗೊಳಿಸಲಾನಂದವನು ಮುಸುಕಿ ಪರವಶವ
ಮೇರೆಮೀರಲ್ಕಿರಿದು ಮೇಲ್ವರಿದ ಕರುಣದಿಂದಪ್ಪಿ ಮುಂಡಾಡಿದರು ||೭೨||

ಅಲ್ಲಿಯಿಂ ಗುರುಕರಿಯಬಸವರಾಜರಸ ಸಹದಿ
ಸಲ್ಲಲಿತ ಹಿರೆಹಳ್ಳಗಂ ಬದಲು ದೊರೆರಾಯ
ಬಲ್ಲಿದರು ನಿಜಲಿಂಗಶೆಟ್ಟಿ ತಮ್ಮರಮನೆಗೆ ಕರೆದೊಯ್ದುವುಪಚರಿಸುತ ||
ಯಿಲ್ಲೆಯಿರಬೇಹುದೆಲೆಸ್ವಾಮಿ ಕರಿಬಸವಾರ್ಯ
ಯೆಲ್ಲಿಯಾದರೊಂದೆ ತಮಗಲ್ಲಿಯಿಲ್ಲಿಯೆಂಬುದಿದು
ಸಲ್ಲದೀಗಲೆ ತಮ್ಮ ಸೇವಕರು ನಾವಿಹೆವು ಬೇಕಾದುದನಾಜ್ಞೆಗೈಯೆ ||೭೩||

ಕುಳಿತ ಸ್ಥಾನದೊಳೆ ತಂದೀವೆ ತಮ್ಮಯಸೇವೆ
ಯೊಳಗಿಹೆವು ಮನೆಯವರದೆಲ್ಲವೇನಾದರೆಯು
ತಿಳಿಯಲಾರದೆ ತಪ್ಪಿದರೆ ಬೈದುಬಡಿವುದಕೆ ಕರ್ತುಗಳೆಯಿರುತಿಹೆರಲ ||
ಬಾಲಕರ ಮೇಲೆ ಬಹುಪ್ರೀತಿಯಿರುವುದು ತಮಗೆ
ಬಾಲೆ ಮೈನಾಬಾಯಿಯಿಹಳು ಕಾಲ್ಗಳೆವುದಕೆ
ಮೇಲು ಮಾತುಗಳೇಕೆ ತಮ್ಮ ವಯವೃದ್ಧವಾಗಿರುವ ಕಾರಣದಿಂದಲು ||೭೪||

ಎಂಬ ಮಾತಿಗೆ ಸ್ವಾಮಿಯೆಂದರೆಲೆ ಮಗನೆ ನೀ
ಯೆಂದ ನುಡಿಯಿದು ಬಹಳ ಚಂದವಾಗಿದೆ ನಾವು
ಬಂದ ಮೊದಲಲ್ಲೆಯಿರುವು ಮಡಿವಳಯ್ಯನಸು ಕಂದರಿರ್ಪರು ಅವರ ||
ಅಂದವಾಗಿಯೆ ನಮ್ಮ ರೂಡಿ ಬಹಳಿರುತಿಹರು
ಬಂದ ಬಳಿಕಲ್ಲೇವರು ನೆನಸುತಿಹ ಕಾರಣದಿ
ಹೊಂದಿಕೊಂಡಿಹೆವಲ್ಲಿ ವರ್ಷವರ್ಷಕೆಯಿಲ್ಲಿ ಬಂದುದರ್ಶನ ಕೊಡುವೆವು ||೭೫||

ಇಂತೆಂದು ನುಡಿದ ವಾಕ್ಯಕೆ ರಾಯರೆನುತಿಹರು
ಯೆಂತಾದೊಡಂ ಸ್ವಾಮಿ ತಮ್ಮಯ ಚರಣ ಸೇವೆ
ಯೆಂತು ದೊರಕುವುದೆಮಗೆ ತಮಗೆ ಶಿಶುಗಳು ನೆನಹಲವರ ತರಿಸುವೆನಿಲ್ಲಿಗೆ ||
ಕಂತು ಹರರೂಪ ತಾವಿಲ್ಲಿರಲು ಬಹುದೆಂದು
ಸಂತ ದೊರೆರಾಯ ನಿಜಲಿಂಗಶೆಟ್ಟಿಯರು ಮುದದಿ
ಮುಂತೆಸಾಷ್ಟಾಂಗವೆರಗೇಳದಿರಲಂತಾಯಿತೆಂದೊಡಂಬಡಲಿಕಾಗ ||೭೬||

ಇದಕೆ ಶಿವಲಿಂಗ ದೇವರು ಸಂತಸಂದಳೆದು
ಪದ ಸೇವೆಯೊಳಗಿಹುದು ಸದನ ಜನರೆಲ್ಲ ಬಹು

ಮುದದಿಂದಿವರು ಬೈದರುಂ ಬಡಿದರುಂ ಮನಕೆ ತಾರದಲೆ ಸೇವಿಪುದರಿ ||
ಇದು ನಮ್ಮ ಮನಸಿನೊಳಗಿರ್ದುದನೆ ಮಾಡಿದಿರಿ
ಒದಗುವವು ನಿಮಗೆ ಮಹದೈಶ್ವರ್ಯ ಪದವಿಗಳು
ವಿಧಿತರಿದು ತಮ್ಮ ಬಾವನಿಳುಹಿಕೊಂಡೆಯಿದನೆ ನಮಗೆ ಬಹುಹಿತದಾಯ್ತು ||೭೭||

ಎಂದವರ್ಗೆ ಪೇಳಿ ಆಶೀರ್ವಚನಮುಮನಿತ್ತು
ಬಂದು ಗುರು ಸನ್ನಿಧಿಗೆ ಸ್ವಾಮಿ ನಾಂ ಪೋಪೆನೊಲ
ವಿಂದ ತಾವಿರಲ್ಬಹುದು ವೃದ್ಧಾಪ್ಯ ಕಾಲವದಿರುವದಿನ್ನು ತಾವು ||
ವಂದೇ ಸ್ಥಾನದೊಳಿರ್ಪುದೆ ಸಹಜವಿಲ್ಲಿ ತಮ
ಗೊಂದಿನಿತು ವಂಚನೆಯದಿಲ್ಲದಲೆ ರಕ್ಷಣೆಯ
ಕುಂದದಲೆ ಕಂದರಿಗೆ ಮಾಡುವಂದದೊಳು ರಚಿಸುವರು ಬೇಸರವಿಲ್ಲದೆ ||೭೮||

ಎಂದವರಿಗಂ ಪೇಳಿ ಹೊಡವಡುತೆ ಸಂತಸದಿಂ
ಯಿಂದುಧರರೂಪ ಶಿವಲಿಂಗಾರ್ಯರುಂ ತಾವು
ಬಂದರಾ ಸಲಗರ ಮಠಕ್ಕೆನಿತರೊಳಗ್ಪೊರಟಿಯ ಗೌಡ ಅಂಬಾಜಿಯು ||
ಬಂದು ಶಿರಸಾಷ್ಟಾಂಗದಿಂ ನಮಿಸಿ ಗುರುವೆ ನ
ಮ್ಮಂದಿರಕೆ ಬಂದು ಪಾವನಗೆಯ್ಯುದೆಂದೆನುತೆ
ಹೆಂದದಾನಂದದಿಂ ಬಿನ್ನವಿಸಲಂತಾಯ್ತೆನುತ್ತಲ್ಲಿಗಂ ಪೋಗಲು ||೭೯||

ಅತಿಶಯೋನ್ನತಿಯ ಸಂಭ್ರಮದಿಂದ ಕರದೊಯ್ದು
ಸುತ ಸಹೋದರ ದಂಪತಿಗಳ್ಮೆದೆ ನಮಿಸುತ್ತೆ
ಯತಿಪತಿಯ ತಮ್ಮ ಗೃಹದೊಳಗಿರಿಸಿಕೊಂಡು ಸತ್ಕರಿಸಿದರದನೇನೆಂಬೆನು ||
ವಿತತ ಗುರುಪೂಜೆಯಷ್ಟಕ್ರಮದೊಳಂ ರಚಿಸಿ
ಸತತ ಶೋಡಷದ ರಾಜೋಪಚಾರವನೆಸಗಿ
ಪತಿತ ಪಾವನನ ತೀರ್ಥ ಪ್ರಸಾರವ ಸಲಿಸಿ ಕೆಲವ ಚರರೊಡನೆ ತೃಪ್ತಿ ||೮೦||

ವಡಸಿ ವೀಳ್ಯವ ಕೊಟ್ಟು ತಾವು ಭೋಜನ ಮಾಡಿ
ತಡವಿಲ್ಲದಾಗ ಮೇಲ್ಮಂದಿರದೊಳಂ ವಾಸಿ
ವಡೆಯರಲ್ಲಿಗೆ ಬಂದು ಕರಪಿಡಿದು ಕೊಂಡೊಯ್ದು ಶಯ್ಯೆಯೊಳು ಕುಳ್ಳಿರಿಸುತೆ ||
ಮೃಡ ಮೂರ್ತಿಯೆ ನಮ್ಮವಜ್ಞಾನ ತಮವಿದನು
ಪೊಡವಿಯೊಳಗತಿ ಕಷ್ಟ ಬಡಿಸುತಿದೆ ಭವಭವದಿ
ಗಡವಿದನು ಸುಜ್ಞಾನ ಸೂರ್ಯನುದಯವ ಮಾಡವೋಡುವದುಯಿನಿತಿಲ್ಲದೆ ||೮೧||

ಎಂದು ಸಹ ಫಲಪಾಣಿಯಾಗಿ ಅಂಬಾಜಿ ಪ್ರಭು
ಬಂಧುರದೊಳಷ್ಟಾಂಗ ನೆಲನ ಸೋಂಕುವ ತೆರದಿ
ಸುಂದರದೊಳಂ ನಮಿಸಲಾನಂದದಿಂ ಗುರುಗಳವನ ಮಸ್ತಕದಿ ಹಸ್ತ ||
ಹೊಂದಿಸುತಲಭಯಮಂ ಕೊಟ್ಟು ಕರಕೊಂಡವನ
ಮುಂದೆ ಕುಳ್ಳಿರಿಸುತೆಲೆಮಗನೆ ಚಿತ್ಸೂರ್ಯನವ
ಯೆಂದೆಂದಿಗುದಯಸ್ತವಿಲ್ಲದಲೆ ತಾನಿರ್ಪ ಘೂಕನಂದದೊಳು ನಿನ್ನ ||೮೨||

ಕಣ್ಣು ಕಾಣದಿರಲ್ಕೆ ತರಣಿ ಕಡೆ ದೋಷವೆ
ನಣ್ಣ ನೋಡೆಂದು ಸುಜ್ಞಾನ ದೃಷ್ಟಿಯ ತೆರೆಯೆ
ಕಣ್ಣಿನೊಳು ಪರಬೊಮ್ಮದಿರವ ನೋಡುತಲವನು ಅತ್ಯುತ್ಸವದಿನಿಸಲು
ಪುಣ್ಯ ಸ್ವರೂಪನಾಶಿಷ್ಯನಂ ತೆಗದಪ್ಪಿ
ಗಣ್ಯವೇದಾಂತ ಶಾಸ್ತ್ರವನವಗೆ ಶೃತಿಗೊಳಿಸಿ
ಕಣ್ಣು ಮೂರುಳ್ಳವನ ಕರುಣವಿರಲಿ ನಿನಗೆಂದು ಪರಸಿ ಪಲದಿನವಿರಲ್ಕೆ ||೮೩||

ಅಲ್ಲಿಗೇ ಕೇಶಗಾವಿಯವಪ್ಪರಾಯ ಪ್ರಭು
ಸಲ್ಲಲಿತ ಗುರುಚರಣ ಸತ್ಕೀರ್ತಿಯನು ಕೇಳಿ
ಪಲ್ಲವಿಸುತಾನಂದದಿಂ ಬಂಡು ಮೈಯಿಕ್ಕ ಸ್ವಾಮಿ ನಮ್ಮಯಪುರ ||
ಕಿಲ್ಲದೀಗಲೆ ಬಂದುವುದ್ಧರಿಸುವುದುಯೆಂದು
ಬಲ್ಲತನದಿಂದ ವಿಜ್ಞಾಪನವ ಮಾಡಲ್ಕೆ
ಬಲ್ಲದ ಗುರುಗಳೈದೆನಲ್ಲ ಕೇಶಗಾವಿಯಪುರಕೆ ನಡೆತಂದರಾಗ ||೮೪||

ಬರಲಿಕಾನಂದದಿಂದುಪಚರಿಸುತಾ ಗೌಡ
ಚರಣದೊಳ್ಬಿದ್ದು ಹೊರಳುತ್ತೆನ್ನ ಭವದುಃಖ
ಹರಣಮಾಡುತ ನಿಜದ ಸ್ಮರಣೆ ಕರುಣಿಸುವದೆಂದೆನುತ ವಿಜ್ಞಾಪನವನು ||
ವಿರಚಿಸಲು ಪರಬ್ರಹ್ಮದಿರವ ಬೋಧಿಸಲವನು
ಪರಮ ಹರುಷಿತನಾಗಿ ಪರಿಪೂರ್ಣನಾಗಿರುವ
ಸುರುಚಿರೋನ್ನತದರಿವುದೆಲ್ಲಿಹುದೊಯೆಂದೆನುತೆ ಭ್ರಮಿತನಾಗಿರ್ದನಲ್ಲ ||೮೫||

ಎನ್ನುತಾನಂದದಿಂ ನುತಿಸುತಲಿನಿತರೊಳುಂ
ಮನ್ನಣೆಯ ರಾಜ ಪಂತೋಜಿ ಗುರುಸಿದ್ಧಪ್ಪ
ಚನ್ನಮಲ್ಲಪ್ಪ ಶೆಟ್ಟಿಯುಮುಭಯರುಂ ಕರೆಯ ಬಂದರಂಕಲಕೋಟೆಯಿಂ ||
ಬಿನ್ನವಿಸಿದರು ಗುರೋತ್ತಮ ನಮ್ಮ ಪುರಕೈದಿ

ನನ್ನಿಯಿಂ ತಮ್ಮ ಪಾವನ ಮಾಳ್ಪುದೆಲೆ ದೇವ
ಸನ್ನುತಾಮಳ ಸದ್ಗುರುವೆಯೆಂದು ನಮಿಸಲತಿ ಕರುಣದಿಂ ಪೋದರಿವರು ||೮೬||

ಉಭಯರತಿ ಸಂತೋಷದಿಂದುಪಚರಿಸಿ ಬೇಗ
ಸಭಯರಾಗಿರ್ದೆವೆಲೆ ಗುರುವೆ ಭವದುಃಖದತಿ
ಸುಭಗದ ಸುಜ್ಞಾನಪನುತಿಳುಹಿ ರಕ್ಷಿಸುವುದೆನುತೆರಗಿ ಬಿನ್ನವಿಸಲಾಗ ||
ಅಭವ ನಿಜದನುಭವವನುಗ್ರಹಿಸಿ ಲಾಲಿಸುತೆ
ರಭಸದಿಂ ಪರಮೋತ್ಸಾಹದಲುಬ್ಬಿ ನುತಿಸುತಿರೆ
ಯೀಭವದನ ಪಿತರೂಪದವರಿಗಾಶೀರ್ವಾಚನವಿತ್ತು ತಮ್ಮಯ ಪುರಕ್ಕೆ ||೮೭||

ಬರಲತ್ತಲಾಮಾತರಾಜ ಬುವ್ವಾಸಾಯ್ಯ
ಗುರುವಿನಂತಃಕರುಣ ಒಡೆಯಬೇಕೆಂದೆನುತೆ
ಗುರುಗಳರಸುತಿರಲ್ಕೆಯಿವರ ವಾರ್ತೆಯ ಕೇಳಿ ತನ್ನ ಶೀಕ್ಷಾಗುರುವಿಗೆ ||
ನಿರವಿಸಲಿರಹುದು ನಮ್ಮಯ ಗುರುಗಳವರಿರುವ
ರರಿಯೆಲವರುಂ ಮಹಾಬಲ್ಲವರು ಶಾಸ್ತ್ರಜ್ಞ
ರುರು ಕರುಣಶಾಲಿ ಪೂರ್ಣಜ್ಞಾನಿಗಳು ದಾನಶೀಲರತಿ ಬೋಧಪರರು ||೮೮||

ಗುರುಸಾರ್ವಭೌಮ ಗುರುಫಣಿತಿಲಕ ಗುರುರಾಜ
ಗುರುಕಮಲ ರವಿ ಗುರು ಕುಲಾಭರಣ ಗುರುಕವಿಪ
ಗುರುಪಾಕಶಾಸನ ಗುರೋರ್ಗಿಕ್ಷಿತಿಯು ಗುರುಶಿಖಾಮಣಿಗಳೆನಿಸುತಿಹರು ||
ಅರಿಯಲೀ ಗುರುಗಳಿಂ ಭವನಾಶವಹುದರಿದೆ
ವರಮಹಾರಾಜಯೆನಲುಬ್ಬಿ ಸಂತಸದಿಂದ
ಕರಿಯ ಕಳುಹಲು ಬೇಹುದೆನುತೆ ಮೇನಸವಾರರ ಕರಣಿಕ ಛಡೆದಾರರು ||೮೯||

ಪರಮಗುರು ಸಿದ್ದಪ್ಪ ಪಂತೋಜಿಶೆಟ್ಟಿ ಸಹ
ಕರೆಯ ಕಳುಹಲು ಪೋಗಿ ಶರಣೆಂದು ಪತ್ರಿಕೆಯ
ನಿರದಿತ್ತು ಕರಮುಗಿದು ಸ್ವಾಮಿತಾವ್ ದಯದಿಂದ ದಯಪಾಲಿಸುವುದೆನುತಲಿ ||
ಗುರುಗಳಿಗೆ ವಿಜ್ಞಾಪನವ ಮಾಡಲಾನಂದ
ದಿರವಿನೊಳಗಂತಾಯ್ತೆನುತ್ತವರ ಸತ್ಕರಿಸಿ
ಗುರುಪಾದಸ್ಮರಣೆಯಿಂ ನರವಾಹನವೇರಿ ಪೋಗಲತಿ ಸಂಭ್ರಮದೊಳು ||೯೦||

ರಾಜನಾಕರಿರಥ ಪದಾತ್ಯಾಶ್ವಗಳಗೂಡಿ
ಮೋಜಿನಿಂದಾಮಾತ್ಯ ದೌವ್ವಾರಿಕರು ಪೊಗಳೆ

ರಾಜಿತಾಂದೊಳಿಕೆಯೊಳಂ ಕುಳಿತು ವಾದ್ಯದಬ್ಬರವೆಸೆಯಲಾನಂದದಿಂ ||
ಸೋಜಿಗದೊಳಂ ಪಂಚಫಲಸ ಫಾಣಿಗಳಾಗಿ
ವೋಜೆಯಿಂ ಗುರುಸಾರ್ವಭೌಮರಿಗರಿಗೆ ಪೋಗಿ
ಭಾಜನರ ವಾಹನವನಿಳಿದು ಭೂಪತಿ ನಡೆದು ಸನ್ನಿಧಿಯೊಳಿಟ್ಟು ಫಲವ ||೯೧||

ಸಾಷ್ಟಾಂಗದಿಂ ನಮಿಸಲಪ್ಪಣೆಯ ಕೊಡಲೆದ್ದು
ನಿಷ್ಠೆಯಿಂದ ಗುರುಪಾದವ ನುತಿಸಿ ಸಂತಸದಿಂ
ಶಿಷ್ಟಿಸಿ ಬಕದೊಳು ಕುಳ್ಳಿರಿಸಿ ಸಂಭ್ರಮದಿಂ ಪಟ್ಟಣದ ವೀಥಿಯೊಳಗೆ ||
ಶ್ರೇಷ್ಠ ಚತುರಂಗಬಲವಮಾತ್ಯ ಕರಣಿಕರು
ತುಷ್ಟಿಯಿಂ ದೈವಮಹಜಾನ ಶೆಟ್ಟಿಯು ಸಕಲ
ಸೃಷ್ಟಿಯೊಳಗಿಂತಪ್ಪ ಗುರುಗಳೆಲ್ಲಿಯು ಕಾಣೆವೆನುತ ಸರ್ವರು ನುತಿಸಲು ||೯೨||

ಹಸ್ತಿಮಸ್ತಕವನಡರಿಹರುಮಾನ್ಯಾರಿಗಳು
ಸ್ವಸ್ತಿಯಿಂದಾಶೀರ್ವಚನ ಮಾಳ್ಪಕವಿಗಳು ಸ
ಮಸ್ತ ಸೇವಕ ಜನರು ಛತ್ರ ಅಮರ ಬೆಳ್ಳಿ ಚಿತ್ತವಪ್ತಾ ಗಿರಿಗಳು ||
ಮಸ್ತಕದೊಳಂ ಪಿಡಿದರೆತ್ತ ಬೀಸುತ್ತಿಹರು
ನ್ಯಸ್ತಫಲದಿಂ ನಮಸರಿಸುತೆ ಕೆಲವು ಜನರು
ಸಪ್ತದಿಂ ಪೂರ್ವದಲೆ ಶೃಂಗರಿಸಿರುವ ಸೂರ್ಯಚಂದ್ರ ದಿಪಣಿಯ ಪಂಕ್ತಿಯೊಳ್ ||೯೩||

ಕರಡಿ ಕೌಸಾಳ ಗಿಡಿಬಿಡಿ ಸೋನಾಯಿಯು ಕೊಳಲ
ವರೇವು ಚೌಘುಡ ತಾಳ ಶಮರ ಪೇಟಿಮಕಿಯು ಬಿಡದೆ
ಸ್ವರ ಮಾಡುತಿಹ ಕರಣಿಕಾಳಿಯುನ ಫೇರಿ ಹೆಗ್ಗಾಳೆ ಚಿನ್ನಾಳಿಗಳನು ||
ಭೇರಿ ಡೊಳ್ಳಡಮಾಮಿತಂ ಮಟಬಿರಿದು ಪೊಗಳ್ವ
ಪರಮಭಟ್ಟಂಗಿಗಳ ಸ್ವರಗಳೆಲ್ಲವ ಕೊಡಿ
ಭೋರೆಂದು ಶರಧಿ ಮೊರಹಿನ ತೆರದಿಯೊಪ್ಪುತಿಹುದನೇನೆಂಬೆನದುಭುತವನು ||೯೪||

ಬೀರುತಿರುವ ಸಮಯದೊಳ್ನೋಟದ ಸ್ತ್ರೀಯರುರೆ
ಪರಿಪರಿಯ ಶೃಂಗಾರವನಾಂತು ನಿಂತಿಹರವರ
ವರಣಿಸುವಡಾವ ಕವಿಯೆನಲು ಶೋಭಿಸುತಿಹರದನೆಂಬೆ ಚಿತ್ರವನು ||
ಗಿರಿಕಮಲ ಕುಟ್ಮಲ ಕನಕಕುಂಭ ಕುಚದವರು
ಪರಿಪೂರ್ಣ ಶಶಿನಳಿನ ಮುಕರನಿಭ ವದನೆಯರು
ಕರಿಹಂಸ ಸದೃಶವರಗಮನೆಯರು ಹರಿಶೂನ್ಯದಾಗಸಾಭ್ರಸುಕಟಿಯರು ||೯೫||

ನೀಲಫಣಿವೇಣಿಯರ ಶೋಕ ಸಮಪಾಣಿಯರು
ಬಾಲಶಶಿ ನಿಟಿಲೆಯರು ಸದ್ಗುಣ ಸುಪಟಲೆಯರು
ಕಾಲಾಭ್ರಚಿಕುರೆಯಕಪೋಲಾಂಕ ಮಕರೆಯರು ಸೀಮಂತಿನೀ ಸಿಕರಿಯರ್ ||
ಬಾಲೆಯರು ಮೌಕ್ತಿಕ ಮಾಲೆಯರು ಕರ್ಣದೊಳು
ವಾಲಿಯರು ಕಾಮಾಲಕ ಮಾಲೆಯರು ಸಜ್ಜನಸು
ಲೋಲೆಯರು ಸ್ಮರಶಾಸ್ತ್ರ ಜಾತಿಯರು ಬಂದರು ಗುರೋರಂಘ್ರಿ ದರ್ಶನಾರ್ಥ ||೯೬||

ಕುಂದನಿಭರದನೆಯರು ಮಂದಗಜಗಮನೆಯರು
ಯಿಂದುಸಮ ವದನೆಯರು ಮನಸಿಜನ ಸದನೆಯರು
ಬಂಧುರದ ಸುಗುಣೆಯರು ಕಾಮಕಲೆ ಕದನೆಯರು ಪುರುಷರಿಗೆ ಮುದವೀವರು ||
ಹೊಂದಿದರನಗವಿಪರು ಬಂದವರನೊಲಿಸುವರು
ಸುಂದರದ ಗಾತ್ರಿಯರು ಶುಭವರ ಚರಿತ್ರೆಯರು
ಬಂದರೀಶನ ಸದೃಶರೂಪ ಶಿವಲಿಂಗಾರ್ಯರನು ನೋಳ್ಪ ತವಕದಿಂದ ||೯೭||

ಇಂತು ಬಹು ಚಂದದಿಂ ಬಾಲಯೌವನವೃದ್ಧ
ರಂತು ಸಂಭ್ರಮವೆರಸಿ ನೋಡುತಿರೆ ತೀವ್ರದೊಳು
ಕಂತು ಹರ ರೂಪನಂ ಕರೆದು ತಂದಾವು ದಂಡಯ್ಯನವರೊರ ಗೃಹದೊಳು ||
ಸಂತರೆಲ್ಲರು ಭಜನೆ ಮಾಡುತಿರಲಂತು ಶ್ರೀ
ಮಂತ ಧರಣಿ ಪಾಲನನಿಳಿಸಿ ಬೇಕಾದುದ
ಕುಂತದಾರಿಗಳೊಡನೆ ತರಿಸಿತ್ತು ನಿಜನಿಶಾಂತಕ್ಕೆ ಪೋದನು ಅಜ್ಞೆಯಿಂ ||೯೮||

ಬಂದ ಸದ್ಭಕ್ತ ಜನರೆಲ್ಲ ಫಲಕರ್ಪೂರ
ತಂದದನಿಟ್ಟು ನಮಿಸುತ್ತಲಾಶೀರ್ವಚನಂ
ಚಂದದಿಂ ಕೊಂಡು ತಮ್ಮತಮ್ಮನಿಗಳಿಗೆ ಪೋದರತ್ತಲತ್ತಾಚಾರ್ಯರು ||
ಬಂಧುರ ದೊಳೀಶಾರ್ಚನೆಯಂ ಗೈದು ಭೋಜನವಾ
ನಂದದಿಂ ಮಾಡಿ ಕುಳ್ಳಿರಲಷ್ಟರೊಳು ರಾಜ
ಮಂದಿರಕೆ ಕರೆಯ ಕಳುಹಿದನು ನರಬಾಹನವನಡರಿ ಪೋದರು ಗುರುಗಳು ||೯೯||

ಹೋಗಲಾಕ್ಷಣ ರಾಜನೆದ್ದು ಸಂತಸದಿಂದ
ರಾಗದಿಂ ಕುಳ್ಳಿರಿಸುತಷ್ಟಾಂಗದಿಂ ನಮಿಸಿ
ಭೋಗಿಕಂಕಣ ರೂಪನೆನ್ನಯ ಭವದ ಮೂಲೋತ್ಪಾಟನಂಗೆಯ್ಯೆದು ||
ಸೊಗಸಿನಿಂದಿಂತು ವಿಜ್ಞಾಪನವ ಮಾಡಲ್ಕೆ

ಬಗೆಯನರಿದೆಲೆಲೆ ಮಗನೆ ಕೇಳದಜ್ಞಾನ
ಮಿಗಿಲಾದ ಕಾರಣದಿ ಭವದುಃಖ ಪೋಗಿಪುದುದನಿದನಳಿಯೆದಾವುದಿಲ್ಲ ||೧೦೦||

ಮರವಿದೋಷವನಿದನು ಅರಿದರೊಂದಿನಿತಿಲ್ಲ
ಹರನೇ ನೀನಿರ್ದು ನಾ ನರನೆಂದು ಭಾವಿಸುವೆ
ತೆರನರಿಯಲಾ ಸೋಮಶರ್ಮನ ಜನಕನ ತೆರದಿ ದ್ವಿಜನವನದ್ವಿತೆಯಂತೆ ||
ಪರಬ್ರಹ್ಮದಿರ ನೀನರುವೆನಿದ ನೋಡೆಂದು
ಸ್ಥಿರದುಳುಮೆ ನಿಜವನದ ತೋರಿಸಲ್ಕದನರಿದು
ಪರಮ ಸಂತಸದಿಂದ ತಿರುಗಲಾನಂದ ಲಕ್ಷಣವಕಾಯದಿ ತೋರಲು ||೧೦೧||

ಗುರುವೆ ಪರತರವೆ ನಿಜದಿರವೆ ಮೋಕ್ಷಗೃಹವೆ
ವರದನೆನ್ನಯವಜ್ಞದೋಷವನು ಕೆಡಿಸಿದಿರಿ
ಪರಿಪೂರ್ಣ ಪರಬ್ರಹ್ಮವೇ ನೀವೆನುತ ನುತಿಸಿ ಸಪರಿಯಂತಲ್ಲಿಯೆ ||
ಯಿರಿಸಿಕೊಂಡಾ ಶ್ರವಣ ಮನನ ನಿಧಿ ಧ್ಯಾಸಗಳು
ಮರೆಯದಭ್ಯಾಸ ದಿನದಿನದಿ ನಡೆಯಲ್ಕವನ
ಮರವಿಯೊಳ್ಳನಿತಿಲ್ಲದರುವೆಯದ ನಿರ್ಧರಿಸಿ ನಿಜವೆ ತಾನೆಂದರಿದನು ||೧೦೨||

ಅರಿದರಿವನಡಗಿ ಪರಮಾನಂದಮಯನಾಗಿ
ಗುರುಗಳಿಗೆ ಶಾಲ್ಜೋಡಿಸಕಲಾತಿ ಮೊದಲಾಗಿ
ವರವಸ್ತ್ರಲಾಭರಣಗಳು ಸಹಸ್ರಾವಧಿಯ ಗುರುದಕ್ಷಿಣವನು ಕೊಟ್ಟು ||
ಶಿರದೊಳಪ್ಪಾಗಿರಿಯವಿಡಿಸಿ ಕೊಳುವದಕಿತ್ತು
ಸರಿಯವರಿಗೊರವಸ್ತ್ರದುಡುಗೊರೆಗಳವನಿತ್ತು
ಪರಮ ಸಂಭ್ರಮದಿಂದ ನರವಾಹನವನೇರಿಸುತ ಕಳುಹಿ ಸಂತಸದೊಳು ||೧೦೩||

ಇರುತಿಂತು ವರ್ಷವರ್ಷಕೆ ಕರೆಸಿಕೊಳುತೊಂದು
ವರುಷಮಠದೊಳಗೆ ಪಾರಾಣ ಪ್ರಾರಂಭಿಸಿದ
ರರಿತದ ಖರ್ಚು ದಿನದಿನದಿ ಶತಗಣ ತೃಪ್ತಿಯಾಗುತಿಹುದೆನೆಂಬೆಯ ||
ಯೆರಡು ತಿಂಗಳದನಿರ ತೆರನಂತೆ ನಡೆಸಿಕಡೆ
ಗಿರದೆ ಗ್ರಾಮಾದ್ಯ ಜನ ಬಂದ ಗಣಕುಲಕೆಲ್ಲ
ವರಷಡ್ರುಚಿಯನುಳ್ಳ ದೇವಾನ್ನ ದಿವ್ಯಾನ್ನ ಶಾಲ್ಯಾನ್ನವಮೃತಾನ್ನ ||೧೦೪||

ರಸರಸಾಯನ ಪದಾರ್ಥವ ನೀಡಿಸುತಲವರ್ಗೆ
ಖುಷಿಯಿಂದೆ ಧೋತ್ರವುರು ಮೂಲ ಸಿರಿಗಳ್ಕೆದೆ

ಸಸಿನೆ ಕುಪ್ಪಸ ದಕ್ಷಿಣೆಂಗಳಿವೆ ಮೊದಲಾದ ಬೇಡಿದ ಪದಾರ್ಥಗಳಿತ್ತು ||
ಶಶಿಧರ ಸ್ವರೂಪಹರ ಪಟ್ಟಚರ ಮೂರ್ತಿಗಳಿ
ಗೊಸೆದು ಪೌರಾಣಿಕ ಗುರುಗಳಿಗೆ ಮೊದಲಾಗಿ
ಹೊಸತಾರಿನೋಸ್ತರ ಶಾಲಸಕಲಾತಿ ಮುಂತಾದುಡುಗೊರೆಯನವರಿಗಿತ್ತು ||೧೦೫||

ಮೆರವಣಿಗೆಯನತ್ಯುತ್ಸವದಿ ಮಾಡಿಸುತ ಬೇಗ
ಗುರುಪೂಜೆಯಷ್ಟವಿಧಿ ಷೋಡಶೋಪಚಾರದಿಂ
ಶ್ರೀರುದ್ರಭಿಷೇಕ ರಾಜಪೂಜೆಯನೆಸಗಿ ಗುರುಗಳಿಗೆ ಮಠವದಿತ್ತು ||
ವರುಷ ವರುಷಕ್ಕೆ ಮುನ್ನೂರು ರೂಪಾಯಿಗಳ
ನಿರದಿತ್ತು ಬಹುಮಾನ್ಯವನು ಮಾಡಿರಿಸಿಕೊಂಡು
ಪರಮೋತ್ಸಹದೊಳಿರ್ದರೀ ಕಥೆಯನಾಲಿಸಿದರಿಷ್ಟಾರ್ಥ ಪ್ರಾಪ್ತಿಯಕ್ಕು ||೧೦೬||

ಮರುಳಸಿದ್ಧಾಚಾರ್ಯ ರಾಮಿದೇವಚಾರ್ಯ
ವರಪಂಡಿತಾಚಾರ್ಯ ಗುರುವು ವಿಶ್ವಾಚಾರ್ಯ
ರುರೆ ಮಧ್ಯವದನ ಸಂಜಾತ ರೇಣಕ ದೇವನುದರಭವ ರುದ್ರಮುನಿಯ
ಕರದೊಳುದ್ಭವ ಮಹಂತಾಚಾರ್ಯ ಚರಣಜನಿ
ಗುರುಪರಂಪರೆಯ ಜನ್ಮನಿ ವಲಧಿ ಹಿರೆಮಠದ
ಚರಪಟ್ಟವರ್ಯನುರೆ ಗುರುಮಹಂತನು ಪೇಳ್ದುಗುರು ಕೃಪೆ ಬಲಾತ್ಕಾರದಿಂ ||೧೦೭||

ಅಂತು ಸಂಧಿ ೧೪ಕ್ಕಂ ಪದ ೯೧೪ಕ್ಕಂ ಮಂಗಳ ಮಹಾ

ಹದಿನೈದು

ಸಂಧಿ

||ಪಲ್ಲವಿ|| ಕರಿಬಸವ ಗುರು ವರ್ಯ ಹಿರೆಹಳ್ಳೀ ದೊರೆಭಕ್ತಿ
ಲಿರದಿದ್ದು ಕೆಲವ ಶಿಷ್ಯರನುದ್ಧರಿಸಿ ಬೇಗ
ಪರಮನೊಳು ಬೆರೆದರದ ಗುರುಭಕ್ತಿರಿದನಾಲಿಪುದು ಪರಮವಿಶ್ವಾಸದಿಂ ||

ಧರೆ ಜಲಾನಲವನಿಲವ್ಯೋಮೇ ಜಮಾನ ಶಶಿ
ತರಣಿತನು ಮನಸಿಜಾಂತಕ ಮೇರು ಕೋದಂಡ
ವರಕನಕ ಗಜೇಂದ್ರ ಹರಿಸುರನಮಿತ ಚರಣ ಸರಸಿಜ ಕೃಪಾಕಟಾಕ್ಷ ||
ಧರಣಿಧರ ಜಾನಾಥಜಿಷ್ಣು ಸರಸದಾಂತ
ಪುರದನುಜ ಘನವಾತದಗ್ನಿ ಭೂಪಿತ ದೂತವರ
ವಿಷ್ಣುಪರಮಣಿ ಸುಧಾಸೂತಿ ವಸುನೇತ್ರಸಿತಗಾತ್ರ ಶುಭಚರಿತ್ರ ||೧||

ಗುರುಕರಿಬಸವರಾಜರ್ಹಿರೆಹಳ್ಳಿ ಪುರದೊಳಗೆ
ದೊರೆರಾಯ ನಿಜಲಿಂಗಶೆಟ್ಟಿಯರಮನೆಯೊಳಗೆ
ಪರಿಣಾಮದಿಂದಿರಲು ಯೀವರಾಶೀರ್ವಾದದಿಂದೋರೆಗಳಿಗೆ ಪುತ್ರಪಾತ್ರ ||
ಕರಿರಥಪದಾತ್ಯಶ್ವ ವಾಂದೊಳಿ ಕಾಮ್ಯಾನ
ವರಛತ್ರ ಚಾಮರ ಕನಕ ರಜತಾಭರಣ
ಪರಿಪೂರ್ಣ ಧನಧಾನ್ಯ ಪಶುಸಸಿಗಳಂ ವೃದ್ಧಿಯಾಯಿತದನೇನೆಂಬೆನು ||೨||

ಮನೆಯವರದದ್ಯಾಂತ್ಯರುಂ ಸೇವೆ ಮಾಡುತಿರೆ
ಘನಮಹಿಮ ನಿಸ್ಪೃಹ ನಿರಾಭಾರಿಯಿರುತಿರಲು

ದಿನದಿನದೊಳೈಶ್ವರ್ಯ ಹಾಲುಕ್ಕಿದಂತೆಯೀಡೇರುತಿರಲು ವಿಚಿತ್ರವಂ ||
ಸಾನುರಾಗದೊಳು ಲಿಂಗಾರ್ಚನೆಯ ಮಾಡುತ್ತೆ
ಸ್ವಾನುಭಾವವನೆಲ್ಲರಿಗೆ ಬೋಧಿಸುತ ಕೆಲವ
ದಿನವವರು ಭ್ರೂಣಯೋಗವನೆಸಗಿದರು ಮೌನಮುದ್ರೆಯ ಬಲಾತ್ಕಾರದಿಂ ||೩||

ಇಂತಿರಲ್ಕಲ್ಲಿಯ ಮಠದ ನವಣೆ ಮುರಗೆಪ್ಪ
ನಂತೆ ವಸ್ತ್ರದ ಬಸವಲಿಂಗಪ್ಪ ಸಾಬಾದಿ
ಸಂತನಹ ಚನ್ನಬಸವಪ್ಪ ಮಲ್ಲಪ್ಪ ಹಿಪ್ಪರಿಗೆಯವರೊಂದು ದಿನವು
ಕಂತು ಹರರೂಪ ಕರಿಬಸವಾರ್ಯರಡಿಗಳಿಗೆ
ಶಾಂತರಾಗತಿ ಶರಣುಪೋಗಿ ತಮ್ಮಂತರದ
ಚಿಂತಿತಾರ್ಥವ ಚರಣಗಳಿಗೆ ಬಿನ್ನವಿಸಲದನರಿಯಲಂತಾಯಿತೆಂದು ||೪||

ಅವರಂತರಂಗದ ವಿಚಾರವನು ತಿಳಿದಾಗ
ಶಿವರೂಪ ಗುರುಗಳವರಿಗೆ ನಿರ್ಗುಣದ ಬೋಧೆ
ತವಕದಿಂ ಕರುಣಗೈದುದ್ಧರಿಸಿದರು ಬೇಗಸ್ವಾಂತದಿಂ ಪೂರ್ಣದರಿತ ||
ಭಾವದೊಳ ದಾರಾದರುಂ ತಮ್ಮಯಿಷ್ಟವನು
ಭಾವಿಸುತ ಭಜಿಪರೀಪ್ಸಿತ ತಾನೆಯೊದಗುವುದು
ಭಾವಜಾಂತಕ ರೂಪಾಪ್ತರೆಯಿವರುಯೆಂದು ಸದ್ಭಕ್ತರು ನುತಿಸುವರು ||೫||

ಇಂತು ನಿಸ್ಪೃಹತ್ವದಿಂ ನಿರಾಭಾರಿಗಳು
ಶಾಂತಿಯಿಂದಿರಲವರವವು ತೊಂಭತ್ತಾರು
ಅಂತಿರಲ್ಕಾ ದೊರೆಗಳಿವರಿಗೆ ಸಮಾಧಿಯನು ಕಟ್ಟಿಸುವುದೆಂದು ತಿಳಿದು ||
ಕಂತುಹರ ರೂಪರ ಚರಣದಳತಿಯನುಕೊಂಡು
ಪಂಥವನು ತಿಳಿದಾಗಮೋಕ್ತ ಪ್ರಕಾರದೊಳು
ಕುಂತುಖಿನನಂಗೈಸಿದರುಘಾತನವ ಪಾದಪಂಚ ಚಕ್ರಮು ಚೌಕವಿಟ್ಟು ||೬||

ಹಂಚಿಕೆಯ ತಿಳಿದದರ ಸೋಪಾನ ಮೂರರೊಳು
ಮುಂಚಿನದದೊಂದು ಪದವೆರಡನೆಯದೆರಡು ಪದ
ವಂಚನೆಯಿಲ್ಲದಿದಾ ಮೂರನೆಯದದು ಮೂರುಚರಣ ಚೌಬದಿ ಪೃಷ್ಠವು ||
ಸಂಚಿತದ ವೇದಿಕೆಯು ಮೂರಂಘ್ರಿ ಚೌಕವದು
ಪಂಚ ಬಾಣಾರಿಗೃಹತಿವಿಧ ಚಲನದ ಚೌಕ
ಖೊಂಚಿಯದುವಂದುವರೆ ಧೀರ್ಘಕ್ರಮು ರಂಗಮಂಟಪದ ಬದಿಗಳೊಳರ್ಧವು ||೭||

ಚರಣಚೌಕದ ಮಾಡಗಳು ವಿರಚಿಸುತ ಬೇಗ
ವಿರಳಿಕರಿಸಿದ ಪಾದಗಳ ಗಣನೆಗೈದೊಡಿದು
ವರರಂಗ ಮಂಟಪದ ಪದನಾಲ್ಕು ಭಾಗದ ಚರಣಶತನೀತಿ ಚಲನವಹವು ||
ಮೂರನೆಯ ಸೋಪಾನ ಪಾರ್ಶ್ವಷಟ್ ತ್ರಿಂಶಪದ
ವೆರಡುಗೂಡಿದರೆ ಯಿನ್ನೂರ ಹದಿನಾರವು
ಸುರಚಿರೋನ್ನತವಹ ಸಕೀಲ ಸಂಬಂಧಮಿವು ಬಂಧಿಸಿದರಿದ ತಿಳಿವುತೆ ||೮||

ತ್ರಿಕೋಣೆಯದರ ಕಕ್ಷಗಳುಭಯ ತ್ರಿಂಶಪದ
ಚಕ ಚಕಿಸವೆರಡನೆಯ ಸೋಪಾನ ಬದಿಗಳವು
ಯುಕುತಿಸಲು ದ್ವಾದಶ ಪದಂಗಳಾಗುತ್ತಿಹರು ಪ್ರಥಮ ಸೋಪಾನ ಬದಿಗಳ್ ||
ಪ್ರಕಟಿಸಲ್ಕೆರೆಡಂಘ್ರಿವೋಷ್ಟು ನಾಲ್ವತ್ನಾಲ್ಕು
ಸಕಲಮಿವು ತಿಳಿಯಲಂಗ ಸ್ಥಲಗಳಾಗುವ
ಸುಕವಿಗಳು ತಿಳಿವುದಿದು ಮತ್ತೆ ಗರ್ಭಾಗಾರ ತಳಪದಂಗಳೊಂಭತ್ತಿವು ||೯||

ರಂಗಮಧ್ಯದ ತಳಪದಂಗಳಿಪ್ಪತ್ತೈದು
ರಂಗಿಸುವ ವೇದಿಕೆಯ ಸುತ್ತಲೊಂಬತ್ತು ಪದ
ಮಂಗಲದ ಮೂರನೆಯ ಸೋಪಾನ ತಳನವ ಪದಂಗಳೆರಡನೆಯ ಸಿಡಿಯ ||
ತುಂಗತಳ ನಾಲ್ಕು ಪದದೊಂದನೆಯ ಮೆಟ್ಟದರ
ಭಂಗವಿಲ್ಲದದೊಂದು ಚರಣಮಿವು ಗಣಿಸಲಿವು
ಲಿಂಗಸ್ಥಲಂಗಳ್ಯೆವತ್ತೇಳುಗೂಡಿ ನೂರೊಂದು ಸ್ಥಳಂಗಳಹವು ||೧೦||

ವಿಲಸಿತದ ರಂಗಮಧ್ಯವೆರಡು ಪಾರ್ಶ್ವಗಳೊ
ಳೊಲಿದಿರುವ ಮಾಡಗಳೂ ಮೂರು ಪಾದಗಳಹವು
ತಿಳಿಯಲಿಷ್ಟ ಪ್ರಾಣಭಾವ ಲಿಂಗಂಗಳೀವ ಸಂಬಂಧವೆಂದರಿವುದು ||
ಮೇಲುಭಾಗದೊಳಿರುವ ವೇದಿಕೆಯದೊಂದು ಪದ
ಸಾಲಿನಿಂ ಸತ್ತ ಷಟ್ ತ್ರಿಂಶ ಚರಣಗಳಹವು
ತಲೆಯ ಸುತ್ತಲೆಯಿರುವ ರುದ್ರಾಕ್ಷಿಮಾಲೆಯಂದೆದನರಿವುದೊಲವಿನಿಂದ ||೧೧||

ಮೊದಲ ಸೋಪಾನವದು ಭಕ್ತಿಸ್ಥಲವಹುದು
ತದನಂತರದ ಸಿಡಿಯು ಮಾಹೇಶ್ವರಸ್ಥಲವು
ಮುದಿತ ಮೂರನೆಯದದು ಶೇಷಸ್ಥಲವದಹುದು ವೇದಿಕೆಯ ಸಂದಿಲಿಹುದು ||
ಸದಮಲ ಪ್ರಾಣಲಿಂಗಿಯು ಜಗಲಿಶರಣನದು

ವಿಧಿತತ್ರಕೋಣೆಯದನ್ನೈಕ್ಯ ಸ್ಥಲವೆಂದರಿವು
ದೊದವಿದಾಗಮ ವಿಧಿಯನರಿದಿದರ ಪರಿಯಂತೆ ರಚಿಸಿದರದೇನೆಂಬೆನು ||೧೨||

ಇದರ ಮೇಲೊಂದು ಗುಡಿಯನು ರಚಿಸುತದರೊಳಗೆ
ಸದಮಲ ಸುಲಿಂಗ ಸ್ಥಾಪನಗೈಸಿದರು ಬೇಗ
ಅದು ಮುಗಿದ ಮೇಲೆ ನಾಲ್ಕಾಬ್ದದೊಳ್ ಸ್ವಾಮಿಗಳು ಶೈಥಿಲ್ಯತನುವದಾಗೆ ||
ವಿಧಿಸದಿಂದ ನಮ್ಮೆಲ್ಲರಿಗೆ ಕರೆಸಿಕೊಂಡವರು
ಪದುಳದಿಂ ಕೇಳಿದಿರಿ ದೇಹ ಕೈವಲ್ಯವಹು
ದೆದನರಿಯಿರೆಂದು ಪೇಳಲ್ಸರ್ವಗುರು ಭಕ್ತರತಿ ದುಃಖದೊಳಗಾಗಲು ||೧೩||

ಲೌಕಿಕತರದೊಳೀ ದುಃಖವನು ಮಾಳ್ಪುದಿದು
ಸಾಕುವುಚಿತವದಲ್ಲ ತತ್ವಶಾಸ್ತ್ರವನೋದ
ಬೇಕೆನಲಿಕಂತಾಯಿತೆಂದು ನಿಜಗುಣಯೋಗಿಗಳ ಶಾಸ್ತ್ರನೋದಿತಿರಲು ||
ಸಾಕೆನ್ನದಾಲಿಸುತಲಾನಂದ ಮಯರಾಗೆ
ಕಾಕುಚಿತ್ತವನಳಿದು ಸಾಮಾರ್ಜನೆಯ ಮಾಡಿ
ಬೇಕೆಂಬ ವಸ್ತುವನು ತರಿಸಿ ರಂಗವ ಹಾಕಿ ಷಟ್ಚಕ್ರಗಳ ಲಿಖಿಸುತೆ ||೧೪||

ಮೇಲೆ ಮಡಿಬಿಳಿಕಂಬಳಿಯ ಹಾಸಿ ಸ್ವಾಮಿಗಳಿ
ಗೊಲವಿನಿಂದೆತ್ತಿ ಜ್ಞಾನವ ಮೂಡಿಸುತ ನಾವು
ಮೂಲದೊಳೆ ಸರ್ವರುಂ ಸಚಲ ಸ್ನಾನವ ಮಾಡಿ ಗದ್ದುಗೆಯೊಳಂ ಮಲಗಿಸಿ ||
ಬಾಲವೃದ್ಧ ಸ್ತ್ರೀಪುರುಷ ಭಕ್ತ ಜನರೆಲ್ಲ
ಲೀಲೆಯೊಕ್ಕರಸಲವರೆಲ್ಲ ಸ್ನಾನವ ಮಾಡಿ
ಮೂಲಮಂತ್ರವ ನುಡಿವುತಿರೆ ಸ್ವಾಮಿಗಳಿಗೆ ಭಸ್ಮ ಸ್ನಾನವನು ಮಾಡಿಸಿ ||೧೫||

ಮೂರುಶಿಖೆಯೊಳು ಮೂವತ್ತೆರಡು ಸ್ಥಾನದೊಳು
ಮಾರಹರ ರೂಪಂಗೆ ಧರಿಸಿ ನೂರಾಯೆಂಟು
ಸಾರಪ್ರಣಮವನು ತತ್ ಸ್ಥಾನದೊಳು ಲಿಖಿಸುತ್ತ ರುದ್ರಾಕ್ಷಿಗಳು ಧರಿಸಿ ||
ಪಾರಮಾರ್ಥದಿಂ ಲಿಂಗಪೂಜೆಯನು ರಚಿಸುತ್ತೆ
ಪೂರವಾಗಿಯೆ ನ್ಯಾಸಪೂರ್ವಕದಿ ಜಪಗೈದು
ಸ್ಥಿರದಿಂದಲಿವರ ಪಾದಗಳ ಪೂಜೆಯ ಮಾಡಿ ಚರಣೋದಕವನು ಪಡೆದು ||೧೬||

ಮೊದಲವರ ಲಿಂಗಕರ್ಪಿಸಿಯವರಿಗರ್ಪಿಸುತ
ಮುದದೊಳೆಲ್ಲರು ನಾವು ಸರ್ವರುಂ ಸಲಿಸುತ್ತ

ವಿಧಿತ ಹಸ್ತ ಸ್ಪರ್ಶವನು ಮಾಡಿಯವರ ಲಿಂಗಕರ್ಪಿಸಿರವರಿಗೆ ಸಲಿಸಿ ||
ಸದಮಲ ಶ್ರೀ ಪ್ರಸಾದವನೆಲ್ಲರುಂ ಕೊಂಡು
ತದನಂತರದೊಳಲ್ಪವೇಳೆಯವನು ಭವಸಾರ
ವೋದುತನಿತರೊಳರಿವು ನಿಜದೊಳೈಕ್ಯವನ್ನೈದುವವ ಸರದಿ ಧೂಪದೀಪ ||೧೭||

ವರಕರ್ಪೂರಾರತಿಯ ಬೆಳಗಿ ಪುಷ್ಪಾಂಜಲಿಯ
ಪರಮ ಮಾಹೇಶ್ವರರು ಭಕ್ತರೆಲ್ಲರು ವೆಸಗ
ಲರರೆ ಘೃತದೊಳ್ ಘೃತವನುದಕದೊಳುದಕ ಕರಕಶರಧಿಯುರಿಕರ್ಪುರವನು ||
ಚಿರವತಾರದಿಂದರಿವ ನಿಜದರಿವಿನೊಳ್ ಬರೆದು
ಕುರುಹಿಲ್ಲದೇಕ ರಸವೆಯಾದ ಪರಿಯಲಿದು
ದೊರೆರಾಯರುರೆ ಮಂಟಪವ ರಚಿಸಿ ಯಿಕ್ಷುರಂಭಾಸ್ತಂಭಗಳ ನಿಲಿಸುತ್ತೆ ||೧೮||

ವರಮೋಚದಾಡಿಮ ಲಿಕುಚಕ್ರಮುಕಗುಚ್ಛಗಳ
ನಿರದೆ ಖರ್ಜುರ ಕೊಬ್ಬರಿಯ ಸರವ ಬಂಧಿಸುತ
ಕರೆದು ಮೊದಲಾ ಪಂಚವರ್ಣಗಳ ತುಂಬಿಸದರೊಳಗೆ ಮೂರ್ತಗೊಳಿಸಿ ||
ತಾರಿನೋಸ್ರಾಭರಣ ರುದ್ರಾಕ್ಷಿ ಮಾಲಿಗಳು
ಧರಿಸೆರಡು ಕಡೆಗೆ ಸಮಯಗಳಿಟ್ಟ ದೀವಿಗೆಯ
ನಿರಿಸಿಕಲಶವ ತುಂಬಿ ಧೂಪಧೂಮ್ರರ ಮನೆಯ ಮುಸುಕುವಂತೆ ಹಾಕುತೆ ||೧೯||

ಚರಗಣಾರಾಧನೆಯನೆಸಗಿ ತೃಪ್ತಿಯವಡಿಸಿ
ಭರದೊಳವರಿಗೆ ದಾನದಕ್ಷಿಣವನಿತ್ತು ಘನ
ವರವಾದ್ಯದಬ್ಬರವ ದಿಕ್ತಟವ ಮುಸುಕುವಂತಿರೆ ಬಾರಿಸುತಲಿರ್ದರು ||
ಹರಸಮಾಧಿಯನತ್ತಕಡೆ ಸುಣ್ಣ ಜಾಜಗಳ
ರಂಗವ ತುಂಬಿ ಯಿಕ್ಷು ರಂಭಾ ಸ್ಥಂಭಾ
ಸುರುಚಿರದೊಳಂ ನಿಲಿಸಿ ಸರ್ವಫಲಗಳ ಬಂಧಿಸುತೆ ಸಿದ್ಧಗೊಳಿಸತ್ತಲು ||೨೦||

ವ್ಯೋಮಯಾನವ ಬಹಳ ಸೊಗಸಿನಿಂ ರಚಿಸುತ್ತೆ
ಸುಮಮಾಲೆಗಳ ನಾಲ್ಕು ಭಾಗದೊಳಿಳಿಯಗಟ್ಟಿ
ಆ ಮಹಾ ಪಂಚಕಲಶಗಳಿಟ್ಟು ಗೆಜ್ಜೆಗಂಟಿ ಸರಗಳನು ಬಂಧಿಸಿ ||
ಸೋಮನೇಮಾಚೂಡ ಭಕ್ತ ಮಾಹೇಶ್ವರರು
ನೇಮದಿಂದಾಗಲೆಲ್ಲರು ಪೋಗಿ ಲಲಿತಗಳ
ರಾಮಣೀಯಕವಾಗಿ ಪಾಡಿ ಪುಷ್ಪಾಂಜಲಿಯ ಮಾಡಿ ಸರ್ವರು ನಮಿಸುತೆ ||೨೧||

ಕರಿಬಸವ ಸ್ವಾಮಿಗಳುಯೆನಿಪಲಿಂಗವನು
ಯಿರದೆತ್ತಿ ಹರಹರಹಾದೇವಯೆನ್ನುತಲಿ
ವರವ್ಯೋಮಯಾನದೊಳ್ಕುಳ್ಳಿರಿಸಿ ಪೆಗಲೊಳಗೆ ಪೊತ್ತು ನಡೆದರುಸ್ಮರಿಸುತೆ ||
ಪರಮ ವಾದ್ಯ ಧ್ವನಿಗಳಬ್ಬರವು ಮುಸುಕಿರಲು
ಭರದೊಳು ತುಭಾಕು ಗುಂಡುಗಳ್ಹಾರುತಿರಲವರು
ಬೋರುಗುಡುತಿರೆ ಸರ್ವಜನರು ನುತಿಸುತ್ತಿರಲು ಸಾವಧಾನದಿ ಗಮಿಸುತ್ತೆ ||೨೨||

ಹೊರಪೇಟೆ ಬಸವನ ಜಗಲಿ ಬಳಿಯಲಿಳಿಸುತ್ತ
ಹರಭಕ್ತ ಮಾಹೇಶ್ವರರು ಯಿದುರುಗೊಳುತವರ
ಕರೆದೊಯ್ದುಗೋಟಿಯೊಳಗಿರುವ ಜಗಲಿಯ ಮೇಲೆ ಕುಳ್ಳಿರಿಸಿ ದೀಪಧೂಪ ||
ವರಕರ್ಪೂರದಾರತಿಯ ಬೆಳಗಿ ಮಂಗಲಪದಗ
ಳಿರದೆ ಪಾಡುತ್ತೆ ಪುಷ್ಪಾಂಜಲಿಯನೆಸಗುತಲಿ
ಪರಮವ್ರುಯ್ಯಲಿ ಪದಗಳನು ಪಾಡಿ ಮೂರು ವೇಳೆಯದೊಳು ತೂಗುತ ಮುಕ್ತಿಯ ||೨೩||

ಮನೆಯೊಳಿರಿಸಿದರಾ ಸಮಯದೊಳಗೆ ಮಲುಹಣವು
ಅನುರಾಗದಿಂ ಮಹಿಮ್ನಾಗಸ್ತ್ಯ ಸ್ತೋತ್ರಗಳ
ವಿನಯದಿಂದೋದುತಿರ್ಪರು ಕೆಲವರು ಮಂತ್ರಪಠಣ ಮಾಡುತಿರ್ಪರು ||
ಘನಮಹಿಮರಿವರೆಂದು ಪಲವರೋದಿಸುತ್ತಿಹರು
ಅನುಭವದಿ ಬಲ್ಲಿದರುಯೆಂದು ನುತಿಸುತ್ತಿಹರು
ಅನಘರಿವರಾರೂಢ ಪೂರ್ಣಜ್ಞಾನಿಗಳೆಂದು ಪೊಗಳುತಿರ್ಪರು ಮುದರೊಳು ||೨೪||

ಇಂತು ಬಹುಪರಿಯಿಂದೆ ಕೆಲಕೆಲವರುಂ ನುತಿಸ
ಲಂತು ಶ್ರೀ ಗುರುಸ್ವಾಮಿ ಕುಳಿತ ತ್ರಿಕೋಣಿ ಮುಖ
ಕಂ ತೆರೆಯ ಜೋಡಿಸುತೆ ಕನಕ ರಜತ ಸುಪತ್ರೆ ಪುಷ್ಪಂಜಲಿಯನೆಸಗುತೆ ||
ಕಂತು ಹರ ಗುರುವಾರ್ಯರಿದಿರಿನೊಳು ತೆಂಗುಗಳು
ಸಂತರೆಲ್ಲರು ವಡಿವುತಲಿ ಪರಕೆಗಳಗೊಂಡು
ಮುಂತೆ ದೊರೆರಾಯ ನಿಜಲಿಂಗ ಶೆಟ್ಟಿಗಳೊಡಿಸಿ ಆಶೀರ್ವಾದವ ಕೊಂಡರು ||೨೫||

ದೇಶಮುಖ ಮುಂತಾದ ಭಕ್ತರೆಲ್ಲರು ತಮ್ಮ
ವಾಸಗಳಿಗಂ ಪೋದರೀ ಪುರಾಣವನೊಲಿದು
ಸೂಸುತಿಹ ಸಂತೋಷದಿಂದ ಬರೆದೋದಿ ಪೇಳ್ವರಭಕ್ತಿಯಿಂ ಕೇಳುವ ||
ಯೀಸು ಭಕ್ತರ ಮನಸ್ಸಿನಿಷ್ಟವನು ದೊರಕುವುದು

ಯೆಲ್ಲ ಮಾಹೇಶ್ವರರು ಭಕ್ತ ಸಂತತಿಗೂಡಿ ಸಕಲವಾದ್ಯ ರಭಸದಿಂ ||
ಬಲ್ಲದ ಮಹಾರಾಜ ರಾಯದೊರೆಗಳು ತಾವು
ವುಲ್ಲಸಿತದಿಂ ತಮ್ಮ ಮನೆಯಿಂದಲಾ ಮಠಕೆ
ಪುಲ್ಲಶರಹರ ಮೂರ್ತಿಯಂ ಸಕಲ ಸಂಭ್ರಮದೊಳಾ ಗರ್ದುಗೆಯೊಳಿಡುವರು ||೩೧||

ಅಲ್ಲಿ ಸಾವಿರ ಗಣಾರಾಧನೆಯನೆಸಗುತ್ತೆ
ನಿಲ್ಲದೆಲ್ಲಾ ಗಣಂಗಳಿಗೆ ವಸ್ತ್ರವನಿತ್ತು
ಬಲ್ಲ ಪರಭಕ್ತರೆಲ್ಲರು ಕೂಡಿ ಭಜನೆಯನು ಮಾಡುತಿರ್ಪರು ರಾತ್ರಿಯೊಳ್ ||
ಸಲ್ಲಲಿತದಿಂದಲ್ಲಿ ಲಲಿತಕರ್ಪೂರ ಪದಗ
ಳೆಲ್ಲರುಂ ಪಾಡಿ ಪುಷ್ಪಾಂಜಲಿಯನೆಸಗುತ್ತ
ಫಲ್ಲಕ್ಕಿಯೊಳಗಿಟ್ಟು ಮೂರ್ತಿಯಂ ಸಂಭ್ರಮದಿ ಅರಮನೆಗೆ ಹೊಯ್ಯುತಿಹರು ||೩೨||

ದೀವಳಿಗೆ ಚತುರ್ದಶಿಯ ಮೊದಲೀ ಮುಖವಮುತ್ತೆ
ಭವನದಿಂದಂದಳದೊಳಿರಿಸಿ ಸೌರಭದಿಂ
ಶಿವಭಕ್ತ ಮಾಹೇಶ್ವರರು ಕೂಡಿ ಛತ್ರ ಚಾಮರ ವಾದ್ಯದಬ್ಬರದೊಳು ||
ಶಿವಶಿವಾಯೆನುತಲಾ ಮಠಕೊಯ್ದು ಕುಳ್ಳಿರಿಸಿ
ತವೆನಿತ್ಯ ನಿತ್ಯದೊಳು ನಂದಿಧ್ವಜಗಳೂ ಬಾಜಿ
ರವದೊಳಾತೂರತಕಂಚಕಲಶಗಳು ದೀವಟಿಗೆಗಳು ಕರಡಿಯ ಮೇಳದಿಂ ||೩೩||

ತಾಶಮೆರ್ಪೆಯ ಡೊಳ್ಳು ಪಾತ್ರದವರೊಡಗೂಡಿ
ಯೀಶ ಸದ್ಗುರುನಾಥನಿರುವ ಮಠಕಂ ಪೋಗಿ
ತಾಸ ನಾಲ್ಕರವರಿಗೂ ಸಭೆಯಾಗಿ ಕುಳ್ಳಿರ್ದು ಸರದೀವಿಗೆಗಳ್ಬೆಚತ ||
ಪೂಶರನ ಬಾಣರೂಪಗಳೆನಿಪ ಗಣಿಕೆಯರು
ಸೂಸುತಿಹ ಸಂತೋಷದಿಂದ ನರ್ತಿಸುತಿರಲು
ಮೋಸವಿಲ್ಲದೆ ಕರಡಿ ಕೌಸಾಳ ಸೌಲತ್ತು ಪೌರಾತನರೆ ಮೊದಲಹ ||೩೪||

ಪರಮ ಸಂಭ್ರಮದಿಂದಲಿಂತೇಳುದಿನವರೆಗು
ಪರಿಪರಿಯಲುತ್ಸವವ ರಚಿಸಿ ಕಡೆ ಪಂಚಮಿಯೊ
ಳಿರದುಃಷಕಾಲ ದೊಳಗಗ್ಗಿತುಳಿದವರಾಹ್ನದೊಳು ರಥೋತ್ಸವವನೆಸಗಿ ||
ಯೀ ರಥೋತ್ಸವದ ಸಂಭ್ರಮವನೆನಿತುಂ ಪೇಳ್ವೆ
ನಿರವಿಸುವರಾದಿ ಶೇಷಂಗರಿದೆನಲ್ನರರ
ವರಜಿಹ್ವೆಯಿಂದ ವರ್ಣಿಸುವಡರಿದೆನಿಸಿ ತೋರ್ಪುದರರೆ ಪರಮಾಶ್ಚರ್ಯವು ||೩೫||

ಲೇಸಿನಿಂದಿದು ವಜ್ರಲೇಪವಿರುವುದು ಸಹಜ
ಯೇಸು ಮಾತುಗಳಾಡಲೇನು ಹುಸಿಯಲ್ಲವಿದು ಸತ್ಯಸತ್ಯವೆಯಿಹುದು ||೨೬||

ಲೋಕದೊಳು ಗಾರುಡವೆನಿಪ್ಪ ಮಹಿಮೆಯನಿರಲು
ಲೌಕಿಕರದಕೆ ಮೆಚ್ಚುವರು ಮರುಳು ಮಾನವರು
ಕಾಕುಮನದವರಿರಲಿ ಜೋಕೆಯಿಂ ಶ್ರೀಗುರುವಿನಾಶೀರ್ವಾದವನು ಪಡೆದು ||
ನೂಕಿಭವವನು ನಿಜವ ತಾನೆಂಬರಿವ ತಿಳಿದು
ಸಾಕೆನಿಸಿ ಭೋಗವನು ನಾಕ ಮೊದಲಾದ ಸುಖ
ಪಾಕ ಚೇತಸದವ ಪರೋಕ್ಷ ಜ್ಞಾನಿಗಳಿದನು ಭಕ್ತಿಯಿಂ ಕೇಳ್ವುದೊಲಿದು ||೨೭||

ಸತ್ಯಕ್ಕೆ ವೀಜನರು ವೈರಮಾಡುವರುವ
ಸತ್ಯವದು ಜನರಂಜನೆಯ ಮಾಡುವುದು ದಿಟವು
ತಥ್ಯಮಿತ್ಯವನರಿಯರೀ ಲೋಕದ ಜ್ಞಾನ ಪ್ರಾಣಿಗಳವರಗೊಡವಿಯು ||
ಚಿತ್ತದೊಳಗಂ ಸಾರದಾ ಮಹಜ್ಞಾನಿಗಳು
ನಿತ್ಯ ಸದ್ರೂಪವೇನೆಂಬ ನಿಜವಿಡಿದ
ನಿತ್ಯವಲ್ಲದರ ಪರಮಸದ್ಗುರು ಸ್ವಯಂಜೋತಿ ವೃತ್ತಾಂತವಿದು ಕೇಳ್ವುದು ||೨೮||

ಈ ಕರಿಯ ಬಸವ ಮಹರಾಜ ಕನಕಾದ್ರಿಪುರ
ಲೋಕಕಧಿಕವೆನಿಪ್ಪ ಷಟ್ ಸ್ಥಲ ಚರಾಧ್ಯಕ್ಷ
ಪಾಕಶಾಸನದ ಪರವನೀಕರಿಸುವ ಕೆಂಡಗಣ್ಣೊಡೆಯರಡಿ ಜಾತರು ||
ಸಾಕೆನಿಸಿ ಭೋಗಗಳು ಪಾರಮಾರ್ಥವನರಿದು
ಜೋಕೆಯಿಂ ಸಕಲದೇಶದೊಳಿರುವ ಭಕ್ತರಿಗೆ
ತಾಂ ಕರುಣಮಂಗೈದು ಹಿರೆಹಳ್ಳಿ ಹೊಸಪೇಟೆ ಮಠದೊಳೈಕ್ಯವ ಪಡೆದರು ||೨೯||

ಶಾಲಿವಾಹನಶಕ ಹದಿನೆಂಟು ನೂರ್ಮೂರನೆಯ
ಲಾಲಿತಿಷು ನಾಮಸಂವತ್ಸರದ ಭಾದ್ರಪದ
ಲೋಲಸುಚತುರ್ದಸಿಯ ಬುಧವಾರ ತ್ರಿವಿಧ ಪ್ರಹರದೊಲಿಂಗದೊಳಾದರು ||
ಸುಲಲಿತದೊಳೀ ಮಿತಿಯೊಳೇ ವರ್ಷವರ್ಷಕ್ಕೆ
ಸುಲಭದಿ ಪುಣ್ಯತಿಥಿ ರಚಿಸುವರದೆಂತೆನಲು
ನಲವಿನಿಂದಾ ದಿವಸದುದಯ ಸಮಯದೊಳೆದ್ದು ರಜತದಿ ರಚಿತ ಮುಖವನು ||೩೦||

ಪಲ್ಲಕ್ಕಿಯೊಳಗಿಟ್ಟು ಛತ್ರಚಾಮರ ಕಹಳೆ
ಸಲ್ಲಲಿತವಪ್ತಾಗಿರಿಯು ನಂದಿಧ್ವಜ ಸಹದಿ

ಇಂತು ಸರ್ವೋತ್ಕರ್ಷದಿಂದ ಪಗಲಿರುಳು ಸೇವೆ
ಸಂತ ದೊರೆರಾಯ ನಿಜಲಿಂಗ ಶೆಟ್ಟಿಗಳಿರದೆ
ನಿಂತಿಹರದಿಂತಿಲ್ಲಿಗಂ ಸಮಾಪ್ತಿಯುಮಾಯ್ತುಯೀ ಪುರಾಣವ ಶ್ರದ್ಧೆಯಿಂ ||
ಕಂತುಹರಭಕ್ತ ಮಾಹೇಶ್ವರಾರಾದಡಿದ
ನಂತು ಪೂರ್ಣಾಗುವವರಿಗು ಕೇಳ್ದೊಡಂ ಮನದ
ಚಿಂತಿತಾರ್ಥವನಿತ್ತು ಕರುಣದಿಂ ಕಾಯ್ವುರಿದು ಸಿದ್ಧಾಂತವೆಂದರಿವುದು ||೩೬||

ಈ ಪುರಾಣದೊಳೊಂದು ಸಂಧಿಯಾಗಲಿ ಮತ್ತೆ
ಯೀ ಪುರಾಣದೊಳೊಂದು ಕಥೆಯನಾದರು ಬಳಿಕ
ಲೀಪುರಾಣದೊಳೊಂದು ಪದವನಾದರು ಬಿಡದೊಂದು ವರ್ಣವನಾದರು ||
ಯೀ ಪರಿಯೊಳಂ ಕೇಳ್ದವರು ಮುಕ್ತಾಂಗನೆಯ
ಸಾಪತಿಗಳಾಗಿ ಸುಖಿಮಂ ಪೆಡದು ಬಾಳುವರು
ಸುಪವಿತ್ರವಿದು ದಿಟವು ಶಾಸನವಿದೆಂದು ತಿಳಿವುದು ಪರಮ ಸದ್ಭಕ್ತರು ||೩೭||

ಜಗದೊಳಗೆ ಮಿಗಿಲೆನಿಸಿ ತೋರುವ ಸುಕಲ್ಯಾಣ
ದೊಗುಮಿಗೆಯ ಪ್ರಾಂತದೊಳಗೆಸೆವ ವಲದಿಯ ಪುರದ
ಸೊಗಯಿಸುವ ಹಿರೆಮಠಗಣಾಚಾರ್ಯ ಪಟ್ಟಚರವರ್ಯಗುರು ಮಹಂತಸ್ವಾಮಿ ||
ಅಘಹರ ಮಹಾಗುರುವಿನಂತಃಕರಣ ಪಡೆದು
ಮಿಗಿಲಪ್ಪ ಗುರುಸ್ತವನ ಮಾಳ್ಪೆನೆಂಬುವ ಭರದಿ
ಬಗೆಬಗೆಯೊಳಂ ನುತಿಸಿ ರಸನೆಕ್ಷಾಮವ ಕಳೆದನಲ್ಲದೆನ್ನಯ ಶಕ್ಯವೆ ||೩೮||

ಇದರೊಳಗೆ ತಪ್ಪೊಂದುಮಿರ್ದಡೆಯು ನಿಂದಿಸದೆ
ಬುಧರೊಲಿದುವಂತರಂಗದೊಳು ತಿಳಿದು ತಿದ್ದು
ವದು ನಿಮ್ಮ ಕರುಣದಿಂ ಶಾಂಭವಜ್ಞಾನ ಸಂಪನ್ನನರಿದರೊಳ್ ಬಿಡದಲೆ ||
ವಿಧಿತದಿಂ ಸುರಭಿಗರಿಯಲಿ ಸುಖಿಗಳಿಗಾಗಲಿದ
ಳೊರವಿ ಮಳೆಬೆಳೆಗಳು ಸಮೃದ್ಧಿಯಾಗಲಿ ಬಿಡದೆ
ಸದುಭಕ್ತರಿಗೆ ಪುತ್ರಕಾಂಕ್ಷೆ ಸಿರಿಸಂಪತ್ತು ಸೌಖ್ಯಂಗಳಾಗಲೊಲಿದು ||೩೯||

ಶ್ರೀಮನ್ನೃಪ ಶಾಲೀವಾಹನ ಶಕದೊಳಷ್ಟದಶ
ನೇಮದಿಂ ಶತಪಂಚ ದಶವರ್ಷದೊಳಿದರ
ನಾಮ ವಿಜಯ ಸಂವತ್ಸರಂ ಶುದ್ಧ ಶ್ರಾವಣ ತ್ರಿತಯ ಸೋಮವಾರವು ||
ರಾಮಣೀಯಕ ಪೂರ್ವ ನಕ್ಷತ್ರ ಶಿವಯೋಗ

ರಾಮವಹತ್ತೈತುಲ ಕರಣದೊಳಗೆ ಕೃತಿರಚನೆ
ಸೋಮಧರನಾಜ್ಞೆಯಿಂ ಮುಗಿದಿರುವದೆಂದು ತಿಳಿವುದು ಸಕಲಸದ್ಭಕ್ತರು ||೪೦||

ಮರುಳ ಸಿದ್ಧಾಚಾರ್ಯ ರಾಮಿದೇವಾಚಾರ್ಯ
ವರಪಂಡಿತಾಚಾರ್ಯ ಗುರುವಿಶ್ವಾಚಾರ್ಯ
ರುರೆ ಮಧ್ಯವದನ ಸಂಜಾತ ರೇಣುಕಾದೇವನುದರ ಭವರುದ್ರಮುನಿಯು ||
ಕರೆದೊಳುದ್ಭವ ಮಹಂತಾಚಾರ್ಯ ಚರಣಜನಿ
ಗುರುಪರಂಪರೆಯ ಜನ್ಮನಿ ವಲದಿ ಹಿರೆಮಠದ
ಚರಪಟ್ಟವರ್ಯನುರೆ ಗುರುಮಹಂತನು ಪೇಳ್ದು ಗುರುಕೃಪೆ ಬಲಾತ್ಕಾರದಿಂ ||೪೧||

ಅಂತು ಸಂಧಿ ೧೫ಕ್ಕಂ ಪದ ೯೫೫ಕ್ಕಂ ಮಂಗಳ ಮಹಾ

ಕಳೆದ ಮೂರು ದಶಕಗಳಿಂದ ಗುಲಬರ್ಗಾ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆಯ ಜೊತೆಗೆ ಪ್ರಕಟಣೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಲ್ಲಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು.

ಈ ಯೋಜನೆಗಳಲ್ಲಿ ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆ ಭಾಗ–2 ರ ಪ್ರಧಾನ ಸಂಶೋಧಕರು ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾದ ಡಾ. ಬಸವರಾಜ ಪೋಲಿಸ ಪಾಟೀಲ ಅವರು ಈ ಯೋಜನೆಯಲ್ಲಿ ಹಲವಾರು ಅಪ್ರಕಟಿತ ಹಸ್ತಪ್ರತಿ ಗಳನ್ನು ಪ್ರಕಟಿಸಿದ್ದಾರೆ. ನಾಡಿನ ಪ್ರಮುಖ ಹಸ್ತಪ್ರತಿಗಳನ್ನು ಪ್ರಕಟಿಸಿ ಜನಸಾಮಾನ್ಯರಿಗೆ ತಲುಪುವಂತೆ ಮಾಡಿದ್ದಾರೆ. ಈ ಯೋಜನೆಯ ಸಂಪುಟಗಳು ಅಪೂರ್ವ ದಾಖಲೆಗಳೆನಿಸಿವೆ. ಹಸ್ತಪ್ರತಿಗಳನ್ನು ಸಂಪಾದನೆ ಮಾಡಿಕೊಟ್ಟಿರುವ ಸಂಪಾದಕರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಿ. ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಹಾಗೂ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ. ಟಿ. ಪುಟ್ಟಯ್ಯ
ಕುಲಪತಿಗಳು